ಕಸ್ತೂರಿ

ಏಪ್ರಿಲ್ ೧೯೭೫

ಬೆಲೆ: ರೂ. ೧-೨೫



ಕಸ್ತೂರಿ

ಪ್ರಕಟನೆ:
ಪ್ರತಿ ತಿಂಗಳ ೧ ನೇ ದಿನಾಂಕ

ವ್ಯವಸ್ಥಾಪಕ ಸಂಪಾದಕರು:
ರಂಗನಾಥ ದಿವಾಕರ

ಪ್ರಧಾನ ಸಂಪಾದಕರು:
ಪಾಟೀಲ ಪುಟ್ಟಪ್ಪ

ಸಹಸಂಪಾದಕರು:
ದ. ಲ. ಕೆರೂರ

ಪ್ರಕಾಶಕರು:
ಕರ್ನಾಟಕ ಪತ್ರಿಕಾ ಪ್ರೈ. ಲಿ.
ಹುಬ್ಬಳ್ಳಿ

ಕಚೇರಿ:
ಕಸ್ತೂರಿ ಕಾರ್ಯಾಲಯ ಹುಬ್ಬಳ್ಳಿ

ಕಲೆ:
ಕೆ. ಬಿ. ಕುಲಕರ್ಣಿ

ಮುದ್ರಣ:
ಸಂಯುಕ್ತ ಕರ್ನಾಟಕ ಪ್ರೆಸ್
ಹುಬ್ಬಳ್ಳಿ

ಮುಖಪುಟ:
'ಬಾಲಕೃಷ್ಣ'
ಪಿ. ಎಸ್. ರಾಜಗೋಪಾಲ್

ಚಂದಾದರ

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	"	ರೂ. ೨೫-೦೦
೧ ವರ್ಷ	"	ರೂ. ೧೪-೦೦
ಅರ್ಧ ವರ್ಷ	"	ರೂ. ೭-೫೦

KASTURI April 1975

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವುದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖನಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವುದು. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯ ಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. 'ಇದುವೆ ಜೀವ' ಮೊದಲಾದ ಚುಟುಕುಗಳನ್ನು ತಿರುಗಿ ಕಳಿಸಲು, ಆ ಬಗ್ಗೆ ಪತ್ರವ್ಯವಹಾರ ಮಾಡಲು ಸಾಧ್ಯವಿಲ್ಲ. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವುದು. ಲೇಖಕರು ತಮ್ಮ ಲೇಖನಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವುದೊಳಿತು. ಲೇಖನಗಳು ಆಕಸ್ಮಾತ್ತಾಗಿ ಕಳೆದುಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖನ ಪ್ರಕಟವಾದರೆ, ಕಸ್ತೂರಿಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡುವುದು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿ ತಿಂಗಳ ಕಸ್ತೂರಿ ಆಯಾ ತಿಂಗಳ ೧ ನೇ ದಿನಾಂಕದೊಳಗೆ ಪ್ರಕಟವಾಗುವುದು. ಅದು ಚಂದಾದಾರರಿಗೆ ಆಯಾ ತಿಂಗಳ ೫ ನೇ ದಿನಾಂಕದೊಳಗೆ ತಲುಪುವುದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರ್ ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನ

ನಾಟಕ ಶಿರೋಮಣಿ ವರದಾಚಾರ್ಯರು

ನಾಟಕ ಶಿರೋಮಣಿ ದಿವಂಗತ ವರದಾಚಾರ್ಯರ ಬಗ್ಗೆ ಲೇಖನ (ಕಸ್ತೂರಿ, ಫೆಬ್ರುವರಿ ೭೫) ಓದಿದಾಗ ಹಳೆಯ ನೆನಪು ಒಂದು ಕಣ್ಣು ಮುಂದೆ ರೂಪುಗೊಂಡಿತು. ಬಾಲ್ಯದಲ್ಲಿ ಬೆಂಗಳೂರು ಚಾಮರಾಜಪೇಟೆಯ ರಸ್ತೆಯಲ್ಲಿ ಇತರ ಹುಡುಗರೊಡನೆ ಚಿನ್ನಿಕೋಲು ಆಡುತ್ತಿದ್ದಾಗ ರಸ್ತೆಯಲ್ಲಿ ಹಾದುಹೋಗುತ್ತಾ ಇದ್ದು ಸ್ವಲ್ಪ ದಣಿವಾರಿಸಿಕೊಳ್ಳಲು ಅಲ್ಲೇ ಹತ್ತಿರದ ಒಂದು ಸಣ್ಣ ಸೇತುವೆ ಗೋಡೆಯ ಮೇಲೆ ಸ್ವಲ್ಪ ಹೊತ್ತು ಕುಳಿತಿದ್ದ ಮಾಸಿದ ಜರತಾರಿ ರುಮಾಲು ಧರಿಸಿದ್ದ, ಮುಖದಲ್ಲಿ ಕಾಯಿಲೆ ತೋರುತ್ತಿದ್ದ ಒಬ್ಬ ಮಾನ್ಯರು ನಮ್ಮ ದೃಷ್ಟಿಗೆ ಬಿದ್ದರು. ಅವರ ಕಡೆ ಕೈ ತೋರಿಸಿ ಒಬ್ಬ ಹುಡುಗ ನನ್ನ ಕಿವಿಯಲ್ಲಿ 'ಇವರೇ ಕಣೋ, ನಾಟಕದ ವರದಾಚಾರ್ರು. ಅವರ ಬಳಗದವರು ಇಲ್ಲೇ ಇದ್ದಾರೆ, ಇವರು ಆಗಾಗ ಬರುತ್ತಾರೆ' ಎಂದು ಉಸಿರಿದ. ಇವರ ಹೆಸರನ್ನು ಅನೇಕ ಸಲ ಕೇಳಿದ್ದೆನೇ ವಿನಾ ಅವರನ್ನು ನೋಡಿರದ ನನಗೆ ಒಂದು ಬಗೆ ಆಶ್ಚರ್ಯವಾಯಿತು, ಏಕೆಂದರೆ ರಾಜಾ ಪಾರ್ಟಿನ ಪೋಷಾಕು ಧರಿಸಿದ ಅವರ ಫೋಟೋ ನೋಡಿದ್ದೆ. ಆ ಠೀವಿಗೂ ಈಗ ಕಾಯಿಲೆಯಿಂದ ಸೊರಗಿಹೋಗಿದ್ದ ವ್ಯಕ್ತಿಗೂ ಅಜಗಜಾಂತರ ವ್ಯತ್ಯಾಸವಿತ್ತು. ಆ ದಿನ ಸಾಯಂಕಾಲ ಮನೆಗೆ ಹಿಂತಿರುಗಿದಾಗ ನಮ್ಮ ತಂದೆಯವರಿಗೆ ನಾಟಕ ಶಿರೋಮಣಿಗಳನ್ನು ನೋಡಿದ ಬಗ್ಗೆ ಹೇಳಿದೆ. ನಮ್ಮ ತಂದೆ ತಮ್ಮ ಬಾಲ್ಯದಲ್ಲಿ ವರದಾಚಾರ್ಯರ ಕಂಪನಿಯ ಅನೇಕ ನಾಟಕಗಳನ್ನು ನೋಡಿದ್ದರಂತೆ. ಅವರ ಬಗ್ಗೆ ಒಂದು ಸಂಗತಿ ಹೇಳಿದರು.

ಮೈಸೂರಿನಲ್ಲಿ ಹಿಂದೆ ಒಂದು ಸಲ ವರದಾಚಾರ್ಯರು 'ಶಾಕುಂತಲ' ನಾಟಕವನ್ನು ಅರಸರ ಅರಮನೆಯ ರಂಗಮಂಟಪದಲ್ಲೇ ಆಡಿದ್ದರು. ಆಗ ಇನ್ನೂ ಬಾಲಕರಾಗಿದ್ದ ನಾಲ್ವಡಿ ಕೃಷ್ಣರಾಜರೂ ಅವರ ತಾಯಿ ಮಹಾರಾಣಿ (ವಾಣೀವಿಲಾಸ ಸನ್ನಿಧಿ)ಯವರೂ ಇತರ ರಾಜ ಪರಿವಾರದವರೂ ಹಾಜರಿದ್ದರಂತೆ. ದುಷ್ಯಂತ ಮಹಾರಾಜನ ಪಾರ್ಟಿನಲ್ಲಿ ವರದಾಚಾರ್ಯರು ರಂಗದ ಮೇಲೆ ಬಂದಾಗ ಮಹಾರಾಣಿಯವರು ಸ್ತಬ್ಧರಾಗಿ ಕುಳಿತು ಒಂದೆರಡು ನಿಮಿಷಗಳ ಕಾಲ ಕಣ್ಣೀರು ಸುರಿಸಿದರಂತೆ. ಕಾರಣ- ಎ. ವಿ. ರವರು ದಿವಂಗತ ಮಹಾರಾಜಾ ಚಾಮರಾಜ ಒಡೆಯರಂತೆಯೇ ಲೇಶ ಮಾತ್ರವೂ ವ್ಯತ್ಯಾಸವಿಲ್ಲದಂತೆ ಪೋಷಾಕು ಧರಿಸಿ ಅವರಂತೆಯೇ ಮುಖ ಸಿಂಗರಿಸಿಕೊಂಡು ರಂಗಕ್ಕಿಳಿದಿದ್ದರು. ಅವರನ್ನು ನೋಡಿದ ತಕ್ಷಣ ಏಳೆಂಟು ವರ್ಷಗಳ ಹಿಂದೆ ತಾನೇ ಗಂಡನನ್ನು ಕಳೆದುಕೊಂಡಿದ್ದ ಮಹಾರಾಣಿಯವರು ದಿಗ್ಭ್ರಾಂತರಾಗಿ ಬಿಟ್ಟು ಹಳೆಯ ನೆನಪುಗಳು ಬಂದುದು.

ಮಾರನೆಯ ದಿನವೇ ಅರಮನೆಯಿಂದ ಎ. ವಿ. ರವರಿಗೆ ಇನ್ನು ಮುಂದೆ ಎಲ್ಲಿ ಯಾವ ರಾಜಾ ಪಾರ್ಟ್ ಮಾಡಿದರೂ ಆ ದಿನ ಧರಿಸಿಕೊಂಡಂತೆ ಪೋಷಾಕು ಧರಿಸಕೂಡದೆಂಬ ಸೂಚನೆ ಹೊರಬಿತ್ತಂತೆ!

ನವದೆಹಲಿ — ಆರ್. ಎಸ್. ಚಕ್ರವರ್ತಿ

ಕುಷ್ಠ ಮತ್ತು ಡ್ಯಾಪ್ಸೋನ್

ಫೆಬ್ರವರಿ ಕಸ್ತೂರಿ ಸಂಚಿಕೆಯಲ್ಲಿ ಪ್ರಕಟವಾದ ಡಾ. ಆನಂದ ಡಿ. ದೇಶಪಾಂಡೆಯವರ ಲೇಖನ 'ಕುಷ್ಠ ರೋಗಕ್ಕೆ ಭಯಪಡಬೇಡಿ' ಓದಿದೆ. ಡ್ಯಾಪ್ಸೋನ್ ಹಾಗೂ ಕುಷ್ಠರೋಗ ಎಂಬುದರ ಬಗ್ಗೆ ಬರೆಯುತ್ತ ಲೇಖಕರು ಈ ರೀತಿ ಬರೆದಿದ್ದಾರೆ: "ಕೆಲ ಕುಷ್ಠರೋಗ ತಜ್ಞರ ಪ್ರಕಾರ ರೋಗಿಯ ಶರೀರದ ಪ್ರತಿ ಕಿಲೋಗ್ರಾಮಿನಷ್ಟು ತೂಕಕ್ಕೆ ಹತ್ತು ಮಿ. ಗ್ರಾ.ಗಳಿಗೆ ಮಿಕ್ಕದಂತೆ ಡ್ಯಾಪ್ಸೋನನ್ನು ಪ್ರಾರಂಭಿಕವಾಗಿ ಕೊಡಬಹುದು. ಮುಂದೆ ಈ ಪ್ರಮಾಣವನ್ನು ಕೊಂಚಕೊಂಚ ಏರಿಸುತ್ತ ಹೋಗಬಹುದು. ರೋಗಿ ತೆಗೆದುಕೊಳ್ಳಬೇಕಾದ ಪರಮಾವಧಿ ಪ್ರಮಾಣವನ್ನು ತಜ್ಞರೇ ನಿರ್ಧರಿಸಬೇಕು."

ವಸ್ತುಸ್ಥಿತಿ ಹೀಗಿದೆ. ಡ್ಯಾಪ್ಸೋನಿನ ಪ್ರಾರಂಭಿಕ ಪ್ರಮಾಣ ಸರಿಯಾಗಿ ನಿರ್ಧಾರವಾಗಿಲ್ಲ. ಕೆಲವರು ದಿನವೂ ಕೊಡಬೇಕೆಂದು ಬಯಸಿದರೆ ಕೆಲವರು ವಾರಕ್ಕೆ ಎರಡು ಬಾರಿ ಸಾಕು ಎನ್ನುವವರಿದ್ದಾರೆ. ಒಟ್ಟಿನಲ್ಲಿ ದುಷ್ಪರಿಣಾಮಗಳನ್ನು ತಪ್ಪಿಸಲು ಕಡಿಮೆ ಪ್ರಮಾಣದಿಂದ ಪ್ರಾರಂಭಿಸಿ ಹೆಚ್ಚಿಸುತ್ತ ಹೋಗಬೇಕು ಎನ್ನುವುದು ನಿರ್ವಿವಾದ. ಆದರೆ WHO ಪ್ರಕಾರ ರೋಗಿಯ ಪರಮಾವಧಿ ಪ್ರಮಾಣ ಒಂದು ಕಿಲೋಗ್ರಾಮಿಗೆ ಒಂದು ವಾರಕ್ಕೆ ೧೦ ಮಿಲಿಗ್ರಾಂಗಳು. ಇದನ್ನು ಮೀರುವ ಅವಶ್ಯಕತೆ ಕಂಡುಬಂದಿಲ್ಲ. ಅದೂ ಅಲ್ಲದೆ ಕೆಲವು ಬಾರಿ ಈ ಹೆಚ್ಚಿನ ಪರಮಾವಧಿ ಪ್ರಮಾಣವನ್ನು ಮುಟ್ಟಬೇಕಾದ ಅವಶ್ಯಕತೆಯೂ ಬರುವುದಿಲ್ಲ. ಅದು ಪ್ರತಿ ರೋಗಿಯನ್ನು ಅವಲಂಬಿಸಿದೆ.

ಎರಡನೆಯದಾಗಿ, ಥಯಾಸಟಜೋನ್ ಬಹು ಪ್ರಭಾವಶಾಲಿಯಾದ ಔಷಧವೇನಲ್ಲ. ಡಾ. ರಾಮಾನುಜಮ್ ಪ್ರಕಾರ ಈಚೆಗೆ ಬಂದಿರುವ ಯಾವ ಔಷಧಗಳು ಡಾಪ್ಸೋನಿನಷ್ಟು ಪರಿಣಾಮಕಾರಿಯಾಗಿಲ್ಲ. ಥಯಾಸಟಜೋನ್ ಅನ್ನು ಎರಡನೇ ವಿಭಾಗದ ಔಷಧವೆಂದು ಪರಿಗಣಿಸಲಾಗುತ್ತಿದೆ (Second line drug).

ಮೂರನೆಯದಾಗಿ, ಕುಷ್ಠ ರೋಗದ ಪಾರ್ಶ್ವ ಪರಿಣಾಮಗಳಲ್ಲಿ ಡ್ಯಾಪ್ಸೋನನ್ನು ನಿಲ್ಲಿಸಬೇಕಾದ ಅವಶ್ಯಕತೆ ಪ್ರಾರಂಭಿಕವಾಗಿ ಇರುವುದಿಲ್ಲ. ಏಕೆಂದರೆ ಎರಿಥಿಮಾ ನೋಡೋಸಮ್‌ಗೆ ಡ್ಯಾಪ್ಸೋನ್ ಒಂದೇ ಕಾರಣವಲ್ಲ. ಪಾರ್ಶ್ವ ಪರಿಣಾಮಗಳು ಅತಿ ಹೆಚ್ಚು ಆದಾಗ ಮಾತ್ರ ಡ್ಯಾಪ್ಸೋನನ್ನು ನಿಲ್ಲಿಸಲಾಗುತ್ತದೆ. ಪಾರ್ಶ್ವ ಪರಿಣಾಮಗಳ ನಿರೋಧಕ ಔಷಧಗಳಲ್ಲಿ ಲೇಖಕರು ಮಲೇರಿಯ ನಿರೋಧಕ ಕ್ಲೋರೋಕ್ವಿನನ್ನು ಹಾಗೂ (Pentavalent antimony) ಸ್ಟಿಬೋಫೆನ್‌ನ್ನೂ

(Fantorin) ಅನ್ನು ಹೆಸರಿಸುವುದನ್ನು ಮರೆತಿದ್ದಾರೆ.

ಚಿಂಗಲ್‌ಪೇಟೆ — ಡಾ. ಎಂ. ಪ್ರೇಮನಾಥ

[ಡಾ. ದೇಶಪಾಂಡೆಯವರ ಲೇಖನದೊಂದಿಗೆ 'ಡ್ಯಾಪ್ಸೋನ್ ಹಾಗೂ ಕುಷ್ಠರೋಗ' ಎಂಬ ತಲೆಕಟ್ಟಿನೊಂದಿಗೆ ಬಂದ ಕಿರು ಲೇಖನಕ್ಕೆ ಅವರು ಹೊಣೆಯಲ್ಲ. ಸ್ಯಾಂಡೋಜ್ ಕಂಪನಿಯವರು ಪ್ರಸಿದ್ಧಿಸುವ 'ಮೆಡಿ–ಕಲ್ ಟೈಮ್ಸ್' ಪತ್ರಿಕೆಯ ಇತ್ತೀಚಿನ ಸಂಚಿಕೆಯೊಂದರಲ್ಲಿ ಕುಷ್ಠರೋಗದ ಬಗ್ಗೆ ಕುಷ್ಠರೋಗದ ಬಗ್ಗೆ ನಡೆದೊಂದು ವಿಚಾರಸಂಕಿಣದ ವರದಿ ಬಂದಿದೆ. ಡ್ಯಾಪ್ಸೋನ್ ಬಗ್ಗೆ ಅಲ್ಲಿ ಡಾ. ರಾಮಾನುಜಮ್ ಅವರೇ ವ್ಯಕ್ತಪಡಿಸಿದ ವಿಚಾರಗಳನ್ನು ಸಂಪಾದಕ ಮಂಡಲಿಯು ಸಂಗ್ರಹಿಸಿ ಕೊಟ್ಟಿದೆ. —ಸಂ.]

ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷ

ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷ (ಫೆಬ್ರುವರಿ ಕಸ್ತೂರಿ ಸಹಚಿಂತನ) ಶ್ರೀ ಡಬ್ಲ್ಯೂ. ಸಿ. ಬ್ಯಾನರ್ಜಿ, ಶ್ರೀ ಉಮೇಶ ಚಂದ್ರ ಅಲ್ಲ ಎಂದಿದ್ದೀರಿ. ಡಬ್ಲ್ಯೂ. ಸಿ. ಅಂದರೇನೇ ಉಮೇಶ ಚಂದ್ರರು. ಇಂಗ್ಲೀಷಿನಲ್ಲಿ ತಮ್ಮ ಹೆಸರನ್ನು ಅವರು Womesh Chandar ಎಂದು ಬರೆಯುತ್ತಿದ್ದುದು ಈ ತಪ್ಪು ಗ್ರಹಿಕೆಗೆ ಕಾರಣವಾಗಿರಬೇಕು.

ಸಕ್ರೆಪಟ್ಟಣ — ಜನಾರ್ದನ

ಮುಂದವೀಡು

ಡಿಸೆಂಬರ್ ೧೯೭೪ ರ ಕಸ್ತೂರಿಯಲ್ಲಿ ಶ್ರೀ ನಾರಾಯಣ ಅಣ್ಣಾಚಾರ್ಯ ಹೊಸಕೇರಿಯವರ 'ಮುದವೀಡು ಕೃಷ್ಣರಾಯರು' ಲೇಖನವನ್ನು ಓದಿದೆ. ಲೇಖನದಲ್ಲಿ ಹೇಳಿರುವ ವಿಷಯಗಳೆಲ್ಲವೂ ಮೆಚ್ಚತಕ್ಕದ್ದಾಗಿದೆ. ಆದರೆ ಒಂದು ವಿಷಯ ಮಾತ್ರ ಉಳಿದುಹೋಗಿದೆ. ಅದು ಶ್ರೀ ಮುದವೀಡು ಕೃಷ್ಣರಾಯರು ೧೯೩೦ರಲ್ಲಿ ಕರ್ನಾಟಕ ಟಾಕೀಸ್, ಧಾರವಾಡ ಅವರು ತಯಾರಿಸಿದ 'ಚಿರಂಜೀವಿ ಅಥವಾ ಮಾರ್ಕಂಡೇಯ' ಕನ್ನಡ ಚಿತ್ರದಲ್ಲಿ ಚಿತ್ರಗುಪ್ತನ ಪಾತ್ರ ವಹಿಸಿದ್ದು. ಶ್ರೀ ಹೊಸಕೇರಿಯವರ ಅತ್ಯುತ್ತಮ ಲೇಖನಕ್ಕಾಗಿ ಅವರಿಗೆ ಧನ್ಯವಾದಗಳು.

ಮೈಸೂರು — ಟಿ. ಈ. ಶ್ಯಾಮ್

ಮಾತಂಗಿ

ಡಾ. ಎಸ್. ಎಲ್. ಭೈರಪ್ಪನವರ 'ದಾಟು'ವಿನ ಪಾತ್ರಗಳಲ್ಲೊಂದಾದ ಮಾತಂಗಿಯನ್ನು ಜನವರಿ ಕಸ್ತೂರಿಯಲ್ಲಿ ಪರಿಚಯ ಮಾಡಿಕೊಟ್ಟಿರುವುದು ಸಂತೋಷಕರ. 'ಶ್ರೀ ಹಾ' ರವರು ತಮ್ಮ ಸಂಗ್ರಹದ ಪ್ರಾರಂಭದಲ್ಲಿ 'ವೆಂಕಟೇಶಯ್ಯನವರ ಹೆಂಡತಿ ಸತ್ತಾಗ ಮಗ ವೆಂಕಟೇಶನಿಗೆ ಎಂಟು ವರ್ಷ, ಸತ್ಯಳಿಗೆ ನಾಲ್ಕು.' ಎಂದಿದ್ದಾರೆ. ಇದರಲ್ಲಿ 'ವೆಂಕಟೇಶಯ್ಯನವರ..' ಎಂದಿರುವ ಸ್ಥಳದಲ್ಲಿ 'ವೆಂಕಟರಮಣಯ್ಯನವರ..' ಎಂದಿರಬೇಕಾಗಿತ್ತು. ವೆಂಕಟೇಶ-ಸತ್ಯರ ತಂದೆ ಸಂಗ್ರಹಕಾರರು ತಿಳಿದಿರುವಂತೆ(?) ವೆಂಕಟೇಶಯ್ಯನವರೆಂದಲ್ಲ, ವೆಂಕಟರಮಣಯ್ಯ. ಮಾರ್ಚ್ ಕಸ್ತೂರಿಯಲ್ಲಿ ಚಿತ್ರದುರ್ಗದ ಶ್ರೀ ರಾ. ಶ್ಯಾ. ರವೀಂದ್ರರು 'ಸಹಚಿಂತನ'ದಲ್ಲಿ 'ವೆಂಕಟರಮಣಯ್ಯ' ಎಂದು ಉಲ್ಲೇಖಿಸುವೆಡೆಯಲ್ಲಿ, ಮೂರು ಕಡೆ 'ವೆಂಕಟೇಶಯ್ಯ'ನೆಂದು ಉಲ್ಲೇಖಿಸಿದ್ದಾರೆ. ಅಲ್ಲದೆ '..ವೆಂಕಟೇಶ ಬಿ. ಎ. ಪಾಸು ಮಾಡಿದ' ಎಂದಿದ್ದಾರೆ. ಆದರೆ ವೆಂಕಟೇಶ (ವೆಂಕಟರಮಣಯ್ಯನವರ ಹಿರಿಯ ಮಗ) ಓದಿದ್ದು ಕೇವಲ ಇಂಟರ್ ವರೆಗೆ. ಸಂಗ್ರಹಕಾರ- ಓದುಗ (ಶ್ರೀ ರಾ. ಶ್ಯಾ. ರ) ರಿಬ್ಬರೂ ಏಕೆ ಎಡವಿದ್ದಾರೆಂದು ತಿಳಿಯಲಿಲ್ಲ.

ಸಂಸ್ಕೃತ ಸುಭಾಷಿತ ರತ್ನಗಳ ಕೊರತೆ 'ಕಸ್ತೂರಿ'ಯಲ್ಲಿ ಕಾಣಿಸುತ್ತಿರುವ ಒಂದು ದೊಡ್ಡ ನಿರಾಶೆ. ನಮ್ಮ ನಿರಾಶೆಯನ್ನು ದಯವಿಟ್ಟು ಪರಿಹರಿಸುವಿರಾ?

ಗುಡ್ಡೇಕೇರಿ — ಪಿ. ಶಾಂತಾರಾಮಪ್ರಭು

['ಮಾತಂಗಿ' ಸಂಗ್ರಹದಲ್ಲಿ ಹೆಸರಿನ ವಿಷಯದಲ್ಲಿ ಸಂಗ್ರಹಕಾರರ ಕಣ್ಣು ತಪ್ಪಿ ಹೋದ ವಿಷಯ ನಮ್ಮ ಗಮನಕ್ಕೂ ಮೊದಲೇ ಬಾರದಿದ್ದುದಕ್ಕಾಗಿ ವಿಷಾದಿಸುತ್ತೇವೆ. —ಸಂ]

ಗುಲಗಂಜಿ

ಫೆಬ್ರುವರಿ ಸಂಚಿಕೆಯಲ್ಲಿ ಶ್ರೀ ಮುಕುಂದ ಯಲವಗಿಯವರ 'ಚೆಂದಾದ ಬೀಜ ತಂದೀತು ಮರಣ' ಲೇಖನ ತುಂಬಾ ಚೆನ್ನಾಗಿದೆ. ಆದರೆ ಅವರು ಗುಲಗಂಜಿ ಬೀಜವನ್ನು ಕುರಿತು ಮಾತ್ರ ಹೇಳಿದ್ದಾರೆಯೆ ಹೊರತು ದೇಶದ ಕೆಲವೆಡೆಗಳಲ್ಲಿ (ಮುಖ್ಯವಾಗಿ ಮಹಾರಾಷ್ಟ್ರದಲ್ಲಿ) ರಸಗವಳದಲ್ಲಿ ಉಪಯೋಗಿಸುವ ರುಚಿಕರವಾದ 'ಗುಂಜಪಾಲ' ಎಂದು ಕರೆಸಿಕೊಳ್ಳುವ, ಹುಣಸೆ ಎಲೆಯಂತಿರುವ ಅದರ ಎಲೆಯ ಬಗ್ಗೆ ಏನೂ ಹೇಳದಿರುವುದೊಂದು ಕೊರತೆ. ಈ ಎಲೆಯನ್ನು ತಂಬಾಕು ಕವಳದಲ್ಲಿಯೂ ಉಪಯೋಗಿಸುತ್ತಾರೆ. ಇಷ್ಟೊಂದು ಸ್ವಾದಿಷ್ಟವಾದ ಎಲೆಯನ್ನು ಹೊಂದಿರುವ ಬಳ್ಳಿಯು ವಿಷಕಾರಿಯಾಗಿರಲು ಸಾಧ್ಯವೇ? ಎಲೆಯೂ ವಿಷಕಾರಿ ಪರಿಣಾಮವುಳ್ಳದ್ದೆ?

ಪುಣೆ — ಲಕ್ಷ್ಮೀನಾರಾಯಣ ಹೆಗಡೆ

ಔರಂಗಜೇಬ

ಮಾರ್ಚ್ ೧೯೭೭ರ ಸಂಚಿಕೆಯಲ್ಲಿ ಪುಸ್ತಕ ವಿಭಾಗದ 'ಔರಂಗಜೇಬ' ಇತಿಹಾಸಿಕ ಕಥೆ ಒಳ್ಳೇ ಸಾಧನೆಯದಾಗಿದೆ. ದಿ. ವಾಸುದೇವಾಚಾರ್ಯ ಕೆರೂರರವರ 'ಭ್ರಾತೃಘಾತಕನಾದ ಔರಂಗಜೇಬ'ವನ್ನು ಕುಶಲತೆಯಿಂದ ಕಸುವಿನ ಶೈಲಿಯಿಂದ ಸಂಗ್ರಹಿಸಿದ ಕೆ. ಶಾರದಾರವರು ಅಭಿನಂದನಾರ್ಹರು.

ಕುಣಿಗಲ್ — ಕೆ. ಎಂ. ಶಿವರಾಮಯ್ಯ

ಕಸ್ತೂರಿ

ಸಂಚಿಕೆ: ೪ ಕಸ್ತೂರಿ, ಎಪ್ರಿಲ್ ೧೯೭೫ ವರ್ಷ: ೧೯

ಶರೀರ ಮತ್ತು ಆತ್ಮ

ಸಂಗ್ರಹ : ಗೋಪೀನಾಥ ಸವಣೂರ

ಕುಂಬಾರನೊಬ್ಬ ತನ್ನ ಕುಲದೇವರ ಮೆರವಣಿಗೆಯನ್ನು ತೆಗೆಯಲು ನಿರ್ಧರಿಸಿದನು. ಮೆರವಣಿಗೆಗೆಂದು ಪಲ್ಲಕ್ಕಿ, ಗಾಡಿ ಅಥವಾ ಬೇರೆ ವಾಹನಗಳು ದೊರೆಯದಿದ್ದುದರಿಂದಾಗಿ ಅವನು ತನ್ನ ಮಾಡಿಕೆಯ ವಾಹನವಾದ ಕತ್ತೆಯನ್ನೇ ಉಪಯೋಗಿಸಲು ನಿರ್ಧರಿಸಿದನು. ಒಡನೆಯೇ ಅವನೊಂದು ಕತ್ತೆಯನ್ನು ಹಿಡಿದು ತಂದನು. ಅದರ ಮೈಮೇಲಿನ ಹೊಲಸನ್ನು ತಿಕ್ಕಿ ತಿಕ್ಕಿ ತೊಳೆದು ತೆಗೆದನು. ಅದಕ್ಕೆ ಎಣ್ಣೆ ಹೂಸಿ ಬಿಸಿ ನೀರಿನಿಂದ ಅಭ್ಯಂಗ ಸ್ನಾನ ಮಾಡಿಸಿದನು. ಅದರ ಶರೀರವನ್ನು ಸ್ವಚ್ಛವಾಗಿ ಒರೆಸಿದ ನಂತರ ಅದರ ಮೈಗೆಲ್ಲ ಸುಗಂಧ ತೈಲ ಹಚ್ಚಿದನು. ಸುಗಂಧಿತ ಪುಷ್ಪಗಳಿಂದ ಸಿದ್ಧಪಡಿಸಿದ ಹಾರವನ್ನು ಕತ್ತೆಯ ಕೊರಳಿಗೆ ತೊಡಿಸಿ ಅದರ ಬೆನ್ನ ಮೇಲೆ ಬಂಗಾರ ಬಣ್ಣದ ಜರಿಯ ಶಾಲು ಹೊದಿಸಿಸಿದನು. ದೇವರ ಉತ್ಸವಮೂರ್ತಿಯನ್ನು ಅದರ ಬೆನ್ನ ಮೇಲಿರಿಸಿ ಊದುತ್ತ, ಬಾರಿಸುತ್ತ ಮೆರವಣಿಗೆ ಹೊರಟಿತು. ದಾರಿಯಲ್ಲಿ ಸುವಾಸಿನಿಯರು ಆರತಿ ಬೆಳಗಿದರಲ್ಲದೆ ಸುಗಂಧದ ಪುಷ್ಪಗಳನ್ನೂ ಗುಲಾಲನ್ನೂ ಅದರ ಮೇಲೆ ಎರಚಿದರು.

ಆ ಕತ್ತೆಯು, 'ಏನಿದು ನನ್ನ ಸುದೈವ! ನನ್ನಷ್ಟು ಪುಣ್ಯವಂತ ಪ್ರಾಣಿ ಜಗತ್ತಿನಲ್ಲಿಯೇ ಇಲ್ಲ. ನನ್ನನ್ನು ಇಷ್ಟು ದಿನ ಹೊಡೆದು ಬಡಿದು ಹಿಂಸಿಸುತ್ತಿದ್ದ ಮನುಷ್ಯನೇ ಈಗ

ನನ್ನನ್ನು ಸನ್ಮಾನಿಸುತ್ತಿದ್ದಾನೆ! ತಿಪ್ಪೆಯ ಮೇಲಿನ ಹೊಲಸು ಆಹಾರವೂ ನನಗೆ ಸರಿಯಾಗಿ ದೊರಕುತ್ತಿರಲಿಲ್ಲ. ಇಂದು ಪ್ರತಿಯೊಬ್ಬರೂ ಸಿಹಿ ಸಿಹಿಯಾದ ಖಾದ್ಯಗಳನ್ನು ನನಗೆ ತಿನಿಸುತ್ತಿದ್ದಾರೆ. ಏನೀ ಮರ್ಯಾದೆ! ಆಹಾ ಸ್ವರ್ಗವೆಂದರೆ ಇದೆ!' ಎಂದು ತನ್ನ ಮನದಲ್ಲಿ ಅಂದುಕೊಂಡಿತು.

ಆನಂದದಲ್ಲಿ ಮೈಮರೆತಾಗ ಆ ಮೆರವಣಿಗೆ ಹೊರಟ ಸ್ಥಳಕ್ಕೆ ಯಾವಾಗ ಮರಳಿತೆಂಬುದು ಕತ್ತೆಗೆ ಗೊತ್ತೇ ಆಗಲಿಲ್ಲ. ಅದು ತನ್ನ ಆನಂದದ ಗುಂಗಿನಲ್ಲಿಯೇ ಇದ್ದಿತು.

ಮೆರವಣಿಗೆ ಮುಗಿಯಿತು. ಆದುವರೆಗೆ ಕತ್ತೆಯ ಬೆನ್ನಮೇಲಿರಿಸಿದ್ದ ದೇವರ ಉತ್ಸವ ಮೂರ್ತಿಯನ್ನು ಕೆಳಗಿಳಿಸಲಾಯಿತು. ಆದರೂ ಆ ಕತ್ತೆ ಹಾಗೇ ನಿಂತಲ್ಲೇ ನಿಂತುಕೊಂಡಿತು. ಆಗ ಯಾರೋ ಒಬ್ಬ ಅದಕ್ಕೆ ಚೆನ್ನಾಗಿ ಕೋಲಿನಿಂದ ಪ್ರಹಾರಮಾಡಿ ಓಡಿಸಿದನು. ಆ ಕತ್ತೆ ಮೊದಲಿನಂತೆ ತಿಪ್ಪೆಯಲ್ಲಿ ದುಃಖದಿಂದ ಹೊರಳಾಡಲಾರಂಭಿಸಿತು.

ಕತ್ತೆಯ ಬೆನ್ನ ಮೇಲೆ ದೇವರ ಉತ್ಸವ ಮೂರ್ತಿ ಇರುವವರೆಗೆ ಅದಕ್ಕೆ ಸಕಲ ಮರ್ಯಾದೆಯೂ ದೊರಕಿತು. ದೇಹದಲ್ಲಿ ಆತ್ಮವಿರುವವರೆಗೆ ಅದೊಂದು ದೇಗುಲವಿದ್ದಂತೆ. ಆತ್ಮನು ಪರಮಾತ್ಮನಲ್ಲಿ ಐಕ್ಯವಾದ ನಂತರ ದೇಹಕ್ಕೇನೂ ಬೆಲೆಯಿಲ್ಲ. ✿



ಗ್ರಹಣ

ಒಂದು ಬಾರಿ ಆದಿವಾಸಿ ಪ್ರದೇಶದಲ್ಲಿ ಕ್ಷಾಮ ತಲೆದೋರಿತು. ಜನರು ಸಹಾಯಕ್ಕೋಸ್ಕರ ಭಗವಂತನನ್ನು ಪ್ರಾರ್ಥಿಸಿದರು. ಭಗವಂತ ಧಾನ್ಯವನ್ನು ಸಾಲವಾಗಿ ಪಡೆದು ಅವರಿಗೆ ಸಹಾಯ ಮಾಡಿದ.

ಮತ್ತೊಂದು ಸಲ ಸಹ ಕ್ಷಾಮ ಕಂಡುಬಂದಿತು. ಭಗವಂತ ಮತ್ತೆ ಧಾನ್ಯವನ್ನು ಸಾಲದ ರೂಪದಲ್ಲಿ ಪಡೆದು ಸಹಾಯ ಮಾಡಿದ. ಮೂರನೆಯ ವರ್ಷವೂ ಸಹ ಇದೇ ಇದೇ ರೀತಿಯ ಪರಿಸ್ಥಿತಿ ಉಂಟಾಗಿ ಭಗವಂತ ಸಾಲ ಪಡೆದು ಪುನಃ ಸಹಾಯ ಮಾಡಿದ. ಇದೇ ರೀತಿ ಭಗವಂತನಿಂದ ಸಾಲದ ಹೊರೆ ವಸೂಲು ಮಾಡಲು ಸಾಹುಕಾರ ಅವನನ್ನು ಹಿಡಿದ ಎಂಬುದಾಗಿ ವದಂತಿಯಿದೆ. ಇದನ್ನು ವೀಕ್ಷಿಸಿ ಚಂದ್ರ ಮತ್ತು ಸೂರ್ಯ ಕಣ್ಣು ಮುಚ್ಚಿಕೊಂಡರು.

ಇದನ್ನೆ ಗ್ರಹಣ ಹಿಡಿಯುವಿಕೆ ಎಂಬುದಾಗಿ ಹೇಳುತ್ತಾರೆ.


ಸಂ.: ಎಸ್. ಕೆ. ನರಸಿಂಹಮೂರ್ತಿ

•

ಒಂದು ಹೆಣ್ಣಿನಲ್ಲಿ ಪ್ರತಿಭೆಯಿದ್ದರೆ ಅದನ್ನುಪಯೋಗಿಸಿ ಆಕೆ ಪುರುಷನಲ್ಲಿ ತನ್ನ ಬಗೆಗೆ ಆಸಕ್ತಿಯನ್ನು ಕೆರಳಿಸುತ್ತಾಳೆ, ಸೌಂದರ್ಯವಿದ್ದರೆ ಅತನನ್ನು ಆಕರ್ಷಿಸುತ್ತಾಳೆ, ಆದರೆ ಸಹಾನುಭೂತಿಯಿದ್ದರೆ ಮಾತ್ರ ಆಕೆ ಆತನನ್ನು ಪಡೆದುಕೊಳ್ಳುತ್ತಾಳೆ.

—ಲೂಶ್‌ವಿಲ್ಲೆ ಕೋರ್ಟ್ ಜರ್ನಲ್‌ನಿಂದ

ಸಾಹಿತ್ಯ ಜಗತ್ತಿಗೆ ಅವನು ರಶಿಯದ ಶ್ರೇಷ್ಠ ಕೊಡುಗೆ



ಥಿಯೋಡೋರ್ ಡಾಸ್ಟಾಯುವ್‌ಸ್ಕಿ

ಡಾ. ಸರೋಜನಿ ಶಿಂತ್ರಿ

ಸಾಹಿತ್ಯ ಜಗತ್ತಿನಲ್ಲಿ ಚಿರಸ್ಥಾಯಿಯಾಗಿ ಉಳಿಯಬಲ್ಲ ರಶಿಯನ್ನರಲ್ಲಿ ಥಿಯೋಡೋರ್ ಮೈಖೈಲೋವಿಚ್ ಡಾಸ್ಟಾಯುವ್‌ಸ್ಕಿಯ ಹೆಸರು ಬಹು ದೊಡ್ಡದು. ಕಳೆದ ಶತಮಾನದಲ್ಲಿ ಯುರೋಪಿಯನ್ ಸಾಹಿತ್ಯದ ಮೇಲೆ ಗಾಢ ಪ್ರಭಾವ ಬೀರಿ ನವಯುಗದ ಉದಯದ ದಿಕ್ಕು ದೆಸೆಗಳನ್ನು ಸೂಚಿಸಿದ ಕಾದಂಬರಿಕಾರರಲ್ಲಿ ಅವನ ಸ್ಥಾನ ಅನನ್ಯವಾದುದು.

ಜೀವನದ ಕಹಿಯ ಹತ್ತಾರು ಮುಖಗಳನ್ನೂ ಅವುಗಳ ತೀವ್ರತೆಯನ್ನೂ ಅನುಭವಿಸಿಯೂ ಮಾನವದ್ವೇಷಿಯಾಗದೆಯೆ ಕಲ್ಲಿನಲ್ಲಿ ಮಾನವತೆಯ ಹೂವರಳುವುದನ್ನು ಗುರುತಿಸಿದ ಶ್ರೇಯಸ್ಸು ಡಾಸ್ಟಾಯುವ್‌ಸ್ಕಿಯದು.

೧೮೨೧ ರ ಅಕ್ಟೋಬರ್ ೩೦ ರಂದು ಮಾಸ್ಕೊ ಆಸ್ಪತ್ರೆಯೊಂದರಲ್ಲಿ ಜನಿಸಿದ ಅವನ ತಂದೆ ವೃತ್ತಿಯಿಂದ ಡಾಕ್ಟರ್, ಉಕ್ರೇನಿಯಾನ್ ಮೂಲದವ (ಸ್ಟಾಲಿನ್ನನಂತೆ!); ತಾಯಿ ಮಾಸ್ಕೋದ ವಣಿಕ್ ಕುಟುಂಬ ಒಂದಕ್ಕೆ ಸೇರಿದವಳು. ಜಮೀನುದಾರನೆಂದು ಹೇಳಿಕೊಳ್ಳುವಷ್ಟು ಪಿತ್ರಾರ್ಜಿತ ಆಸ್ತಿಯೂ ತಂದೆಗಿತ್ತು. ಆದರೆ ಪರಪೀಡನೆ ಅವನ ಎರಡನೆಯ ಸ್ವಭಾವವೇ ಏನೋ ಎಂಬಷ್ಟರ ಮಟ್ಟಿಗೆ ಅದು ಅವನಲ್ಲಿ ಮನೆ ಮಾಡಿತ್ತು. ರೈತರನ್ನಾತ ತುಂಬಾ ಹಿಂಸೆಪಡಿಸುತ್ತಿದ್ದ. ಕುಡುಕ, ಮನೆಯಲ್ಲಿ ಹೆಂಡತಿಮಕ್ಕಳೊಂದಿಗೆ ಅಸ್ವಾಭಾವಿಕ ನಡತೆ. ಇದರಿಂದಾಗಿ ಡಾಸ್ಟಾಯುವ್‌ಸ್ಕಿಗೆ ತಂದೆಯ ಮೇಲೆ ಪ್ರೀತಿಯಿರಲಿಲ್ಲ. ಪ್ರತಿಯಾಗಿ ದ್ವೇಷವೇ ಮನೆ ಮಾಡಿತ್ತೇನೋ ಎಂದೆನಿಸುತ್ತದೆ. ವಿಪರೀತ ಹಿಂಸೆಗೊಳಗಾದ ಆ ರೈತರು ತನ್ನ ತಂದೆಯನ್ನು ಕೊಂದಾಗ ಡಾಸ್ಟಾಯುವ್‌ಸ್ಕಿಗೆ ದುಃಖವಾಗುವುದರ ಬದಲು ತೃಪ್ತಿಯಾಗಿರಬೇಕೆಂದು ಮನಶಾಸ್ತ್ರಜ್ಞರ ಊಹೆ. ಆತನಿಗೆ ಈಡಿಪಸ್ ಕಾಂಪ್ಲೆಕ್ಸ್ ಇದ್ದಿರಲೂ ಸಾಕು. ಬಡವ ಮತ್ತು ಅಸಹಾಯಕರನ್ನು ಹಿಂಡಿ ಹಿಪ್ಪಿಮಾಡುವ ನರರಾಕ್ಷಸರು ಕೊಲ್ಲಲು ಯೋಗ್ಯರೆಂಬ ವಿಚಾರ ಈತನ ಕಾದಂಬರಿಗಳಲ್ಲಿ ಅನೇಕ ಸಲ ಪ್ರಸ್ತಾಪಿಸಲ್ಪಡುತ್ತದೆ. ಕೊಲ್ಲಲಪೇಕ್ಷಿಸುವ ಆ 'ಅಪರಾಧೀ' ದ್ವೇಷವು ಈತನ ಮನಸ್ಸಿನಲ್ಲಿ ತೀರ ಚಿಕ್ಕ ವಯಸ್ಸಿನಿಂದಲೇ ಬೇರೂರಿರಬೇಕು. ಇಂತಹ 'ಅಪರಾಧೀ' ಮಾನಸಿಕ ತಾಕಲಾಟ ಬೆಳೆಯುವುದಕ್ಕೆ ಮನೆಯಲ್ಲಿಯ ಅಸ್ವಾಭಾವಿಕ ವಾತಾವರಣವೇ

ಕಾರಣವಾಗಿರಬೇಕು. ತಂದೆಯೆಂದರೆ ಮಕ್ಕಳೆಲ್ಲರಿಗೂ ಭಯ. ಹದಿನೈದು ವರುಷದವನಿರುವಾಗಲೇ ಈತನ ತಾಯಿ ಹತ್ತು ಮಕ್ಕಳನ್ನು ಹೆತ್ತು ಚಿಕ್ಕ ವಯಸ್ಸಿನಲ್ಲಿಯೇ ಸತ್ತು-ಹೋದಳು. ಪ್ರೇಮದ ಬುಗ್ಗೆಯೇ ಬತ್ತಿ ಹೋದುದು ಡಾಸ್ಟೊಯವ್‌ಸ್ಕಿಯ ಮೃದು ಮನಸ್ಸಿನ ಮೇಲೆ ವಿಪರೀತ ಪರಿಣಾಮ ಮಾಡಿರಬೇಕು. ಡಾಸ್ಟೊಯವ್‌ಸ್ಕಿ ಗುಂಗು ಹಿಡಿದು ಕೂಡುವವನು; ವಿಚಾರದಾಳದಲ್ಲಿ ತನ್ನನ್ನೇ ಮರೆತುಬಿಡುವವನು. ಕಾಲಾನಂತರ ಎಪಿಲೆಪ್ಸಿಯಾ (ಮುಲರೋಗ) ಈತನಲ್ಲಿ ಕಂಡುಕೊಂಡಿತು. ದೈಹಿಕ ಕಾರಣಕ್ಕೋ ಅಥವಾ ಮಾನಸಿಕ ಕಾರಣಕ್ಕೋ ಬಾಹ್ಯಜಗತ್ತಿನ ವಿಷಯದಲ್ಲಿಯ ಜುಗುಪ್ಸೆಯಾಗಿಯೋ ಮೈಮೇಲೆ ಅರಿವಿಲ್ಲದೆ ತಾಸುಗಟ್ಟಲೆ ಬೀಳುವವನು. ರೋಷ, ಖೇದ ಮತ್ತು ಪ್ರೇಮಗಳ ಅತಿರೇಕವನ್ನು ನಾವು ಡಾಸ್ಟೊಯವ್‌ಸ್ಕಿಯ ಜೀವನದ ಅನೇಕ ಘಟನೆಗಳಲ್ಲಿ ಕಾಣುತ್ತೇವೆ.

ಮಾಸ್ಕೋದಲ್ಲಿ ಶಾಲಾಭ್ಯಾಸ ಮುಗಿಸಿದ ಡಾಸ್ಟೊಯವ್‌ಸ್ಕಿ ವೃತ್ತಿಯಿಂದ ಮಿಲಿಟರಿ ಇಂಜಿನಿಯರ್ ಆಗಬೇಕಿತ್ತು. ಅದಕ್ಕಾಗಿ ಅಂದಿನ ರಶಿಯದ ರಾಜಧಾನಿ ಸೇಂಟ್ ಪೀಟರ್ಸ್‌ಬರ್ಗ್(ಇಂದಿನ ಲೆನಿನ್‌ಗ್ರಾಡ್)ನಲ್ಲಿ ತರಬೇತಿ ಪೂರಯಿಸಿದ ನಂತರ ಅವನಿಗೆ ೧೮೪೩ರಲ್ಲಿ ಸೈನ್ಯದಲ್ಲಿ ಕಮಿಶನ್ಡ್ ಹುದ್ದೆಯೂ ದೊರೆಯಿತು. ಆದರೆ ಲೇಖನಿಯ ಸೆಳೆತವೇ ಬಲವಾಗಿ ಮೂರೇ ವರ್ಷಗಳಲ್ಲಿ ಅಲ್ಲಿಂದ ಹೊರಬಿದ್ದು ಬರವಣಿಗೆಗೇ ತನ್ನನ್ನು ತಾನರ್ಪಿಸಿಕೊಂಡನವನು.

೧೮೪೬ರಲ್ಲಿ ಡಾಸ್ಟೊಯವ್‌ಸ್ಕಿಯ ಚೊಚ್ಚಲು ಕೃತಿ 'ಪೂರ್ ಫೋಕ್' ಪೂರ್ತಿಗೊಂಡು ಮರುವರ್ಷ ಪುಸ್ತಕ ರೂಪದಲ್ಲಿ ಹೊರಬಂತು. ರಶಿಯದ ಸಾಹಿತ್ಯಾಕಾಶದಲ್ಲಿ ಹೊಸದೊಂದು ತಾರೆಯೇ ಮೂಡಿತೇನೋ ಎಂಬಷ್ಟರ ಮಟ್ಟಿಗೆ ಅದಕ್ಕೆ ಮನ್ನಣೆ ದೊರೆಯಿತು. ಆದರೆ ಅವನ ಎರಡನೆಯ ಕಾದಂಬರಿ 'ಡಬಲ್' (೧೮೪೬) ವಿಮರ್ಶಕರ ದೃಷ್ಟಿಯಲ್ಲಿ ನಿರಾಶಾದಾಯಕವಾಗಿ ಪರಿಣಮಿಸಿತು. ಅದರ ಬಗ್ಗೆ ಕಟು ಟೀಕೆ ಬಂದು ಅವನ ಜನಪ್ರಿಯತೆ ಇದ್ದಕ್ಕಿದ್ದಂತೆ ಕುಸಿಯತೊಡಗಿತು. ಇದರ ಒಂದು ಪರಿಣಾಮವೆಂದರೆ ಅಂದಿನ ರಶಿಯನ್ ಸಾಹಿತ್ಯ ಕ್ಷೇತ್ರದಲ್ಲಿ ಶಿಷ್ಟರೆನಿಸಿದ್ದ ಕೆಲವರ ಬಗ್ಗೆ ಡಾಸ್ಟೊಯವ್‌ಸ್ಕಿಯ ಮನಸ್ಸಿನಲ್ಲಿ ತೀವ್ರ ಕಹಿ ಮೂಡಿದ್ದು. ಮುಂದೆ ನಡೆದ ಕೆಲ ಘಟನೆಗಳಿಂದ ಇದು ಮತ್ತಷ್ಟು ತೀವ್ರಗೊಂಡು ಕಡೆತನಕವೂ ಉಳಿದುಹೋಯಿತು.

ತುರ್ಗೆನೆವ್ ಆ ಕಾಲದ ರಶಿಯನ್ ಸಾಹಿತ್ಯದಲ್ಲಿ ಬಹು ದೊಡ್ಡ ಹಾಗು ಗೌರವಾನ್ವಿತ ಹೆಸರು. ತನ್ನ ಅತೀವ ನಿರಾಶೆಯ ಗಳಿಗೆ-ಯೊಂದರಲ್ಲಿ ಡಾಸ್ಟೊಯವ್‌ಸ್ಕಿ ಒಮ್ಮೆ ಅವನ ಬಳಿ ಹೋಗಿ (ಅವನು ತನ್ನ ಕಟು ಟೀಕಾಕಾರ-ರಲ್ಲಿ ಪ್ರಮುಖನೆಂದು ತಿಳಿದಿದ್ದಾಗಲೂ) ತನ್ನ ಮಾನಸಿಕ ದುಗುಡವನ್ನೆಲ್ಲಾ ತೋಡಿ-ಕೊಂಡನಂತೆ. ತುರ್ಗೆನೆವ್ ಶಾಂತ ಚಿತ್ತ-ದಿಂದ ಇವನು ಹೇಳಿದ್ದೆಲ್ಲವನ್ನೂ ಕೇಳಿಕೊಂಡನಾದರೂ ಅವನಿಂದ ಸಾಂತ್ವನದ ಒಂದು ಶಬ್ದ ಕೂಡ ಬಾರದಿರಲು ಡಾಸ್ಟೊಯವ್‌ಸ್ಕಿ ಕುಪಿತನಾಗಿ ಶಪಥಗೈದು ಹೊರಬಿದ್ದನಂತೆ.

ಆದರೆ ಪೆಟ್ರಾಶೆವ್‌ಸ್ಕಿ ಎಂಬ ಆ ಕಾಲದ ಇನ್ನೊಬ್ಬ ವೈಚಾರಿಕನು ಅನೇಕ ಯುವಕರನ್ನು ಕರ್ಷಿಸಿದ್ದನು. ಅವನಿಂದ ಪ್ರಭಾವಿತರಾದ ಯುವ ಜನರಲ್ಲಿ ಡಾಸ್ಟೊಯವ್‌ಸ್ಕಿ ಕೂಡ ಒಬ್ಬ. ಫ್ರಾನ್ಸಿನಲ್ಲಿ ನಡೆದಿದ್ದ ಸಮಾಜವಾದಿ ಆಂದೋಲನ ಇವರಿಗೆಲ್ಲ ಸ್ಫೂರ್ತಿಯ ಸೆಲೆಯಾಗಿತ್ತು. ರಶಿಯದಲ್ಲಿ ಆಗಬೇಕಿದ್ದ ರಾಜಕೀಯ, ಸಾಮಾಜಿಕ ಸುಧಾರಣೆಗಳ ಕುರಿತು ಈ ಗುಂಪು ಪೆಟ್ರಾಶೆವ್‌ಸ್ಕಿಯ ಮಾರ್ಗದರ್ಶನದಲ್ಲಿ ಚರ್ಚಿಸುತ್ತಿತ್ತು.

ಅಂದಿನ ಝಾರನ ನಿರಂಕುಶ ಪ್ರಭುತ್ವಕ್ಕೆ ಈ ಗುಂಪಿನ ಮೇಲೆ ಯಾವಾಗಲೂ ಕಣ್ಣಿದ್ದೇಯಿತ್ತು. ೧೮೪೮ ರಲ್ಲಿ ಕಂಡುಬಂದ ರಾಜ್ಯ ಕ್ರಾಂತಿಯ ಲಕ್ಷಣಗಳು ಈ ಗುಂಪನ್ನು ಸದೆಬಡೆಯುವುದಕ್ಕೆ ಸರಕಾರಕ್ಕೊಂದು ನೆಪ ಒದಗಿಸಿ ಕೊಟ್ಟಂತಾಯಿತು. ೧೮೪೯ ರ ಎಪ್ರಿಲ್ ೨೩ ರಂದು ಪೆಟ್ರಾಶೆವ್‌ಸ್ಕಿ ಮತ್ತು ಡಾಸ್ಟೊಯವ್‌ಸ್ಕಿಯವರನ್ನೊಳಗೊಂಡ ಈ ಗುಂಪಿನ

ಸದಸ್ಯರೆಲ್ಲರನ್ನು ಸೆರೆ ಹಿಡಿಯಲಾಯಿತು. ಅವರನ್ನೆಲ್ಲ ಸೈಬೀರಿಯಕ್ಕೆ ಸಾಗಿಸಿ ವಿಚಾರಣೆಯ ಹಾಗೂ ಮರಣ ದಂಡನೆ ವಿಧಿಸುವ ನಾಟಕ ಮಾಡಲಾಯಿತು. ಅಲ್ಲದೆ ೧೮೪೯ರ ಡಿಸೆಂಬರ್ ೨೧ ರಂದು ಇವರೆಲ್ಲರನ್ನು ಗುಂಡಿಕ್ಕಿ ಕೊಲ್ಲಲು ಎಲ್ಲಾ ಏರ್ಪಾಟುಗಳೂ ನಡೆದು ಇವರನ್ನು ವಧಸ್ಥಾನಕ್ಕೆ ಕೂಡ ತಂದು ನಿಲ್ಲಿಸಲಾಯಿತು. ಮುಂದುಗಡೆ ಮೂವ್ವರನ್ನೂ ಅವರ ಹಿಂದುಗಡೆ ನಾಲ್ವರನ್ನೂ ನಿಲ್ಲಿಸಲಾಯಿತು. ಮುಂದುಗಡೆಯವರು ಕೊಲ್ಲಲ್ಪಡುವುದನ್ನು ಹಿಂದುಗಡೆ ಇದ್ದವರು ನೋಡಬೇಕು. ಡಾಸ್ಟೋಯೆವ್‌ಸ್ಕಿ ಹಿಂದಿನ ಸಾಲಿನಲ್ಲಿದ್ದನು. ಇನ್ನೇನು ಗುಂಡು ಹಾರಿಸುವುದೊಂದೇ ಉಳಿದಿತ್ತು. ಒಬ್ಬ ಕುದುರೆ ಸವಾರ ಬಿಳಿ ನಿಶಾನೆಯನ್ನು ಬೀಸುತ್ತ ಕೈ ಮೇಲೆ ಮಾಡಿ ವಧಸ್ಥಾನಕ್ಕೆ ಧಾವಿಸುತ್ತ ಬಂದ. ರಾಜನು ಕಳುಹಿಸಿದ ಕ್ಷಮಾಪಣೆ ಪತ್ರವನ್ನು ಆತ ತನ್ನೊಂದಿಗೆ ತಂದಿದ್ದ. ಸಾವಿನ ಅಂಚಿನಲ್ಲಿ ನಿಂತ ಮನುಷ್ಯನಿಗೆ ಜೀವದಾನ! ಇದಕ್ಕಿಂತಲೂ ಹೆಚ್ಚು ರೋಮಾಂಚಕಾರಿ ಸನ್ನಿವೇಶ ಮತ್ತೊಂದಿರಬಹುದೇ? ಡಾಸ್ಟೋಯೆವ್‌ಸ್ಕಿಯ ಕಾದಂಬರಿಗಳಲ್ಲಿ ಇಂತಹ ಅನೇಕ ಸನ್ನಿವೇಶಗಳನ್ನು ನಾವು ಕಾಣುತ್ತೇವೆ. ಅಪರಾಧವನ್ನೆಸಗುವ ಮನೋವೃತ್ತಿ, ಅಪರಾಧವನ್ನೆಸಗುವಾಗಿನ ಮನಸ್ಸಿನ ಆವೇಗ, ಅಪರಾಧದ ನಂತರದಲ್ಲಿ ಉದ್ಭವಿಸುವ ಕ್ಲೇಶ, ದ್ವೇಷ, ಆತ್ಮನಿಂದನೆ, ಶಿಕ್ಷೆಯನ್ನು ಅನುಭವಿಸುವಾಗಿನ ಮನಸ್ಸಿನ ಸ್ಥಿತಿ–ಇವೆಲ್ಲವುಗಳನ್ನೂ ತಿಳಿಯಬೇಕಾದರೆ ಡಾಸ್ಟೋಯೆವ್‌ಸ್ಕಿಯ ಜಗತ್ಪ್ರಸಿದ್ಧ (ಕಾದಂಬರಿ 'ಕ್ರೈಮ್ ಆ್ಯಂಡ್ ಪನಿಷ್ಮೆಂಟ್') ಓದಲೇಬೇಕು.

ಈ ವಿಚಾರಣೆ, ಮರಣ ದಂಡನೆ, ಕೊನೆಯ ನಿಮಿಷದಲ್ಲಿ ಜೀವದಾನ ಇದೆಲ್ಲ ಅಂದಿನ ಅರಸರು ಮಾಡಿದ ಪೂರ್ವಯೋಜಿತ ನಾಟಕವೆಂಬುದು ಇವರಾರಿಗೂ ತಿಳಿದಿರಲಿಲ್ಲ. ಆದರೆ ಈ ನಾಟಕೀಯ ಘಟನೆ ಡಾಸ್ಟೋಯೆವ್‌ಸ್ಕಿಯ ಮನಸ್ಸಿನ ಮೇಲೆ ಮಾತ್ರ ಅಚ್ಚಳಿಯದ ಮುದ್ರೆಯೊತ್ತಿತು.

ಜೀವದಾನವನ್ನು ಪಡೆದ ಡಾಸ್ಟೋಯೆವ್‌ಸ್ಕಿ ಉಳಿದ ಸಹೋದ್ಯೋಗಿಗಳೊಂದಿಗೆ ನಾಲ್ಕು ವರುಷ ಸೈಬೀರಿಯಾದ ಜೇಲಿನಲ್ಲಿ, ನಂತರ ಎರಡು ವರುಷ ಸಾಮಾನ್ಯ ಸೈನಿಕನಾಗಿ ಕಠಿಣ ಶಿಕ್ಷೆಯನ್ನು ಅನುಭವಿಸಿದ. ನಾಲ್ಕು ವರುಷಗಳವರೆಗೆ ಶಿಕ್ಷೆಯ ಸಂಕೋಲೆಗಳನ್ನು ಹೊತ್ತು ಜೀವಿಸಿದ. ಬಾಹ್ಯ ಜಗತ್ತಿನೊಡನೆ ಸಂಪರ್ಕವಿಲ್ಲ. ಆದರೆ ಮಾನವರೊಡನೆ ಸಂಪರ್ಕವಿದ್ದಿರಲಿಲ್ಲವೆಂದಲ್ಲ, ತದ್ವಿರುದ್ಧವಾಗಿ, ನೋಡಿದಲ್ಲೆಲ್ಲ ಮನುಷ್ಯ ಪ್ರಾಣಿಗಳೇ. ಕುಡುಕರು, ತಲೆಹೋಕರು, ಕೊಲೆಗಡುಕರು, ಪುಂಡರು, ದರೋಡೆಖೋರರು. ಆ ಮನುಷ್ಯ ಸಮೂಹದಲ್ಲಿ ಆತ ಇನ್ನೂ ಅಂತರ್ಮುಖಿಯಾದ. 'ದಿ ಹೌಸ್ ಆಫ್ ದಿ ಡೆಡ್' ಎಂಬ ಪುಸ್ತಕದಲ್ಲಿ ತನ್ನ ಎಲ್ಲ ಅನುಭವಗಳನ್ನೂ ಅರ್ಥವತ್ತಾಗಿ ಚಿತ್ರಿಸಿದ್ದಾನೆ. ಉಳಿದವರಾರಾದರೂ ಆತನ ಸ್ಥಾನದಲ್ಲಿದ್ದಿದ್ದರೆ ಅವರು ಮಾನವದ್ವೇಷಿಗಳಾಗಿ ಪರಿವರ್ತಿತರಾಗುತ್ತಿದ್ದರು. ಆದರೆ ಡಾಸ್ಟೋಯೆವ್‌ಸ್ಕಿ ಹಾಗಲ್ಲ. ಆ ಎಲ್ಲ ದುರ್ದೈವೀ ಮನುಷ್ಯ ಪ್ರಾಣಿಗಳ ವಿಷಯದಲ್ಲಿ ಆತನ ಅಂತಃಕರಣ ಉಕ್ಕಿ ಹರಿಯಿತು ತನ್ನ ಅಣ್ಣನಿಗೆ ಬರೆದ ಒಂದು ಪತ್ರದಲ್ಲಿ ಆತ ಹೀಗೆಂದಿದ್ದಾನೆ: "ಈ ನಾಲ್ಕು ವರುಷಗಳಲ್ಲಿ, ಸೆರೆಮನೆಯಲ್ಲಿಯೂ ಸಹ, ಆ ಕೊಲೆಗಡುಕರಲ್ಲಿ ನಾನು ಮನುಷ್ಯತ್ವವನ್ನು ಕಂಡುಕೊಂಡಿದ್ದೇನೆ. ನೀನು ನಂಬಬಲ್ಲೆಯಾ?– ಇಲ್ಲಿ ಜನರು ಎಷ್ಟೊಂದು ಗಟ್ಟಿಗರು, ಆಳವಾದ ಮತ್ತು ಸುಂದರ ಸ್ವಭಾವದವರಿದ್ದಾರೆಂಬುದನ್ನು? ಮೇಲೆ ನೋಡಲು ಬಹು ಒರಟು, ಬಿಡಿಸಿ ನೋಡಿದರೆ ಚಿನ್ನದಂತಹ ಮನಸ್ಸು, ಇದನ್ನು ಕಂಡು-ಕೊಳ್ಳುವುದರಲ್ಲಿ ನನಗೆಷ್ಟು ಸಂತಸ! ಇಂಥವರು, ಒಬ್ಬರೇ? ಇಬ್ಬರೇ? ಅಲ್ಲ; ಬಹಳಷ್ಟು ಜನ. ಅವರ ಹೃದಯವಂತಿಕೆಯನ್ನು ಕಂಡು ಅವರನ್ನು ಮರ್ಯಾದೆಯಿಂದ ಕಾಣಲೇಬೇಕೆಂದೆನಿಸುತ್ತದೆ."

ಇನ್ನೊಂದು ಪತ್ರದಲ್ಲಿ ಈತ, "ನೋಡು, ಪೀಟರ್ಸ್‌ಬರ್ಗ್‌ನಲ್ಲಿ ನಾನಿದ್ದೆನಲ್ಲಾ– ಸಂಶಯಗ್ರಸ್ತ ಗುಂಗು ಹಿಡಿದ ಮನುಷ್ಯನಂತೆ?

ನಾನು ಈಗಲೂ ಹಾಗೆಯೇ ಇದ್ದೇನೆಂದು ನೀನು ಭ್ರಮಿಸಬೇಡ. ಆ ಸಂಶಯ ಪಿಶಾಚಿ ಮತ್ತು ಗುಂಗು ಮಾಟ ಮಾಡಿದಂತೆ ಮಾಯವಾಗಿಬಿಟ್ಟಿವೆ." ಎಂದು ಬರೆದಿದ್ದಾನೆ.

ಸೆರೆಮನೆಗೆ ಹೋಗುವ ಪೂರ್ವದಲ್ಲಿ ಅವನ ಮನಸ್ಸಿನ ಅವಸ್ಥೆ ಯಾವಾಗಲೂ ಅಸ್ವಾಭಾವಿಕವಾಗಿಯೇ ಇತ್ತು. ಕಾರಾಗೃಹದಲ್ಲಿನ ಕೈದಿಗಳ ಅಸ್ವಾಭಾವಿಕ ಜೀವನಕ್ಕೆ ಈತ ಪೂರ್ತಿ ಹೊಂದಿಕೊಂಡ. ಜೀವನವನ್ನು ನೋಡುವ ದೃಷ್ಟಿ ಕೊನೆಗೂ ಅಸ್ವಾಭಾವಿಕವಾಗಿ ಉಳಿಯಿತೆಂದು ಹೇಳಬಹುದು. ಈತನ ಕಾದಂಬರಿಗಳಲ್ಲಿ ನಾವು ಕಾಣುವುದು ಅಪರಾಧಿಗಳನ್ನು, ರಾಕ್ಷಸೀ ಮನುಷ್ಯರನ್ನು ಮತ್ತು ಸಂತರನ್ನು ಕೂಡ! ಒಳಿತು–ಕೆಡುಕುಗಳ, ಗರ್ವ–ದೈನ್ಯಗಳ ಅತಿರೇಕವನ್ನು ಚಿತ್ರಿಸುವಲ್ಲಿ ಇವನದು ಎತ್ತಿದ ಕೈ. ಸ್ವಾಭಾವಿಕ ಜೀವನವನ್ನು ಈತ ನೋಡಲಿಲ್ಲವೆಂದೇ ಹೇಳಬೇಕು. ಈತನ ಪಾತ್ರಗಳು ಅತಿಮಾನವರೆಂಬ ಸೊಕ್ಕನ್ನೂ ಪ್ರದರ್ಶಿಸುತ್ತವೆ, ಮರುಕ್ಷಣದಲ್ಲಿ ಅತಿ ದೈನ್ಯದಿಂದ ತಮ್ಮನ್ನೆ ತಾವು ಹಳಿದುಕೊಳ್ಳಲೂ ಪ್ರಾರಂಭಿಸುತ್ತವೆ

ಇಲ್ಲಿ ಡಾಸ್ಟಾಯವ್‌ಸ್ಕಿಯ ಜೀವನದಲ್ಲಿಯ ಘಟನೆಯೊಂದನ್ನು ನಿರೂಪಿಸಬಹುದು. ಅವನ ಕೈಯಿಂದ ಆಗಬಾರದ್ದೊಂದು ಪ್ರಮಾದವಾಗಿತ್ತು. (ಆತ ಒಬ್ಬ ಚಿಕ್ಕ ಬಾಲಿಕೆಯೊಡನೆ ಅನೈತಿಕ ಸಂಬಂಧವನ್ನಿಟ್ಟುಕೊಂಡಿದ್ದನೆಂದೂ, ಕಾರಣ ಆ ಹುಡುಗಿ ನೇಣು ಹಾಕಿಕೊಂಡಳೆಂದೂ ಕೆಲವರ ಊಹೆ ಇದೆ.) ಆತನಿಗೆ ಮನಸ್ಸ್ವಾಸ್ಥ್ಯವೇ ಉಳಿಯಲಿಲ್ಲ. ಒಬ್ಬ ಅಪರಾಧಿ ತನ್ನ ಮನಸ್ಸಿನ ದುಗುಡವನ್ನು ತೋಡಿಕೊಳ್ಳಲು ಹಿತೈಷಿಗಳನ್ನು ಹುಡುಕುವಂತೆ ಈತನೂ ಹುಡುಕಿದ.

ಗಂಡು ಹೆಣ್ಣಿನ ನಡುವಿನ ಸಂಬಂಧವನ್ನು ನೋಡುವ ಈತನ ದೃಷ್ಟಿ ಒಂದು ರೀತಿಯಲ್ಲಿ ವಿಚಿತ್ರ. ಅಸ್ವಾಭಾವಿಕ ಎಂದೇ ಹೇಳಬೇಕು. ಆ ಸಂಬಂಧ ಪ್ರೇಮ– ದ್ವೇಷ, ತೃಪ್ತಿ– ಆತ್ಮನಿಂದನೆಗಳ ನಡುವೆ ಉಯ್ಯಾಲೆಯಾಡಿದಂತೆ ಎಂದು ಈತನ ನಿಷ್ಕರ್ಷೆ. ಇದಕ್ಕೆ ಅವನ ಅನುಭವವೂ ಕಾರಣವಿರಬಹುದು

೧೮೫೪ ರಲ್ಲಿ ಸೆರೆಯಿಂದ ಬಿಡುಗಡೆಯಾದ ನಂತರ ಸಾಮಾನ್ಯ ಸೈನಿಕನೆಂದು ಅವನನ್ನು ಸೈಬೀರಿಯಾದಲ್ಲಿರುವ ಸೈನ್ಯ ಪಡೆಗಳೊಂದಿಗಿಡಲಾಯಿತು. ೧೮೫೫ರಲ್ಲಿ ಮೊದಲಿನ ಕಮಿಶನ್ಡ್ ಹುದ್ದೆಯನ್ನು ಅವನಿಗೆ ನೀಡಲಾಯಿತಾದರೆ ೧೮೫೯ರಲ್ಲಿ ಅವನನ್ನು ಪೂರ್ತಿ ದೋಷಮುಕ್ತನನ್ನಾಗಿಸಲಾಯಿತು. ಅಲ್ಲಿರುವಾಗಲೇ ಮೇರಿ ಇಸಾಯೇವಾ ಎಂಬೊಬ್ಬಳೊಂದಿಗೆ ಸಂಪರ್ಕ ಬಂದು ವಿವಾಹದಲ್ಲಿ ಪರ್ಯವಸಾನ ಹೊಂದಿತು. ಆದರೆ ಅವಳಿಂದ ಇವನಿಗೆಷ್ಟು ಸುಖ ದೊರೆಯಲಿಲ್ಲ. ೧೮೬೪ ರಲ್ಲಿ ಇವಳು ವಿಧಿವಶಳಾಗುವ ಮುನ್ನವೇ ಇವನ ಜೀವನದ ಮೇಲೆ ಆಳ ಪರಿಣಾಮ ಬೀರಿದ ಇನ್ನೊಂದು ಘಟನೆ ನಡೆಯಿತು.

ಡಾಸ್ಟಾಯವ್‌ಸ್ಕಿ ಆಗಲೇ ಸಾಹಿತಿಯೆಂದು ಪ್ರಸಿದ್ಧಿ ಪಡೆದಿದ್ದ. ಒಂದು ಚಿಕ್ಕ ಕತೆಯನ್ನು ಈತನ ಸಂಬಂಧವಿದ್ದ ಪತ್ರಿಕೆಗೆ ಬರೆದು ಕಳುಹಿಸಿದ್ದ ಪಾಲೀನ್ ಸುಸ್ಲೋವಾಳ ಪರಿಚಯ ಈತನಿಗಾಯಿತು ಈಕೆ ಆತನಿಗಿಂತಲೂ ತುಂಬಾ ಚಿಕ್ಕವಳು. ಆತ ಈಕೆಯಲ್ಲಿ ಆಸ್ಥೆ ತೋರಿಸುತ್ತಿದ್ದುದು ಆಕೆಗೆ ಬಹಳ ಹಿಡಿಸಿತು. ಆಕೆಯ ಬೆನ್ನು ಹತ್ತಿದ. ತನ್ನ ಡಾಯರಿಯಲ್ಲಿ ಆಕೆ "ನನ್ನನ್ನು ಕೆಟ್ಟ ದಾರಿಗೆ ಎಳೆದವನು ಇವನೇ" ಎಂದು ದೂಷಿಸಿದ್ದಾಳೆ. ಡಾಸ್ಟಾಯವ್‌ಸ್ಕಿಯು ತನ್ನ ಪತ್ರಗಳಲ್ಲಿ ಇದಕ್ಕೆ ಉತ್ತರ ಕೊಟ್ಟಿದ್ದಾನೆ: "ಹೆಣ್ಣು ತನ್ನ ಮಮಕಾರದಿಂದ ಗಂಡಸಿನಲ್ಲಿಯ ಆಸೆಗಳನ್ನು ಬಡಿದೆಬ್ಬಿಸುತ್ತಾಳೆ. ಗಂಡಸಿಗೆ ತನ್ನ ಅರ್ಪಣೆಯನ್ನೂ ಮಾಡುತ್ತಾಳೆ, ಸುಖವನ್ನೂ ತೃಪ್ತಿಯನ್ನೂ ಪಡೆಯುತ್ತಾಳೆ. ಮರುಕ್ಷಣದಲ್ಲಿ ತನ್ನ ಕೃತಿಗೆ ತನ್ನನ್ನೂ ಆ ಗಂಡಸನ್ನೂ ದ್ವೇಷಿಸುತ್ತಾಳೆ. ಹೀಗಿದೆ ಗಂಡು–ಹೆಣ್ಣಿನ ಸಂಬಂಧ". ಇದು ಎಷ್ಟರ ಮಟ್ಟಿಗೆ ಸತ್ಯವೆಂಬುದನ್ನು ಹೇಳುವುದು ಕಠಿಣ ಆ ಸಂಬಂಧವನ್ನು ಡಾಸ್ಟಾಯವ್‌ಸ್ಕಿ ಒಂದು ಹೊಸ ದೃಷ್ಟಿಯಿಂದ ನೋಡಿದ್ದಾನೆಂದು ಹೇಳಬಹುದು. ರವಿ ಕಾಣದ್ದನ್ನು ಕವಿ ಕಂಡನಂತೆ.

ಕವಿ ಕಾಣದ್ದನ್ನೂ ಈ ಕಾದಂಬರಿಕಾರ ಕಂಡಿದ್ದಾನೆ. ಮಾನವನ ಮನ ಹೃದಯಂಗಳ ಅಂತರಾಳದ ಗುಟ್ಟನ್ನು ಭೇದಿಸಿ ಅದನ್ನು ಕಾಣುವಂತೆ ಮಾಡುವ ಶಕ್ತಿ ಇವನಿಗೆ ಸಾಧಿಸಿದಷ್ಟು ಉಳಿದವರಾರಿಗಾದರೂ ಸಾಧ್ಯವಿದೆಯೇ ಎಂದು ನಮ್ಮನ್ನೇ ನಾವು ಕೇಳಿಕೊಳ್ಳಬೇಕು. ಸುಸ್ಲೋವಾಳೊಂದಿಗೆ ಯೂರೋಪಿನ ಅನೇಕ ದೇಶಗಳಲ್ಲಿ ಅವನು ಸಂಚರಿಸುತ್ತಿದ್ದಾಗಲೇ ಜೂಜಾಟದ ಜುಂಶ್ಚಟವೂ ಡಾಸ್ಟೊಯೆವ್‌ಸ್ಕಿಗೆ ಅಂಟಿಕೊಂಡಿತು. ಅವಳೊಂದಿಗಿನ ಪ್ರೇಮ ಪ್ರಕರಣ ಬಿರುಗಾಳಿಯಂತೆ ಅವರ ಜೀವನದಲ್ಲಿ ಭರ್ರನೆ ಬಂದುಹೋಯಿತು.

ಈತನ ಪ್ರಸಿದ್ಧಿ ಪಡೆದ ಕಾದಂಬರಿಗಳೆಂದರೆ ಕ್ರೈಮ್ ಆ್ಯಂಡ್ ಪನಿಷ್ಮೆಂಟ್, ದಿ ಪಜೆಸ್ಡ್, ದಿ ಬ್ರದರ್ಸ್ ಕರಾಮಜೋವ್ ಮತ್ತು ಇನ್‌ಸಲ್ಟೆಡ್ ಆ್ಯಂಡ್ ದಿ ಇಂಜೂರ್ಡ್. ಎಲ್ಲ ಕಾದಂಬರಿಗಳಲ್ಲಿಯೂ ಸಾಮಾನ್ಯವಾಗಿ ನಾವು ಕಾಣುವುದು ವಿಚಿತ್ರ ಸನ್ನಿವೇಶಗಳನ್ನು ಮತ್ತು 'ಅಪರಾಧೀ' ಪಾತ್ರಗಳನ್ನು. ಕ್ರೈಮ್ ಆ್ಯಂಡ್ ಪನಿಷ್ಮೆಂಟ್ ಕಾದಂಬರಿಯ ನಾಯಕ ರೆಸ್ಕೊಲ್ನಿಕೊವ್, ಆಧುನಿಕ ಫಾಸ್ಟ್, ರಶಿಯನ್ ಹ್ಯಾಮ್ಲೆಟ್ ಮತ್ತು ಅತಿಮಾನವನಾಗಬೇಕೆಂಬ ಹುಚ್ಚು ಹವ್ಯಾಸದಲ್ಲಿ ವಿಫಲನಾದ ಬುದ್ಧಿಗೇಡಿ ಎಂದು ಅನೇಕ ತರಹದಲ್ಲಿ ವರ್ಣಿಸಲ್ಪಟ್ಟಿದ್ದಾನೆ. ಈ ಪಾತ್ರದ ಜೀವಂತಿಕೆ ಯಾರನ್ನೂ ಬೆರಗುಗೊಳಿಸುವಂತಹದು. ಬಡ್ಡಿ ವ್ಯವಹಾರದಲ್ಲಿ ಬಡವರನ್ನು ಹಿಂಡಿ ಹಿಪ್ಪಿ ಮಾಡುವ ಒಬ್ಬ ಮುದುಕಿ ಸಾಲಗಾರ್ತಿಯನ್ನೂ ಆಕೆಯ ತಂಗಿಯನ್ನೂ ರೆಸ್ಕೊಲ್ನಿಕೊವ್ ಸಾಮಾಜಿಕ ರೋಷದಿಂದ ಕೊಂದು ಹಾಕುತ್ತಾನೆ. ಸಮಾಜಕ್ಕೆ ಉಪಕಾರವೆಸಗಿದ್ದೇನೆಂದು ಭಾವಿಸುತ್ತಾನೆ. ಸಾಧಾರಣ ವ್ಯಕ್ತಿಗಳಿಗಾಗಿರುವ ಕಾಯ್ದೆಗೆ ತಾನು ಬಾಹಿರನೆಂದು ತಿಳಿಯುತ್ತಾನೆ. ತಾನು ಅತಿಮಾನವ! ಕೊಲೆಯ ನಂತರ ಆತನ ಮನಸ್ಸಿನಲ್ಲಿ ಒಂದು ಕೋಲಾಹಲವೇ ಏಳುತ್ತದೆ. "ನಿಜವಾಗಿಯೂ ಕೊಲೆಯಾದದ್ದು ಅವಳದಲ್ಲ, ನನ್ನದು" ಎಂಬುದರ ಅರಿವು ಆಗುತ್ತದೆ, ಯಾತನೆಯನ್ನು ಆತ ಅನುಭವಿಸುತ್ತಾನೆ. ಏತನ್ಮಧ್ಯೆ ಅವನಿಗೆ ಸೋನಿಯಾ ಎಂಬ ವೇಶ್ಯೆಯ ಗೆಳೆತನವಾಗುತ್ತದೆ. ತನ್ನ ದೇಹವನ್ನು ಮಾರಿ ಮನೆತನವನ್ನು ನಡೆಸುತ್ತಿದ್ದ ಅವಳನ್ನು ಕುರಿತು "ನಿನ್ನ ದೇಹವನ್ನಷ್ಟೇ ನೀನು ಕೊಂದು ಹಾಕಿರುವೆ, ಅಂತರಾತ್ಮನನ್ನಲ್ಲ. ನಿನ್ನದು ಪುಣ್ಯ ಜೀವನ" ಎಂದು ಹೇಳುತ್ತಾನೆ. ತಾನು ಎಸಗಿದ ಅಪರಾಧವನ್ನು ಆಕೆಗೆ ಹೇಳುತ್ತಾನೆ. ಅನೈತಿಕತೆಯನ್ನು ಹೊಸ ದೃಷ್ಟಿಯಲ್ಲಿ ಡಾಸ್ಟೊಯೆವ್‌ಸ್ಕಿ ಕಂಡುಕೊಂಡಿದ್ದಾನೆ. ಆಕೆ ಜಗತ್ತಿನ ದೃಷ್ಟಿಯಲ್ಲಿ ವೇಶ್ಯೆ, ಇವನ ದೃಷ್ಟಿಯಲ್ಲಿ ಪಾವನೆ.

ರೆಸ್ಕೊಲ್ನಿಕೊವ್ ಬೇಹುಗಾರರಿಂದ ಬೆನ್ನಟ್ಟಲ್ಪಡುತ್ತಾನೆ, ಕೊನೆಗೂ ತನ್ನ ಅಪರಾಧವನ್ನು ಒಪ್ಪುತ್ತಾನೆ. ಆದರೆ ಅವನ ಭವಿಷತ್ತೇನು? ಅಪರಾಧಿಗಳಿಗೆ ಭವಿಷತ್ತು ಇಲ್ಲವೇ? ನಾಲ್ಕು ವರುಷ ಆ "ಸತ್ತವರ ಮನೆಯಲ್ಲಿ"ದ್ದು ಬದುಕಿ ಬಂದ ಡಾಸ್ಟೊಯೆವ್‌ಸ್ಕಿ ಮಾನಸಿಕ ಕ್ಷೋಭೆಯ ಬಲೆಗೆ ಬಿದ್ದು ಎಸಗಿದ ಅಪರಾಧಕ್ಕಾಗಿ ಅವನನ್ನು ಗಾಢಾಂಧಕಾರದಲ್ಲಿ ಹೇಗೆ ಬಿಟ್ಟಾನು? ಇಲ್ಲಿ ಹುದುಗಿದೆ ಆತನ ಮಾನವೀಯತೆ. ರೆಸ್ಕೊಲ್ನಿಕೊವನನ್ನು ಸೈಬೀರಿಯಕ್ಕೆ ಕಠಿಣ ಶಿಕ್ಷೆಯನ್ನು ಅನುಭವಿಸಲು ಅವನು ಕಳಿಸುತ್ತಾನೆ. ಜೊತೆಗೆ ಸೋನಿಯಾ ಕೂಡ ಹೋಗುತ್ತಾಳೆ, ಶಿಕ್ಷೆಯನ್ನು ಅನುಭವಿಸಿದ ಜೀವ ಮಾಗುತ್ತದೆ. ಡಾಸ್ಟೊಯೆವ್‌ಸ್ಕಿಗೆ Religion of Suffering ನಲ್ಲಿ ವಿಶ್ವಾಸ. ಶಿಕ್ಷೆಯನ್ನುಂಡವ ಹೊಸ ಮನುಷ್ಯನಾಗುತ್ತಾನೆ. ಸೋನಿಯಾಳೇ ರೆಸ್ಕೊಲ್ನಿಕೊವನನ್ನು ಹೊಸ ಜೀವನದೆಡೆಗೆ ನಡೆಯಿಸಿಕೊಂಡು ಹೋಗುತ್ತಾಳೆ. ಕೆಟ್ಟುದರಲ್ಲಿ ಒಳಿತನ್ನೂ ಒಳಿತಿನಲ್ಲಿ ಕೆಟ್ಟುದನ್ನೂ ಅಪರಾಧಿಗಳಲ್ಲಿ ಸಜ್ಜನಿಕೆಯನ್ನೂ ಸಜ್ಜನರೆಂದು ಕರೆಯಿಸಿಕೊಳ್ಳುವವರಲ್ಲಿ ಅಪರಾಧಿಗಳನ್ನೂ ಕಂಡ ಡಾಸ್ಟೊಯೆವ್‌ಸ್ಕಿ ಆಧುನಿಕ ಸಾಹಿತ್ಯಕ್ಕೆ ರಶಿಯವಿತ್ತ ಮಹಾನ್ ಕೊಡುಗೆ.

೧೮೬೨ರಲ್ಲಿ ಡಾಸ್ಟೊಯೆವ್‌ಸ್ಕಿ ತನ್ನ ಸೋದರ ಮೈಕೇಲ್ ಮತ್ತು ಇತರ ಕೆಲ

ಮಿತ್ರರ ನೆರವಿನಿಂದ 'ವ್ರೇಮ್ಯಾ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ. ಸಂಪ್ರದಾಯವಾದಿಗಳು ಹಾಗೂ ತೀವ್ರ ಉದಾರಮತವಾದಿಗಳಿಬ್ಬರನ್ನೂ ನಿರಾಕರಿಸಿ ಸುವರ್ಣಮಧ್ಯ ಮಾರ್ಗವೊಂದನ್ನು ಪ್ರತಿಪಾದಿಸಿದ ಈ ಪತ್ರಿಕೆ ಬಹು ಬೇಗ ಜನಪ್ರಿಯವಾಯಿತು. ಆದರೆ ೧೮೬೩ ರಲ್ಲಿ ಸರಕಾರ ಅದರ ಮೇಲೆ ಗದಾಪ್ರಹಾರ ಮಾಡಿತು. ಮರುವರ್ಷವೇ 'ಇಪೋಖಾ' ಎಂಬ ಇನ್ನೊಂದು ಹೆಸರಿನಲ್ಲಿ ಅದನ್ನು ಪುನರುಜ್ಜೀವಿಸಲು ಅವನು ಮಾಡಿದ ಪ್ರಯತ್ನಗಳೆಲ್ಲ ಹುಸಿ ಹೋಗಿ ಆರ್ಥಿಕವಾಗಿ ಅಪಾರ ಹಾನಿಗೀಡಾದ. ಮುಂದೆ ಹೊಟ್ಟೆ ಹೊರೆಯುವುದಕ್ಕಾಗಿಯೇ ಕಾದಂಬರಿಗಳನ್ನು ಒಂದಾದ ಮೇಲೊಂದರಂತೆ ಬರೆಯಬೇಕಾಯಿತು. ಅವನ ಈ ದುರವಸ್ಥೆಯ ಪೂರ್ತಿ ಪ್ರಯೋಜನ ಪಡೆದು ಪ್ರಕಾಶಕರು ಅವನನ್ನು ಹಿಂಡಿ ಹಿಪ್ಪೆ ಮಾಡತೊಡಗಿದರು. ಈ ಕಾಲಕ್ಕೆ ಅನ್ನಾ ಗ್ರಿಗೋರಿಯೆವ್ನಾ ಸ್ನಿತ್ಕಿನಾ ಎಂಬ ಯುವತಿಯನ್ನು ಅವನು ತನ್ನ ಕಾರ್ಯದರ್ಶಿಯಾಗಿ ನೇಮಿಸಿಕೊಂಡನು. ೧೮೬೭ ರಲ್ಲಿ ಅವರ ಮದುವೆಯಾಯಿತು. ಆದರೆ ಈ ಹೊತ್ತಿಗೆ ಆರ್ಥಿಕವಾಗಿ ಡಾಸ್ಟೊಯವ್‌ಸ್ಕಿ ಪೂರ್ತಿ ದಿವಾಳಿಖೋರನೇ ಆಗಿ ಸಾಲ ಕೊಟ್ಟವರಿಂದ ತಪ್ಪಿಸಿಕೊಳ್ಳಲು ಪಶ್ಚಿಮ ಯುರೋಪಿಗೆ ಓಡಿ ಹೋಗಬೇಕಾಯಿತು. ಅಲ್ಲಿ ಮೊದಮೊದಲು ಅವನ ಸಮಯವೆಲ್ಲ ಜೂಜು ಮನೆಗಳಲ್ಲೇ ಕಳೆಯುತೊಡಗಿತಾದರೂ ಮುಂದೆ ದೃಢ ನಿರ್ಧಾರದ ಪ್ರಯತ್ನದಿಂದ ಅವನು ಮತ್ತೆ ಸಾಹಿತ್ಯ ಸೃಷ್ಟಿಗೆ ಮೊದಲು ಮಾಡಿದನು. ೧೮೭೩ ರಲ್ಲಿ ಮತ್ತೊಂದು ಸಾಪ್ತಾಹಿಕದ ಸಂಪಾದಕನ ಸ್ಥಾನ ದೊರೆತು ಅವನು ಮಾತೃಭೂಮಿಗೆ ಮರಳಿದನು. ಅಲ್ಲಿಂದ ಮಾತ್ರ ಅವನ ಜೀವನ ಸಾಕಷ್ಟು ಸರಾಗವಾಗಿಯೇ ಸಾಗಿ ೧೮೮೧ ರ ಜನವರಿ ೨೧ ರಂದು ಕೊನೆಯುಸಿರೆಳೆವ ಹೊತ್ತಿಗೆ ಅವನ ಹೆಸರು ಸಾಹಿತ್ಯಾಕಾಶದಲ್ಲಿ ಸ್ಥಿರವಾಗಿ ನಿಂತಿತ್ತು.

ಮನಶ್ಶಾಸ್ತ್ರ ಆಧುನಿಕ ಅರ್ಥದಲ್ಲಿನ್ನೂ ಭವಿಷತ್ತಿನ ಗರ್ಭದಲ್ಲೇ ಹುದುಗಿದ್ದಂಥ ಕಾಲದಲ್ಲೇ ಮಾನವನ ಮನಸ್ಸಿನ ಆಳವನ್ನೂ ವಿಸ್ತಾರವನ್ನೂ ತನ್ನದೇ ಆದ ರೀತಿಯಲ್ಲಿ ಅಳೆದು ತನ್ನ ಪಾತ್ರಗಳಿಗೆ ಹೊಸ ಅರ್ಥ ನೀಡಿದ ಶ್ರೇಯಸ್ಸು ಡಾಸ್ಟೊಯವ್‌ಸ್ಕಿಯದು. ಇಪ್ಪತ್ತನೆಯ ಶತಮಾನದ ಪಾಶ್ಚಾತ್ಯ ಸಾಹಿತ್ಯದಲ್ಲಿ ನಮಗೆ ಸಹಜವಾಗಿಯೇ ಗೋಚರಿಸುವ ಒಂದಂಶವೆಂದರೆ ಸಾಹಿತ್ಯ, ಮನಶ್ಶಾಸ್ತ್ರ ಮತ್ತು ತತ್ವಜ್ಞಾನಗಳಲ್ಲಿಯ ಅನ್ಯೋನ್ಯ ಸಂಬಂಧ. ಆಧುನಿಕ ಸಾಹಿತ್ಯದ ಈ ಲಕ್ಷಣಗಳ ಮುಂಬೆಳಗನ್ನು ನಾವು ಡಾಸ್ಟೊಯವ್‌ಸ್ಕಿಯ ಕೃತಿಗಳಲ್ಲೇ ಗುರುತಿಸಬಹುದಾಗಿದೆ. ಅಂತೆಯೇ ನೀಚ್ ಹೇಳುವುದು, "ಮನಶ್ಶಾಸ್ತ್ರಜ್ಞರೆಲ್ಲರಿಗಿಂತಲೂ ಡಾಸ್ಟೊಯವ್‌ಸ್ಕಿ ಒಬ್ಬನಿಂದಲೇ ಕಲಿಯುವುದು ಬಹಳವಿತ್ತು; ಆತನ ಪರಿಚಯ (ಅವನ ಕಾದಂಬರಿಗಳ ಮೂಲಕ) ನನ್ನ ಜೀವನದಲ್ಲೇ ಅತ್ಯುಪಯುಕ್ತವೂ ಅತ್ಯಂತ ಸಂತೋಷಕರವೂ ಆದ ಘಟನೆ," ಎಂದು.

ಬರಿ ಶುಷ್ಕ ತಾತ್ವಿಕ ವಾದವಿವಾದಗಳಲ್ಲಿ ಡಾಸ್ಟೊಯವ್‌ಸ್ಕಿಗೆ ಆಸ್ಥೆಯಿಲ್ಲ; ಜೀವನಾನುಭವಕ್ಕೆ ಹೊರತಾದ ಯಾವ ತತ್ವದಲ್ಲೂ ಅವನಿಗೆ ವಿಶ್ವಾಸವಿಲ್ಲ.

ಒಮ್ಮೆ ಯಾವುದೋ ಒಂದು ಸಮಾರಂಭಕ್ಕೆ ಅವನು ತಡಮಾಡಿ ಬಂದುದನ್ನು ಯಾರೋ ಆಕ್ಷೇಪಿಸಿದರಂತೆ. ಆಗವನು, "ಹೌದು. ಜೀವನ ಅತಿ ಕಠಿಣವಾದದ್ದು. ಅದರಲ್ಲಿ ಕೆಲವೇ ಕ್ಷಣಗಳು ಅರ್ಥಪೂರ್ಣವಾಗಿರುತ್ತವೆ. ಅವುಗಳನ್ನು ಅಷ್ಟೇ ಅರ್ಥಪೂರ್ಣವಾಗಿ ಜೀವಿಸುವುದು ಮಹತ್ವದ್ದೇ ಹೊರತು ಕಾಲನಿಯಮಿತತನವಲ್ಲ," ಎಂದು ತಟ್ಟನೆ ಉತ್ತರಿಸಿದನಂತೆ. ಅಂತೆಯೇ ಅವನ ಕಾದಂಬರಿಗಳು ಅವನ ಜೀವನದ ಸತ್ವಪೂರ್ಣ ತುಣುಕುಗಳು, ಬರಿ ಕಲ್ಪನೆಯ ಶಿಶುಗಳಲ್ಲ. ✡

ವಿಧವಾವಪನ ಅನಾಚಾರ

ಹೊಸಗನ್ನಡದ ಅರುಣೋದಯ ಕಾಲವೆನಿಸಿದ ಕಳೆದ ಶತಮಾನದ ಪ್ರಮುಖ ಲೇಖಕ ವೆಂಕಟ ರಂಗೋ ಕಟ್ಟಿಯವರ ಸಾಮಾಜಿಕ ವಿಚಾರಗಳ ಮೇಲೆ ಈ ಲೇಖನ ಬೆಳಕು ಬೀರುತ್ತದೆ.

ವೆಂಕಟ ರಂಗೋ ಕಟ್ಟಿಯಂತೂ ಈ ವಿಷಯದಲ್ಲಿ (ಹಿಂದು ವಿಧವೆಯರ ಸಮಸ್ಯೆ) ಆಂದೋಲನವನ್ನೇ ಆರಂಭಿಸಿದನು. 'ವಿಧವೆಯರ ಇತಿಹಾಸ' ಎನ್ನುವುದು ಅವನ ಮೊದಲ ಹೆಜ್ಜೆಯಾಗಿದ್ದು, ಅನಂತರ 'ವಿಧವಾವಪನ ಅನಾಚಾರ ಖಂಡನ'ವೆಂಬ ಗ್ರಂಥವು ಹೊರಬಂದಿತು(೧೮೮೯). ಅನೇಕರ ಸಾಮಾಜಿಕ ಭಾವನೆಗಳನ್ನು ಕೆರಳಿಸಿದ ಅವನ ಈ ಪುಸ್ತಕವನ್ನು ವಿವರವಾಗಿ ಪರಿಶೀಲಿಸೋಣ:

ಅದರ ಹಿನ್ನೆಲೆಯು ಇಂತಿದೆ: ಸಮಾರಂಭವೊಂದರಲ್ಲಿ ಕಟ್ಟಿಯು ಒಂಬತ್ತು ವರ್ಷದ ಪುಟ್ಟ ವಿಧವೆಯನ್ನು ಕಂಡನು. ಆಕೆಯ ತಲೆಯನ್ನು ಬೋಳಿಸಿತ್ತು. ಅಲ್ಲದೆ ಇತರ ಹುಡುಗಿಯರಿಂದ ಬೇರ್ಪಡಿಸಿ ಮೂಲೆಯಲ್ಲಿ ಅವಳನ್ನು ದಬ್ಬಲಾಯಿತು. ಆಗ ಆ ಹುಡುಗಿಯು ಅಳುತ್ತಿದ್ದ ದೃಶ್ಯವನ್ನು ಕಂಡು ಕಟ್ಟಿಯ ಮನಸ್ಸು ಸಿಡಿದೆದ್ದಿತು (೧೮೮೨). ನಾಲ್ಕೈದು ವರ್ಷಗಳ ನಂತರ 'ಬಾಲವಿವಾಹ ಮತ್ತು ಅಸಮ್ಮತ ವೈಧವ್ಯ' ಎಂಬ ಇಂಗ್ಲಿಶ್ ಪುಸ್ತಕವು ಸರಕಾರದಿಂದ ಇವನ ಅಭಿಪ್ರಾಯಾರ್ಥವಾಗಿ ಬಂದಾಗ ವಿಧವಾವಪನವನ್ನು ಖಂಡಿಸಿ ಬರೆದನು. ಅದನ್ನು ನಿಲ್ಲಿಸಿದ್ದಾದರೆ, ವಿಧವೆಯರ ಪುನರ್ವಿವಾಹಕ್ಕೆ ಅನುಕೂಲವಾಗುವುದು ಎಂದೂ ಸೂಚಿಸಿದನು. ಮುಂದೆ ೧೮೮೪ರಲ್ಲಿ ಧಾರವಾಡದ ಮಿತ್ರಸಮಾಜ ಸಂಸ್ಥೆಯ ವತಿಯಿಂದ ಈ ಕುರಿತು ಉಪನ್ಯಾಸವನ್ನು ಕೊಟ್ಟನು. ವಿಷಯದ ಪೂರ್ವಾಪರಗಳನ್ನೂ ಶಾಸ್ತ್ರಾಧಾರಗಳನ್ನೂ ಚೆನ್ನಾಗಿ ಅಭ್ಯಸಿಸಿದ ಮೇಲೆ 'ವಿಧವಾವಪನ ಅನಾಚಾರ'ವನ್ನು ಕನ್ನಡ, ಮರಾಠಿ— ಈ ಎರಡು ಭಾಷೆಗಳಲ್ಲಿ, ಇಂಗ್ಲಿಶ್ ಸಾರದೊಡನೆ ಪ್ರಕಟಿಸಿದನು. ಟೀಕೆಯಲ್ಲಿ ಮತಾಧಿಕಾರಿಗಳ ಅಭಿಪ್ರಾಯವನ್ನು ಆಹ್ವಾನಿಸಿದನು. ಹೀಗೆ ಪುಸ್ತಕದ ಪರಾಮರ್ಶೆಯಿಂದ ಬಂದ ಅಭಿಮತಗಳನ್ನು ಕ್ರೋಢೀಕರಿಸಿ ಮತ್ತೊಂದು ಗ್ರಂಥವನ್ನು ಬರೆಯುವ ಉತ್ಕಟತೆಯನ್ನು ತೋರಿದನು. ಅಲ್ಲದೆ ಸಾಧಕ ಬಾಧಕಗಳಾದ ಶಾಸ್ತ್ರಾಧಾರವನ್ನು ತೋರಿಸಿದವರಿಗೆ ೫೦೦ ರೂಪಾಯಿಯ ಎರಡು ಬಹುಮಾನಗಳನ್ನು ಕೊಡುವುದಾಗಿ ಸಾರಿದುದು, ಈ ವಿಷಯದಲ್ಲಿ ಅವನ ಕಳಕಳಿಯ ದ್ಯೋತಕವಾಗಿದೆ. ಅವನ ವಿಚಾರಗಳನ್ನು ಇನ್ನಷ್ಟು ವಿಶದವಾಗಿ ಪರಿಶೀಲಿಸೋಣ:

ಭಾರತೀಯ ಧರ್ಮಶಾಸ್ತ್ರದಲ್ಲಿ ಸ್ತ್ರೀಗೆ ಯಾವಾಗಲೂ ಪೂಜನೀಯ ಸ್ಥಾನವಿದೆ. ಪಾಶ್ಚಾತ್ಯರಲ್ಲಿದ್ದಂತೆ, ಪುರುಷನಿಗೆ ಸಮಾನವಾದ ಸ್ಥಾನವಿಲ್ಲವೆಂದು ಕಂಡರೂ ವಂಶ-ಪಾವಿತ್ರ್ಯದ ದೃಷ್ಟಿಯನ್ನಿರಿಸಿಕೊಂಡು ಮನು

ಮೊದಲಾದ ಧರ್ಮಶಾಸ್ತ್ರಕಾರರು ಅವಳು ರಕ್ಷಣೀಯಳೆಂದು ವಿಧಿಸಿದರು. ಯಾಜ್ಞವಲ್ಕ್ಯನು 'ಯಥಾ ಭೂಮಿಸ್ತಥಾ ನಾರೀ' ಎಂದಿದ್ದಾನೆ. ಹೀಗೆ ಪ್ರಾಚೀನರ ದೃಷ್ಟಿಯಲ್ಲಿ ಸ್ತ್ರೀಯು ಪುರುಷನ ಸಮಸ್ತ ಸುಖ ಸೌಕರ್ಯಗಳ ಆಗರವಾಗಿದ್ದಾಳೆ. ಬ್ರಾಹ್ಮಣನ ನಾಲ್ಕು ಆಶ್ರಮಗಳಲ್ಲಿಯೂ ಆಕೆಯ ಅಗತ್ಯ ಅವನಿಗಿದೆ. ಧರ್ಮಸಾಧನೆ ಹಾಗೂ ಪ್ರಜಾಸೃಷ್ಟಿಯಲ್ಲಿ ಅವಳ ಪಾತ್ರವೇ ಹಿರಿದಾದುದು... ಸ್ತ್ರೀಯು ಹೀಗೆ ಆದರಣೀಯಳಿರುವಾಗ ಅವಳಿಗೆ ಸರ್ವಥಾ ಪೀಡೆಯನ್ನು ಕೊಡಲಾಗದು. 'ಶೋಚಂತಿ ಜಾಮಯೋ ಯತ್ರ ವಿನಶ್ಯತ್ಯಾಶು ತತ್ಕುಲಂ/ನ ಶೋಚಂತಿ ತು ಯತ್ರೈತಾ ವರ್ಧತೇ ತದ್ಧಿ ಸರ್ವದಾ." ಸ್ತ್ರೀಗೆ ಹೊಸ ವೇಷಭೂಷಣಗಳನ್ನಿತ್ತು ಸಂತುಷ್ಟವಾಗಿ ಇಡಬೇಕು. ಆದರೆ ಆಕೆಗೆ ಸಹಜ ಭೂಷಣವಾದ ಕೇಶವನ್ನು ಬಲಾತ್ಕಾರದಿಂದ ತೆಗೆದುಹಾಕುವದು ಯಾವ ನ್ಯಾಯ? ಆ ದುಃಖದಿಂದ ಅವಳು ಪರಿತಪಿಸಿದರೆ ಅಂಥ ಸಂಸಾರ ನೆಮ್ಮದಿಯಿಂದ ಬಾಳದಂತೆ ದೈವೀಶಾಪವು ತಟ್ಟುವದು.

ಮಾನವತೆಯ ಈ ಭೂಮಿಕೆಯನ್ನಿಟ್ಟುಕೊಂಡು ಲೇಖಕನು ಶಾಸ್ತ್ರಗಳ ಹೇಳಿಕೆಯತ್ತ ತಿರುಗಿದ್ದಾನೆ. ಅಪರ ಕರ್ಮದಲ್ಲಿ ಪುರುಷನ ಶಿರೋಮುಂಡನ ವಿಚಾರವೇ ಅರ್ವಾಚೀನವಾದುದು. ಪ್ರಾಚೀನರಾದ ಮನು, ಪರಾಶರ, ಯಾಜ್ಞವಲ್ಕ್ಯರು ಪುರುಷರ ವಪನವನ್ನು ಹೇಳಿಲ್ಲ. ದಶರಥ, ಧೃತರಾಷ್ಟ್ರ, ಕುಂತಿಯರು ಮರಣ ಹೊಂದಿದಾಗ ಜರುಗಿದ ಕರ್ಮಗಳ ಪ್ರಸ್ತಾಪವು ಮಹಾಭಾರತದಲ್ಲಿ ವಿವರವಾಗಿ ಬಂದಿದೆ. ಅಲ್ಲಿ ವಪನ ಮಾಡಿಸಿದ್ದರ ಉಲ್ಲೇಖವಿಲ್ಲ. ಇದರ ಮೂಲವು ಹಿಂದೂ ಧರ್ಮದಲ್ಲಿರದೆ, ಬೌದ್ಧ ಧರ್ಮದಿಂದ ಬಂದದ್ದಾಗಿದೆ. ಪುರುಷನ ವಪನವೇ ಹೀಗೆ ಈಚಿನದ್ದಾಗಿರುವಾಗ ಸ್ತ್ರೀಯರದಂತೂ ಕೇಳುವದೇ ಬೇಡ. ಪರಾಶರನಂತೂ ವಪನವು ಯಾವ ಕಾಲಕ್ಕೂ ಗರ್ಹಣೀಯವೆಂದಿದ್ದಾನೆ. ಪ್ರಾಯಶ್ಚಿತ್ತದ ಪ್ರಸಂಗವಿದ್ದರೆ ಅವಳ ಕೂದಲಿನ ತಂತು ತುದಿಯ ಎರಡು ಬೆರಳಿನ ಉದ್ದದಷ್ಟು ಕತ್ತರಿಸಬೇಕು, ಎಂದಿದ್ದಾನೆ. ವಿಧವೆಯರಿಗೆ ಸಹಗಮನ, ಬ್ರಹ್ಮಚರ್ಯ, ನಿರಾಲಂಕಾರಗಳನ್ನಷ್ಟೇ ವಿಧಿಸಿದ್ದಾನೆ. ಕೆಲವು ಪುರಾಣಗಳಲ್ಲಿಯೂ ಸ್ಮೃತಿರತ್ನಾಕರ ಮತ್ತು ಆಶ್ವಲಾಯನ, ಶೌನಕ ಇವರ ಸ್ಮೃತಿಗಳಲ್ಲಿಯೂ ವಪನವನ್ನು ಹೇಳಿದುದು ನಿಜ. ಆದರೆ ಆ ಸ್ಮೃತಿಗಳು ಈಚಿನವು ಹಾಗೂ ಮೌಲಿಕ ಪ್ರಮಾಣಗಳಲ್ಲ.

ವೆಂಕಟ ರಂಗೋ ಕಟ್ಟಿಯು ತನ್ನ ಪುಸ್ತಕದುದ್ದಕ್ಕೂ ಸಂಸ್ಕೃತ ಶಾಸ್ತ್ರ ಪುರಾಣಗಳಿಂದ ಶ್ಲೋಕಗಳನ್ನು ಉದಾಹರಿಸಿದ್ದಾನೆ. ಇದರಲ್ಲಿ ಬಂದಿರುವ ಆಧಾರ ಸಾಮಗ್ರಿ ಆ ಮೊದಲು ಬೇರೆ ಪುಸ್ತಕ, ಲೇಖನಗಳಲ್ಲಿ ಇದ್ದಿರಬಹುದಾದರೂ ಅದನ್ನು ಬಳಸಿಕೊಂಡು ಸ್ವಂತದ ವಿಚಾರಗಳನ್ನು ಸೇರಿಸಿ ಬರೆದ ರೀತಿಯು ಸಂಪೂರ್ಣವಾಗಿ ಕಟ್ಟಿಯದೇ ಆಗಿದೆ. ಹೀಗೆ ವಿಧವಾವಪನವು ಅನ್ಯಾಯದ್ದು; ಸಮಾಜದ ಹಿತಕ್ಕೆ ಮಾರಕವಾದದ್ದು—ಎಂದು ನಿಶ್ಚಲವಾಗಿ ನಂಬಿ ಅದಕ್ಕಾಗಿ ಏನಾದರೂ ಉಪಾಯ ಕೈಕೊಳ್ಳಲೇಬೇಕೆಂಬ ಅವನ ಕಳಕಳಿಯು ಮೆಚ್ಚತಕ್ಕದ್ದಾಗಿದೆ. ✡

(ಡಾ. ಶ್ರೀನಿವಾಸ ಹಾವನೂರರವರ ಇತ್ತೀಚಿನ ಬೃಹದ್ಗ್ರಂಥ 'ಹೊಸಗನ್ನಡದ ಅರುಣೋದಯ'ದಿಂದ ಉದ್ಧೃತ.)

ಭಾರತದ ಪ್ರಾಗೈತಿಹಾಸಿಕ ಚರಿತ್ರೆಯ
ಮೇಲೆಯೂ ಇಂಥ ಬೆಳಕು ಬಿದ್ದೀತೆ?

ಡೆನ್ಮಾರ್ಕಿನ ಲೋಹಯುಗದ ಮೇಲೆ ಬೆಳಕು

ಪಿ. ವಿ. ಗ್ಲೋಬ್

ಡೆನ್ಮಾರ್ಕಿನಲ್ಲಿ ೧೯೫೦ರ ವಸಂತ ಋತುವಿನಲ್ಲಿ ಇಬ್ಬರು ರೈತರು ಟೊಲ್ಲುಂಡ್ ಫೆನ್ ಎಂಬಲ್ಲಿ ನೆಲವನ್ನು ಅಗೆಯುತ್ತಿದ್ದಾಗ ಮಾನವ ಶರೀರವೊಂದು ಮಣ್ಣಲ್ಲಿ ಹೂತದ್ದು ಕಣ್ಣಿಗೆ ಬಿತ್ತು. ಆ ಶವ ಇನ್ನೂ ಅಚ್ಚಳಿಯದಿದ್ದದ್ದರಿಂದ ಅದು ಇತ್ತೀಚಿನ ಯಾವುದೋ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ್ದಿರಬೇಕೆಂದು ಆ ರೈತರು ಗಾಬರಿಗೊಂಡರು. ಪೋಲೀಸರಿಗೆ ಹೇಳಿ ಕಳುಹಿಸಿದರು.

ಮರುಕ್ಷಣದಲ್ಲಿಯೇ ಪೋಲೀಸರು ಬಂದರು. ಸ್ಥಳೀಕ ವಸ್ತು ಪ್ರದರ್ಶನಾಲಯದ ಅಧಿಕಾರಿಗಳೂ ಆಗಮಿಸಿದರು. ಆ ಪ್ರದೇಶದಲ್ಲಿ ಲೋಹ ಯುಗದ ಅವಶೇಷಗಳು ದೊರೆಯುವವೆಂಬ ಪ್ರತೀತಿ ಇದ್ದದ್ದರಿಂದ ಆರ್ಹಸ್ ವಿಶ್ವವಿದ್ಯಾಲಯದಿಂದ ನನ್ನನ್ನೂ ಕರೆಸಲಾಯಿತು. ಅಲ್ಲಿಗೆ ಹೋಗಿ ನೋಡಿದಾಗ ನಾನು ಕಂಡದ್ದು ಅಲ್ಲಿಯ ಸಸ್ಯಾಂಗಾರ ಭೂಮಿಯಲ್ಲಿ, ಇಪ್ಪತ್ತು ಶತಮಾನಗಳ ಹಿಂದೆ ಹೂತು ಹೋಗಿದ್ದ, ಲೋಹ ಯುಗದ ಮಾನವನೊಬ್ಬನನ್ನು.

ಆತ ಎಡದಂಡ ಮೇಲಾಗಿ ಅಂದರೆ ಬಲ ಮಗ್ಗುಲಾಗಿ ಮಲಗಿದ್ದ. ಆತನ ತಲೆ ಪಶ್ಚಿಮಕ್ಕೆ, ಮುಖ ದಕ್ಷಿಣಾಭಿಮುಖವಾಗಿ ಇದ್ದವು. ಕಾಲು ಪೂರ್ವಕ್ಕೆ ಚಾಚಿದ್ದವು. ಆ ಸಸ್ಯಾಂಗಾರ ಭೂಮಿಯಲ್ಲಿ ಒಂಭತ್ತು ಅಡಿ ಆಳದಲ್ಲಿ ಆ ಶವ ದೊರಕಿತ್ತು.

ಆತನ ತಲೆಯ ಮೇಲೆ ತೊಗಲಿನ ಚೂಪಾದ ಟೊಪ್ಪಿಗೆ ಇತ್ತು. ತೊಗಲಿನ ದಾರದಿಂದಲೇ ಅದನ್ನು ಗದ್ದದ ಕೆಳಗೆ ಬಿಗಿಯಲಾಗಿತ್ತು. ಟೊಂಕಕ್ಕೆ ಕೂಡ ನುಣುಪಾದ ಚರ್ಮದ ಪಟ್ಟಿ ಇದ್ದಿತು. ಮೈಮೇಲೆ ಬೇರೆ ಬಟ್ಟೆ ಬರೆ ಇರಲಿಲ್ಲ. ಕೂದಲು ಸಣ್ಣಾಗಿ ಕ್ರಾಪ್‌ಕಟ್ ಮಾಡಿದ್ದು ನುಣುಪಾಗಿ ಗಡ್ಡ ಬೋಳಿಸಲಾಗಿತ್ತು. ಚರ್ಮದ ಎರಡು ಬಾರಗಳಿಂದಲೇ ಹೆಣೆದ ಹಗ್ಗದಿಂದ ; ಆತನ ಕುತ್ತಿಗೆಯನ್ನು ಬಿಗಿಯಲಾಗಿತ್ತು. ಅಲ್ಲಿ ಮುರಿಗೆ ಹೊಡೆದ ಆ ಹಗ್ಗ ಹೆಗಲು ಮೇಲಿಂದ ಸೊಂಟದವರೆಗೂ ಇಳಿ ಬಿದ್ದಿತ್ತು.


ಶಿಲಾಯುಗದ ಈ ಮಾನವನ ತಲೆಯನ್ನು ಮಾತ್ರ ಅದ್ಭುತ ರೀತಿಯಲ್ಲಿ ಕಾದಿಡಲಾಗಿತ್ತು. ಪ್ರಪಂಚದಲ್ಲಿಯೇ ಇದು ಅಪೂರ್ವ ದೃಷ್ಟಾಂತವೆಂದು ಹೇಳಬಹುದು. ಆತನ ಅರೆ ಮುಚ್ಚಿದ ಕಣ್ಣುಗಳನ್ನು, ಅರೆ ಬಿರಿದ ತುಟಿಗಳನ್ನು ನೋಡಿದರೆ, ನಿದ್ದೆಯಲ್ಲಿದ್ದವರ ಹಾಗೂ ಚಿರನಿದ್ರೆಯಲ್ಲಿದ್ದವರ ನಡುವೆ ಅದೆಂಥ ಹೋಲಿಕೆ ಎಂದು ಬೆರಗಾಗಬೇಕಾಗುತ್ತಿತ್ತು.

ಈ ಶವವನ್ನು ಯಥಾ ಸ್ಥಿತಿಯಲ್ಲಿಯೇ ಕೋಪನ್ ಹೇಗನ್‌ದ ರಾಷ್ಟ್ರೀಯ ವಸ್ತು-ಪ್ರದರ್ಶನಾಲಯಕ್ಕೆ ಸಾಗಿಸಲೆಂದು ಕಟ್ಟಿಗೆ ತೊಟ್ಟಿಲೊಂದನ್ನು ಆ ಸ್ಥಳದಲ್ಲಿಯೇ ನಿರ್ಮಿಸಬೇಕಾಯಿತು.

ಕೋಪನ್ ಹೇಗನ್‌ದಲ್ಲಿ ಡಾಕ್ಟರರೂ ತಜ್ಞರೂ ಆ ಶವ ಪರೀಕ್ಷೆ ನಡೆಸಿದ ನಂತರ ಈತನನ್ನು ನೇಣು ಹಾಕಿಕೊಂದಿರಬಹುದು, ಉರುಲು ಬಿಗಿದು ಅಲ್ಲ, ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಆತನ ತಲೆಯ 'ಎಕ್ಸರೇ' ತೆಗೆಯಲಾಗಿ ಆತನ ತಲೆ ಬುರುಡೆಗೆ ಯಾವ ಆಘಾತವೂ ಆಗಿಲ್ಲ. ಮಿದುಳೂ ಕೆಟ್ಟಿಲ್ಲ. ಆದರೆ ಸ್ವಲ್ಪ ಕುಗ್ಗಿದೆ ಎಂದು ಕಂಡು ಬಂದಿತು. ಆತನಿಗೆ ಅಕ್ಕಲ ದವಡೆಯೂ ಬೆಳೆದಿದ್ದರಿಂದ, ಮರಣ ಕಾಲಕ್ಕೆ ಆತ ಇಪ್ಪತ್ತು ವರ್ಷಕ್ಕೂ ಮೇಲ್ಪಟ್ಟವನಾಗಿರಬೇಕು ಎಂದು ಅಭಿಪ್ರಾಯ ಪಡಲಾಯಿತು.

ಆ ಶರೀರವನ್ನು ಕೊಯ್ದು ನೋಡಲಾಗಿ ಹೃದಯ, ಪುಪ್ಪುಸ, ಯಕೃತ್ತು, ಜಠರ, ಸಣ್ಣ ಕರುಳು, ದೊಡ್ಡ ಕರುಳು ಎಲ್ಲ ಸುಸ್ಥಿತಿಯಲ್ಲಿದ್ದುದು ಕಂಡು ಬಂದಿತು. ಆತನ ಕರುಳಿನಲ್ಲಿ ಮರಣಕ್ಕೆ ೧೨ರಿಂದ ೨೪ ಗಂಟೆ ಮುನ್ನ ಸೇವಿಸಿರಬಹುದಾದ ಆಹಾರದ ಅವಶೇಷಗಳು ಕಂಡು ಬಂದವು. ಬಾರ್ಲಿಯಂಥ ಧಾನ್ಯದ ಗಂಜಿ ಆ ಕರುಳಿನಲ್ಲಿ ಇತ್ತಲ್ಲದೆ ಮೀನ—ಮಾಂಸದ ಶೇಷ ಇರಲಿಲ್ಲ.

ಅಚ್ಚಳಿಯದೆ ಉಳಿದಿರುವ ಎರಡು ಸಾವಿರ ವರುಷಗಳ ಹಿಂದಿನ ಮಾನವನ ತಲೆ.



ಇಷ್ಟೆಲ್ಲ ವಿವರ ಪರೀಕ್ಷೆಯ ನಂತರ ತಲೆಯನ್ನು ಸಂಸ್ಕರಿಸಿ ಕಾಯ್ದಿಡುವುದಕ್ಕಾಗಿ ಟೊಲ್ಲುಂಡ ಸಮೀಪದ ಸಿಲ್ಕ ಬೋರ್ಗ ವಸ್ತು ಸಂಗ್ರಹಾಲಯಕ್ಕೆ ಕಳಿಸಲಾಯಿತು. ಇಂದಿಗೂ ಆ ತಲೆ ಅಲ್ಲಿದೆ. ಇಪ್ಪತ್ತು ಶತಮಾನಗಳ ಹಿಂದಿನ ಆ ಮುಖ ಕಪ್ಪಾಗಿದ್ದರೂ ಗಂಭೀರವಾಗಿದೆ, ಜೀವಂತವಾಗಿದೆ. ನೋಟಕರ ಕಣ್ಣುಗಳನ್ನು ಸೆರೆ ಹಿಡಿಯುವಂತಿದೆ.

ಕೇವಲ ಎರಡೇ ವರ್ಷಗಳ ನಂತರ ಅಂದರೆ ೧೯೫೨ ಎಪ್ರಿಲ್‌ದಲ್ಲಿ, ಟೊಲ್ಲುಂಡ್‌ದಿಂದ ೧೧ ಮೈಲು ದೂರದ ಗ್ರಾಬೆಲ್ಲೆ ಎಂಬಲ್ಲಿ ಮತ್ತೊಂದು ಶವ ದೊರೆಯಿತು. ಆ ಪ್ರದೇಶಕ್ಕೆ ನಾನು ಭೇಟಿ ಕೊಟ್ಟಾಗ ಆ ಶವದ ಭುಜ ಹಾಗೂ ತಲೆ ನೆಲದಿಂದ ಮೇಲಕ್ಕೆ ಎದ್ದಿದ್ದವು. ಆ ಶವವನ್ನು ನಾನು ಯಥಾ ಸ್ಥಿತಿಯಲ್ಲಿಯೇ ಆರ್ಹಸ್‌ದ ಪ್ರಾಗೈತಿಹಾಸಿಕ ವಸ್ತು ಸಂಗ್ರಹಾಲಯಕ್ಕೆ ಕಳಿಸುವ ಏರ್ಪಾಡು ಮಾಡಿದೆ.

ಈ ಶವವನ್ನು ಸಂಪೂರ್ಣ ನಗ್ನವಾಗಿಯೆ ಭೂಮಿಯಲ್ಲಿಡಲಾಗಿತ್ತು. ಆದರ ಸುತ್ತ ಮುತ್ತ ಯಾವ ವಸ್ತುವೂ ಸಿಗಲಿಲ್ಲ. ವಿಶಿಷ್ಟ (ಕಾರ್ಬನ್ ೧೪) ಪರೀಕ್ಷೆಯಲ್ಲಿ ಈ ಶವವು ಕ್ರಿ. ಶ. ೨೧೦ರಿಂದ ಕ್ರಿ. ಶ. ೪೧೦ರ ನಡುವಿನ ಅವಧಿಯದಿರಬೇಕು ಎಂದು ಕಂಡು ಬಂದಿತು. ಈ ಶವದ ಬೇರೆ ಬೇರೆ ಎಲುಬುಗಳ ಹಾಗೂ ಹಲ್ಲುಗಳ 'ಎಕ್ಸರೇ' ತೆಗೆಯಲಾಗಿ ಈತನ ವಯಸ್ಸು ಸುಮಾರು ಮೂವತ್ತು ಎಂದು ಕಂಡು ಬಂದಿತು. ಗಂಟಲ ನಾಳವನ್ನು ಕತ್ತರಿಸಿದ್ದರಿಂದ ಈತನ ಮರಣ ಸಂಭವಿಸಿತು ಎಂಬುದಕ್ಕೆ ಸ್ಪಷ್ಟ ಗುರುತುಗಳಿದ್ದವು.

ಈ ಶವ ಪೀಟಿನ ಭಾರದಿಂದ ಚಪ್ಪಟೆಯಾದಂತಿದ್ದರೂ ಚನ್ನಾಗಿ ಕಾದಿಡಲ್ಪಟ್ಟಿತ್ತು. ತಲೆಗೂದಲು ಆರು ಅಂಗುಲ ಉದ್ದ ಇದ್ದು ಕೆನ್ನೆಗಳ ಮೇಲೆ ಕೂದಲು ಇರಲಿಲ್ಲ. ಮಿದುಳು ತುಸು ಕುಗ್ಗಿದರೂ ಸುಸ್ಥಿತಿಯಲ್ಲಿಯೆ ಇದ್ದಿತು. ಈತ ಸೇವಿಸಿದ ಆಹಾರ ಕೂಡ ಧಾನ್ಯದ ಗಂಜಿಯಂಥದೇ ಇತ್ತು. ಬೇಸಿಗೆಯಲ್ಲಿ ಅಥವಾ


ಹೇಮಂತ ಋತುವಿನಲ್ಲಿ ಸಿಗುವ ಹಣ್ಣಿನ ಅಂಶಗಳೂ ಈತನ ಕರುಳಿನಲ್ಲಿರಲಿಲ್ಲ. ಆದ್ದರಿಂದ ಇವರಿಬ್ಬರೂ ಚಳಿಗಾಲದಲ್ಲಿ ಅಥವಾ ವಸಂತ ಋತುವಿನಲ್ಲಿ ಮರಣವನ್ನಪ್ಪಿದರು ಎಂದು ಹೇಳಬಹುದು. ಶಿಶಿರ– ವಸಂತಋತುಗಳಲ್ಲಿ ನಡೆವ ಉತ್ಸವಗಳಲ್ಲಿ ಇವರನ್ನು ಬಲಿಕೊಟ್ಟು ನಂತರ ಹೂಗಿದಿರಬಹುದಾದ ಸಂಭವ ಇದೆ.

ಗ್ರೌಬೆಲ್ಲೆದಲ್ಲಿ ದೊರೆತ ಶವದ ಕೈಕಾಲುಗಳು ತೀರ ಸುಸ್ಥಿತಿಯಲ್ಲಿವೆ. ಇದರ ಬೆರಳುಗಳ ಮೇಲಿನ ಗೆರೆಗಳ ಗುರುತುಗಳನ್ನು ಇಂದಿಗೂ ಅಚ್ಚಿಸಿಕೊಳ್ಳಬಹುದಾಗಿದೆ. ಪ್ಲಾಸ್ಟರಿನಲ್ಲಿ ಈತನ ಪ್ರತಿಕೃತಿಯೊಂದನ್ನು ತಯಾರಿಸಿಕೊಂಡ ನಂತರ ಇದನ್ನು ಕಾದಿಡಲು ವಸ್ತುಪ್ರದರ್ಶನಾಲಯದ ಅಧಿಕಾರಿಗಳಿಗೆ ಒಪ್ಪಿಸಲಾಯಿತು.

ಸಸ್ಯಾದಿಗಳು ಕೊಳೆತು ಕಳಿತು ಒಣಗಿದ ಜೌಗು ಭೂಮಿ ಎಂದರೇನೆ ಸಸ್ಯಾಂಗಾರ ಭೂಮಿ. ಡೆನ್ಮಾರ್ಕದ ಇಂಥ ಭೂಮಿಯಲ್ಲಿಯೇ ಈ ಮೇಲಿನ ಎರಡೂ ಶವಗಳು ದೊರೆತದ್ದು. ಶತಮಾನಗಳ ಕಾಲದಿಂದ ಇಂಥ ಭೂಮಿಯಲ್ಲಿ ಹೂಗಿದು ಹೋದ ಹೆಣಗಳ ಬಣ್ಣ ತಿರುಗುವುದು ಸ್ವಾಭಾವಿಕ. ಇಂಥ ಪ್ರಕ್ರಿಯೆಯನ್ನು ಈಗ ಡೆನ್ಮಾರ್ಕದ ಪ್ರಯೋಗಾಲಯಗಳಲ್ಲಿಯೂ ಸಾಧಿಸಲಾಗುತ್ತಿದೆ. ಗ್ರೌಬೆಲ್ಲೆಯಲ್ಲಿ ಸಸ್ಯಾಂಗಾರ ಭೂಮಿಯಲ್ಲಿ ದೊರೆತ–ಮಾನವ ಶರೀರವನ್ನು ಯಥಾ ಸ್ಥಿತಿಯಲ್ಲಿಯೇ ಆರ್ಹಸ್ ಪ್ರಾಗೈತಿಹಾಸಿಕ ವಸ್ತು ಪ್ರದರ್ಶನಾಲಯದಲ್ಲಿ ಮಂಡಿಸಲಾಗಿದೆ.

ವಾಯವ್ಯ ಯುರೋಪದ ವಿಸ್ತೃತ ಸಸ್ಯಾಂಗಾರ ಭೂಮಿಯಲ್ಲಿ ನಿಸರ್ಗವು ಕಳೆದ ಇಪ್ಪತ್ತು ಶತಮಾನಗಳಿಂದಲೂ ಅಚ್ಚಳಿಯದಂತೆ ಕಾಪಾಡಿಕೊಂಡು ಬಂದಂಥ ಸುಮಾರು ಏಳುನೂರು ಶರೀರಗಳು ಇಲ್ಲಿಯವರೆಗೆ ದೊರೆತಿವೆ. ಪುರುಷರು, ಸ್ತ್ರೀಯರು, ಮಕ್ಕಳು ಹೀಗೆ ಎಲ್ಲರ ಶರೀರಗಳೂ ದೊರೆತಿವೆ. ಕ್ರಿಸ್ತಯುಗದ ಪ್ರಾರಂಭದಲ್ಲಿ ಇವರೆಲ್ಲ ಜೀವಿಸಿದ್ದರು. ಜೆಟ್‌ಲ್ಯಾಂಡ್ ದ್ವೀಪಕಲ್ಪ, ವಾಯುವ್ಯ ಜರ್ಮನಿಗಳಲ್ಲಿ ಕೆಲವು ಶವಗಳು ದೊರೆತಿದ್ದರೆ ಇನ್ನು ಕೆಲವು ಬ್ರಿಟಿಶ್ ದ್ವೀಪಗಳಲ್ಲಿ ದೊರೆತಿವೆ. ನಾರ್ವೆ, ಸ್ವೀಡನ್, ಮಧ್ಯ ಯುರೋಪಗಳಲ್ಲಿಯೂ ಇಂಥ ಕೆಲವು ಶವಗಳು ದೊರೆತಿವೆ. ಈ ಜವಳು ಪ್ರದೇಶಗಳಲ್ಲಿ ರಾಸಾಯನಿಕ ಕ್ರಿಯೆಯಿಂದ ಈ ಶರೀರಗಳು ಕೆಡದಂತೆ ಕಾಪಾಡಲ್ಪಟ್ಟಿವೆಂದು ತಿಳಿದು ಬಂದಿದೆ. ಆ ಜವಳು ಭೂಮಿಯಲ್ಲಿ ಪ್ರಾಣವಾಯುವಿನ ಅಂಶವು ಕಡಿಮೆ ಪ್ರಮಾಣದಲ್ಲಿರುವುದೂ ಈ ಶವಗಳು ಕೆಡದಂತೆ ಉಳಿಯಲು ಸಹಾಯಕ ಎಂದೂ ಖಚಿತವಾಗಿ ತಿಳಿದಿದೆ. ಯಾಕೆಂದರೆ ಈ ಶವಗಳನ್ನು ಹೊರ ತೆಗೆದಾಗ ಅವುಗಳಲ್ಲಿ ಅನೇಕ ಶವಗಳು ಹೊರಗಿನ ಪ್ರಾಣವಾಯುವಿನ ಸಂಪರ್ಕದಿಂದಾಗಿ ಪುಡಿಪುಡಿಯಾಗಿ ಹೋಗಿವೆ. ಕೆಲವನ್ನು ಮಾತ್ರ ಪ್ರಯತ್ನ ಪೂರ್ವಕ ಸಂಸ್ಕರಿಸಿ ಕಾಪಾಡಿಕೊಂಡು ಬರಲಾಗಿದೆ. ಡೆನ್ಮಾರ್ಕಿನ ಹೆರಾಲ್ಡ್ಸ್ ಜೇರ್ ಎಂಬಲ್ಲಿ ೧೮೩೫ ರಲ್ಲಿ ದೊರೆತ ಸ್ತ್ರೀ ಶವವನ್ನು ಈ ರೀತಿ ಕಾದಿಡಲಾಗಿದೆ. ನಾರ್ವೆಯ ರಾಣಿ ಗನ್‌ಹಿಲ್ಡ್‌ಳ ಶವ ಇದಾಗಿರಬಹುದೆಂದು ಅಂದಿನ ತಜ್ಞರು ಅಭಿಪ್ರಾಯಪಟ್ಟಿದ್ದರು. ಒಂಬತ್ತು ಶತಮಾನಗಳ ಹಿಂದೆ ಆ ರಾಣಿಯು ಜವಳು ಪ್ರದೇಶದಲ್ಲಿ ಮುಳುಗಿ ಸತ್ತುಹೋಗಿದ್ದಳು ಎಂದು ಚರಿತ್ರೆ ಹೇಳುತ್ತದೆ, ಆದರೆ ಕಾಲಾಂತರದ–ಪರೀಕ್ಷೆಯಲ್ಲಿ ಆ ಸ್ತ್ರೀ ಶವವು ನಾರ್ವೆಯ ರಾಣಿಯ

ಇಪ್ಪತ್ತು ಶತಮಾನಗಳ ಹಿಂದಿನ ಸುಂದರ ಕೆತ್ತನೆಯು ಬೆಳ್ಳಿಬಟ್ಟಲು.



ದಾಗಿರದೆ ಲೋಹ ಯುಗದ ಸ್ತ್ರೀಯೊಬ್ಬಳ ದಾಗಿದೆಂದು ಕಂಡುಬಂದಿದೆ. ಜೆಟ್‌ಲ್ಯಾಂಡದ ವೆಜ್ಲೆ ಚರ್ಚಿನಲ್ಲಿ ಈ ಶವವನ್ನು ಓಕ್ ಮರದ ಪೆಟ್ಟಿಗೆಯಲ್ಲಿ ಇಂದಿಗೂ ಕಾದಿಡಲಾಗಿದೆ.

ಆಯರ್ಲೆಂಡದಲ್ಲಿ ಡ್ರುಂಕರಾಗ್ ಪರ್ವತ ಸಮೀಪದ ಸಸ್ಯಾಂಗಾರ ಭೂಮಿಯಲ್ಲಿ ಕ್ರಿ. ಶ. ೧೭೮೦ ರಷ್ಟು ಹಿಂದೆಯೇ ಸ್ತ್ರೀ ಶವವೊಂದು ದೊರೆತಿದೆ. ಮೂರು ಉಣ್ಣೆ ಕಂಬಳಿಗಳ ಮೇಲೆ ಪವಡಿಸಿದ ಆ ಶವವನ್ನು ಸುಂದರವಾದ ಕೆಂಪು ಹಸಿರು ಬಟ್ಟೆಗಳಿಂದ ಅಲಂಕರಿಸಲಾಗಿದೆ.

ಡೆನ್ಮಾರ್ಕದ ಜೆಟ್‌ಲ್ಯಾಂಡ್‌ನ ಉತ್ತರಕ್ಕೆ ಇರಬಹುದಾಗಿರುವ ಲೋಹಯುಗದ ಹಳ್ಳಿಯ ಸಮೀಪದಲ್ಲಿ ಅಂದರೆ ಹಿಮ್ಮರ್‌ಲ್ಯಾಂಡಿನ ಬೋರ್‌ಫೆನ್ ಎಂಬಲ್ಲಿ ಒಂದು ಗಂಡು ಮತ್ತು ಒಂದು ಹೆಣ್ಣು ಹೀಗೆ ಎರಡು ಶವಗಳು, ಸುಸ್ಥಿತಿಯಲ್ಲಿ ದೊರೆತಿವೆ. ಆ ಪುರುಷನನ್ನು ಉರುಳುಬಿಗಿದು ಇಲ್ಲವೆ ನೇಣು ಹಾಕಿ ಕೊಂದಿರಬಹುದೆಂಬಂತೆ ಆತನ ಕತ್ತಿನ ಸುತ್ತಲೂ ಬಳ್ಳಿಯ ಹಗ್ಗ ಇದೆ. ಆತನನ್ನು ನಗ್ನವಾಗಿಯೇ ಆ ಸ್ಥಳಕ್ಕೆ ತಂದು ಹುಗಿದಿರಬಹುದೆಂದು ತೋರುತ್ತದೆ.

ಭೂರ್ಜವೃಕ್ಷದ ನುಣುಪಾದ ತೊಗಟೆಯ ಮೇಲೆ ಆ ಸ್ತ್ರೀ ಶವವನ್ನು ಮಲಗಿಸಲಾಗಿತ್ತು. ಕಾಲಿನಿಂದ ಸೊಂಟದ ವರೆಗ ಆಕೆಯ ಶರೀರವನ್ನು ಉಣ್ಣೆ ಕಂಬಳಿಯಿಂದ ಮುಚ್ಚಲಾಗಿತ್ತು.

ಬೋರ್ ಫೆನ್‌ನ ದ್ವೀಪವೊಂದರಲ್ಲಿ ಲೋಹಯುಗದ ಗ್ರಾಮವೊಂದಕ್ಕೆ ಸೇರಿದ ಇಪ್ಪತ್ತು ಮನೆಗಳನ್ನು ಉತ್ಖನನದಿಂದ ಕಂಡುಹಿಡಿಯಲಾಗಿದೆ. ಎರಡು ಸಾವಿರ ವರ್ಷಗಳ ಹಿಂದೆ ಈ ಹಳ್ಳಿಯಲ್ಲಿಯ ಮನೆಗಳಲ್ಲಿ ಜನರು ತಮ್ಮ ಪಶು ಸಂಪತ್ತಿಯೊಂದಿಗೆ ವಾಸವಾಗಿದ್ದರು ಎಂಬುದು ಈ ಮನೆಗಳನ್ನು ನೋಡಿದಾಗ ಸ್ಪಷ್ಟವಾಗುತ್ತದೆ. ರಸ್ತೆಯ ಇಕ್ಕೆಲಗಳಲ್ಲಿ ಈ ಮನೆಗಳನ್ನು ಕಾಣಬಹುದಾಗಿದೆ. ೮೮' × ೨೩' ವಿಸ್ತಾರದ ಮನೆಯೇ ದೊಡ್ಡ ಮನೆ. ಇದರ ಅರ್ಧ ಕ್ಷೇತ್ರದ ಮನೆಗಳೂ ಉಂಟು. ಮಣ್ಣಿನ ಗೋಡೆ, ಹುಲ್ಲಿನ ಚಪ್ಪರಗಳುಳ್ಳ ಈ ಮನೆಗಳಲ್ಲಿ ಅರ್ಧದಷ್ಟು ಭಾಗ ದನಗಳಿಗೆ ಮೀಸಲಾಗಿರುತ್ತಿತ್ತು. ಜೆಟ್‌ಲ್ಯಾಂಡಿನ ದಕ್ಷಿಣ ಭಾಗದ ಸ್ಲೆಸ್‌ವಿಗ್ ಹೋಲ್‌ಸ್ಟೀನದಲ್ಲಿಯೂ

ಲೋಹಯುಗದ ಮಾನವರು ಆರಾಧಿಸುತ್ತಿದ್ದ ದೇವಿಯ ಚಿತ್ರ ವನ್ಯಮೃಗಗಳ ಸಮೇತ



ಇಂಥ ಅವಶೇಷಗಳು ಕಂಡು ಬಂದಿವೆ.

ಕ್ರಿಸ್ತಶಕ ಮೊದಲನೆ ಶತಮಾನದಲ್ಲಿ ಆಗಿ ಹೋದ ಟಾಸಿಟಸ್ ಎಂಬ ರೋಮನ್ ಚರಿತ್ರಕಾರನು ಈ ಸಸ್ಯಾಂಗಾರ ಪ್ರದೇಶದ ಜನರ ಕೇಶಾಲಂಕಾರದ ಬಗ್ಗೆ ಬರೆದಿದ್ದಾನೆ. ಗ್ರೋಟೋರ್ಪ್ ಕಿಲ್ಲೆಯಲ್ಲಿ ದೊರೆತ ಶವ ಪೊಂದರ ತಲೆಗೂದಲು ಹನ್ನೊಂದು ಅಂಗುಲ ಉದ್ದವಿದ್ದು ಅದನ್ನು ಬಲಗಡೆಗೆ ಸುತ್ತಿ ತುರುಬಿನಂತೆ ಗಂಟು ಹಾಕಲಾಗಿದೆ. ಸ್ವೇಬಿಯನ್ ಜನಾಂಗದವರ ಕೇಶಾಲಂಕಾರ ಪದ್ಧತಿ ಇದು ಎಂಬುದು ಟಾಸಿಟಸ್‌ನ ಮತ.

ಜರ್ಮನಿಯಲ್ಲಿಯೂ ನರಬಲಿ ಪದ್ಧತಿ ಇರಿತು ಟಾಸಿಟಸ್ ಬರೆಯುತ್ತಾ, ಗೈದ ಅಪರಾಧಗಳಿಗೆ ದಂಡನೆ ಎಂದು ದೇಹಾಂತ ಶಿಕ್ಷೆ ವಿಧಿಸಲಾಗುತ್ತಿತ್ತು ಮತ್ತು ವಸಂತ ಋತುವಿನಲ್ಲಿ ದೇವತಾ ಪೂಜೆಯ ಕಾಲಕ್ಕೆ ನರಬಲಿ ಕೊಡುವ ಪದ್ಧತಿ ಇತ್ತು, ಎಂದು ನಿವೇದಿಸಿದ್ದಾನೆ. ಪಂಗಡದ ಹಿರಿಯರು ಈ ಆರೋಪಗಳನ್ನು ವಿಚಾರಿಸಿ ಮರಣದಂಡನೆ ವಿಧಿಸುತ್ತಿದ್ದರಂತೆ. ದ್ರೋಹಿಗಳನ್ನು ಪಕ್ಷತ್ಯಾಗಿಗಳನ್ನು ಗಿಡಕ್ಕೆ ನೇಣುಹಾಕಿ ಕೊಲ್ಲಲಾಗುತ್ತಿತ್ತು. ಆದರೆ ಹೇಡಿಗಳನ್ನೂ ಕೇಡಿಗಳನ್ನೂ ಜವಳು ಭೂಮಿಯಲ್ಲಿ ಹುಗಿದು ಕೊಲ್ಲಲಾಗುತ್ತಿತ್ತು ಎಂದೂ ಆತ ಬರೆದಿದ್ದಾನೆ.

ಮಾನವರು ದಿಯಾಗಿ ಪಶುಪ್ರಾಣಿಗಳಲ್ಲಿ ಸಂತಾನ ಶಕ್ತಿ ತುಂಬುವದಕ್ಕಾಗಿ, ಬೆಳೆಗಳು ಕಾಳು ತುಂಬಿ ಸಮೃದ್ಧವಾಗುವುದಕ್ಕಾಗಿ ಪ್ರತಿ ವರ್ಷ ಪೂಜಾ ಮಹೋತ್ಸವವೊಂದನ್ನು ನಡೆಸಲಾಗುತ್ತಿತ್ತು ಎಂದು ಟಾಸಿಟಸ್ ಹೇಳಿ ಉತ್ಸವವನ್ನು ಹೀಗೆ ಬಣ್ಣಿಸಿದ್ದಾನೆ.

"ಸಾಗರದ ನಡುವಣ ದ್ವೀಪವೊಂದರಲ್ಲಿ ಪವಿತ್ರ ಉದ್ಯಾನ ಒಂದಿದೆ. ಅಲ್ಲಿ ಗುಪ್ತರಥ ಒಂದಿದೆ. ಕೇವಲ ಧರ್ಮೋಪದೇಶಕನು ಮಾತ್ರ ಆ ರಥದಲ್ಲಿ ದೇವತೆಯೊಂದಿಗೆ ಆಸೀನನಾಗಬಲ್ಲ. ಎತ್ತುಗಳಿಂದ ಎಳೆಯಲ್ಪಡುವ ಈ ರಥದಲ್ಲಿ ಅವರು ದೇಶದಲ್ಲೆಲ್ಲ ಸಂಚರಿಸುತ್ತಾ ಚೈತನ್ಯವನ್ನೂ ಫಲವತ್ತತೆಯನ್ನೂ ಸಕಲ ಜೀವಿಗಳಲ್ಲಿ ತುಂಬುತ್ತಾರೆ. ನಂತರ ದೇವತೆಯು ತನ್ನ ಸ್ವರ್ಗಧಾಮಕ್ಕೆ ತೆರಳುತ್ತಾಳೆ. ಬಳಿಕ ಆ ರಥವನ್ನೂ ದೇವಿಯನ್ನೂ ಪವಿತ್ರ ಸರೋವರದಲ್ಲಿ ವಿಸರ್ಜಿಸಲಾಗುತ್ತಿತ್ತು.

ಆ ದೇವತೆ ಎಂದರೆ ಭೂದೇವಿಯೆಂದೂ ನೆರ್ಥಸ್ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದಳೆಂದೂ ಟಾಸಿಟಸ್ ಹೇಳುತ್ತಾನೆ."

ಕ್ರಿಸ್ತ ಶಕಕ್ಕಿಂತ ಮೊದಲು ಹಾಗೂ ಪ್ರಾರಂಭದ ಕಾಲದಲ್ಲಿ ಉತ್ತರದ ದೇಶಗಳಲ್ಲಿ ಇಂಥ ದೇವತೆಗಳನ್ನು ಪೂಜಿಸಲಾಗುತ್ತಿತ್ತು. ಈಗ ಲಭ್ಯವಿರುವ ಆ ದೇವಿಯ ಕಂಚಿನ ಪ್ರತಿಮೆಗಳ ಕೊರಳಲ್ಲಿ ಎರಡು ಬಳೆಗಳು ಇದ್ದು ಆಕೆ ಕೈ ಕಟ್ಟಿಕೊಂಡು ನಿಂತಂತೆ ಇವೆ.

ಲೋಹಯುಗದ ಉತ್ತರಾರ್ಧದಲ್ಲಿ ಈ ದೇವತೆಯದೇ ಇತರ ದೇವರ ಮೇಲೆ ಸರ್ವಾಧಿಕಾರವಿದ್ದಂತೆ ತೋರುತ್ತದೆ. ಈ ದೇವಿಗೆ ಅರ್ಪಿಸಿದ ಕಂಕಣಗಳೂ ಸರಗಳೂ ಸಸ್ಯಾಂಗಾರ ಭೂಮಿಯಲ್ಲಿ ದೊರೆತಿವೆ.

ಜಟ್‌ಲ್ಯಾಂಡ್‌ನ ಗುಂಡೆಸ್ಟ್ರಪ್‌ದಲ್ಲಿ ದೊಡ್ಡ ಬೆಳ್ಳಿ ಬಟ್ಟಲೊಂದು ದೊರೆತಿದೆ. ಅದರ ಹೊರಗೂ ಒಳಗೂ ದೇವತೆಗಳ ಚಿತ್ರ ಕೆತ್ತಲಾಗಿದೆ. ಕೆಲವು ಮೃಗಗಳ ಹಾಗೂ ಬಲಿಪಶುಗಳ ಚಿತ್ರಗಳನ್ನು ಅಲ್ಲಿ ಕೆತ್ತಲಾಗಿದೆ. ಆಗ್ನೇಯ ಯುರೋಪದ ಯುದ್ಧವೊಂದರಲ್ಲಿ ಲೂಟಿಮಾಡಿ ಡೆನ್ಮಾರ್ಕ್ಕಿ ತರಲಾಯಿತು ಎಂದು ಹೇಳಲಾಗುವ ಈ ಬೆಳ್ಳಿ ಬಟ್ಟಲದ ಮೇಲೆ ಕೆತ್ತಿರುವ ದೇವತೆಗಳೆಲ್ಲ ಡೆನ್ಮಾರ್ಕಿನ ಈ ಲೋಹಯುಗದ ಕಾಲದ ಜನರ ದೇವತೆಗಳೇ ಆಗಿದ್ದಾರೆ.

ಈ ಟೊಲ್ಲುಂಡ್ ಮಾನವನೇ ಆಗಲೀ ಮತ್ತು ಕೆಲವರಾಗಲಿ ದೇವತೆಯ ಸಹಚರರಾಗಿ ಕೆಲ ಕಾಲ ಬಾಳಿ, ನಂತರ ಆಕೆಗೆ ಬಲಿಯಾಗಿ ಅರ್ಪಿಸಲ್ಪಟ್ಟವರಾಗಿರಬೇಕು. ಅಂತೇ ಅವರನ್ನು ಈ ಸಸ್ಯಾಂಗಾರ (ಜೌಗು) ಭೂಮಿಯಲ್ಲಿ ಇಟ್ಟು ಅದ್ಭುತ ರೀತಿಯಲ್ಲಿ ಕಾಪಾಡಿಕೊಂಡು ಬರಲಾಗಿದೆಂದೂ ಧಾರಾಳವಾಗಿ ಹೇಳಬಹುದಾಗಿದೆ. ✲

ಯುನೆಸ್ಕೊ ಕೋರಿಯರ್ (ಫೆ. ೭೨) ದಿಂದ

ಜರ್ಮನ್ ಕಥೆ

ಕಲ್ಲುನಾಡು

ಹರ್ಬರ್ಟ್ ಡಬ್ಲ್ಯು. ಫ್ರಾಂಕ್

ಗಗನಯಾತ್ರಿಗಳು ಇಳಿದ ಸ್ಥಳವೇನೂ ಚೈತನ್ಯದಾಯಕವಾಗಿರಲಿಲ್ಲ. ಉಲ್ಕಾಪಾತದಿಂದಾಗಿ ನೆಲದ ತುಂಬೆಲ್ಲಾ ಗುಳಿಗಳು. ಗುಳಿಗಳ ಸುತ್ತಲೂ ಭೂಮಿ ಹುರುಬುರುಕಾಗಿದ್ದು ವ್ರಣದ ಹಾಗೆ ಕಾಣುತ್ತಿತ್ತು. ಸ್ಪೇಸ್ ಸೂಟನ್ನು ಧರಿಸಿದ್ದ ಅವರು ಪ್ರಯಾಸದಿಂದ ಹೆಜ್ಜೆಯಿಟ್ಟಾಗ ಕಾಲಿನಡಿಯಲ್ಲಿ ಕರಕರ ಸಪ್ಪಳವಾಗುತ್ತಿತ್ತು.

"ಹಲೋ, ಕಲ್ಲರ್, ನಾನು ಮಾತಾಡಿದ್ದು ಕೇಳಿಸುತ್ತದೆಯಾ, ನಿನಗೆ ?" ಬ್ರೋಕ್ ಕೇಳಿದ. ಏನೂ ಉತ್ತರವಿಲ್ಲ. ಕತ್ತೆತ್ತಿ ನೋಡಿದಾಗ ಕಲ್ಲರ್ ನಿಶ್ಚಲವಾಗಿ ನಿಂತು ಎವೆಯಿಕ್ಕದೆ ದೂರದಲ್ಲಿ ಏನನ್ನೊ ವೀಕ್ಷಿಸುತ್ತಿದ್ದ. ಬಹುಶಃ ಗುಳಿಗಳನ್ನೇ ಆತ ನಿರೀಕ್ಷಿಸುತ್ತಿದ್ದನೋ ಏನೋ. "ಹಲೋ, ಕಲ್ಲರ್," ಮತ್ತೂ ಉತ್ತರವಿಲ್ಲ. ಕೈಲಿದ್ದ ಸ್ವಿಚ್ ಬಟನ್ನನ್ನು ಒತ್ತದಿದ್ದರೆ ಇವನು ಮಾತಾಡಿದ್ದು ಕಲ್ಲರನಿಗೆ ಹೇಗೆ ತಾನೆ ಕೇಳಿಸಬೇಕು? ಇದೇನು ಪೃಥ್ವಿಯೆ ಹಾಗೆ ಕೇಳಿಸಲಿಕ್ಕೆ ? ಎಂಬ ವಿಚಾರ ತಲೆಯಲ್ಲಿ ಬರುತ್ತಲೆ ಆತ ಬಟನ್ನನ್ನು ಒತ್ತಿದ.

"ಏನಪ್ಪಾ ನಿಂತಲ್ಲೆ ನಿಂತಿದ್ದೀಯೆ ನಿದ್ದೆಗಿದ್ದೆ ಹತ್ತಿಲ್ಲವಷ್ಟೆ? ಇಲ್ಲಿ ಹೇಗನಿಸುತ್ತದೆ ನಿನಗೆ ? ನನಗಂತೂ ಸರಾಯಿ ಕುಡಿದಾಗ ಸುತ್ತುವಂತೆ ತಲೆ ಸುತ್ತುತ್ತಿದೆ. ಇದನ್ನೊಂದನ್ನುಳಿದರೆ ಮಿಕ್ಕುದೆಲ್ಲಾ ಸೆಟ್ಟಗೆ."

"ನನಗೂ ಹಾಗೆಯೆ ಆಗುತ್ತಿದೆ. ಏನೊ ಒಂದು ಬಗೆಯ ವಿಚಿತ್ರ ಅನುಭವ. ಆದರೆ ಅದೇನೂ ಅಷ್ಟು ಸುಖದಾಯಕವಲ್ಲ. ಕಾಲ ಕಳೆದಂತೆ ಈ ಹೊಸ ವಾತಾವರಣಕ್ಕೆ ನಾವಾಗಿಯೆ ಹೊಂದಿಕೊಳ್ಳಬಹುದು ಬಿಡು." ಕಲ್ಲರನ ಧ್ವನಿಯಲ್ಲಿ ಅನಾಸಕ್ತ ಭಾವವಿದ್ದರೂ ಒಳಗೆ ಮೈತ್ರಿಯ ಸೆಲೆ ಪುಟಿದೇಳುತ್ತಿತ್ತು. ಇಂತಹ ಸ್ಥಳದಲ್ಲಿ ಯಾರಾದರೂ ಮಾತನಾಡಲು ಜೊತೆಗಿದ್ದಾರೆಂಬುದೇ ಎಲ್ಲಕ್ಕಿಂತ ಮುಖ್ಯ. ಬದಿಯಲ್ಲೆ ಬೂದು ಬಣ್ಣದ ಪೆಟ್ಟಿಗೆಯೊಂದು ಮೂರು ಕಾಲುಗಳ ಮೇಲೆ ನಿಂತಿತ್ತು. ಕಲ್ಲರ್ ಅದರ ಬಳಿಗೆ ಹೋಗಿ ಟ್ರಾನ್ಸ್‌ಮಿಶನ್ ಸ್ವಿಚ್ಚನ್ನು ಒತ್ತಿದ. ಹಸಿರುದೀಪ ಹತ್ತಿಕೊಂಡು ಕೆಲವು ಮೀಟರುಗಳ ಮುಳ್ಳುಗಳು ಅತ್ತಿತ್ತ ಚಲಿಸಿದವು. ಬ್ರೋಕ್ ಮುಂಗೈಯನ್ನು ನೋಡಿ, "ಇನ್ನೂ ಮೂರು ಗಂಟೆ ಕಾಯಬೇಕು," ಅಂದ. ದೂರ ಕ್ಷಿತಿಜದಲ್ಲಿ ಸೂರ್ಯ ಉರಿಯುತ್ತಾ ಎಲ್ಲೆಡೆಯಲ್ಲೂ ಕಡುಗೆಂಪು ಬಣ್ಣವನ್ನು ಸೂಸುತ್ತಿದ್ದ. ಸುತ್ತಲೂ ಶಿಲಾಮಯವಾದ ಪ್ರದೇಶ. ಶಿಲೆಗಳ ಮೇಲೆ ಸೂರ್ಯ ಕಿರಣಗಳು ಬಿದ್ದು ಕೆಂಪು ವಸ್ತ್ರವನ್ನು ನೆಲದ ಮೇಲೆ ಹಾಸಿದಂತಾಗಿತ್ತು. ಮೇಲೆ ಆಕಾಶದಲ್ಲಿ ಯಾವುದೋ ಗ್ರಹ ಸ್ಥಿರವಾಗಿತ್ತು.

"ಎಲ್ಲ ಬಿಟ್ಟು ಇಂಥಲ್ಲಿ ಜೀವಿಗಳಿರಬೇಕೆಂದರೆ !," ಕಲ್ಲರ್, ಆ ಗ್ರಹವನ್ನು ತೋರಿಸುತ್ತಾ ಉದ್ಗರಿಸಿದ, "ಅವು ಆಹಾರವನ್ನು ಸೇವಿಸುವುದಾದರೂ ಹೇಗೆ ? ನಾಗರಿಕತೆಯನ್ನು ಕಟ್ಟಿ ಬೆಳೆಸಿದ್ದು ಹೇಗೆ ?"

"ದೈವ ಚೆನ್ನಾಗಿದ್ದರೆ ಸ್ವಲ್ಪ ಕಾಲದಲ್ಲೆ ಅದು ತಿಳಿದುಬರುವುದು ಕಣೋ."

ಕಾಲದ ಗತಿ ನಿಧಾನವಾಗಿತ್ತು. ಅವರು ಕೇಕ್‌ನ ಹಾಗೆ ಕಾಣುವ ದೊಡ್ಡ ಬಂಡೆಗಲ್ಲ ಮೇಲೆ ಕುಳಿತಿದ್ದರು. ಅದು ಯಾವುದೋ ಪುರಾತನ ಕಾಲದಲ್ಲಿ ಜ್ವಾಲಾಮುಖಿಯೊಂದು ಆಸ್ಫೋಟಿಸಿ ಅದರಿಂದ ಹೊರಹೊಮ್ಮಿದ ಲಾವಾರಸ ಘನೀಕೃತವಾದುದರಿಂದಾಗಿತ್ತೋ ಅಥವಾ ವಿಶ್ವದ ಯಾವುದೋ ಮೂಲೆಯಿಂದ ಉಲ್ಕೆಯೊಂದು ತೂರಿಕೊಂಡು ಬಂದು ಬಲವಾಗಿ ಆ ಭೂಮಿಗೆ ಅಪ್ಪಳಿಸಿದ್ದರಿಂದ ಇನ್ನೂ ಕೆನೆಯಂತೆ ಮೆತ್ತಗಾಗಿದ್ದ ಭೂಮಿಗೆ ಮೇಲ್ಪದರ ಹರಿದು ಒಳಗಿನ ಲಾವಾರಸ ಹೊರಚೆಲ್ಲಿದ್ದರಿಂದ ಹೀಗಾಗಿತ್ತೋ ದೇವರೇ ಬಲ್ಲ.

ಅಲ್ಲಿನ ವಾತಾವರಣದ ಉಷ್ಣತೆ ನಿರಪೇಕ್ಷ (Absolute) ಮೂವತ್ತು ಅಂಶಗಳಷ್ಟಿತ್ತು. ಗುರುತ್ವಶಕ್ತಿ ಭೂಮಿಗಿಂತಲೂ ಒಂದೂವರೆ ಪಟ್ಟು ಹೆಚ್ಚಾಗಿತ್ತು. ಇಂತಹ ಪರಿಸರವನ್ನು ಸಹಿಸುವ ತರಬೇತನ್ನು ಅವರಿಬ್ಬರಿಗೂ ಕೊಡಲಾಗಿದ್ದರೂ ಈ ವೇಳೆಗಾಗಲೆ ಅವರು ಆಯಾಸಗೊಂಡಿದ್ದರು.

ಬ್ರೋಕ್ ವಿಚಾರಮಗ್ನನಾಗಿದ್ದ. "ಏನಪ್ಪಾ, ಏನು ಯೋಚನೆ? ಏನು ನೆನೆಸಿಕೊಳ್ಳುತ್ತಿದ್ದೀಯಾ ನೀನು?" ಕಲ್ಲರ್ ಒಳ್ಳೆ ಆತ್ಮೀಯತೆಯಿಂದ ಕೇಳಿದಾಗ, "ಊಹೂಂ. ಏನೂ ಇಲ್ಲ ಬಿಡು." ಅಂದು ಬಿಟ್ಟ ಬ್ರೋಕ್. ಆದರೆ ಈ ಪ್ರಶ್ನೆ ಅವನ ಅಂತರ್ಯದಲ್ಲಿ ತುಮುಲವನ್ನೇ ಎಬ್ಬಿಸಿಬಿಟ್ಟಿತು. ಹೌದು, ತಾನೇನನ್ನು ನೆನೆಸಿಕೊಳ್ಳುತ್ತಿದ್ದೇನೆ? ಶಬ್ದಗಳನ್ನೆ? ವೈಜ್ಞಾನಿಕ ಸೂತ್ರಗಳನ್ನೆ? ಹೆಚ್ಚಿನ ತಾಂತ್ರಿಕ ಜ್ಞಾನಕ್ಕಾಗಿ ಅಂತರಿಕ್ಷದ ಆ ಅತಿಮಾನವರೊಂದಿಗೆ ನಡೆಸಲಿರುವ ಸಂಧಾನದ ಪಟ್ಟುಗಳನ್ನೆ? ಮಂತ್ರಾಕ್ಷದನ್ನು? ಅಂದಹಾಗೆ ಕಲ್ಲರ್- ಯಾರು ಈ ಕಲ್ಲರ್? ಇವನು ತುಂಬಾ ಒಳ್ಳೆಯವನು, ಸಹೃದಯಿ, ಇತರರಿಗೆ ಉಪಕಾರ ಮಾಡುವ ಸ್ವಭಾವದವನು. ಅದೆಲ್ಲ ಸರಿ. ಆದರೆ ಯಾರೀತ?


ಈ ವಿಚಾರ ಬಂದ ಕೂಡಲೆ ಬ್ರೋಕ್ ದಿಗ್ಭ್ರಾಂತನಾದ. ಹೌದು ಒಂದು ವಿಧದಲ್ಲಿ ಆತ ತನಗೆ ಅಪರಿಚಿತನೇ. ಆದರೆ ತಾನು? ತಾನು ಯಾರು? ತನ್ನ ಪರಿಚಯ ತನಗೆ ಸಾಕಷ್ಟಿದೆಯೆ? ತನ್ನ ಮನೆಯೆಲ್ಲಿ? ಮಿತ್ರರೆಲ್ಲಿ? ಕುಟುಂಬವೆಲ್ಲಿ?

ಒಮ್ಮೆಲೆ ಕಾಲ ಕೆಳಗಿನ ನೆಲ ಸರಿದು ಹೋದಂತಾಯಿತು. ತಲೆ ಸುತ್ತುತ್ತೊಡಗಿ ಬವಳಿ ಬಂದಂತಾಯಿತು. ಎರಡೂ ಕೈಗಳಿಂದ ಪ್ರಯಾಸಪಟ್ಟು ತಾನು ಕುಳಿತ ಬಂಡೆಗಲ್ಲನ್ನು ಅದುಮಿ ಹಿಡಿದು ಕೆಳಗೆ ಬೀಳುವುದನ್ನು ತಪ್ಪಿಸಿಕೊಂಡ.

"ಏನಾಗುತ್ತಿದೆ ನಿನಗೆ?" ಏದುಬ್ಬಸ ಪಡುತ್ತಿದ್ದೀಯಾ. ತ್ರಾಸವಾಗುತ್ತಿದೆಯೆ?" ಕಲ್ಲರ್ ದೂರದಿಂದಲೆ ಕೇಳಿದ.

ತ್ರಾಸವಾಗುತ್ತಿದ್ದರೂ ಅದನ್ನು ಸುಮ್ಮನೆ ಏಕೆ ತೋರ್ಪಡಿಸಿಕೊಳ್ಳಬೇಕು? ಹೇಗೂ ಹೊಸ ಪರಿಸರಕ್ಕೆ ಶರೀರ ತಾನಾಗಿಯೆ ಒಗ್ಗಿಕೊಳ್ಳುತ್ತದಲ್ಲ ಅಂದುಕೊಂಡ ಬ್ರೋಕ್, "ಊಹೂಂ. ಹಾಗೇನೂ ಇಲ್ಲ," ಎಂದು ಉತ್ತರಿಸಿದ.

"ನೋಡು, ಪೃಥ್ವಿಯ ಸಂಪರ್ಕ ಈಗ ಸಂಪೂರ್ಣವಾಗಿ ತಪ್ಪಿಹೋಗಿದೆಯೆನ್ನುವುದು ನಿನ್ನ ಲಕ್ಷ್ಯಕ್ಕೆ ಬಂದಿದೆಯೆ? ಹಳೆಯ ಸ್ಮೃತಿ



ಗಳು ಸ್ವಲ್ಪ ಸ್ವಲ್ಪವಾಗಿ ಮರುಕಳಿಸುತ್ತಿವೆ. ಅಂದಹಾಗೆ ಪೃಥ್ವಿಯ ಮೇಲಿದ್ದಾಗ, ಈ ಯಾನ ಕೈಕೊಳ್ಳುವ ಕಾಲ ಯಾವಾಗ ಬರುತ್ತದಪ್ಪಾ ಎಂದು ಉತ್ಸುಕರಾಗಿದ್ದುದು ನೆನಪಿನಲ್ಲಿದೆಯೆ ನಿನಗೆ ?" ಕಲ್ಲರ್ ಕೇಳಿದ.

ಬ್ರೋಕ್‌ನಿಗೆ ಅದು ಚೆನ್ನಾಗಿ ನೆನಪಿನಲ್ಲಿತ್ತು. ನಿಜ ಹೇಳಬೇಕೆಂದರೆ ಈ ಸಾಹಸಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಳ್ಳಲು ಮುಂದೆ ಬಂದವರೂ ಇವರೇ. ಇದನ್ನೊಂದನ್ನು ಬಿಟ್ಟರೆ ಅವನ ಸ್ಮೃತಿಪಟಲದ ಮೇಲೆ ಮತ್ತಾವ ಚಿತ್ರವೂ ಮೂಡುತ್ತಿರಲಿಲ್ಲ. ಬ್ರೋಕ್ ಅವನ್ನು ಮೂಡಿಸಿಕೊಳ್ಳಲೆತ್ನಿಸಿದ, ಆದರೆ ಪ್ರಯೋಜನವಾಗಲಿಲ್ಲ. ಬದಲು ಹಣೆಯ ಮೇಲೆ ಬೆವರಿನ ಹನಿಗಳು ಕಾಣಿಸಿಕೊಂಡವು. ತನ್ನ ಪಾಲಿಗೆ ಭೂತಕಾಲ ಸತ್ತುಹೋದಂತೆ ಅವನಿಗನಿಸಿತು.

"ಪೃಥ್ವಿಯ ಇತಿಹಾಸದಲ್ಲೆ ಮೊದಲ ಸಲ ಅಮಾನವಿಕವಾದ ಬುದ್ಧಿಜೀವಿಗಳನ್ನು ನಾವಿಬ್ಬರೂ ಕಾಣಲಿದ್ದೇವೆ, ಎಂಥ ಅನುಭವ!"

"ಹೌದು, ಹೌದು ನೀನು ಹೇಳುವುದು ಸರಿ." ಬ್ರೋಕ್ ಗಟ್ಟಿಯಾಗಿ ಉತ್ತರಿಸಿದ. ಕಲ್ಲರನ ಮಾತುಗಳಿಂದ ಅವನಲ್ಲಿದ್ದ ಉದ್ವಿಗ್ನತೆ ಕೊಂಚ ಕಡಿಮೆಯಾದಂತೆನಿಸಿತು. ಕಪ್ಪು ಗ್ರಹದಿಂದ ತೂರಿಬರುವ ರೇಡಿಯೋ ಸಂಕೇತಗಳತ್ತ ತನ್ನೆಲ್ಲ ಲಕ್ಷ್ಯವನ್ನೂ ಬ್ರೋಕ್ ಕೇಂದ್ರಿಕರಿಸಿದ.

ಆ ಅತಿಮಾನವ ಜೀವಿಗಳ ಸಂಪರ್ಕದಲ್ಲಿ ಬಂದಾಗ ಹೇಗೆ ವರ್ತಿಸಬೇಕೆಂಬುದನ್ನು ಅವರಿಗೆ ಪೃಥ್ವಿಯ ಮೇಲೆ ಕಲಿಸಿಕೊಡಲಾಗಿತ್ತು. ಅವರು ಕಲಿತ ಮೊದಲ ಪಾಠವೆಂದರೆ ಆ ಜೀವಿಗಳೊಡನೆ ಕೊಂಚ ಜಾಗ್ರತೆಯಿಂದ ವರ್ತಿಸಬೇಕು ಎಂದು. ಇದು ಬ್ರೋಕ್‌ನ ಗಮನಕ್ಕೆ ಬಂದಾಗ, 'ಛೇ, ಛೇ ನಾನು ಅಂದುಕೊಂಡ ಹಾಗೆ ಭೂತಕಾಲವೆಲ್ಲವೂ ನನ್ನ ಪಾಲಿಗೆ ಸತ್ತುಹೋಗಿಲ್ಲ. ಸತ್ತುಹೋಗಿದ್ದು ಆ ಭೂತಕಾಲದ ಒಂದು ಅಂಶ ಮಾತ್ರ,' ಎಂದು ತನ್ನಷ್ಟಕ್ಕೆ ತಾನೆ ಅಂದುಕೊಂಡ.

"ನೋಡಯ್ಯ, ಆ ಜೀವಿಗಳ ಸಂಪರ್ಕದಲ್ಲಿ ಬಂದಾಗ ಸ್ವಲ್ಪ ಜಾಗ್ರತೆಯಿಂದ ವರ್ತಿಸಬೇಕು. ನಮ್ಮ ಬಗ್ಗೆ ಅವುಗಳಿಗೆ ಸದ್ಭಾವನೆಯಿದೆ ಎಂದು ಹೇಳುವಹಾಗಿಲ್ಲ," ಕಲ್ಲರ್ ಬ್ರೋಕ್‌ಗೆ ಉಪದೇಶಿಸಿದ.

ಈ ಮಾತು ಬ್ರೋಕ್‌ನ ಮನಸ್ಸಿಗೆ ಬರಲಿಲ್ಲ. ಆತ ಕಲ್ಲರ್ ಹೇಳಿದ್ದನ್ನು ವಿರೋಧಿಸುತ್ತಾ ಹೇಳಿದ" "ಅಷ್ಟು ನಾಗರಿಕತೆಯನ್ನು ಹೊಂದಿದ ಆ ಜೀವಿಗಳಲ್ಲಿ ವಿನಾಶಕರ ಪ್ರವೃತ್ತಿಯಿರುವುದು ಸಾಧ್ಯವೇ ಇಲ್ಲ. ಇಂಥಾ ಪ್ರವೃತ್ತಿ ಕೊನೆಗೆ ಎಲ್ಲರಿಗೂ ಮಾರಕವಾಗಬಹುದೆಂಬುದು ಅವುಗಳಿಗೆ ಗೊತ್ತಿರಲಾರದೇನು?"

"ಅಯ್ಯೋ ಭೂಪ, ತಾತ್ವಿಕ ವಿಚಾರ ಬೇರೆ, ವಾಸ್ತವಿಕತೆ ಬೇರೆ. ನೀನು ಹೇಳಿದಂತೆಯೆ ಅವು ಇದ್ದರೆ ಪರವಾಯಿಲ್ಲ. ಒಂದು ವೇಳೆ ಇಲ್ಲದಿದ್ದರೆ?"

ಕಲ್ಲರನ ವಿಚಾರವೀಗ ಬ್ರೋಕ್‌ನಿಗೆ ಅಪ್ಯಾಯಮಾನವಾಗಿ ಕಂಡಿತು. ನೀನು ಹೇಳುವುದು ಸರಿ. ಅವು ವಿನಾಶಕರ ಪ್ರವೃತ್ತಿಯನ್ನು ಹೊಂದಿವೆಯೋ ಇಲ್ಲವೋ ಯಾರಿಗೆ ಗೊತ್ತು?" ಎಂದು ಅವನ ಮಾತನ್ನು ಒಪ್ಪಿಕೊಂಡ.

ಮತ್ತೆ ಸ್ಮಶಾನಮೌನ. ಆಕಾಶದಲ್ಲಿ ಮಂದಪ್ರಕಾಶ ಹರಡಿಕೊಂಡಿತ್ತು. ತಾರೆಗಳು ಪ್ರಕಾಶದ ಬಿಂದುಗಳಾಗಿ ಕಾಣುತ್ತಿದ್ದವೇ ವಿನಾ ಮಿನುಗುತ್ತಿರಲಿಲ್ಲ. ಕಲ್ಲರ್ ತಾನು ಕುಳಿತಲ್ಲಿಂದ ಎದ್ದು ಕಾಲಬುಡದಲ್ಲಿದ್ದ ಒಂದೆರಡು ಕಲ್ಲಿನ ತುಣುಕುಗಳನ್ನು ತೆಗೆದುಕೊಂಡ. ಅವನ್ನು ಸೂಕ್ಷ್ಮವಾಗಿ ವೀಕ್ಷಿಸಿದವನೆ, "ಜೀವಿಗಳ ಅಸ್ತಿತ್ವದ ಕುರುಹೂ ಇಲ್ಲ, ಏನೂ ಇಲ್ಲ. ಬರಿ ಕರಿ ಕಲ್ಲು, ಅಗ್ನಿಜನ್ಯ ಶಿಲೆ. ಇದನ್ನು ನೋಡಿದರೆ ಇಲ್ಲಿ ಒಂದು ಕಾಲದಲ್ಲಿ ಸಾಗರವಿದ್ದಂತೆ ಕಾಣುತ್ತೆ. ಆದರೆ ನೀರಿನ ಸಾಗರವಲ್ಲ. ಲಾವಾರಸದ ಸಾಗರ," ಎಂದ.

ಅಂದಹಾಗೆ ಆ ಅತಿಮಾನವ ಜೀವಿಗಳು ಹೇಗಿರಬಹುದು ?"

ಯಾರಿಗೆ ಗೊತ್ತು? ಆದರೆ, ಅಲ್ಲಿ ಪೃಥ್ವಿಯ ಐದುಪಟ್ಟು ಗುರುತ್ವ ಶಕ್ತಿಯಿರುವುದರಿಂದ ಅವುಗಳು ನಮ್ಮ ಹಾಗೆ ನೇರವಾಗಿ ನಡೆಯಲು ಸಾಧ್ಯವೇ ಇಲ್ಲ. ಶರೀರದ ಪ್ರತಿ ಕಣವನ್ನೂ ಗುರುತ್ವ ಆಕರ್ಷಿಸುತ್ತಿರುವುದರಿಂದ ಆ ಜೀವಿ

ಗಳು ಕುಳ್ಳಗೆ ದಪ್ಪವಾಗಿದ್ದು ನೆಲದ ಮೇಲೆ ತೆವಳಿಕೊಂಡೆ ನಡೆಯುತ್ತಿರಬೇಕು."

ಅವುಗಳ ಶರೀರ ರಚನೆ ಯಾವುದರಿಂದಾಗಿರಬಹುದು ? ಗ್ರಹ ವಿಕಿರಣಮಯವಾಗಿರುವುದರಿಂದ ನಮ್ಮ ಶರೀರದಂತೆ ಕಾರ್ಬನ್ ಮೂಲದ್ದಾಗಿರಲಿಕ್ಕಿಲ್ಲ. ಅಲ್ಲಿ ಸೂರ್ಯಪ್ರಕಾಶವೆ ಇಲ್ಲವೆಂದಮೇಲೆ ಅವು ನಡೆದಾಡುವಾಗ ಹೇಗೆ ದಾರಿಯನ್ನು ಗುರುತಿಸಿಕೊಳ್ಳುತ್ತವೆ? ತೊಗಲಬಾವಲಿಗಳ ಹಾಗೆ ಅವು ಧ್ವನಿತರಂಗಗಳನ್ನನುಸರಿಸಿ ನಡೆಯುತ್ತಿರಬೇಕು."

"ನೀನು ಹೇಳಿದ್ದು ಒಂದು ವೇಳೆ ನಿಜವಾದದ್ದೆ ಆದರೆ ನಮ್ಮ ಇಂದ್ರಿಯಗಳಿಗಿಂತಲೂ ಅವುಗಳ ಇಂದ್ರಿಯಗಳು ಭಿನ್ನವಾಗಿರಬೇಕು. ಕಲ್ಪನೆಯಾಗಲಿ ಜೀವಿಗಳಿಗೆ ಲಭ್ಯವಾದ ಜ್ಞಾನವಾಗಲಿ ಬಹುತರವಾಗಿ ಇಂದ್ರಿಯಗಮ್ಯವಾಗಿರುವುದರಿಂದ ಅವುಗಳ ವೈಚಾರಿಕ ಜಗತ್ತೂ ಭಿನ್ನವಾಗಿರಬಹುದು ಅರ್ಥಾತ್ ನಮಗೂ ಅವುಗಳಿಗೂ ನಡುವೆ ಸಂಪರ್ಕ ಮಾಧ್ಯಮವನ್ನು ಕಂಡುಕೊಳ್ಳಲು ಸಾಧ್ಯವಾಗಲಿಕ್ಕೇ ಇಲ್ಲ."

"ಅದು ಹೇಗೆ ಹೇಳುತ್ತೀ? ಇದುವರೆಗೆ ನಾವು ಅವರೊಂದಿಗೆ ನಡೆಸಿದ ಸಂಭಾಷಣೆಯಲ್ಲಿ ಕೇವಲ ಗಣಿತದ ಹಾಗೂ ಭೌತಶಾಸ್ತ್ರದ ಸೂತ್ರಗಳನ್ನೆ ಭಾಷೆಯ ಮಾಧ್ಯಮವಾಗಿ ಬಳಸುತ್ತಾ ಬಂದಿದ್ದರೂ ಆ ಅತಿಮಾನವ ಜೀವಿಗಳಿಂದ ಎಷ್ಟೊಂದು ಪಾಠಗಳನ್ನು ಕಲಿತಿಲ್ಲ? ಉದಾಹರಣೆಗೆ ಗುರುತ್ವವು ವೇಳೆಯ ಚಲನ ಪರಿಣಾಮವನ್ನನುಸರಿಸುತ್ತದೆಂಬುದನ್ನು ನಾವು ಅರಿತದ್ದು ಅವುಗಳಿಂದಲೇ ಅಲ್ಲವೆ? ಅಲ್ಲದೆ ಸಾಪೇಕ್ಷವಾದದ ಇನ್ನೊಂದು ಮುಖವನ್ನು ನಾವು ಅರಿತದ್ದು ಅವುಗಳಿಂದಲೇ ಅಲ್ಲವೆ ?"

"ಅದಕ್ಕೂ ಮಹತ್ವದ್ದೆಂದರೆ ಅವುಗಳು ನಮ್ಮೊಂದಿಗೆ ಎಷ್ಟೋ ಸಲ ಸಂಪರ್ಕ ಬೆಳೆಸಿ ಒಂದು ಸಲವಾದರೂ ನೀರನ್ನಾಗಲಿ ಅಮೋನಿಯಮನ್ನಾಗಲಿ ಮಿಥೇನನ್ನಾಗಲಿ ಉಲ್ಲೇಖಿಸಲಿಲ್ಲವೆನ್ನುವುದು. ಬಹುಶಃ ಆ ಜೀವಿಗಳು ಘನ ಭೌತಶಾಸ್ತ್ರದಲ್ಲಿ ಮಾತ್ರ ಪರಿಣತವಾಗಿವೆ ಅಂತ ಕಾಣುತ್ತೆ."

ಅಲ್ಲಿ ಗುರುತ್ವಶಕ್ತಿ ಪೃಥ್ವಿಗಿಂತ ಹೆಚ್ಚಾಗಿದ್ದುದರಿಂದ ಮೈಭಾರ ಹೆಚ್ಚಾಗಿ ಒಂದೆಡೆ ಕೂಡುವುದಕ್ಕಿಂತ ನಡೆದಾಡುವುದೇ ಒಳ್ಳೆಯದೆನಿಸಿತವರಿಗೆ. ಬ್ರೋಕ್, ಕಲ್ಲರ್ ಇಬ್ಬರೂ ಎದ್ದು ಒಂದು ಬಾರಿ ಮೈಮುರಿದು ಆಕಳಿಸಿದರು.

"ಅವುಗಳ ಸಾಮಾಜಿಕ ವ್ಯವಸ್ಥೆ ಹೇಗಿರುತ್ತದೆಂದು ತಿಳಿದುಕೊಳ್ಳುವುದೂ ಬೇಕಾಗಿರುತ್ತೆ ನೋಡು," ಬ್ರೋಕ್ ಹೇಳಿದ.

ಹೌದು ಅದೆಲ್ಲ ಸರಿ. ಆದರೆ ಅಪರಿಚಿತರೊಂದಿಗೆ ಅವುಗಳು ಯಾವ ರೀತಿಯಲ್ಲಿ ನಡೆದುಕೊಳ್ಳಬಹುದೆಂಬುದನ್ನು ನಿಖರವಾಗಿ ಹೇಳುವುದು. ಕಠಿಣವೇ ಸರಿ. ಅವುಗಳು ತುಂಬಾ ಬುದ್ಧಿವಂತ ಜೀವಿಗಳೆನ್ನುವುದು ನಿಜವೇ. ಆದರೆ ಬುದ್ಧಿಗೂ ಭಾವನೆಗೂ ವ್ಯತ್ಯಾಸವಿದೆಯಲ್ಲ ಎಂಬ ವಿಚಾರ ಬ್ರೋಕ್‌ನಿಗೆ ಬಂದಾಗ ಮನ ಚಡಪಡಿಸಿತು.

ಕಲ್ಲರ್ ಎದ್ದು ಅತಿಮಾನವ ಜೀವಿಗಳೊಡನೆ ಏರ್ಪಡಿಸಿದ ಸಂಪರ್ಕ ಸಾಧನದತ್ತ ನಡೆದುಕೊಂಡು ಹೋದ. ವೋಲ್ಟೇಜು ಸರಿಯಾಗಿತ್ತು. ಟ್ರಾನ್ಸ್‌ಮಿಷನ್ ಸ್ವಿಚ್ಚನ್ನು ಒತ್ತಿ ಹೆಡ್‌ಫೋನನ್ನು ಧರಿಸಿದಾಗ ರೊಯ್ ಎಂಬ ಸಪ್ಪಳ ಕೇಳಿ ಬಂತು. ಅದರೊಟ್ಟಿಗೆ ಹಿಮ್ಮೇಳದಲ್ಲಿ ಮಾನವ ಸ್ವರವೂ ಕೇಳಿ ಬಂತು. ಸ್ಪೀಚ್ ಟ್ರಾನ್ಸ್‌ಫಾರ್ಮರನ್ನು ಇನ್ನೂ ಸರಿಯಾಗಿಟ್ಟಿಲ್ಲವಾದ್ದರಿಂದ ಅದು ಮಾನವಸ್ವರವೆನ್ನುವುದು ಬರೀ ಭ್ರಮೆಯೆಂದು ತಿಳಿದು ಬರಲು ಅವನಿಗೆ ತಡವಾಗಲಿಲ್ಲ. ಸ್ಪೀಚ್ ಟ್ರಾನ್ಸ್‌ಫಾರ್ಮರನ್ನು ಸರಿಗೊಳಿಸಿದಾಗ ಕರ್ಕಶ ಸ್ವರ ಕೇಳತೊಡಗಿ ಆತ ಬೇಸರದಿಂದ ಸ್ವಿಚ್ಚನ್ನು ಅದುಮಿದ.

ಅತಿಮಾನವ ಜೀವಿಗಳು ಬರುವ ವೇಳೆ ಸಮೀಪಿಸುತ್ತಿತ್ತು. ಅವರು ನಿಂತಲ್ಲಿಂದ ಐನೂರು ಗಜ ದೂರದಲ್ಲಿ ಗಗನ ನೌಕೆ ಇಳಿಯುವುದೆಂದು ಈ ಮೊದಲೆ ನಿಶ್ಚಯಿಸಲಾಗಿತ್ತು. ಅಲ್ಲಿ ಎಲ್ಲೆಡೆಯಲ್ಲಿ ಕೆಂಪು ಬಣ್ಣದ ಪ್ರಕಾಶ ಮಂದವಾಗಿ ಹರಡಿಕೊಂಡಿತ್ತು. ಗಗನನೌಕೆಯಿಳಿದ ಕೂಡಲೆ ಆ ಅತಿಮಾನವ ಜೀವಿಗಳು ರೇಡಿಯೋ ಸಿಗ್ನಲ್ ಕಳಿಸಿ ತಮ್ಮನ್ನು ಆಮಂತ್ರಿಸಬಹುದು. ಆದರೆ ಇಂಥ ಮಂದ ಪ್ರಕಾಶದಲ್ಲಿ

ಗಗನ ನೌಕೆ ಇಳಿಯುವುದನ್ನು ಕಾಣುವುದು ಹೇಗೆ ? ಅದರ ಬದಲು ಹಿಂದೆ ಇರುವ ಕಿರಿದಾದ ಗುಡ್ಡವನ್ನೇರಿದರೆ ಚೆನ್ನಲ್ಲವೆ ? ಎಂದು ಬ್ರೋಕ್ ಸೂಚಿಸಿದಾಗ ಕೆಲ್ಲರ್ ಮಾರುಮಾತಿಲ್ಲದೆ ಒಪ್ಪಿಕೊಂಡ.

ದಾರಿಯಲ್ಲಿದ್ದ ತಗ್ಗುಗಳನ್ನು ಬಿರುಕುಗಳನ್ನು ದಾಟಿಕೊಂಡು ಗುಡ್ಡವನ್ನು ಸಮೀಪಿಸಿ ಅದನ್ನೇರುವುದು ಅವರಿಗೆ ಕೊಂಚ ಶ್ರಮದಾಯಕವಾದರೂ ಗಗನನೌಕೆ ಗೋಚರಿಸುವುದಕ್ಕಿಂತ ಮೊದಲೇ ನಿಶ್ಚಿತ ಸ್ಥಳವನ್ನು ಸೇರಿದ ಆನಂದದಲ್ಲಿ ಶ್ರಮ ತಂತಾನೆ ಪರಿಹಾರಗೊಂಡಿತ್ತು.

ದೂರದಲ್ಲಿ ಗಗನನೌಕೆಯಿಳಿಯುವ ಸ್ಥಾನ ಸುಸ್ಪಷ್ಟವಾಗಿ ಗೋಚರಿಸುತ್ತಿತ್ತು. ಆ ಸ್ಥಳದ ಹಿಂದೆಯೆ ಪರ್ವತಶ್ರೇಣಿ. ನೋಡಲು ಕರಗಸದಂತೆ ಕಾಣುತ್ತಿತ್ತು. ದೃಶ್ಯ ಬಹು ಆಪ್ಯಾಯಮಾನವಾಗಿತ್ತು.

"ಏನಪ್ಪಾ, ನೋಡಿಲ್ಲಿ, ಅದು ಏನು ಅಂತ," ಕೆಲ್ಲರ್ ಒಮ್ಮಿಂದೊಮ್ಮೆಲೆ ಕೂಗಿ, ಬದಿಯಲ್ಲೆ ನೆಲದಲ್ಲಿ ಹೂಳಿದ್ದ ಕಬ್ಬಿಣದ ಪೆಟ್ಟಿಗೆಯನ್ನು ತೋರಿಸಿದ. ಆ ಪೆಟ್ಟಿಗೆಯನ್ನಿಟ್ಟ ಸ್ಥಳ ಇಳುಕಲಾಗಿತ್ತು. ಪೆಟ್ಟಿಗೆಯಿಂದ ಹೊರಟ ಪೈಪು ಇಳುಕಲಿನ ಗುಂಟಾ ಸಾಗಿತ್ತು.

"ಹೌದು, ಏನದು ?" ಬ್ರೋಕ್ ಕೇಳಿದ. ಅದು ಏನೆಂದು ಇಬ್ಬರಿಗೂ ಅರ್ಥವಾಗಲಿಲ್ಲ. ಆದರೆ ಆ ಪೈಪಿನತ್ತ ನೋಡಿದಾಗ ಅದು ಗಗನನೌಕೆ ಇಳಿಯಬೇಕಾಗಿದ್ದ ಸ್ಥಳದ ಕಡೆಗೆ ಸಾಗಿದ್ದು ಕಂಡು ಬಂತು.

ಅಷ್ಟರಲ್ಲಿ ಸುದೂರ ಆಕಾಶದಲ್ಲಿ ಏನೋ ಕೆಳಗಿಳಿಯುತ್ತಿದ್ದಂತೆ ಕಾಣಿಸಿತು. ಕೆಲ್ಲರ್ ಗಡಿಯಾರ ನೋಡಿಕೊಂಡು, "ವೇಳೆಗೆ ಸರಿಯಾಗಿ ಅವರು ಬರುತ್ತಿದ್ದಾರೆ ಕಣೋ" ಎಂದ.

ನೋಡಲು ಬಹು ವಿಕಾರವಾದ ಗಗನನೌಕೆಯೊಂದು ಆಕಾಶವನ್ನು ಭೇದಿಸುತ್ತಾ ಸಾವಕಾಶವಾಗಿ ಇಳಿಯುತ್ತಿತ್ತು. ಕೂಡಲೆ ಬ್ರೋಕ್ ಕೆಲ್ಲರ್ ಇಬ್ಬರೂ ಟ್ರಾನ್ಸ್‌ಮೀಟರಿನ ಬಳಿ ಹೋಗಿ ಸ್ವಿಚ್ಚನ್ನು ಒತ್ತಿದರು.

"ನಾವಿನ್ನು ಐದು ನಿಮಿಷಗಳಲ್ಲಿ ಕೆಳಗಿಳಿಯುತ್ತೇವೆ. ಅಂದರೆ ಸರಿಯಾಗಿ ನಾಲ್ಕು ನಿಮಿಷ ಐವತ್ತು ಸೆಕೆಂಡುಗಳಲ್ಲಿ" ಆಚೆ ಬದಿಯಿಂದ ಸಂದೇಶ ಬಂತು.

"ಆಗಲಿ ನಿಮಗಾಗಿ ನಾವು ಕಾಯುತ್ತಿರುತ್ತೇವೆ," ಬ್ರೋಕ್ ಉತ್ತರಿಸಿದ.

ಈ ವೇಳೆಗಾಗಲೆ ಅದು ಕೆಳಗಿಳಿದಿತ್ತು. ಆದರೆ ಭೂಮಿಯನ್ನು ಮುಟ್ಟದೆ ಸ್ವಲ್ಪ ಅಂತರದ ಮೇಲೆ ನಿಶ್ಚಲವಾಗಿ ನಿಂತುಕೊಂಡಿತ್ತು.

"ಈಗ ಕೆಳಗಿಳಿದಿದ್ದೇವೆ. ನಮ್ಮನ್ನು ನೀವು ಭೇಟಿಯಾಗಬಹುದು. ಭೇಟಿಯಾದರೆ ತುಂಬಾ ಸಂತೋಷ." ಗಗನನೌಕೆಯಿಂದ ಮತ್ತೊಂದು ಸಂದೇಶ ಬಂತು.

ಅಗ್ನಿಪರೀಕ್ಷೆಯ ಕಾಲ ಸನ್ನಿಹಿತವಾಯಿತು. ಅವರಿಬ್ಬರೂ ಅಂಜುತ್ತಂಜುತ್ತಲೆ ಗಗನನೌಕೆಯತ್ತ ಸಾಗಿ ಸುಮಾರು ನೂರು ಗಜಗಳಷ್ಟು ಅಂತರದಲ್ಲಿ ನಿಂತಾಗ, "ನೀವು ಬರಲು ಈಗಲೆ ವ್ಯವಸ್ಥೆ ಮಾಡುತ್ತೇವೆ" ಎಂಬ ಸಂದೇಶ ಬಂತು. ಒಳಗೆ ಹೋದರೆ ಮುಂದೇನು ಗತಿ ? ಆ ಲೋಕದ ಪರಿಸರವನ್ನು ತಾಳಿಕೊಳ್ಳುವುದು ತಮ್ಮಿಂದಾದೀತೆ ? ಇಲ್ಲಿಯವರೆಗಂತೂ ಆ ಜೀವಿಗಳು ತಮ್ಮೊಂದಿಗೆ ಚೆನ್ನಾಗಿಯೆ ವರ್ತಿಸಿವೆ. ಆದರೆ ಅವುಗಳ ಕೈಲಿ ಸಿಕ್ಕಿ ಬಿದ್ದಾಗ ಅವು ಹೀಗೆಯೇ ವರ್ತಿಸುವುದೆಂಬುದೇನು ಖಾತ್ರಿ ? ಎಂಬ ವಿಚಾರ ಬಂದಾಗ ಮೈ ನಡುಗಿತು. ಆದರೆ ಇಷ್ಟೆಲ್ಲಾ ಕಷ್ಟ ಪಟ್ಟು ಈ ವರೆಗೆ ಬಂದಾಗ ಹಿಂದೇಟು ಹಾಕುವುದು ಹೇಗೆ ? ಹಾಕಿದರೆ ಆ ಅತಿಮಾನವ ಜೀವಿಗಳು ತಮ್ಮನ್ನು ಹಾಗೆಯೆ ಬಿಟ್ಟಾರೆಯೆ ? ಎಂದುಕೊಂಡು ಅವರು ಆ ಗಗನನೌಕೆಯನ್ನು ಒಳಸೇರಲು ನಿಶ್ಚಯಿಸಿದರು. ಗಗನನೌಕೆಯು ಸುತ್ತ ಬಲೆಯ ಹಾಗೆ ಏನೋ ಅಗಲವಾಗಿ ಪಸರಿಸತೊಡಗಿತು. "ನೀವು ಬಲೆಯನ್ನೇರಿ ಬನ್ನಿ. ನಾವು ಬಾಗಿಲು ತೆಗೆಯುತ್ತೇವೆ." ಎಂಬ ಸಂದೇಶ ಬಂದಾಗ ಕೆಲ್ಲರ್ ಹಾಗೂ ಬ್ರೋಕ್ ಅನುಮಾನಿಸುತ್ತಾ ಬಲೆಯ ಮೇಲೇರಿ ನಿಂತರು.

ಏನೋ ಸ್ವಲ್ಪ ಅಸ್ವಸ್ಥವೆನಿಸಿದಂತಾದಾಗ ತಮ್ಮ ಸ್ಪೇಸ್ ಸೂಟಿನಲ್ಲಿ ಅಳವಡಿಸಿದ್ದ ಗೈಗರ್ ಕೌಂಟರಿನತ್ತ ನೋಡಿದರು. ಅದರ ಮುಳ್ಳು ಹುಚ್ಚುಹಿಡಿದಂತೆ ತುಯ್ದಾಡುತ್ತಿತ್ತು. ಕೆಲ್ಲರ್, ಬ್ರೋಕ್‌ರ ಎದೆ ಡವಡವ ಬಡಿದುಕೊಳ್ಳತೊಡಗಿತು. ಅವರು ಅನುಮಾನಿಸಿದ್ದು ನಿಜವಾಗಿತ್ತು. ಅವರಿಬ್ಬರೂ ಅಣುವಿಕಿರಣಕ್ಕೊಳಗಾಗಿದ್ದರು. ಇಂಥ ಪ್ರಸಂಗದಲ್ಲಿ ರಕ್ಷಣೆಗೆಂದು ಸ್ಪೇಸ್ ಸೂಟಿನ ಒಳಭಾಗದಲ್ಲಿ ಸೀಸದ ಆವರಣವನ್ನು ಜೋಡಿಸಿದ್ದು ಒಳ್ಳೆಯದೇ ಆಯಿತು. ಆದರೆ ಮಾನವ ಶರೀರ ಈ ಪ್ರಮಾಣದ ಅಣುವಿಕಿರಣವನ್ನು ಎಷ್ಟು ಕಾಲ ತಡೆದುಕೊಂಡೀತು ? ಬಹಳವೆಂದರೆ ಒಂದು ನಿಮಿಷ, ಇಲ್ಲವಾದರೆ ಎರಡು ನಿಮಿಷ. ಅನಂತರ ಪ್ರಾಣ ಹೋಗುವುದು ನಿಶ್ಚಿತವಾಗಿತ್ತು.

ಸ್ಪೇಸ್ ಸೂಟಿನ ಹಿಂದೆ ಒಂದು ಗುಂಡಿಯನ್ನು ಅಳವಡಿಸಲಾಗಿದ್ದು ಅದನ್ನೊತ್ತಿದರೆ ಸೂಟಿನಲ್ಲಿ ಅಡಗಿಸಲಾದ ಬಾಂಬುಗಳು ಎಂತೆಂತಹ ಜೀವಿಗಳನ್ನು ಧ್ವಂಸಗೊಳಿಸಬಲ್ಲವೆಂದು ಅವರಿಗೆ ಪೃಥ್ವಿಯ ಮೇಲೆ ಹೇಳಿಕೊಡಲಾಗಿತ್ತು. ಆ ಗುಂಡಿಯನ್ನೊಮ್ಮೆ ಒತ್ತಿಬಿಡಲೆ ? ಎಂದು ಬ್ರೋಕ್ ಯೋಚಿಸಿದ. ಹಾಗೆ ಮಾಡುವುದು ಇಂತಹ ಪ್ರಸಂಗದಲ್ಲಿ ತರವಲ್ಲವೆಂಬುದು ಅರಿವಾಗಿ, ಆತ ಅಣುವಿಕಿರಣವನ್ನು ತಡೆಯುವಂತೆ ಗಗನನೌಕೆಯಲ್ಲಿದ್ದ ಜೀವಿಗಳಿಗೆ ಸೂಚಿಸಿದ.

ತಡೆಯದಿದ್ದರೆ ? ಹತ್ತು ಸೆಕೆಂಡು ಕಾದು ಗುಂಡಿಯೊತ್ತಿ ಬಾಂಬು ಹಾರಿಸಿಬಿಡಬೇಕು ಅಂದುಕೊಂಡ. ಆದರೆ ಸುದೈವದಿಂದ ಕೂಡಲೆ ಅಣುವಿಕಿರಣ ಬರುವುದು ನಿಂತಿತು. ಗೈಗರ್ ಕೌಂಟರಿನ ಮುಳ್ಳು ನಿಶ್ಚಲವಾಯಿತು. ಗಗನನೌಕೆಯ ಜೀವಿಗಳು ಅಪಾಯಕರವಲ್ಲ, ಹೀಗೆ ತಪ್ಪು ಕಲ್ಪನೆಯಿಂದಾಗಿ ಈ ಅವಾಂತರ ನಡೆದುಹೋಯಿತೆಂಬುದು ಅವು ಕಳಿಸಿದ ಸಂದೇಶದಿಂದ ತಿಳಿದು ಬಂತು. ಪಾಪ ಅಣುವಿಕಿರಣ ಮಾನವರಿಗೆ ಮಾರಕವಾಗಬಹುದೆಂದು ಅವುಗಳಿಗೇನು ಗೊತ್ತು ?

ತಪ್ಪು ಕಲ್ಪನೆಗಳಿಂದ ಇಂಥಾ ಘಟನೆಗಳು ಹೀಗೆಯೇ ಘಟಿಸುತ್ತಾ ಹೋದರೆ ತಮ್ಮ ಗತಿ ಏನು ? ಎಂದು ಅವರಿಬ್ಬರೂ ಆಲೋಚಿಸುತ್ತಾ ಗಗನನೌಕೆಯತ್ತ ಹೋಗುತ್ತಲೆ ಗಗನನೌಕೆಯ ದ್ವಾರ ತೆರೆದುಕೊಂಡಿತು. "ಸುಸ್ವಾಗತ" ಎಂದು ಒಳಗಿನ ಲೌಡ್‌ಸ್ಪೀಕರ್ ಸಾರಿ ಹೇಳುತ್ತಲೇ ಅವರಿಬ್ಬರೂ ಒಳಗೆ ಪ್ರವೇಶಿಸಿದರು. ಒಮ್ಮೆಲೆ ಕಾಲ ಕೆಳಗೆ ಏನೋ ಅಲುಗಾಡಿದಂತಾಯಿತು. ನೋಡಿದರೆ ಗಗನನೌಕೆ ಮೇಲೇರತೊಡಗಿತ್ತು. ✵



ಆಧುನಿಕ ಲೋಕಪ್ರಿಯ ಸಂಗೀತವು ಗಾಯಕರಿಗೂ ಶ್ರಾವಕರಿಗೂ ಕೂಡಿಯೇ ಮಾರಕವಾಗಿರುತ್ತದೆ ಎಂಬುದು ಜರ್ಮನಿಯ ಮನೋವಿಜ್ಞಾನಿಗಳಾದ ಮಾರಿಲುಯಿ ಫ್ರುಹರ್ ಮೀಸ್ನರ್ ಹಾಗೂ ಎಕ್‌ಹಾರ್ಟ್ ವೈಸನ್ ಹ್ಯೂಟರರ ಪ್ರಯೋಗಗಳ ಫಲಿತಾಂಶವಾಗಿದೆ. ಇವರ ಪ್ರಯೋಗಗಳಿಗೆ ಒಳಪಟ್ಟ ಸಂಗೀತಜ್ಞರು ಮಾನಸಿಕ ಅಸ್ವಾಸ್ಥ್ಯ, ಕಿವಿ ನೋವು, ತಲೆಶೂಲಿಗಳಿಂದ ಬಳಲುತ್ತಿದ್ದುದು ಕಂಡು ಬಂದಿತು.

ಜ್ಞಾನಪೀಠ ಪ್ರಶಸ್ತಿ ಪಡೆದ ಶ್ರೀ ಗೋಪೀನಾಥ ಮಹಾಂತಿ

"ಸತ್ಕರಿಸಬೇಕೆಂದಿದ್ದೀರಾ? ಧನ್ಯವಾದಗಳು. ಆದರೆ ಆ ಸಭೆಯಿಂದ ನಾನು ದೂರ ಉಳಿದು ಬಿಟ್ಟರೆ ಹೇಗೆಂತೀರಿ? ನನ್ನನ್ನು ದಯವಿಟ್ಟು ಕ್ಷಮಿಸಿಬಿಡಿ. ಪ್ರೇಕ್ಷಕರೆದುರು ವೇದಿಕೆಯ ಮೇಲೆ ಸ್ವ-ಸ್ತುತಿಯನ್ನು ಕೇಳುತ್ತ ಕುಳಿತು ಕೊಳ್ಳುವುದು ತೀರ ಕಷ್ಟದ ಕೆಲಸ...ಅಲ್ಲವೆ?"

–೧೯೭೩ ರ ಜ್ಞಾನಪೀಠ ಪ್ರಶಸ್ತಿಯನ್ನು ಕನ್ನಡ ಕವಿ ಶ್ರೀ ಬೇಂದ್ರೆಯವರೊಂದಿಗೆ ಹಂಚಿಕೊಂಡ ಉಡಿಯಾ ಕಾದಂಬರಿಕಾರ ಶ್ರೀ ಗೋಪೀನಾಥ ಮಹಾಂತಿ ಆಡಿದ ಮಾತಿದು. ತಮ್ಮನ್ನು ಸತ್ಕರಿಸಲೆಂದು ಎಲ್ಲ ಏರ್ಪಾಡು ಮಾಡಿಕೊಂಡು, ಅನುಕೂಲ ದಿನವನ್ನು ಕೇಳಲು ಬಂದ ದೂರದ ಪಟ್ಟಣಿಗರಿಬ್ಬರಿಗೆ ಮಹಾಂತಿ ಮೇಲಿನಂತೆ ಹೇಳಿದಾಗ, ಬಂದವರು ನಿರಾಶರಾಗಿ ಹಾಗೇ ಮರಳಬೇಕಾಯಿತು;

ಕಾದಂಬರಿಗಳು, ಕತೆಗಳು ಮತ್ತು ವೈಚಾರಿಕ ಲೇಖಗಳಿಂದ ಒಡಿಸಾದ ಜನತೆಗೆಲ್ಲ ಸುಪರಿಚಿತ ಮಹಾಂತಿ ಆಧುನಿಕ ಉಡಿಯಾ ಗದ್ಯ ಸಾಹಿತ್ಯದ ಮಹಾಪ್ರಭೃತಿಗಳಲ್ಲೊಬ್ಬರು. ನವೋದಯ ಕಾಲದ ಉಡಿಯಾ ಸಾಹಿತ್ಯದ ಅದ್ವಿತೀಯ ಗದ್ಯ ಸಾಹಿತ್ಯಕಾರ ಎನಿಸಿದ್ದ ಫಕೀರ್ ಮೋಹನ ಸೇನಾಪತಿ (೧೮೪೩–೧೯೧೮) ಅವರ ಸ್ಥಾನವನ್ನೇ ಆಧುನಿಕ ಉಡಿಯಾ ಸಾಹಿತ್ಯ ಕ್ಷೇತ್ರದಲ್ಲಿ ಮಹಾಂತಿ ಪಡೆಯುತ್ತಾರೆ. ಇವರ ಲೇಖನಿಯ ಒಂದು ವೈಶಿಷ್ಟ್ಯವೆಂದರೆ ಸಾಂಪ್ರದಾಯಿಕ ಗ್ರಾಂಥಿಕ ಭಾಷೆಯ ಬಂಧನದಿಂದ ಬಿಡುಗಡೆ. ಆಡುಮಾತನ್ನು–ಅದರಲ್ಲೂ ಆದಿವಾಸಿಗಳು ಆಡುವ ಭಾಷೆಯನ್ನು–ಅವರು ತಮ್ಮ ಕತೆ ಕಾದಂಬರಿಗಳಲ್ಲಿ ಬಳಸುತ್ತ ಬಂದರು. ಅವರ ಈ ಪ್ರಯೋಗಶೀಲತೆಯಿಂದಾಗಿ ತಮ್ಮ ಪ್ರತಿಯೊಂದು ಕೃತಿಯಲ್ಲೂ ಹೊಸತೇನನ್ನಾದರೂ ನೀಡಲು ಅವರಿಗೆ ಸಾಧ್ಯವಾಗಿದೆ. ಇದೇ ಕಾರಣಕ್ಕಾಗಿ ಎಷ್ಟೋ ಹೊಸ ಲೇಖಕರು ಅವರಿಂದ ಪ್ರಭಾವಿತರಾಗಿದ್ದಾರೆ.

ಒಡಿಸಾ ಎರಡು ಕೋಟಿ ಜನಸಂಖ್ಯೆಯುಳ್ಳ ರಾಜ್ಯ. ಅದರಲ್ಲಿ ಪ್ರತಿಶತ ೪೦ ರಷ್ಟು ಆದಿವಾಸಿಗಳು ಮತ್ತು ಹರಿಜನರು. ಅವರು ನಾಗರಿಕ ಜೀವನದಿಂದ ವಂಚಿತರಾಗಿದ್ದಾರೆನ್ನುವಷ್ಟರ ಮಟ್ಟಿಗೆ ಹಿಂದುಳಿದಿದ್ದಾರೆ. ಅವರ ಜೀವನಕ್ರಮ, ರೀತಿರಿವಾಜು, ಸುಖದುಃಖಗಳೆಡೆ ಗಮನ ಹರಿಸಿದವರೇ ವಿರಳ. ಆದರೆ ಮಹಾಂತಿ ಅವರ ಪಾಲಿನ ಭಾಗ್ಯವಿಧಾತ. ತಮ್ಮ ಬಹುತೇಕ ಕಾದಂಬರಿಗಳಲ್ಲಿ ಮಹಾಂತಿ ಆದಿವಾಸಿಗಳ ಜೀವನ ಚಿತ್ರಿಸಿದ್ದಾರೆ. ಅದಕ್ಕೆ ಕಾರಣ ಅವರು ಆದಿವಾಸಿಗಳೊಂದಿಗೆ ಬೆರೆತು ಅವರನ್ನರಿತ ರೀತಿ.

ಇದೇ ಎಪ್ರಿಲ್ ೨೦ಕ್ಕೆ ಷಷ್ಟ್ಯಬ್ದಿ ಮುಗಿಸಲಿರುವ (ಜನನ ಎಪ್ರಿಲ್ ೨೦, ೧೯೧೪) ಮಹಾಂತಿ ಸಾಮಾನ್ಯ ಕುಟುಂಬದಿಂದ ಬಂದವರು. ತಂದೆ ಶ್ರೀ ಸೂರ್ಯಮಣಿ ಮಹಾಂತಿ


ಗೋಪಾಲ ವಾಜಪೇಯಿ

ಯೋಗಸಾಧಕರು. ತಂದೆಗೆ ಒಂಬತ್ತನೆಯ ಮಗ ಗೋಪೀನಾಥ. ಆದರೆ ಇವರಿನ್ನೂ ೧೨ ವರ್ಷದವರಿರುವಾಗಲೇ ತಂದೆ ಅಸು ನೀಗಿದರು. ಕಟಕ್‌ನ ರೇವನ್‌ಶಾ ಕಾಲೇಜಿನಲ್ಲಿ ಓದುತ್ತಿರುವಾಗಲೇ ಅವರಿಗೆ ಸಾಹಿತ್ಯದತ್ತ ಒಲವು. ಟ್ಯೂಶನ್ ಹೇಳಿ ಕಾಲೇಜು ವೆಚ್ಚ ನಿರ್ವಹಿಸಬೇಕಾಗಿ ಬಂತು. ಬಳಿಕ ಐ. ಸಿ. ಎಸ್. ಗೆ ಕೂರುವ ಇಚ್ಛೆ. ಯೋಗ್ಯತೆ ಎರಡೂ ಇದ್ದರೂ ಪರೀಕ್ಷಾಶುಲ್ಕ, ಅದಕ್ಕಾಗಿ ದಿಲ್ಲಿಗೆ ಹೋಗಿ ಬರುವ ಖರ್ಚು ಭರಿಸಲಾಗದೆ ಆ ವಿಚಾರ ಕೈ ಬಿಟ್ಟು ನೌಕರಿ ಹುಡುಕತೊಡಗಿದರು. ಒಡಿಸಾ ಸರಕಾರದಲ್ಲಿ ಸಬ್ ಡೆಪ್ಯೂಟಿ ಕಲೆಕ್ಟರ್ ಆಗಿ ನೇಮಕವಾಯಿತು. ಆಗವರಿಗೆ ೨೪ ವರ್ಷ ವಯಸ್ಸು.

ಮಹಾಂತಿಯವರು ಕಾಲೇಜಿನಲ್ಲಿರುವಾಗ ಶ್ರೀ ಭಗವತೀಚರಣ ಪಾಣಿಗ್ರಾಹಿಯವರ ಪ್ರಭಾವಕ್ಕೊಳಗಾಗಿ ಅವರ ನೇತೃತ್ವದಲ್ಲಿ ಚಟುವಟಿಕೆ ನಡೆಸುತ್ತಿದ್ದ ಗುಂಪು ಸೇರಿದರು. ಮಾರ್ಕ್ಸ್ ವಿಚಾರಸರಣಿಯ ಪ್ರತಿಪಾದಕರಾದ ಪಾಣಿಗ್ರಾಹಿಯವರು ಮುಂದೆ ಒಡಿಸಾದಲ್ಲಿ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪನೆಯಲ್ಲಿ ಪ್ರಮುಖರೆನಿಸಿದರು. ಬಹುಶಃ ಮಹಾಂತಿಯವರು ಅಂದಿನ ಬ್ರಿಟಿಶ್ ಆಡಳಿತದಲ್ಲಿ ಸರಕಾರಿ ನೌಕರಿ ಸೇರಿದಾಗ ಈ ಅಂಶ ತನ್ನ ಪ್ರಭಾವ ಬೀರಿರಬೇಕು. ಸರಕಾರ ಈ 'ಅಪರಾಧ'ಕ್ಕಾಗಿ, ಸಹಸಾ ಸ್ವಸಂತೋಷದಿಂದ ಯಾರೂ ಹೋಗಲಿಚ್ಛಿಸದಂಥ ಪ್ರದೇಶಕ್ಕೆ ಅವರನ್ನು ಕಳಿಸಿತು. ಅದು ಒಡಿಸಾದ ದಕ್ಷಿಣ ಗಡಿಯಾದ ಕೋರಾಪುಟ್ ಜಿಲ್ಲೆ.

ತೀರ ಅನಾಗರಿಕ ಸ್ಥಿತಿಯಲ್ಲಿ ಜೀವಿಸುತ್ತಿದ್ದ ಆದಿವಾಸಿಗಳೇ ಬಹುಸಂಖ್ಯರಾಗಿರುವ ಜಿಲ್ಲೆಯಿದು. ಆಳರಸರು ವಿಧಿಸಿದ ಈ 'ಶಿಕ್ಷೆ' ಮಹಾಂತಿಯವರ ಮಟ್ಟಿಗೆ ವರವಾಗಿಯೇ ಪರಿಣಮಿಸಿತು. ಅವರಿಗೆ ಇಲ್ಲಿ ಹೊಸತೊಂದು ಜಗತ್ತಿನ ಪರಿಚಯವಾಯಿತು. ನಾಗರಿಕ ಜಗತ್ತಿನ ಕೃತ್ರಿಮತೆಯ ಸೋಂಕೇ ಇಲ್ಲದ ಈ ಜನ ನಿಸರ್ಗದ ಮಡಿಲಲ್ಲಿ ತಾವೇ ತಾವಾಗಿದ್ದರು. ಅವರ ಸರಲ ಮುಗ್ಧತೆಯ ಪೂರ್ತಿ ಪ್ರಯೋಜನ ಪಡೆದು ನಾಗರಿಕರೆಂಬವರು ಅವರನ್ನು ಸಿಕ್ಕಾಪಟ್ಟೆ ಸುಲಿಯುತ್ತಿದ್ದರು. ತೀರ ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದರು. ಮಹಾಂತಿಯವರ ಸೂಕ್ಷ್ಮ ಸಂವೇದಿ ಹೃದಯಕ್ಕೆ ಮೊದಲ ನೋಟದಲ್ಲಿ ಆಘಾತವೇ ಆಯಿತಾದರೂ ಕರ್ತವ್ಯ ಪ್ರಜ್ಞೆ ಅವರಲ್ಲಿ ಜಾಗ್ರತವಾಗಿ ಸರಕಾರಿ ಅಧಿಕಾರಿಯಾಗಿ ಆದಿವಾಸಿಗಳ ಕಷ್ಟ ನಿವಾರಣೆಗೆ ಕೈಲಾದುದನ್ನೆಲ್ಲ ಮಾಡಲು ಮುಂದಾದರು. ಅವರ ಅಂತರ್ಯದಲ್ಲಿ ಹುದುಗಿದ್ದ ಕಲಾವಿದನಿಗೆ ಇಲ್ಲಿ ಅದುವರೆಗೆ ಕಂಡರಿಯದಿದ್ದ ಸಮಾಜಪುರುಷನ ಇನ್ನೊಂದು ಮುಖದ ದರ್ಶನವಾಗಿ ಮುಂದೆ ಮೈದಳೆಯಲಿದ್ದ ಅವರ ಕತೆ ಕಾದಂಬರಿಗಳಿಗೆ ವಿಪುಲ ವಸ್ತು ಸಾಮಗ್ರಿ ಸಂಗ್ರಹವಾಗತೊಡಗಿತು.

ಪರಜಾ, ದಾದಿ ಬುಡಾ, ಅಮೃತರ ಸಂತಾನ, ಅಪಹಂಚ್, ಶಿವಭಾಯಿ, ಮಾಟಿ ಮಟಾಲಗಳಂಥ ಮುಂದಿನ ಅವರ ಪ್ರಮುಖ ಕಾದಂಬರಿಗಳಿಗೆಲ್ಲ ಅವರು ತೀರ ಸಮೀಪದಿಂದ



ಕಂಡಷ್ಟು ಈ ಗಿರಿಜನ, ಹರಿಜನರ ಜೀವನವೇ ವಸ್ತುವಾಗಿ ಪರಿಣಮಿಸಿತು. ಪೂರ್ವ ಘಟ್ಟಗಳ ಪರ್ವತ ಪ್ರದೇಶಗಳಲ್ಲಿ ವಾಸಿಸುವ ಗದವಾ, ಕಂಧ, ಕೊಲ್ಹ ಜನಾಂಗಗಳವರಿಗೆ ಮಹಾಂತಿ ಅತ್ಯಂತ ಗೌರವನೀಯರು. ಆದಿವಾಸಿಗಳ ಜೀವನ ನಿರೂಪಣೆಯು 'ಅಮೃತರ ಸಂತಾನ' (ಅಮೃತನ ಮಗ) ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡಮಿಯು ಪ್ರಥಮ ಪುರಸ್ಕಾರ ೧೯೫೫ ರಲ್ಲಿ ದೊರೆಯಿತಾದರೆ ಜ್ಞಾನಪೀಠ ಪ್ರಶಸ್ತಿ ಪಡೆದ ಪ್ರಥಮ ಉಡಿಯಾ ಲೇಖಕ ಅವರು. ೧೯೭೩ ರ ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿದ ಗೌರವ ಅವರ 'ಮಾಟಿ ಮಟಾಲ' (ಜಗಟು—ಮಣ್ಣು) ಕಾದಂಬರಿಯದು.

ದುಂಡು ಮುಖ, ಚಪ್ಪಟೆ ಮೂಗು, ಹೊಳೆವ ಕಣ್ಣುಗಳ ಮೇಲೆ ಕಾಜುಕಟ್ಟು, ಅಗಲವಾದ ಹಣೆ, ಮೇಲೆ ಗುಂಗುರುಗುಂಗುರಾದ ಕೂದಲು, ಸದಾ ನಗುವ ಮುಖಭಾವ, ತಾಂಬೂಲ ಜಗಿದ ಕಾರಣ ಕೆಂಪಾಗಿರುವ ತುಟಿಗಳು. ಕೃಷ್ಣವರ್ಣೀಯರೂ, ಅಷ್ಟು ಎತ್ತರವಲ್ಲದ ನಿಲುವುಳ್ಳವರೂ ಆದ ಮಹಾಂತಿಯವರ ಮುಖಚರ್ಯೆ ಕೂಡ ಆದಿವಾಸಿಗಳಂತೆಯೇ ಇರುವುದೊಂದು ಆಕಸ್ಮಿಕ ವಿಶೇಷ.

"ಈ ಪ್ರಪಂಚದ ತೀರ ಸಾಧು ಮತ್ತು ಮುಗ್ಧ ಜೀವಿಗಳು ಆದಿವಾಸಿಗಳು. ಅವರ ಹೃದಯ ಗಂಗಾಜಲದಷ್ಟು ನಿರ್ಮಲ, ಮನಸ್ಸು ಸ್ಫಟಿಕದಷ್ಟು ಶುಭ್ರ; ಆದರೆ ಅದರ ದುರುಪಯೋಗ ಉಚ್ಚವರ್ಣೀಯರಿಂದಾಗುತ್ತಲಿದೆ," ಎಂದು ನೊಂದು ಕೊಂಡಿದ್ದಾರೆ ಮಹಾಂತಿ.

ಅವರೊಮ್ಮೆ ಮಳೆಗಾಲದ ದಿನ ಆದಿವಾಸಿ ಹಳ್ಳಿಯೊಂದಕ್ಕೆ ಹೋದರು. ಮಳೆ ಪ್ರಾರಂಭವಾಗಿಬಿಟ್ಟಿತ್ತು. ಅಲ್ಲಿನ ಜನ ಮಹಾಂತಿಯವರಿಗೆ ಮಳೆ ತಟ್ಟಬಾರದೆಂದು ತಾಳೆಗರಿಯ ಕೊಡೆ ತರಲು ಹೋದರು. ರೇನ್‌ಕೋಟ್ ಧರಿಸಿದ್ದ ಮಹಾಂತಿ, "ನಾನು ತೊಟ್ಟಿರುವುದು ನೀರು ಹಿಡಿಯದ ಅಂಗಿ; ನನಗೆ ಕೊಡೆ ಬೇಡ," ಎಂದು ಹೇಳಿದಾಗ ಆದಿವಾಸಿಗಳಿಗೆ ಅಚ್ಚರಿ. ಏನೋ ವಿಚಿತ್ರವನ್ನು ನೋಡುತ್ತಿರುವೆವೆಂಬಂತೆ ಮಹಾಂತಿಯವರ ಸುತ್ತ ನೆರೆಯಿತು ಜನ. ಕೆಲವರು ಪಾತ್ರೆಗಳಲ್ಲಿ ನೀರು ಹಿಡಿದು ಮಹಾಂತಿಯವರ ರೇನ್‌ಕೋಟ್ ಮೇಲೆ ಎರಚಿ ಅದು ಕೆಳಗೆ ಜರಿದು ಬೀಳುವುದನ್ನು ನೋಡಿ ಆನಂದಾಶ್ಚರ್ಯಗಳಿಂದ ಕುಣಿಯತೊಡಗಿದರು. ಮಾಯಾ ಅಂಗಿಯಾಗಿ ಪರಿಣಮಿಸಿತು ಆ ರೇನ್‌ಕೋಟು, ಅವರ ಪಾಲಿಗೆ. ಮಹಾಂತಿಯವರ ಜೀವನದಲ್ಲಿ ಇಂಥ ಎಷ್ಟೋ ಘಟನೆಗಳು ಸಂಭವಿಸಿವೆ. ಆದಿವಾಸಿಗಳ ಮುಗ್ಧತೆಯೊಂದಿಗೆ ಆ ಜನಾಂಗದೊಂದಿಗೆ ಬೆಳೆದುಬಂದಿರುವ ಅವರ ಆತ್ಮೀಯತೆಗೆ ಹಿಡಿದ ಕನ್ನಡಿಯಂತಿವೆ! ಇವು.

ಈ ಶತಮಾನದ ಎರಡು ಹಾಗೂ ಮೂರನೆಯ ದಶಕಗಳಲ್ಲಿ ಯಾವ ಭಾರತೀಯ ಯುವಕನೂ ತಪ್ಪಿಸಿಕೊಳ್ಳಲಾಗದಿದ್ದಂಥ ಗಾಂಧೀವಾದದ ಪ್ರಭಾವಕ್ಕೆ ಮಹಾಂತಿಯವರೂ ಹೊರತಲ್ಲ. ಆದರೂ ಅದರ ಸೆಳವಿನಲ್ಲಿ ಅವರು ಕೊಚ್ಚಿಕೊಂಡು ಹೋಗಲಿಲ್ಲ. ಗಾಂಧೀ ವಿಚಾರ ಧಾರೆಗೆ ಸಮಾಂತರವಾಗಿ ಯುವ ಜನಾಂಗವನ್ನು ಅನಿವಾರ್ಯವಾಗೆಂಬಂತೆ ಆಕರ್ಷಿಸಿದ ಮಾರ್ಕ್ಸ್ ತತ್ವಪ್ರಣಾಲಿಯು ಸಹ ಅವರ ವ್ಯಕ್ತಿತ್ವ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಇವೆರಡರೊಟ್ಟಿಗೆಯೇ ಆಧುನಿಕ ಮನಶ್ಶಾಸ್ತ್ರಕ್ಕೆ ಹೊಸ ತಿರುವನ್ನಿತ್ತ ಸಿಗ್ಮಂಡ್ ಫ್ರಾಯ್ಡನ ಪ್ರಭಾವ ಕೂಡ ಅವರ ಮೇಲೆ ಸಾಕಷ್ಟು ಗಾಢವಾಗಿಯೇ ಆಯಿತು. ಮಹಾಂತಿಯವರ ಬರಹಗಳಲ್ಲಿ ವಿಚಾರ ಪ್ರಪಂಚವನ್ನೇ ಕಲಕಿದ ಈ ಮೂರೂ ಪ್ರಮುಖ ವಿಚಾರಧಾರೆಗಳ ವರ್ಚಸ್ಸನ್ನು ಗುರುತಿಸಬಹುದಾಗಿದೆ.

ಮಹಾಂತಿಯವರ ಓದು ಸಾಹಿತ್ಯಕ್ಕಾಗಲಿ, ಅರ್ಥಕಾರಣ–ರಾಜಕಾರಣಗಳಿಗಾಗಲಿ ಸೀಮಿತವಾದುದಲ್ಲ. ಪುರಾತನ ತಾಡವಾಲೆಯ ಹೊತ್ತಿಗೆಗಳಿಂದಾರಂಭಿಸಿ ತೀರ ಇತ್ತೀಚಿನ ಪ್ರಕಟನೆಗಳ ವರೆಗಿನ ಅಪೂರ್ವ ಗ್ರಂಥ ಸಂಪತ್ತೇ ಅವರ ಖಾಸಗಿ ಗ್ರಂಥಾಲಯ. ಸಾಹಿತ್ಯ, ಎಂಜಿನಿಯರಿಂಗ್, ತತ್ವಶಾಸ್ತ್ರ, ಮನ

ಶಾಸ್ತ್ರ, ಮಾನವಶಾಸ್ತ್ರ, ವೈದ್ಯಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮೊದಲಾದ ಜ್ಞಾನಾಂಗಗಳ ಕುರಿತು ಇಂಗ್ಲಿಷ್, ಸಂಸ್ಕೃತ, ಉಡಿಯಾ ಮತ್ತು ಹಿಂದಿ ಗ್ರಂಥರಾಶಿ ಅವರ ಬಳಿಯಿದೆ. ತಮ್ಮ ಈ ಗ್ರಂಥ ಸಂಗ್ರಹದ ಬಗ್ಗೆ ಅವರಿಗೆ ಅದೆಷ್ಟು ಮೋಹವೆಂದರೆ, "ನಮ್ಮ ಮನೆಯಲ್ಲಿರುವುದು ಎರಡೇ ಬೀಗಗಳು – ಒಂದನ್ನು ಇವರ ಗ್ರಂಥಾಲಯಕ್ಕಾಗಿ ಉಪಯೋಗಿಸಲಾಗುತ್ತಿದ್ದರೆ ಮತ್ತೊಂದು ಇಡೀ ಮನೆಗೆ ಉಪಯೋಗವಾಗುತ್ತದೆ," ಎನ್ನುತ್ತಾರೆ ಅವರ ಪತ್ನಿ ಆದರಮಣೀದೇವಿ.

ಇದುವರೆಗೆ ೧೯ ಕಾದಂಬರಿಗಳು, ೧೨೫ ಸಣ್ಣ ಕತೆಗಳು, ಮತ್ತು ಎರಡು ನಾಟಕಗಳಲ್ಲದೆ ಇತರ ಗದ್ಯ ಗ್ರಂಥಗಳು ಅವರ ಲೇಖನಿಯಿಂದ ಹೊರಬಂದಿವೆ.

ಇಂಗ್ಲಿಷ್, ಹಿಂದಿ, ಬಂಗಾಲಿ, ಸಂಸ್ಕೃತಗಳನ್ನು ಚೆನ್ನಾಗಿ ಬಲ್ಲ (ಅವರು ಎಂ. ಎ. ಮಾಡಿದ್ದು ಇಂಗ್ಲಿಷ್ ಸಾಹಿತ್ಯದಲ್ಲಿ) ಅವರು ಆಯಾ ಭಾಷೆಗಳಿಂದ ಉಡಿಯಾಕ್ಕೆ ಅನೇಕ ಮೌಲಿಕ ಗ್ರಂಥಗಳನ್ನು ಅನುವಾದಿಸಿದ್ದಾರೆ. ಟಾಲ್‌ಸ್ಟಾಯರ 'ವಾರ್ ಆ್ಯಂಡ್ ಪೀಸ್', ರವೀಂದ್ರನಾಥರ 'ಜೋ ಗಾ ಜೋ ಗ್', ಮ್ಯಾಕ್ಸಿಂ ಗಾರ್ಕಿಯ 'ಮಾಯ್ ಯೂನಿವರ್ಸಿಟಿ', ಜವಾಹರಲಾಲ ನೆಹರು ರ 'ಇಂಡಿಯಾ ಟುಡೆ ಆ್ಯಂಡ್ ಟುಮಾರೊ' ಅವರು ಅನುವಾದಿಸಿದ ಗ್ರಂಥಗಳಲ್ಲಿ ಪ್ರಮುಖವಾದಂಥವು. ಸದ್ಯ ಭಗವದ್ಗೀತೆ ಮತ್ತು ಕುರಾನ್‌ಗಳನ್ನು ಅವರು ಉಡಿಯಾ ಭಾಷೆಗಿಳಿಸುತ್ತಿದ್ದಾರಲ್ಲದೆ ೧೨ ಭಾಗಗಳಲ್ಲಿ ಹೊರಬರಲಿರುವ ಅವರ ಆತ್ಮಚರಿತ್ರದ ಮೊದಲೆರಡು ಭಾಗಗಳು ಆಗಲೇ ಪೇಟೆಗೆ ಬಂದಿವೆ.

ಗೋಪೀನಾಥ ಮಹಾಂತಿಯವರು ಸರಕಾರಿ ನೌಕರಿಯಲ್ಲಿರುವಾಗಲೂ ಸಾಹಿತ್ಯದತ್ತ ಅವರ ಒಲವು ಹರಿಯಲು ಬಹು ಮಟ್ಟಿಗೆ ಅವರಣ್ಣ ಕಾನ್ಹುಚರಣರು ಕಾರಣ. ಕಾನ್ಹು-ಚರಣ ಕೂಡ ಉಡಿಯಾ ಭಾಷೆಯಲ್ಲಿ ಬಹು ಜನಪ್ರಿಯ ಕಾದಂಬರಿಕಾರರು. ಆದರೆ ಒಂದು ವಿಷಯದಲ್ಲಿ ಈ ಸೋದರರಲ್ಲಿ ಬಹು ದೊಡ್ಡ ಅಂತರವಿದೆ. ಕಾನ್ಹುಚರಣರಿಗೆ ಜನಪ್ರಿಯತೆಯೇ ಮುಖ್ಯವೆನಿಸಿದರೆ ಗೋಪೀನಾಥರಿಗೆ ಕಾದಂಬರಿಯಲ್ಲಿ ಕಲೆ ಮತ್ತು ಸಾಮಾಜಿಕ ಉದ್ದೇಶ ಮುಖ್ಯ.

"ಲೇಖಕ ಯಾವಾಗಲೂ ತನ್ನ ಕೃತಿಗೆ ನಿಷ್ಠನಾಗಿರಬೇಕು. ಸಮಾಜ ಮತ್ತು ಜನಾಂಗದ ಚಿತ್ರಣ ನೀಡಬೇಕಾಗಿದ್ದರೆ ಜೀವನಕ್ಕೆ ಸಮೀಪವಾದುದನ್ನು ವಾಸ್ತವವಾದುದನ್ನು ಯಥಾವತ್ತಾಗಿಟ್ಟರೇ ಒಳ್ಳೆಯದು. ಅದನ್ನು ಬಿಟ್ಟು ಸತ್ಯಕ್ಕೆ ದೂರವಾದುದನ್ನು ನೀಡಿ ಸಮಾಜೋದ್ಧಾರ ಕಾರ್ಯಕ್ಕೆ ಕಲ್ಲು ಹಾಕಬಾರದು. ಪೊಳ್ಳು ಆದರ್ಶಗಳನ್ನು, ಅತಿಶಯೋಕ್ತಿಗಳನ್ನು ಜನ ಎಂದೂ ಮೆಚ್ಚರು," ಎನ್ನುವ ಮಹಾಂತಿ ನುಡಿದಂತೆ ನಡೆದಿದ್ದಾರೆ.

ಹಿಂದುಳಿದ ಜನಾಂಗಗಳ ಬಗ್ಗೆ ಅಪಾರ ಅನುಕಂಪವುಳ್ಳ ಮಹಾಂತಿ ತಮ್ಮ ಅಧಿಕಾರಾವಧಿಯಲ್ಲಿ ಅವರಿಗಾಗಿ ಶ್ರಮಿಸಿದರು. ನಿವೃತ್ತರಾಗುವ ಮುನ್ನ ಅವರಿಗೆ ಸರಕಾರ ಹಿಂದುಳಿದ ಜನಾಂಗಗಳ ವಿಶೇಷ ಕಲ್ಯಾಣಾಧಿಕಾರಿ ಎಂದು ಬಡ್ತಿ ನೀಡಿದ್ದೂ, ಸರಕಾರಿ ಸೇವೆಯ ಕೊನೆ ಕೊನೆಯ ವರ್ಷಗಳನ್ನು ಮತ್ತೆ ಅವರು ತಮ್ಮ ಹೃದಯಕ್ಕೆ ಹತ್ತಿರದವರಾದ ಆದಿವಾಸಿಗಳ ಮಧ್ಯದಲ್ಲೇ ಕಳೆಯಬೇಕಾಗಿ ಬಂದುದೂ ಒಂದು ಯೋಗಾಯೋಗ.

ಭುವನೇಶ್ವರದಲ್ಲಿ ಅವರು ವಾಸಿಸಿರುವ ಮನೆಯೂ ಕೂಡ ಒಂದು ರೀತಿಯ ವಸ್ತು-ಸಂಗ್ರಹಾಲಯವಿದ್ದಂತಿದೆ. ಆದಿವಾಸಿಗಳು ಉಪಯೋಗಿಸುವ ಆಯುಧಗಳು, ಪ್ರಾಚೀನ ಆಭರಣಗಳು, ದೀಪಮಾಲೆ ಮುಂತಾದ ಅಪೂರ್ವ ವಸ್ತುಗಳು, ಸುಮಾರು ೨೦೦ ಬಗೆಯ ಕೊಳಲುಗಳು ಅವರ ಬಳಿಯಿವೆ.

ಲೇಖಕನ ಸೃಜನಶೀಲತೆಯನ್ನು ಜಾಗೃತಗೊಳಿಸುವುದು ಹೊರಗಿನ ಘಟನೆಗಳೋ ಅಥವಾ ಆ ಸ್ಫೂರ್ತಿ ಅವನ ಅಂತರ್ಯದಲ್ಲೇ ಹುದುಗಿರುತ್ತದೆಯೋ ಎಂಬ ಸಮಸ್ಯೆಗೆ ಅವರು ಹೇಳುವ ಉತ್ತರ ಮಾರ್ಮಿಕವಾಗಿದೆ:

"ನಾನು ಯಾವ ವಿಷಯದಲ್ಲೂ, ಆ ಬಗ್ಗೆ

ನನ್ನೊಳಗೆಯೇ ಸ್ಪಷ್ಟ ಚಿತ್ರವೊಂದು ಮೂಡಿದ ವಿನಾ ಬರೆಯುವುದಿಲ್ಲ. ಆದರೆ ಅದು ಅಸ್ಪಷ್ಟ ಅನಿಸಿಕೆ ಮಾತ್ರವಿದ್ದಾಗ ಅದು ಸ್ಪಷ್ಟ ರೂಪು ತಳೆಯುವ ವರೆಗೂ ಕಾಯುತ್ತೇನೆ–ಎಷ್ಟೋ ಸಲ ಕೊಳಲೂದುತ್ತ. ಮುಂದೆ ಯಾವಾಗಲೋ ಒಂದು ಘಟ್ಟದಲ್ಲಿ ಆ ಚಿತ್ರ ಸ್ಪಷ್ಟವಾಗಿ ನನ್ನ ಮನೋಭಿತ್ತಿಯಲ್ಲಿ ಮೂಡಿ ನಿಲ್ಲುತ್ತದೆ..."

ಅವರ ಜೀವನದಲ್ಲಿ ನಡೆದೊಂದು ಘಟನೆಯನ್ನು ನೆನೆದರೆ ಈ ಅಂತಃಸ್ಫೂರ್ತಿಗೆ ಅವರಲ್ಲಿರುವ ಸ್ಥಾನ ಯಾವುದೆಂದು ಅರ್ಥವಾಗಬಹುದು.

ಗೋಪೀನಾಥ ಮಹಾಂತಿ ಪುರಿಯಲ್ಲಿ ಅಧಿಕಾರಿಯಾಗಿದ್ದಾಗೊಮ್ಮೆ ಆ ಜಿಲ್ಲೆಯಲ್ಲಿ ನೆರೆಹಾವಳಿ ತಾಂಡವಗೈದಿತು. ತಮ್ಮ ಕೆಲ ಕಿರಿ ಅಧಿಕಾರಿಗಳು ಹಾಗು ಸಹಾಯಕರೊಂದಿಗೆ ಪರಿಹಾರ ಕಾರ್ಯವನ್ನು ತಾವೇ ನಿರ್ದೇಶಿಸುವ ಉದ್ದೇಶದಿಂದ ಅವರು, ಹಲವು ಚದರ ಮೈಲುಗಳಷ್ಟು ನೀರೇ ನೀರಾಗಿದ್ದ ಆ ಪ್ರದೇಶದಲ್ಲಿ ಸಂಚರಿಸಲು ದೋಣಿಯನ್ನು ಏರಿದರು. ಇಡೀ ದಿನ ಸುತ್ತಿದರೂ ಎಲ್ಲೂ ದಡಕ್ಕೆ ಹತ್ತಲಿಲ್ಲ ಅವರ ದೋಣಿ.. ಕತ್ತಲು ಆವರಿಸುತ್ತಿದ್ದಂತೆಯೆ ನೀರಡಿಯಲ್ಲಿ ಮುಳುಗಿಹೋಗಿದ್ದ ಒಂದು ದಿಣ್ಣೆಗೆ ತಾಗಿ ಮುಂದೆ ಅದು ಹೋಗಲಾಗದೆ ನಿಂತುಬಿಟ್ಟಿತು–ಬಹ್ವಂಶ ನೀರಲ್ಲಿಯೇ ನಿಂತಿದ್ದ ಒಂದು ಹಳ್ಳಿಯ ಬಳಿ.

ಅದು ಬೆಳದಿಂಗಳ ರಾತ್ರಿ. ಮಹಾಂತಿಯವರನ್ನುಳಿದು ದೋಣಿಯಲ್ಲಿದ್ದ ಎಲ್ಲರೂ ನಿದ್ದೆಹೋದರು. ಏನನ್ನೋ ಕುರಿತು ಯೋಚಿಸುತ್ತಿದ್ದ ಮಹಾಂತಿ, 'ನಾನು ಇಷ್ಟೆಲ್ಲ ಪ್ರಯಾಸಪಡುವ ಆವಶ್ಯಕತೆಯಾದರೂ ಎಲ್ಲಿತ್ತು ? ಮನೆ ಮಾರು ತೊರೆದು ನಾನಿಲ್ಲಿಯತನಕ ಬಂದೆನಾದರೂ ಏಕೆ ?' ಎಂದು ತಮ್ಮನ್ನು ತಾವೇ ಅದೆಷ್ಟೋ ಬಾರಿ ಕೇಳಿಕೊಂಡರು. ಅಷ್ಟು ಜನಗಳ ಮಧ್ಯದಲ್ಲೂ ಅನಿವಾರ್ಯವಾದ ಏಕಾಕಿತನ ಅವರನ್ನು ಕ್ಷಣ ಕ್ಷಣಕ್ಕೂ ಕುಕ್ಕುತ್ತಿತ್ತು.

'ಹೌದು ನೀನಿಲ್ಲಿ ಬರಲೇಬೇಕಿತ್ತು!' ಒಳದನಿಯೊಂದು ಅವರಲ್ಲೇ ಮಾರ್ನುಡಿಯಿತು. ಈಗ ತಮ್ಮ ಕಲ್ಪನಾಶಕ್ತಿ ಕುಂಠಿತವಾಗುತ್ತಿರುವ ಅನುಭವ ಅವರಿಗಾಗುತ್ತಿರುವಂತೆಯೆ ಯಾರೋ ಅವರಿಗೆ ಸುಂದರ ಕೃಶಾಂಗಿಯೊಬ್ಬಳ ಕತೆ ಹೇಳುತ್ತಿರುವಂತೆ ಅವರಿಗನಿಸಿತು. ನೆರೆಯಲ್ಲೇ ಕಾಣುತ್ತಿದ್ದ ಹಳ್ಳಿಯ ಪ್ರಧಾನ ಎಂಬ ಮನೆತನಕ್ಕೆ ಸೇರಿದ್ದ ಒಬ್ಬ ಯುವತಿಯ ಕತೆಯದು. ಕೆಟ್ಟ ಕನಸಿನಂತೆ ನಡೆದುಹೋದ ಪ್ರೇಮಪ್ರಕರಣವೊಂದರ ನಂತರ ಅವಳು ಆತ್ಮಹತ್ಯೆ ಮಾಡಿಕೊಂಡಿದ್ದಳು ಇವರ ದೋಣಿ ನಿಂತಿದ್ದ ಜಾಗದಲ್ಲೇ.

"ನಾನಿಲ್ಲಿಗೇಕೆ ಬರಲೇಬೇಕಿತ್ತೆಂದು ನನಗೀಗ ತಿಳಿಯಿತು ಮಗಳೇ, ಈಗ ತಿಳಿಯಿತು. ನಿನಗಾಗಿ ನಾನೀಗ ಆ ಪರಮಾತ್ಮನನ್ನು ಬೇಡಿಕೊಳ್ಳುತ್ತೇನೆ. ನಿನ್ನಾತ್ಮಕ್ಕೆ ಚಿರಶಾಂತಿ ಸಿಕ್ಕಲಿ!" ಎಂದು ಹೇಳುತ್ತ ಆ ಕ್ಷಣದಿಂದಲೇ ಅವಳಿಗಾಗಿ ತರ್ಪಣ ಬಿಡತೊಡಗಿದರು, ಆ ರಾತ್ರಿಯಿಡಿ ಬೊಗಸೆ ಬೊಗಸೆ ಜಲತರ್ಪಣದಲ್ಲೇ ಕಳೆಯಿತು.

ಮೂಡಣದಲ್ಲಿ ಅರುಣೋದಯವಾದಾಗ ಅನತಿ ದೂರದಲ್ಲಿ ಆಲದ ಮರವೊಂದರ ಮೇಲೆ ಆಶ್ರಯ ಪಡೆದಿದ್ದ ಕೆಲ ಹಳ್ಳಿಗರು ಮಹಾಂತಿಯವರನ್ನು ಗುರುತಿಸಿದರು. ಅವರಲ್ಲಿ ಒಬ್ಬ ಟಣ್ಣನೆ ನೀರಿಗೆ ಜಿಗಿದು ಈಜುತ್ತ ಅವರ ದೋಣಿಗೆ ಬಂದು ಚಕಿತನಾಗಿ ಕೇಳಿದ; "ಏನು ಸಾಹೇಬರೇ, ಇಡೀ ರಾತ್ರಿಯನ್ನು ನೀವಿಲ್ಲಿ ಕಳೆಯಬೇಕಾಯಿತೆ? ದೇವರೆ, ಇದು ಭೂತಾವಾಸವೆಂಬುದು ನಿಮಗೆ ತಿಳಿಯದೆ!"

"ಓಹೋ, ನೀವು ಹೇಳುತ್ತಿರುವುದು ಆ ಪ್ರಧಾನರ ಮಗಳ ವಿಷಯವೆಂದು ತೋರುತ್ತದೆ! ಅಲ್ಲವೇ?"– ಉದ್ಗರಿಸಿದರು ಗೋಪೀನಾಥ ಮಹಾಂತಿ. ☆

ನಗೆಮಲ್ಲಿಗೆ

ನ್ಯಾಯಾಧೀಶ: ನೀನು ಈ ವ್ಯಕ್ತಿಯ ಕಿಸೆಯಿಂದ ಪಾಕೇಟ್ ಹೇಗೆ ಅಪಹರಿಸಿದೆ?

ಅಪರಾಧಿ: ಸ್ವಾಮಿ! ಈ ಕಸುಬು ಕಷ್ಟಪಟ್ಟು ಕಲಿತಿದ್ದೇನೆ. ಕಲಿಸಲು ಫೀಜನ್ನು ಕೊಡಬೇಕಾಗುತ್ತದೆ.

*

"ಏನು ತಾವು ಪಶುಗಳ ವೈದ್ಯರೆ?"

"ಹೌದು, ಏನು ಕಷ್ಟ ಹೇಳಿ?"

*

ಒಬ್ಬ ನ್ಯಾಯಾಧೀಶ ಹಲ್ಲನ್ನು ಕೀಳಿಸಲು ತೆರಳಿ ಕುರ್ಚಿಯ ಮೇಲೆ ಕುಳಿತನಂತರ ಹಲ್ಲಿನ ಚಿಕಿತ್ಸಕನಿಗೆ ನುಡಿದ: "ನೀನು ಮೊದಲಿಗೆ ಪ್ರಮಾಣ ಮಾಡು- ಹಲ್ಲನ್ನು ಕೀಳುತ್ತೇನೆ ಮತ್ತು ಹಲ್ಲನ್ನು ಬಿಟ್ಟು ಮತ್ತೇನನ್ನೂ ಕೀಳುವುದಿಲ್ಲ ಎಂದು."

*

ಮಾಲೀಕ (ನೌಕರನಿಗೆ) "ಯಾವ ವ್ಯಕ್ತಿ ತನ್ನ ಮಾತನ್ನು ಇತರರಿಗೆ ಅರ್ಥವಾಗುವಂತೆ ಹೇಳುವುದಿಲ್ಲವೋ ಆತನು ಹುಚ್ಚ ಮತ್ತು ಮೂರ್ಖನಾಗುತ್ತಾನೆ. ಗೊತ್ತಾಯಿತೆ?"

"ಗೊತ್ತಾಗಲಿಲ್ಲ."- ನೌಕರ ಉತ್ತರವಿತ್ತ.

*

"ನಿನ್ನ ಮಿತ್ರ ಐದು ದಿನಗಳಿಂದ ಕಚೇರಿಗೆ ಬರುತ್ತಿಲ್ಲ, ಆತನಿಗೇನಾಗಿದೆ?" ಒಬ್ಬ ಮತ್ತೊಬ್ಬನನ್ನು ಮೆಟ್ಟಲಿನ ಬಳಿ ಕೇಳಿದ.

"ನಿನಗೆ ಈ ಐದು ಮೆಟ್ಟಲು ಕಾಣುತ್ತಿವೆ ತಾನೆ?" ಆತ ಕೇಳಿದ.

"ಹೌದು."

"ಆತನಿಗೆ ಈ ಮೆಟ್ಟಲುಗಳು ಕಾಣಲಿಲ್ಲ."

*

ಅಧ್ಯಾಪಕ: ಹಣ್ಣುಗಳನ್ನು ಕೀಳಲು ಸರಿಯಾದ ಸಮಯ ಯಾವುದು?

ವಿದ್ಯಾರ್ಥಿ: ತೋಟದ ಮಾಲೀಕನ ನಾಯಿಯನ್ನು ಕಟ್ಟಿಹಾಕಿದ ಸಮಯ.

*

ಅಧ್ಯಾಪಕ: ನಾನು ಪಾಠ ಮಾಡುವಾಗ ಯಾರೂ ಮಲಗಬಾರದು.

ವಿದ್ಯಾರ್ಥಿ: ಸಾರ್, ನಾನು ಮಲಗುತ್ತೇನೆ. ತಾವು ಮೆಲ್ಲನೆ ಸಣ್ಣ ಧ್ವನಿಯಲ್ಲಿ ಪಾಠ ಮಾಡಬಹುದು.

*

"ಈಗ ನಿನಗೆ ಪ್ರತಿ ತಿಂಗಳು ೧೫೦ ರೂ. ಗಳನ್ನು ವೇತನವನ್ನಾಗಿ ನೀಡುವೆ. ಒಂದು ವರ್ಷದ ನಂತರ ಪ್ರತಿ ತಿಂಗಳು ೩೦೦ ರೂ. ದೊರಕುವುದು," ಮ್ಯಾನೇಜರ್ ನುಡಿದ.

"ಸರಿ, ನಾನು ಒಂದು ವರ್ಷದ ನಂತರ ತಮ್ಮನ್ನು ಭೆಟ್ಟಿಯಾಗುವೆನು."

*

ದಾರ್ಶನಿಕ: ನನ್ನ ಕಿಸೆಯಿಂದ ಯಾರೋ ಹಣ ಅಪಹರಿಸಿದ್ದಾರೆ.

ಮಿತ್ರ: ಯಾರಾದರೂ ತಮ್ಮ ಕಿಸೆಯಲ್ಲಿ ಕೈ ಹಾಕಿದಂತೆ ಭಾಸವಾಯಿತೆ?

ದಾರ್ಶನಿಕ: ಕೈ ಹಾಕಿದಂತೆ ಭಾಸವಾಯಿತು. ಆದರೆ ಆ ಕೈ ನನ್ನದೇ ಎಂಬುದಾಗಿ ಭಾವಿಸಿದ್ದೆ.

—ಎಸ್. ಕೆ. ನರಸಿಂಹಮೂರ್ತಿ

*

"ಸ್ವಾಮಿ, ನಿಮ್ಮ ಗಡಿಯಾರ ರೇಡಿಯೋ ಟೈಂ ತೋರಿಸ್ತಿದೆಯೆ?"

"ಹೌದು."

"ಎಷ್ಟು ಸ್ವಾಮಿ ಈಗ ಟೈಂ?"

"ಅದು ತೋರಿಸೋದು ನಮ್ಮನೆ ರೇಡಿಯೋ ಟೈಂರೀ. ಅದರಿಂದ ನಿಮಗೇನು ಉಪಯೋಗ?"

—ಕೆ. ವಿ. ಸೋಮಸುಂದರ್

*

"ಗಂಗಾನದಿಯಲ್ಲಿ ಒಮ್ಮೆ ಸ್ನಾನ ಮಾಡಿದರೆ ಮಾಡಿದ ಪಾಪವೆಲ್ಲ ಪರಿಹಾರವಾಗುತ್ತದೆ."

"ಹಾಗಾದರೆ ಮಂತ್ರಿಗಳೆಲ್ಲ ಬದುಕುತ್ತಾರೆ!"

ಅಪ್ಪ: ನಿನಗೆ ಈ ಸಾರಿಯು ಪರೀಕ್ಷೆಯಲ್ಲೂ ಲೆಕ್ಕದಲ್ಲಿ ಸೊನ್ನೆ ಬಿದ್ದಿದೆಯಲ್ಲ!

ಮಗ: ಈ ಸಾರಿಯೂ ಕಳೆದ ಪರೀಕ್ಷೆಯಲ್ಲಿ ಬಂದ ಲೆಕ್ಕಗಳನ್ನೇ ಕೊಟ್ಟರು!

— ಎಂ. ರಮೇಶ ಕಾಮತ

ಅಸಹಾಯಕತೆ

ಆಕೆ: ಸಾಯುವಾಗ ನಿಮ್ಮ ತಂದೆ ಏನು ಹೇಳಿದರು?

ಈತ: ಏನೂ ಇಲ್ಲ, ಅವರು ಕೊನೆಯುಸಿರು ಎಳೆಯುವವರೆಗೂ ಅಮ್ಮ ಕೂಡ ಬಳಿಯಲ್ಲೇ ಇದ್ದರು.

ಬದಲಿ ವ್ಯವಸ್ಥೆ

ಒಬ್ಬ ಅಧಿಕಾರಿ ಮಹಾಶಯರಿಗೆ ನೌಕರರ ಪ್ರತಿಯೊಂದು ಬೇಡಿಕೆಗೂ ನಕಾರ ಸೂಚಿಸಿ, 'ಬದಲಿ ವ್ಯವಸ್ಥೆಗೆ ಪ್ರಯತ್ನಿಸಬೇಕು' ಎಂದು ಷರಾ ಬರೆಯುವ ಹವ್ಯಾಸವಿತ್ತು.

ಒಮ್ಮೆ ನೌಕರನೊಬ್ಬ ತನ್ನ ಮದುವೆಗಾಗಿ ಒಂದು ತಿಂಗಳ ರಜೆಗಾಗಿ ಚೀಟಿ ಕಳುಹಿಸಿದ. ಅಧಿಕಾರಿಗಳು ಅದರ ಮೇಲೆ ಈ ರೀತಿ ಬರೆದರು:

'ಅವಸರದ ಕಾರಣಗಳಿಗಾಗಿ ರಜೆ ಮಂಜೂರು ಮಾಡಲಾಗುವದಿಲ್ಲ. ಬದಲಿ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.'

—ಜಯತೀರ್ಥ ಕೋಟೆ

ಅಂದು ಸೋಮು ಹೆಂಡತಿಯೊಂದಿಗೆ ಚಕ್ಕಂದವಾಡುತ್ತ ಮನೆಯಲ್ಲಿಯೇ ಕುಳಿತ್ತಿದ್ದ. ಆಗ ತಲೆಗೆದರಿಗಿಕೊಂಡ ಭಿಕ್ಷುಕನೊಬ್ಬ ಬಂದು ಮನೆಯ ಬಾಗಿಲಿನಲ್ಲಿ ನಿಂತು ಕೈ ಬೀಸಿಕೊಂಡು ದೊಡ್ಡದಾಗಿ ಕಣ್ಣರಳಿಸಿ ಸೋಮುವನ್ನೇ ಕೆಕ್ಕರಿಸಿ ನೋಡುತ್ತ, "ನನಗೆ ಹಸಿವಾಗಿದೆ ಬೇಗ ತಟ್ಟೆ ಹಾಕಿ ಊಟಕ್ಕೆ ಇಡಿ. ಇಡದೆ ಹೋದರೆ ಅಚೆ ಬೀದಿಯಲ್ಲಿ ಮಾಡಿದ ಹಾಗೆ ಇಲ್ಲೂ ಮಾಡಿಬಿಡುತ್ತೇನೆ, ಹುಷಾರ್," ಎಂದು ಕಿರುಚಿದ.

ಸೋಮುವಿಗೂ ಅವನ ಹೆಂಡತಿಗೂ ಭಯವಾಯಿತು. ಅವರು ಭಿಕ್ಷುಕನಿಗೆ ನೀರು ಕೊಟ್ಟು ಊಟಕ್ಕಿಟ್ಟು ಉಪಚರಿಸಿದರು. ನಂತರ ಸೋಮು ಭಿಕ್ಷುಕನ ಬಳಿ ಬಂದು, "ಆಚೆ ಬೀದಿಯಲ್ಲಿ ಏನು ಮಾಡಿದೆ?" ಎಂದು ಕೇಳಿದ.

ಆಗ ಭಿಕ್ಷುಕ ನಗುತ್ತ, "ಮಾಡೋದೇನು ಸಾರ್, ಯಾರೂ ಊಟ ಹಾಕಲಿಲ್ಲ ಉಪವಾಸ ಮಾಡಿದೆ," ಎಂದು ಉತ್ತರಿಸಿದ.

*

ಗುರುಗಳು: ರಾಮು, ಸೂರ್ಯ ದೊಡ್ಡವನೋ? ಚಂದ್ರ ದೊಡ್ಡವನೋ?

ರಾಮು: ಚಂದ್ರನೇ ದೊಡ್ಡವನು ಸಾರ್.

ಗುರು: ಅದೇಕೋ ಹಾಗೆ ಹೇಳುತ್ತಿ?!

ರಾಮು: ನೋಡಿ ಸಾರ್, ಸೂರ್ಯ ಹಗಲು ಹೊತ್ತಿನಲ್ಲಿ ಬಂದು ಹೋಗುತ್ತಾನೆ. ಆದರೆ ಚಂದ್ರ ಕತ್ತಲೆಯಾದಾಗ ಬಂದು; ಪಾಪ, ಕತ್ತಲೆಯಲ್ಲಿರುವ ಜನಗಳಿಗೆ ಸ್ವಲ್ಪವಾದರೂ ಬೆಳಕು ಕಾಣಲೀಂತ ಬೆಳದಿಂಗಳು ಚಲ್ಲುತ್ತಾನೆ. ಅದಕ್ಕೇ ಸಾರ್, ಚಂದ್ರನೇ ದೊಡ್ಡೋನು ಅಂದೆ.

—ಅಭಿನಂದನ

"ನೀವು ಐವತ್ತು ಸಾವಿರ ರೂಪಾಯಿಗಳನ್ನು ಲಂಚವಾಗಿ ತೆಗೆದುಕೊಂಡಿದ್ದೀರಿ ಎಂದು ಆಪಾದಿಸಲಾಗಿದೆ. ನಿಮಗೆ ಖಂಡಿತ ಶಿಕ್ಷೆಯಾಗಲೇಬೇಕು"– ನ್ಯಾಯಾಧೀಶರು ಹೇಳಿದರು.

ಅದಕ್ಕೆ ಆತನ ಉತ್ತರ: "ಅದೇನೋ ನಿಜ ಇದೆ ಸ್ವಾಮಿ. ಆದರೆ, ನಿನ್ನನ್ನು ಖುಲಾಸೆ ಮಾಡಿಸ್ತೀನಿ ಅಂತ ನನ್ನ ಹತ್ರ ವಕೀಲ ಸಾಹೇಬರು ಹದಿನೈದು ಸಾವಿರ ಲಂಚ ತೆಗೆದುಕೊಂಡಿದ್ದಾರಲ್ಲಾ?''

–ಸೀ. ವೇ. ವಾದಿರಾಜ

ಬಲಿಷ್ಠನೇ ಬಾಳಿಯಾನು ಎಂಬ ಮಾತು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಭೂಜಲವಾಯು ಮಂಡಲಗಳಲ್ಲಿ ಬಲಿಷ್ಠರೇ ದುರ್ಬಲರನ್ನು ಹತ್ತಿಕ್ಕಿ ಪ್ರಭುತ್ವ ನಡೆಸುತ್ತ ಬಂದಿದ್ದಾರೆ. ಬಲಿಷ್ಠರನ್ನು ತಡವ ಬೇಡ, ಅಷ್ಟೇಕೆ, ಅವರ ಗೊಡವೆಗೇ ಹೋಗ ಬೇಡ ಎಂದು ನಮ್ಮ ಪೂರ್ವಜರು ಉಪದೇಶಿಸಿರುವುದೂ ತುಂಬ ವ್ಯಾವಹಾರಿಕ ಉಪದೇಶವಾಗಿದೆ. ಅಂತೇ ಕಾಲಕಾಲಕ್ಕೆ ಏಸೂ ಕ್ರಿಸ್ತ, ಬುದ್ಧ, ಬಸವಣ್ಣ ಗಾಂಧಿಯವರಂಥ ಮಹಾ ವಿಭೂತಿಗಳು ಜನ್ಮ ತಾಳಿ ದಯೆಯ, ಅಹಿಂಸೆಯ, ಧರ್ಮದ ಉಪದೇಶಾಮೃತ ನೀಡುತ್ತ ಬಂದಿದ್ದಾರೆ. ಆದರೆ ಜಗತ್ತು ಇನ್ನೂ ಶ್ವಾನನ ಬಾಲದಂತೆಯೇ ಇದೆ.

ಇಲ್ಲಿ ಕುಳಿತು ಸಾವಿರಾರು ಮೈಲು ದೂರದಲ್ಲಿಯ ನಿಮ್ಮ ಅನಿಷ್ಟ ವಸ್ತುಗಳನ್ನು— ಶತ್ರುಗಳೇ ಇರಲಿ, ನಗರಗಳೇ ಇರಲಿ—ಧ್ವಂಸಗೊಳಿಸುವ ಶಕ್ತಿ ಈ ಅಣ್ವಸ್ತ್ರಗಳು ನಮಗೆ ನೀಡಿವೆ ಎಂದ ಮೇಲೆ ಇಡೀ ಜಗತ್ತೇ ಸದ್ಯ ಯುದ್ಧಭೀತಿ ಗ್ರಸ್ತವಾಗಿದೆ ಎಂದು ಹೇಳಬೇಕಾಗಿಲ್ಲ. ಪ್ರಬಲ— ದುರ್ಬಲರ ನಡುವಿನ ತಿಕ್ಕಾಟ ನಿಂತೇ ಇಲ್ಲ; ಅಶ್ಮಯುಗದಿಂದ ಅಣುಶಕ್ತಿ ಯುಗದವರೆಗೆ ಅಖಂಡವಾಗಿ ಉಳಿದುಕೊಂಡು ಬಂದಿದೆ, ಬೆಳೆದುಕೊಂಡು ಬಂದಿದೆ.

ಇನ್ನು ಪ್ರಬಲರು ಸಕಲ ಸನ್ನದ್ಧರಾಗಿರುವಾಗ ದುರ್ಬಲರು ಅವರನ್ನು ಕೆಣಕುವುದಕ್ಕಾಗಿ ನಾನಾ ರೀತಿ ನೀತಿಗಳನ್ನು ಅವಲಂಬಿಸುತ್ತಾರೆ. ಗಾಂಧಿ ಪ್ರಣೀತ ಅಹಿಂಸಾಮಯ

ವಿಮಾನಾಪಹರಣದ ವಿಧ್ವಂಸಕ ಕೃತಿ

ದತ್ತಾತ್ರೇಯ

ಮುಂಗೈ ಜೋರಿನಿಂದ ತನ್ನ ಪ್ರಭಾವ ಬೀರಬೇಕೆನ್ನುವ, ಪ್ರಭುತ್ವ ಸಾಧಿಸಬೇಕೆನ್ನುವ ಜನ ಇರುವ ವರೆಗೆ ಜಗತ್ತಿನಲ್ಲಿ ಹಿಂಸೆಯ ಪ್ರಭಾವ ಎಂದಿಗೂ ಕಡಿಮೆಯಾಗಲಾರದು. ರಾಜ್ಯ ಸಾಮ್ರಾಜ್ಯಗಳನ್ನಾಳುವ ಮಹತ್ವಾಕಾಂಕ್ಷೆ ಇಂಥ ಹಿಂಸಾಚಾರಕ್ಕೆ ನೀರೆರೆದು ಪೋಷಿಸಿಕೊಂಡು ಬರುತ್ತದೆ. ಶಸ್ತ್ರಾಸ್ತ್ರ ಸ್ಪರ್ಧೆ, ನವನವೀನ ಶಸ್ತ್ರೋಪಕರಣಗಳ ಶೋಧ ಅಂದಿನಿಂದಿಗೂ ನಡೆದುಕೊಂಡು ಬಂದಿವೆ. ಕಲ್ಲಿನ ಆಯುಧಗಳು ಹೋಗಿ ಲೋಹದ ಶಸ್ತ್ರಾಸ್ತ್ರಗಳು ಬಂದವು. ತೋಪು ತುಬಾಕಿಗಳು ಬಂದು ಬಿಲ್ಲು— ಬಾಣಗಳನ್ನು ಹಿಂದೂಡಿದವು ಈಗಂತೂ ಬಾಂಬುಗಳು— ಅಣ್ವಸ್ತ್ರಗಳು ಉದಯವಾಗಿ ಯಾವ ಮೂಲೆಯೂ ಸುರಕ್ಷಿತವಿಲ್ಲದಂತೆ ಮಾಡಿಬಿಟ್ಟಿವೆ.

ಸತ್ಯಾಗ್ರಹದ ರೀತಿ ಅಪ್ರತಿಮವಾದರೂ ಈಗ ಅದು ಗ್ರಾಹ್ಯವಾಗಿ ಉಳಿದಿಲ್ಲ. ಗಾಂಧಿ ನೇತೃತ್ವದಲ್ಲಿ ಅದು ಪ್ರಚಂಡ ಯಶಸ್ಸನ್ನು ಗಳಿಸಿತು. ಬ್ರಿಟಿಶರು ಭಾರತದಿಂದ ತೊಲಗಬೇಕಾಯಿತು ಎಂಬ ಮಾತು ಶತಶಃ ಸತ್ಯವಾಗಿದ್ದರೂ ಈಗ ಭಾರತದಲ್ಲಿಯೇ ಆ ಅಹಿಂಸಾ ಸತ್ಯಾಗ್ರಹ ಪ್ರಣಾಲಿಗೆ ಬೆಂಬಲ ದೊರಕುತ್ತಿಲ್ಲ ಎಂಬುದನ್ನೂ ನೋಡುತ್ತಿದ್ದೇವೆ. ಸುತ್ತುಮುತ್ತಲಿನ ಜಗತ್ತೇ ಶಸ್ತ್ರಾಸ್ತ್ರ ಸಂಗ್ರಹ ಸ್ಪರ್ಧೆಗಿಳಿದಾಗ ಭಾರತವೆಂತು ಅಹಿಂಸಾ ಮಂತ್ರ ಪಠಿಸುತ್ತ ಕುಳಿತುಕೊಳ್ಳಬಲ್ಲದು. ಒಟ್ಟಾರೆ ಈ ಶಸ್ತ್ರಾಸ್ತ್ರ ಸಂಗ್ರಹದ ಭೀತಿಯಿಂದ ಪ್ರಪಂಚದಲ್ಲಿ ತೃತೀಯ ಜಾಗತಿಕ ಯುದ್ಧ ಸ್ಫೋಟಗೊಳ್ಳದಿದೆ. ಆದರೆ ಚಿಕ್ಕ ಪುಟ್ಟ ಕಿರುಕುಳಗಳು ತಪ್ಪಿಲ್ಲ. ಸಂಕುಚಿತ ರಾಷ್ಟ್ರಪ್ರೇಮ

ರಾಜಕೀಯ ವಿಸ್ತರಣದಾಹ ಇವೇ ಇಂಥ ಘರ್ಷಣೆಗಳಿಗೆ ಕಾರಣ ಎಂದರೆ ತಪ್ಪೇನಲ್ಲ.

ಸುರಿಗೆಯ ಬಂಡಕ್ಕೆ ಎರೆದುಕೊಳ್ಳುವವರಿಗೂ ಇದು ಸುಸಮಯ. ಈ ರಾಜಕೀಯ ಸ್ವಾರ್ಥಸಾಧಕರ ಬೆಂಬಲಿಗರಾಗಿ ಕೆಲ ವಿಧ್ವಂಸಕ ಗುಂಪುಗಳೂ ಕೆಲಸ ಮಾಡುತ್ತಿವೆ. ತಮಗೆ ಆಗದವರನ್ನು ನಾನಾ ಪರಿಯಿಂದ ಪೀಡಿಸುವುದು ಇವರ ಮುಖ್ಯ ಕಾಯಕವಾಗಿರುತ್ತದೆ. ಇವರ ಉಪಾಯಗಳು ಹೊಸ ಹೊಸ ರೂಪಧಾರಣ ಮಾಡುತ್ತವೆ. ಬಲಾತ್ಕಾರದಿಂದ ವಿಮಾನಾಪಹರಣ ಈ ವಿಧ್ವಂಸಕರ ಇತ್ತೀಚಿನ ಕ್ರೂರ ಉಪಾಯವಾಗಿದೆ. ಈ ವಿಧ್ವಂಸಕರ ಗುಂಪಿನವರು ತಾವು ಅಪಹರಿಸಬೇಕೆಂದಿರುವ ವಿಮಾನವನ್ನು ಮೊದಲು ನಿರ್ಧರಿಸಿ, ನಂತರ ನಾಲ್ಕಾರು ಜನ ಸಶಸ್ತ್ರ ವಿಧ್ವಂಸಕರು ಅದರಲ್ಲಿ ಪ್ರಯಾಣಿಕರಂತೆ ನುಸುಳಿಕೊಳ್ಳುತ್ತಾರೆ. ಆ ವಿಮಾನ ಉಡ್ಡಾಣ ಮಾಡಿ ಅಂತರಿಕ್ಷದಲ್ಲಿ ಹಾರತೊಡಗಿದಾಗ ಇವರು ವಿಮಾನ ಚಾಲಕರಿಗೆ ಕೊಲೆಯ ಬೆದರಿಕೆ ಹಾಕಿ ತಮ್ಮ ಇಚ್ಛೆ ಬಂದಲ್ಲಿ ಆ ವಿಮಾನವನ್ನು ಒಯ್ಯುವಂತೆ ಮಾಡಿ ಇಳಿಸುತ್ತಾರೆ. ಅಲ್ಲಿಂದ ಆ ವಿಮಾನದ ದೇಶಕ್ಕೆ ಸಂದೇಶ ಕಳಿಸಿ ಹಣ ಕೇಳುತ್ತಾರೆ. ವೇಳೆಯ ಗಡುವನ್ನು ಹಾಕುತ್ತಾರೆ. ಆ ಅವಧಿಯಲ್ಲಿ ಹಣ ಬರಲಿಲ್ಲವಾದರೆ ಅವರು ಆ ವಿಮಾನವನ್ನು ಸುಟ್ಟು ಹಾಕಲೂ ಹೇಸುವದಿಲ್ಲ. ಅದರಲ್ಲಿದ್ದ ಪ್ರಯಾಣಿಕರನ್ನು ದೇವರೇ ಕಾಯಬೇಕು. ಯುರೋಪದಲ್ಲಿ ಇಂಥ ವಿಮಾನಾಪಹರಣ ಪ್ರಯತ್ನಗಳು ಹೆಚ್ಚಿಗೆ ನಡೆದಿರುವದು ಕಂಡು ಬಂದರೂ ಸಾಧಾರಣವಾಗಿ ಯಾವ ದೇಶವೂ ಈ ದುಷ್ಕೃತ್ಯದಿಂದ ಪಾರಾಗಿಲ್ಲ ಎಂಬುದನ್ನು ಕಾಣಬಹುದು. ಪಂಚಶೀಲ ತತ್ವದ ಆಧಾರದ ಮೇಲೆ ತಟಸ್ಥ ವಿದೇಶ ನೀತಿಯನ್ನು ಅನುಸರಿಸುತ್ತಿರುವ ಭಾರತದ–ಏಅರ್ ಇಂಡಿಯಾದ ವಿಮಾನವೊಂದನ್ನು ಕಳೆದ ಡಿಸೆಂಬರಿನಲ್ಲಿ ಯುರೋಪದಲ್ಲಿ ಅಪಹರಿಸುವ ಪ್ರಯತ್ನ ನಡೆಯಿತು ಎಂದಾಗ ಈ ವಿಧ್ವಂಸಕ ಕೃತಿಯ ವ್ಯಾಪಕತೆಯ ಸ್ವರೂಪ ಎಂಥದು ಎಂಬುದರ ಅರಿವಾಗದಿರದು. ವಿಮಾನಾಪಹರಣದ ಕೃತಿಗಳು ನಿಲ್ಲದೇ ಹೋದರೆ ವಿಮಾನ ಪ್ರಯಾಣ ಸಾರ್ವಜನಿಕರಿಗೆ ಸುರಕ್ಷಿತ ಎನಿಸಲಾರದು. ಅವರು ತಮ್ಮ ವಿಮಾನ ಪ್ರಯಾಣಗಳನ್ನು ಮೊಟಕುಗೊಳಿಸಿ, ಕೇವಲ ಅತ್ಯಗತ್ಯದ ಸಂದರ್ಭಗಳಲ್ಲಿ ಮಾತ್ರ ಕೈಕೊಳ್ಳಬಹುದು. ಇಂಥ ವಿಧ್ವಂಸಕ ಕೃತಿಗಳನ್ನು ನಿಲ್ಲಿಸಲು, ಸಾರ್ವಜನಿಕರಿಗೆ ವಿಮಾನ ಪ್ರಯಾಣದ ಸುರಕ್ಷಿತತೆ ಬಗ್ಗೆ ಆಶ್ವಾಸನ ನೀಡಲು ಏನೂ ಪ್ರಯತ್ನ ನಡೆದಿಲ್ಲವೆ?

ಗಂಡಾಂತರವು ವಿಶ್ವವ್ಯಾಪಿ ಆಗಿರುವಾಗ ಅದನ್ನು ತಡೆಗಟ್ಟಲು ವಿಶ್ವವ್ಯಾಪಕ ಪ್ರಯತ್ನಗಳೇ ಬೇಕಲ್ಲವೆ? ಅಂದರೆ ಈ ಪ್ರಯತ್ನಗಳಲ್ಲಿ ಸಕಲ ರಾಷ್ಟ್ರಗಳ ಸಹಕಾರವು ಅತ್ಯಗತ್ಯ ಎಂದಾಗುತ್ತದೆ ಅದರಲ್ಲಿಯೂ ಪ್ರಬಲ ರಾಷ್ಟ್ರಗಳು ಮುಂದಾಗಬೇಕು. ನಂತರ ಉಳಿದ ರಾಷ್ಟ್ರಗಳು ಸಹ ರಿಸಬೇಕು. ಆದಾಗ ಈ ವಿಧ್ವಂಸಕ ಕೃತಿ ನಿಲ್ಲಬಲ್ಲವು.

ಅಮೇರಿಕೆ ನಡೆಸಿರುವ ಪ್ರಯತ್ನಗಳಾದರೂ ಏನು ಎಂಬುದನ್ನು ನೋಡೋಣ. ಅಮೇರಿಕೆ ತನ್ನ ವಿಮಾನ ನಿಲ್ದಾಣಗಳಲ್ಲಿ ಬಲವಾದ ಕಾವಲು ಇಟ್ಟಿದೆ. ಎರಡು ವರ್ಷಗಳ ಹಿಂದೆ ಪ್ರಾರಂಭಿಸಲಾದ ಪದ್ಧತಿಯಿಂದ ಈ ವಿಮಾನ ಅಪಹರಣ ಪ್ರಯತ್ನ ನಿವಾರಿಸಲು ಸ್ವಲ್ಪ ಸಾಧ್ಯವಾಗಿದೆ.

೧೯೭೩ ಅಗಸ್ಟ–ಸಪ್ಟೆಂಬರದಲ್ಲಿ ರೋಮ್ ನಗರದಲ್ಲಿ ಸೇರಿದ್ದ ಆಕಾಶಯಾನ ಭದ್ರತಾ ಪರಿಷತ್ತುಗಳಿಗೆ ಅಮೇರಿಕೆ ತನ್ನ ಶಿಷ್ಟ ಮಂಡಳಗಳನ್ನು ಕಳಿಸಿದ್ದಿತು. ವಿಮಾನಾಪಹಾರಕರು ಅಂದರೆ ಆಗಂತುಕರು ವಿಮಾನ ನಿಲ್ದಾಣಗಳಲ್ಲಿ ನುಸುಳಿಕೊಳ್ಳದಂತೆ ಭದ್ರತಾ ವ್ಯವಸ್ಥೆಗಳನ್ನು ಬಿಗಿಗೊಳಿಸುವ ಕುರಿತು ಒಡಂಬಡಿಕೆ ಏನಾದರೂ ಆ ಪರಿಷತ್ತುಗಳಲ್ಲಿ ಆಗಬೇಕಾಗಿದ್ದಿತು. ಅಂಥ ಪ್ರಭಾವಿ ನಿರ್ಣಯಗಳು ಈ ರೋಮ್ ಪರಿಷತ್ತಿನಲ್ಲಿ ಸ್ವೀಕೃತವಾಗಲಿಲ್ಲ. ಆದರೂ ಇಂಥ ಏರ್ಪಾಡುಗಳು ಅತ್ಯಗತ್ಯ ಎಂಬ ತಿಳುವಳಿಕೆ ಆ ಪರಿಷತ್ತಿನಲ್ಲಿ ಭಾಗವಹಿಸಿದ ಎಲ್ಲ ರಾಷ್ಟ್ರಗಳಿಗೆ ಉಂಟಾದುದು ಸಮಾಧಾನಕರ. ಇದರಿಂದ ಕಾರ ನಿಮಿತ್ತ,

ವಾಗಿ ಆಗಲಿ, ವಿಹಾರಕ್ಕಾಗಿ ಆಗಲಿ ಪ್ರಪಂಚ ಪರ್ಯಟನ ಕೈಕೊಳ್ಳುವ ಪ್ರಯಾಣಿಕರ ಸಂರಕ್ಷಣೆಗೆ ಅಷ್ಟೇ ಭರವಸೆ ದೊರೆತಂತಾಯಿತು. ಕಿಡಿಗೇಡಿಗಳ ಉಪಾದ್ವ್ಯಾಪಕ್ಕೆ ಅಷ್ಟೇ ತಡೆ ಹಾಕಿದಂತಾಗುತ್ತದೆ. ರೋಮ್ ಪರಿಷತ್ತಿನ ನಿರ್ಣಯಗಳನ್ನು ಹೆಚ್ಚುಚ್ಚು ರಾಷ್ಟ್ರಗಳು ಒಪ್ಪಿಕೊಳ್ಳುವುದು ಸಂತೋಷದ ಸಂಗತಿ.

ಈ ಪ್ರಪಂಚದಲ್ಲಿ ಪ್ರತಿಯೊಬ್ಬನಿಗೂ ಸ್ವತಂತ್ರವಾಗಿ ಸಂರಕ್ಷಿತವಾಗಿ ಬಾಳಲು ಅಧಿಕಾರ ಇದೆ. ಸಂಯುಕ್ತರಾಷ್ಟ್ರ ಸಂಘದ ಮಾನವನ ಹಕ್ಕು ಬಾಧ್ಯತೆಗಳ ಘೋಷಣೆಯಲ್ಲಿ ಈ ಅಂಶವನ್ನು ಸ್ಪಷ್ಟಪಡಿಸಲಾಗಿದೆ. ಆದರೂ ಅದರ ಉಲ್ಲಂಘನೆ ನಡೆದೇ ಇದೆ. ಜನ ಸುರಕ್ಷಿತವಾಗಿ ಬಾಳಲು ಈ ಜಗತ್ತನ್ನು ಯೋಗ್ಯವಾಗಿಸಬೇಕಾದರೆ ಅವರಿಗೆ ಸಂರಕ್ಷಿತತೆಯ ಭರವಸೆ ಬೇಕೇಬೇಕು. ಇಷ್ಟೆಲ್ಲ ಮುಂಜಾಗ್ರತೆ ವಹಿಸಿದ ನಂತರವೂ ವಿಮಾನಾಪಹರಣದಂಥ ದುರ್ಘಟನೆ ಸಂಭವಿಸಿದರೆ ದಿಟ್ಟತನದಿಂದ ಎದುರಿಸಲೇಬೇಕಾಗುತ್ತದೆ.

ವಿಮಾನಾಪಹರಣದ ಕೃತಿಯು ಗರ್ಹಣೀಯ. ಇದಕ್ಕೆ ರಾಜಕೀಯ ಉದ್ದೇಶಗಳು ಮೂಲಕಾರಣವಾಗಿರುವ ಸಂದರ್ಭಗಳೇ ಹೆಚ್ಚು. ರಾಜಕೀಯ ಭಾವೋದ್ರೇಕ ಎಷ್ಟೇ ತೀವ್ರವಾಗಿದ್ದರೂ ನಿರಪರಾಧಿ ಪ್ರಯಾಣಿಕರನ್ನು ಗೋಳುಹೊಯ್ದುಕೊಳ್ಳುವ ವಿಮಾನಾಪಹರಣದಂಥ ಹೀನ ಕೃತಿಯನ್ನು ಸಮರ್ಥಿಸಿಕೊಳ್ಳಲಾಗದು. ನಿತ್ಯ ಲಕ್ಷಾವಧಿ ಪ್ರಯಾಣಿಕರು ನಿರಾತಂಕವಾಗಿ ವಾಯುಯಾನ ಮಾಡುವುದು ಮುಖ್ಯ. ರಾಜತಂತ್ರಾದಿ ವರ್ಗದವರು ಯಾವ ಅಪಾಯದ ಭೀತಿ ಇಲ್ಲದೆ ನಿಶ್ಚಿಂತೆಯಿಂದ ತಮ್ಮ ಕರ್ತವ್ಯ ನೆರವೇರಿಸುವುದು ಅಗತ್ಯ. ಜನ ಸ್ಫೋಟದ ಹೆದರಿಕೆ ಇಲ್ಲದೆ ತಮ್ಮ ಪತ್ರಗಳನ್ನು ಒಡೆದು ನೋಡುವ ಅವಕಾಶ ಇರಬೇಕು. ಈ ಎಲ್ಲ ದೃಷ್ಟಿಯಿಂದ ಭದ್ರತಾ ಏರ್ಪಾಡುಗಳ ಅಗತ್ಯ ಎಷ್ಟೆಂಬುದನ್ನು ಸಾರಿ ಹೇಳಬೇಕಾಗಿಲ್ಲ.

ವಿಮಾನಾಪಹರಣದ ಅಪರಾಧಿಗಳು ಹಣದ ಆಸೆಯಿಂದಲೂ ಆ ಕುಕೃತ್ಯಕ್ಕೆ ಇಳಿಯುತ್ತಾರೆಂಬುದೂ ತಿಳಿದುಬಂದಿದೆ. ಅಂಥ ಸಂದರ್ಭಗಳಲ್ಲಿ ಸರಕಾರಗಳು ಹಣ ಚೆಲ್ಲಿ ಅವರನ್ನು ತೃಪ್ತಿಗೊಳಿಸಲು ಮನಸ್ಸುಮಾಡಬೇಕಾದ ಅಗತ್ಯವಿಲ್ಲ. ಇಂಥ ದುರ್ಬಲತೆಯನ್ನು ತೋರಿದಾಗ ಆ ಕಿಡಿಗೇಡಿಗಳ ಕೈಮೇಲಾಗುತ್ತ ಹೋಗುತ್ತದೆ. ಆದ್ದರಿಂದ ಮುತ್ಸದ್ದಿತನದಿಂದ, ನಿರ್ಧಾರದಿಂದ ಅವರನ್ನೆದುರಿಸುವ ಉಪಾಯಗಳನ್ನು ಶೋಧಿಸಬೇಕು. ಅಂದಾಗ ಇಂದಲ್ಲದಿದ್ದರೂ ಕಾಲಾಂತರದಲ್ಲಿಯಾದರೂ ಸತ್ಪರಿಣಾಮ ಕಂಡು ಬಂದೀತು.

ಇತ್ತೀಚೆಗೆ ನಾಲ್ಕಾರು ವರ್ಷಗಳಲ್ಲಿ ಈ ವಿಧ್ವಂಸಕ ತಂಡಗಳು ಹೆಚ್ಚುತ್ತಿರುವುದು ಕಂಡು ಬಂದಿದೆ. ಅಲ್ಲದೆ ಅವರಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಹಕಾರವಿರುವುದೂ ಸ್ಪಷ್ಟವಾಗಿದೆ. ಇವುಗಳ ಕಾರ್ಯಕ್ಷೇತ್ರದ ವ್ಯಾಪ್ತಿಯೂ ವಿಶಾಲವಾಗುತ್ತಿದೆ. ಕೆಲವೊಂದು ರಾಷ್ಟ್ರಗಳು ಕೆಲವು ವಿಧ್ವಂಸಕ ತಂಡಗಳಿಗೆ ನೆರವಾಗುತ್ತಲೂ ಇವೆ. ಅಲ್ಲದೆ ಆ ತಂಡಗಳು ಅವರಿವರನ್ನೂ, ಸರಕಾರಗಳನ್ನೂ ಕೂಡ ಬೆದರಿಸಿ ಪ್ರತ್ಯೇಕವಾಗಿ ಹಣ ಸಂಗ್ರಹಿಸುವುದೂ ನಡೆದಿರುತ್ತದೆ. ಹೀಗಾಗಿ ಇವರಿಗೆ ಹಣದ ಅಭಾವ ಅಷ್ಟೊಂದಾಗಿ ಕಾಡುತ್ತಿರುವುದಿಲ್ಲ. ಜೀವನದಲ್ಲಿ ನಿರಾಶೆ ಹೊಂದಿದ ದುಸ್ಸಾಹಸಿಗಳೇ ಈ ಬಗೆಯ ದುಷ್ಟ ಹವ್ಯಾಸಕ್ಕಿಳಿಯುವುದು ಕಂಡು ಬಂದಿದೆ. ನಿರಪರಾಧಿಗಳನ್ನು ವಿನಾಕಾರಣ ಹಿಂಸೆಗೆ ಈಡುಮಾಡುವುದು ಉಚಿತವಲ್ಲ ಎಂಬ ಮಾತನ್ನು ಈ ಹತಭಾಗ್ಯರಿಗೆ ಮನಗಾಣಿಸಿಕೊಡಬೇಕು. ಅಂದಾಗ ಮಾತ್ರ ಅವರು ಇಂಥ ವ್ಯರ್ಥ ಸಾಹಸದಿಂದ ಪರಾವೃತ್ತರಾಗಬಲ್ಲರು.

ಆ ವಿಧ್ವಂಸಕರ ಇಂಥ ಹೃದಯ ಪರಿವರ್ತನೆಗೆ ವಿಶ್ವವ್ಯಾಪಿ ಪ್ರಯತ್ನ ನಡೆಯಬೇಕು. ಅದಕ್ಕಾಗಿ ಸಕಲ ರಾಷ್ಟ್ರಗಳ ಸಕ್ರಿಯ ಸಹಕಾರ ಅತ್ಯಗತ್ಯ.

ಆತನ ಕೂದಲು ಬೆಳೆದಿತ್ತು. ಆಳವಾದ ಗೆರೆಗಳು ಮುಖದ ಮೇಲೆ ಮೂಡಿದ್ದವು. ತನ್ನೊಳಗೆ ತಾನೆ ಯೋಚಿಸುತ್ತಾ ಅವನು ನಡೆದಿದ್ದ. ಕೈಯಲ್ಲಿ ಹಿಡಿದಿದ್ದ ಊರುಗೋಲಿನ ಮೇಲೆ ತನ್ನೆಲ್ಲಾ ಭಾರವನ್ನು ಏರವಲಾಗಿಟ್ಟು ನಡೆಯುತ್ತಿದ್ದ. ಆಗೊಮ್ಮೆ ಈಗೊಮ್ಮೆ ದೀರ್ಘವಾಗಿ ನಿಟ್ಟುಸಿರು ಬಿಡುತ್ತಿದ್ದ.

ಅವನ ನಡಿಗೆಯಲ್ಲಿ ಸ್ಥಿರತೆ ಇರಲಿಲ್ಲ. ಹೆಜ್ಜೆ ಇಟ್ಟ ನಂತರ ಮತ್ತೊಮ್ಮೆ ಅದನ್ನು ದೃಢೀಕರಿಸಿ ಮುಂದಿನ ಹೆಜ್ಜೆಯಿಡುತ್ತಿದ್ದ. ನೀಳವಾದ ಅವನ ದೇಹ ಕೊಂಚ ಬಾಗಿತ್ತು. ಕರಿಯ ಬಣ್ಣದ ಕಣ್ಣುಗಳು ಇಳಿವಯಸ್ಸಿನಲ್ಲೂ ಚುರುಕಾಗಿ ತಮ್ಮ ಕಾರ್ಯ ನಿರ್ವಹಿಸು

ಎತ್ತರ-ತಗ್ಗು

ಕೆ. ಟಿ. ಶ್ರೀಧರ

ತ್ತಿದ್ದವು. ಮುಪ್ಪಿನ ಕಳೆ ಮುಖದ ಮೇಲೆ ನಾಟ್ಯವಾಡುತ್ತಿತ್ತು.

ಅವನು ಯೋಚಿಸುತ್ತಾ ನಡೆದಿದ್ದ.

"ಚಿತ್ರವನ್ನು ತುಳಿಯಬೇಡಿ." ಮಗುವಿನ ದನಿಯೊಂದಿಗೆ ಆತ ನಿಂತ. ಅವನ ಯೋಚನಾ ಲಹರಿ ಕಡಿಯಿತು. ಅವನ ಊರುಗೋಲು ನೆಲದ ಮೇಲೆ ಅರಳಿದ ವಿಚಿತ್ರವಾದ ನೂತನ ಪ್ರಪಂಚದ ಮೇಲೆ ನೆಟ್ಟಿತ್ತು. ಆತ ಗಾಬರಿಯಾಗಿ ಕೆಳಗೆ ನೋಡತೊಡಗಿದ.

ಚಿಕ್ಕ ಹೆಣ್ಣು ಮಗುವೊಂದು ಹಾದಿಯಲ್ಲಿ ತನ್ನ ಪ್ರತಿಭೆಯನ್ನು ಹೊರ ಹಾಕುತ್ತಿದ್ದಳು. ಕೈಲಿ ಹಿಡಿದ ಸೀಮೆ ಸುಣ್ಣವೇ ಆಕೆಗೆ ಕುಂಚವಾಗಿತ್ತು.. ಹಾದಿಯೇ ಹಾಳೆಯಾಗಿ ಆಕೆಯ ಚಿತ್ರವಾಗಿದ್ದಳು. ಆಕೆಗೆ ಸಹಾಯಕನಾಗಿ ಒಬ್ಬ ಹುಡುಗ ಚಿತ್ರವನ್ನು ಕಾಯುತ್ತಿದ್ದ.

"ಬಳಸಿ ಹೋಗಿ," ಹುಡುಗ ಇವನಿಗೆ ಹೇಳಿದ. ಆತ ಅಲುಗಾಡದೆ ನಿಂತಿದ್ದ. ಆತನಲ್ಲಿ ಅಲ್ಲಿಂದ ಚಲಿಸುವ ಯಾವುದೇ ಸೂಚನೆಗಳು ಕಂಡುಬರಲಿಲ್ಲ. ಅವನು ಚಿತ್ರವನ್ನು ನಿಟ್ಟಿಸುತ್ತಿದ್ದ.

ಆ ಹೆಣ್ಣು ಮಗು ಮತ್ತೊಂದು ಮಗುವಿನ-ಚಿತ್ರವನ್ನು ಬಿಡಿಸುತ್ತಿತ್ತು. ನೀಳವಾದ ಬೆರಳುಗಳು, ಗುಂಡಾದ ಮೀನ ಕಣ್ಣುಗಳು, ಸೂರ್ಯನ ರಶ್ಮಿಯಂತೆ ಕಂಗೊಳಿಸುವ ಕಣ್ಣಿನ ರೆಪ್ಪೆಗಳು, ಹಾಗೂ ಮುಂದಿಗೆ ರಿಬ್ಬನ್ ಕಟ್ಟಿದಂತೆ ಚಿತ್ರಿಸುತ್ತಿದ್ದಳು. ಚಿತ್ರಣದ ಹುಡುಗಿಯ ಮೇಲಂಗಿಯಲ್ಲಿ ಸಾಲು ಗುಂಡಿಗಳಿದ್ದವು. ಅದು ಮಗು ಹಿಡಿದಿದ್ದ ಬೊಂಬೆಯ ಪ್ರತಿರೂಪವೆ ಎಂದು ಸಾಲುಗುಂಡಿಗಳು ಸಾರುತ್ತಿದ್ದವು.

"ಗುಂಡಿಗಳು ಏತಕ್ಕೆ?" ಇವನು, ಮುದಿ ಚಿತ್ರಕಾರ ಪ್ರಶ್ನಿಸಿದ.

ಮಗು ಮೆಲ್ಲನೆ ಅವನನ್ನು ತಲೆಯೆತ್ತಿ ನೋಡಿತು. ಮುಖದ ಮೇಲೆ ಮುಗುಳು ನಗೆ ಸೂಸುತ್ತಾ ಉತ್ತರಿಸಿದಳು: "ಚಳಿಗೆ." "ಹೌದೆ!" ಚಿತ್ರಕಾರ ಆಶ್ಚರ್ಯಚಕಿತನಾಗಿ ನುಡಿದು ತನ್ನ ಕೈಲಿದ್ದ ಊರುಗೋಲನ್ನು ಮತ್ತೂ ಉಷ್ಣವುಳ್ಳ ಸ್ಥಳಕ್ಕೆ ಸ್ಥಳಾಂತರಿಸಿದ.

ಜನ ಇತ್ತ ಗಮನವೂ ಇಲ್ಲದಂತೆ ಓಡಿಯಾಡುತ್ತಿದ್ದರು, ಆ ಹುಡುಗನ ಮಾತಿಗೂ ಬೆಲೆ ಕೊಡದೆ. ಅವರಿಗೆ ತಮ್ಮ ಪಾದದ ಬಳಿಯಲ್ಲೆ ಸೃಷ್ಟಿಗೊಳ್ಳುತ್ತಿದ್ದ ನೂತನ ಪ್ರಪಂಚದ ಪರಿವೆಯೇ ಇರಲಿಲ್ಲ. ಆ ಹೆಣ್ಣು ಮಗು ಚಿತ್ರವನ್ನು ತನ್ನ ಮನಸ್ಸೊಪ್ಪುವಂತೆ ಬಿಡಿಸುವುದರಲ್ಲಿ ಮಗ್ನವಾಗಿತ್ತು. ಈ ಚಿತ್ರಕಾರ ಮಾತ್ರ ನಿಂತು ಆಕೆಯ ಚಿತ್ರಣದ ವೈಖರಿಯನ್ನು ವೀಕ್ಷಿಸುವ ಏಕೈಕ ವೀಕ್ಷಕನಾಗಿದ್ದ. ಆಕೆಯ ಚಿತ್ರಣದಲ್ಲಿ ಮೂಡಿಬರುತ್ತಿರುವ ಮುಗ್ಧ ಪ್ರತಿಭೆಯನ್ನು ಕಲ್ಪನೆಯ ಸಾಮರ್ಥ್ಯವನ್ನು ಕಂಡು ಚಕಿತನಾದ. ಆತ ಅದರಲ್ಲೇ ಸಂತಸವನ್ನು ಕಂಡ. ಬಾಲಿಶ ಚಿತ್ರಣದಲ್ಲಿ ನೂತನತೆ ಅವನ ಕಲ್ಪನೆಗೂ ಮಿಗಿಲಾಗಿತ್ತು. ಆತ ಬೆರಗುಗಣ್ಣಿನಿಂದ ಚಿತ್ರವನ್ನೇ ನೋಡುತ್ತಿದ್ದ.

ಕುಚೇಷ್ಟೆಯ ಕಣ್ಣುಗಳು ಇವನನ್ನೂ ನೋಡಿ ನಕ್ಕವು. ಚಿತ್ರಿತ ಹುಡುಗಿಯೂ ಸಹ ಇವನನ್ನೇ ನೋಡುತ್ತಿದ್ದಂತೆ ಭಾಸವಾಯಿತು. ನಿಂತ ಜಾಗದಿಂದ ಕೊಂಚ ಸರಿದು ಬೇರೆಯ ಸ್ಥಳದಲ್ಲಿ ನಿಂತಾಗಲೂ ಅವು ಇವನನ್ನೇ ನೋಡುತ್ತಿದ್ದವು. ಹುಡುಗಿಯೊಂದಿಗೆ ಒಂದು ನಾಯಿಮರಿ ಸಹ ಚಿತ್ರಿತವಾಗಿತ್ತು. ಅವೆರಡೂ ಮತ್ತೊಂದು ಕ್ಷಣದಲ್ಲಿ ಜನರು ಓಡಿಯಾಡಲಿಕ್ಕೆ ಹಾದಿ ಮಾಡಿಕೊಟ್ಟು ಓಡಿಹೋಗುವಷ್ಟು ಜೀವಂತವಾಗಿದ್ದವು.

ಮುದುಕ ಚಿತ್ರಕಾರ ನೀಳವಾದ ತನ್ನ ದೇಹವನ್ನು ಪ್ರಯಾಸದಿಂದ ಬಾಗಿಸಿ ಮಗುವನ್ನು ಪ್ರಶ್ನಿಸಿದ: "ಈ ನಾಯಿ ಕಚ್ಚುತ್ತದೆಯೆ?"

"ಹೌದು, ಹೌದು ಕಚ್ಚುತ್ತೆ!" ಮಗು ನಗು ಬೆರೆತ ದನಿಯಲ್ಲಿ ಜೋರಾಗಿ ಹೇಳಿತು. ಮತ್ತೆ ವೇಗವಾಗಿ ಚಿತ್ರದಿಂದ ತನ್ನ ಕೈ ತೆಗೆದು ಉದ್ಗಾರ ಮಾಡುತ್ತಾ, "ಓ ಅದು ಕಡಿಯುತ್ತೆ, ನನ್ನ ಬೆರಳನ್ನು ಕಡಿದಿದೆ!" ಎಂದಿತು.

ಚಿತ್ರಕಾರ ಆಕೆಯ ಮೃದುವಾದ ಹಸ್ತವನ್ನು ತನ್ನ ಸುಕ್ಕುಗಟ್ಟಿದ ಕೈಯಲ್ಲಿ ಹಿಡಿದು ಸುಣ್ಣ ಮೆತ್ತಿದ ಬೆರಳನ್ನು ನೋಡುತ್ತಾ, ತಲೆಯನ್ನು ಸಮ್ಮತಿಸುವಂತೆ ಆಡಿಸುತ್ತಾ, "ಎಷ್ಟು ಭಾರಿಯಾಗಿ ಕಡಿದಿದೆ" ಎಂದ! ಮಗು ಕ್ಷಣದಲ್ಲೆ ತನ್ನ ಕೈಯನ್ನು ಆತನಿಂದ ಕಸಿದುಕೊಂಡು ವಿಚಿತ್ರವಾದ ರೀತಿಯಲ್ಲಿ ನಕ್ಕು, "ನಾನು ನಿನ್ನ ಫೂಲ್ ಮಾಡ್ದೆ, ಬೆಪ್ಪಾಗಿಸಿದೆ" ಎಂದು ಸಂತಸದಲ್ಲಿ ಕೂಗಿ ಮತ್ತೆ ತನ್ನ ಅರ್ಧ ಮುಗಿದಿದ್ದ ಚಿತ್ರಣದತ್ತ ಹೊರಳಿತು. ಆ ಹುಡುಗ ಮತ್ತೆ ತನ್ನ ಕೆಲಸದ ಕಡೆಗೆ ಗಮನವೀಯುತ್ತಿದ್ದ.

'ರವಿ ಕಾಣದ್ದನ್ನು ಕವಿ ಕಂಡ, ಕವಿಗೆ ನಿಲುಕದ್ದು ಕುಂಚ ಕಂಡಿತು ಚಿತ್ರಕಾರ ಮನದಲ್ಲೇ ಅಂದುಕೊಂಡ. ಆಕೆಯ ನಿತ್ಯ ನೂತನವಾದ ದೃಷ್ಟಿಯನ್ನು ಕಂಡು ಹೆಮ್ಮೆ ಬೀಗಿದ. ಈಗ ಆ ಹೆಣ್ಣು ಮಗು ಹಾದಿಯ ತುಂಬಾ ವೃತ್ತಾಕಾರಗಳನ್ನು ರಚಿಸತೊಡಗಿತ್ತು.

"ಅವು ಏನು?" ಚಿತ್ರಕಾರ ಪ್ರಶ್ನಿಸಿದ.

"ಸೇಬುಗಳು," ಮತ್ತೂ ಹೆಚ್ಚಿಗೆ ವೃತ್ತಗಳನ್ನು ರಚಿಸುತ್ತಾ ನುಡಿಯಿತು.

ಕುಂಕುಳ ಬದಿಯಲ್ಲಿ ವಿಪರೀತ ಭಾರ ಹೊತ್ತ ಇಬ್ಬರು ಇತ್ತಕಡೆ ಬರುತ್ತಿದ್ದರು. "ಹುಷಾರು, ಬಳಸಿ ಹೋಗಿ," ಹುಡುಗ ಅವರನ್ನು ಎಚ್ಚರಿಸಿದ್ದ. ಆದರೆ ಆ ಮೂರ್ಖರು ಅವನ ಮಾತಿಗೆ ಯಾವುದೇ ಪ್ರತಿಕ್ರಿಯೆ ತೋರದೇ ನೇರವಾಗಿ ಅವರ ಮೇಲೆ ನಡೆದುಹೋದರು. ಆ ಹೆಣ್ಣು ಮಗು ಅವರ ರಾಕ್ಷಸ ಕಾಲುಗಳು ಬಳಿ ಬರುತ್ತಿದ್ದಂತೆ ಬೆಚ್ಚಿ ಹಿಂದೆ ಸರಿದಳು. ಅವರ ಮೆಟ್ಟುಗಳು ಕ್ರಮವಾಗಿ ನಾಯಿ, ಮಗುವಿನ ಮುಂಡಿ ನಂತರ ಸೇಬುಗಳನ್ನು ಮೆಟ್ಟಿ ಮುಂದೆ ನಡೆದವು.

"ಚಿತ್ರಗಳು...!" ಚಿತ್ರಕಾರ ಅವರಿಗೆ ತಿಳಿಯುವಂತೆ ಅರಚಿದ. "ಚಿತ್ರಗಳು ನಿಮಗೆ ಕಾಣುವುದಿಲ್ಲವೇ ?"

"ಹಾಳಾಗಲಿ" ಒಬ್ಬ ನುಡಿದು, ಅದರ ಮೇಲೆಯೇ ನಡೆದಿದ್ದನು. ಹೆಚ್ಚಿನ ಪ್ರತಿಕ್ರಿಯೆಯ ಆರ್ಭಟವಿಲ್ಲದೆ, ತಮಗೂ ಅದಕ್ಕೂ ಯಾವುದೇ ರೀತಿಯಾದ ಸಂಬಂಧದ ಬಂಧನವಿಲ್ಲದೆ, ಸೃಷ್ಟಿಯಾಗುತ್ತಿದ್ದ ನೂತನ ಜಗದ ಅಸ್ತಿತ್ವಕ್ಕೆ ಕೊಡಲಿಯ ಪೆಟ್ಟು ಹಾಕಿ, ಧೂಳೆಬ್ಬಿಸಿ ಅವರಿಬ್ಬರೂ ಮುನ್ನಡೆದರು.

ಆ ಮಗುವಿನ ಮುಗ್ಧ ಕಣ್ಣುಗಳಲ್ಲಿ ಅಶ್ರು-


ಧಾರೆಧಾರೆಯಾಗಿ ಹರಿಯುವ ಮುನ್ನ ತನ್ನ ಬಳಿ ತಾಳೆಯ ಮರದಂತೆ ನಿಂತಿದ್ದ ಹಳೆಯ ಚಿತ್ರಕಾರನತ್ತ ನೋಡಿದಳು. ಆತನ ಮುಖದಲ್ಲಿ ಮೂಡಿದ್ದ ಸಿಟ್ಟಿನ ಸುಳಿಯನ್ನು ಕಂಡು, "ತಾತಾ ಯೋಚಿಸಬೇಡಿ, ಮತ್ತೆ ಇವೆಲ್ಲವನ್ನೂ ಬರೆಯಲಿಕ್ಕೆ ಸಾಧ್ಯ!" ಎಂದಳು.

'ಮತ್ತೆ ಇವೆಲ್ಲವನ್ನು ಬರೆಯಲಿಕ್ಕೆ ಸಾಧ್ಯ' ಚಿತ್ರಕಾರ ತನ್ನಲ್ಲಿ ತಾನೇ ಮತ್ತೆ ಮಾರ್ದನಿಸಿಕೊಂಡ. ತನ್ನೆಲ್ಲಾ ಭಾರವನ್ನು ಊರುಗೋಲಿನ ಮೇಲೆ ಹಾಕಿ ತನಗಿಂತಲೂ ಭಾರವಾದ ಹೆಜ್ಜೆಯನ್ನು ಪ್ರಯಾಸದಿಂದ ಎಳೆಯುತ್ತಾ ಅವನು ತನ್ನ ಹಾದಿಯನ್ನು ಮತ್ತೆ ಬೆಳೆಸಿದ. ದೂರ ಬಹು ದೂರ ಹೋದ, ಆದರೂ ಬಹಳ ದೂರ ಹೋಗಿರಲಿಲ್ಲ.

ಎಂದಿಗಿಂತ ಇಂದು ಮುಂಚಿತವಾಗಿಯೇ ಅವನು ಮನೆಗೆ ಬಂದ. ಬಂದವನು ನೇರವಾಗಿ ತನ್ನ ಚಿತ್ರಣ ಕೋಣೆಗೆ ನಡೆದ. ಕಪಾಟಿನಿಂದ ಕುಂಚವನ್ನು ಎಳೆದು ಹಿಡಿದ. ಆಗಲೇ ಅವನು ಚಿತ್ರವನ್ನು ಸೃಷ್ಟಿಸುವಂತೆ ಕಂಡ. ಚಿತ್ರಕಾರನಿಗೆ ಈ ಕುಂಚಗಳು ತನ್ನೆಲ್ಲಾ ಶಕ್ತಿಯನ್ನು ತೊಟ್ಟು ವ್ಯಂಗ್ಯವಾಗಿ ಆ ಇಬ್ಬರು ಕಣ್ಣಿದ್ದೂ ಕುರುಡಾಗಿ ಮಗುವಿನ ಚಿತ್ರಣದ ಮೇಲೆ ಹಾದು ಹೋದವರನ್ನು ಚಿತ್ರಿಸುವಂತೆ ಪ್ರಚೋದಿಸುತ್ತಿದ್ದವು.

ಮುಂದೆಯೇ ನಿಂತಿದ್ದ, ತನಗಿಂತ ಯುವಕನಾಗಿದ್ದ ಮತ್ತೊಬ್ಬ ತರುಣ ಚಿತ್ರಕಾರನನ್ನು ಕಂಡ. ಇವನು ಕೇಳಿದ್ದ, "ನೀನು ನನ್ನನ್ನು ಮುದುಕನೆಂದು ತಿಳಿಯಬಹುದಲ್ಲವೆ?" ಎಂದು. ವಿಚಿತ್ರವಾದ ನಗೆ ಸೂಸುತ್ತಾ, "ನೀನು ತಪ್ಪು ತಿಳಿದಿದ್ದೀಯ, ನನ್ನ ಕಣ್ಣುಗಳು ತೀಕ್ಷ್ಣವಾಗಿವೆ, ನನ್ನ ಕೈ..." ಪಕ್ಕದಲ್ಲಿದ್ದ ಕುಂಚವನ್ನು ಹಿಡಿದು, "ನನ್ನ ಕೈ ಗಟ್ಟಿಯಾಗಿದೆ," ಎಂದ.

ಕೆಲ ಕ್ಷಣ ಚಿತ್ರಕಾರ ಹಾಗೂ ಅವನ ತರುಣ



ಸಂಗಿಡಿಗ ಒಬ್ಬರನ್ನೊಬ್ಬರು ತದೇಕ ಚಿತ್ತದಿಂದ ನಿಟ್ಟಿಸಿದರು. ಕೈಲಿ ಹಿಡಿದಿದ್ದ ಕುಂಚವನ್ನು ನೋಡಿದರು. ನಂತರ ಚಿತ್ರಕಾರ ತನ್ನ ಕೈಯನ್ನು ಹಿಂದಕ್ಕೆ ಸರಿಸಿಕೊಂಡು ಇಡೀ ಚಿತ್ರಣಶಾಲೆಯನ್ನು ನೂತನವಾದುದೆಂಬಂತೆ ನೋಡತೊಡಗಿದ.

ಇಲ್ಲ. ಚಿತ್ರಕಾರ ಏನನ್ನೂ ಕಳೆದುಕೊಳ್ಳುವುದಿಲ್ಲ. ತನ್ನೆಲ್ಲಾ ಚಿತ್ರಣವನ್ನು ಅವನು ಮತ್ತೆ ಬೇಕಾದಾಗ ಪಡೆಯಬಹುದು. ಆತ ಸುತ್ತಲೂ ನೋಡತೊಡಗಿದ. ತಾನು ಮೆಚ್ಚಿ ಮದುವೆಯಾದ ಹುಡುಗಿಯದು, ತನ್ನ ಬಾಲ್ಯ ಸ್ನೇಹಿತರದು. ಅವರು ಇನ್ನಿಲ್ಲ. ತನ್ನ ಹಾಳಾದ ಹಳ್ಳಿಯ ಹಳೆಯ ಚಿತ್ರ. ಬಹಳ ಹಿಂದೆ ಕಡಿದು ಹಾಕಿದ ಆಲದಮರದ ಜೀವಂತ ಚಿತ್ರ. ತನ್ನ ಹಳ್ಳಿಯ ಪಕ್ಕದಲ್ಲಿ ಹಾದು ಹೋಗುವ ಕಾವೇರಿಯಲ್ಲಿ ಮಿಂದ ಸಂಧ್ಯಾ ಸೂರ್ಯನ ಚಿತ್ರ. ಇವೆಲ್ಲ ಮತ್ತೆ ಜೀವ ತುಂಬಿಬರಲು ಸಾಧ್ಯ. ನಿನ್ನೆ ಇಂದು ಆಗಲು ಸಾಧ್ಯ – ಅವನು ಅಂದುಕೊಂಡ.

ಇಲ್ಲ, ಚಿತ್ರಕಾರ ಏನನ್ನೂ ಕಳೆದುಕೊಳ್ಳುವುದಿಲ್ಲ, ತನ್ನ ಸ್ನೇಹಿತರನ್ನೂ ಸಹ. ಅವರೆಲ್ಲ ಇನ್ನೂ ಬದುಕಿದ್ದರೆ.... ಆ ಸ್ನೇಹಿತ ತನ್ನ ಹಳೆಯ ಕವಿ ಹೇಳಿದ ಮಾತು– "ನನಗೆ ಬೇಸರವಾದಾಗ, ಚಳಿಯಾದಾಗ ನಾನು ನಿನ್ನ ಬಳಿ ಬರುತ್ತೇನೆ. ನಿನ್ನ ಚಿತ್ರಣಶಾಲೆಯಲ್ಲಿ ಅಷ್ಟು ಸೂರ್ಯಪ್ರಕಾಶವಿದೆ." ಚಿತ್ರಕಾರ ತನ್ನ ಕಣ್ಣನ್ನು ಗರಗರನೆ ತಿರುಗಿಸಿ ನೋಡಿದ. ಬಯಲಿನ ಚಿತ್ರಣದಿಂದ ಸೂರ್ಯನ ರಶ್ಮಿ ಹಾದು ಬಂದಂತೆ ಭಾಸವಾಯಿತವನಿಗೆ. ಅವನು ಬಹಳ ಹಿಂದೆ ವೀಕ್ಷಿಸಿದ ಅನೇಕ ಹೊರದೇಶದ ಬಯಲುಗಳು, ಹಲವು ತಿಳಿ ನೀಲ ಬಣ್ಣದ್ದು ಹಲವು ಪಟ್ಟನೀಲಿ ಬಣ್ಣದ್ದು, ಸುತ್ತಲೂ ಹರಡಿತ್ತು, ವಿಚಿತ್ರವಾಗಿ.

ಕ್ಯಾನ್‌ವಾಸಿನ ಮೇಲೆ ಹಾಸಿದ್ದ ಗಾಜು ಪ್ರತಿಫಲಿಸಿತು. ಚಿತ್ರವನ್ನು ಸೂಕ್ಷ್ಮವಾಗಿ ನೋಡಲು ಚಿತ್ರಕಾರ ಮುಂದಕ್ಕೆ ಸರಿದ. ಅವನ ಪ್ರತಿಬಿಂಬ ಅವನೊಡನೆ ಸರಿದಿತ್ತು. ಚಿತ್ರಕಾರ ನಕ್ಕ. ಪ್ರತಿಬಿಂಬ ಪ್ರತಿಯಾಗಿ ನಕ್ಕಿತ್ತು.

'ಆದರೆ ನಾನೀಗ ಹಳಬನಾಗಿದ್ದೇನೆ.' ಅವನು ಯೋಚಿಸಿದ. ತನ್ನೆರಡು ಕೈಗಳನ್ನು ಎತ್ತಿ ತನ್ನ ಬಿಳಿ ಕೂದಲುಗಳ ಮೇಲಿಟ್ಟಾಗ ಮಗುವಿನ ಮಾತು ಮನದಲ್ಲಿ ಮಾರ್ದನಿಗೊಂಡಿತ್ತು- ಮತ್ತೆ ಇವೆಲ್ಲವನ್ನೂ ಬರೆಯಲಿಕ್ಕೆ ಸಾಧ್ಯ.

ಅವನ ಜೀವನವೆಲ್ಲಾ ಹಾಳು. ಆತನೆಲ್ಲಾ ಶ್ರಮವೂ ಹಾಳು. ಅವನ ಚಿತ್ರಗಳನ್ನು ಹೊತ್ತು ಕಲಕತ್ತೆಯಿಂದ ಬರುತ್ತಿದ್ದ ಹಡಗ ಮಾರ್ಗದಲ್ಲೇ ಸುಟ್ಟು ಭಸ್ಮವಾಯಿತು, ನೀರ ಪಾಲಾಯಿತು. ಅವು ಅವನ ಅತ್ಯುತ್ತಮವಾದ ಕೃತಿಗಳು. ಈಗ ಚಿತ್ರಕಾರ ಮತ್ತೊಂದು ಹೆಜ್ಜೆ ಮುಂದಿಟ್ಟು ಚಿತ್ರದಲ್ಲಿ ನಿಟ್ಟಿಸಿ, ಕಿಟಕಿಯಲ್ಲಿ ನೋಡುವಂತೆ, ನೋಡಿದ. ತನ್ನ ಚಿತ್ರದಲ್ಲಿ ಸೆರೆಹಿಡಿದ ಜ್ವಾಲೆಯನ್ನು ಕಂಡು ಬೆಚ್ಚಿದ. ಮತ್ತೆ ಮತ್ತೆ ನಿಟ್ಟಿಸಿದಾಗ ಅದು ಬಣ್ಣವೆಂದರಿವಾದಾಗ ನಿಟ್ಟುಸಿರಿಟ್ಟ.

ಹಡಗು ಪೂರ್ತಿಯಾಗಿ ಸುಟ್ಟಿತ್ತು. ಅದರೊಡನೆ ಇವನ ಚಿತ್ರವೂ ಸಹ. ಅವನ ಆಸೆ, ಭರವಸೆ ಎಲ್ಲಾ ಸುಟ್ಟಿತ್ತು. ಹೊಸ ಚಿತ್ರಣಕ್ಕಾಗಿ ಬೆರೆಸಿಟ್ಟ ಬಣ್ಣ ಒಣಗತೊಡಗಿತ್ತು. ಅವನ ಗೆಳೆಯರು ಸಂತಾಪ ಸೂಚಿಸಿದ್ದರು. ಅವನು ಒಣಗಿದ ಬಣ್ಣವನ್ನು ಕೆರೆದು ತೆಗೆದ. ಮತ್ತೆ ಬಣ್ಣವನ್ನು ಬೆರಕೆ ಮಾಡಿದ. ಮತ್ತೆ ಕುಂಚವನ್ನು ಹಿಡಿದು ಆ ಹುಡುಗಿಯ ಮಾತನ್ನು ನೆನೆದಿದ್ದ, 'ಮತ್ತೆ ಇವೆಲ್ಲವನ್ನು ಬರೆಯಲಿಕ್ಕೆ ಸಾಧ್ಯ.'

ಇಂದು ನಾಳೆಯ ಪರಿವೆಯೇ ಇಲ್ಲದೆ ಬರೆಯತೊಡಗಿದ. ದಿನ ದಿನವೂ ಬರೆಯುತ್ತಿದ್ದ. ತನ್ನ ಕೋಣೆಯಿಂದ ಹೊರ ಹೋಗಿ, ಹೆದ್ದಾರಿಯಲ್ಲಿ ಕೂತೂ ನಿಂತೂ ಬರೆದಿದ್ದ, ಹುಚ್ಚು ಹಿಡಿದವನಂತೆ ಬರೆದ.

ಹೆದ್ದಾರಿಯಲ್ಲಿ ಕಂಡ ಸಕಲ ಜೀವರಾಶಿಯನ್ನು ಚಿತ್ರಿಸಿದ. ಹರಡಿದ ಹೂರಾಶಿಯಲ್ಲಿ, ಸೂರ್ಯನಲ್ಲಿ, ಸೂರ್ಯನ ರಶ್ಮಿಯಲ್ಲಿ ತನ್ನ ಕುಂಚವನ್ನು ಆಡಿಸಿದ. ಪ್ರತಿದಿನವೂ ಹೊಸ ಹೊಸದನ್ನು ಕಾಣುತ್ತಿದ್ದ. ಹಿಂದೆಂದೂ ಕಾಣದವು ಈಗ ಗೋಚರಿಸುತ್ತಿದ್ದವು. ಬೆಳಕಿನಲ್ಲಿ ಮಿಂದ

ಬಯಲುಗಳು, ಹೊಸ ಅರಿವೆಯುಟ್ಟ ಹಳ್ಳಿಯ ಹೆಣ್ಣುಗಳು, ಬಂಗಾರದ ಬಿಚ್ಚೋಲೆಯನ್ನು ಧರಿಸಿದ್ದವರು, ಕಪ್ಪಗೆ ಹೊಳೆಯುತ್ತಿದ್ದ ಎಮ್ಮೆಗಳ ಹಿಂಡು ದೀರ್ಘವಾಗಿ ಹಾಗೂ ಗಾಂಭೀರ್ಯದಿಂದ ನಡೆಯುತ್ತಿದ್ದದು, ತಮ್ಮ ಉತ್ತುಂಗ ಶಿಖರವನ್ನು ಆಕಾಶದಲ್ಲಿ ತೂರಿಬಿಟ್ಟ ಬೆಟ್ಟದ ಸಾಲುಗಳು. ಪ್ರತಿಯೊಂದರಲ್ಲೂ ಹೊಚ್ಚ ಹೊಸತನ ಕಾಣುತ್ತಿದೆ. ಒಂದೊಂದರಲ್ಲೂ ವಿಧವಿಧವಾದ ಅರ್ಥ ಕಾಣಬರುತ್ತಿದೆ. ದೂರದಲ್ಲಿ ನಿಂತ ಬೆಟ್ಟವನ್ನು ನೋಡಿದ. ಜನ ನೋಡದಿದ್ದುದೆಲ್ಲವನ್ನೂ ನೋಡಿದ. ಚಿತ್ರಕಾರ ಸಂಕುಚಿತನಾದ. ಅವರೆಲ್ಲಾ ತನ್ನ ಮೇಲೆ ಕೋಪಿಸಿಕೊಂಡಂತೆ ಭಾಸವಾಯಿತವನಿಗೆ. 'ಆದರೆ ನಾನು ಅವರನ್ನು ಸಂತುಷ್ಟಪಡಿಸಲು ಏನು ಮಾಡಬೇಕು ? ಇಲ್ಲ. ನಾನಿರುವುದು ಇವೆಲ್ಲವನ್ನು ಸಂತುಷ್ಟಪಡಿಸಲಲ್ಲ. ಕುಂಚದಿಂದ ಸೌಂದರ್ಯವನ್ನು ಸೆರೆಹಿಡಿಯಲು ಆ ಹೆಣ್ಣು ಮಗುವಿನಂತೆ ನಾನು ನನ್ನೆಲ್ಲಾ ಚಿತ್ರಗಳನ್ನು ನನ್ನ ಬಾಳ ಹಾದಿಯಲ್ಲಿ ಹರಡಿದ್ದೇನೆ. ಕೆಲ ಕ್ಷಣ ನಿಂತು ನೀನಿರುವ ಪ್ರಪಂಚವನ್ನು ಕಾಣು. ಅವುಗಳತ್ತ ನೋಡು. ಅವರನ್ನು ನೋಡಬೇಡ,' ಅವನು ಅಂದುಕೊಂಡ.

ಅವನಿನ್ನೂ ನಗುತ್ತಿದ್ದ.

'ಯೋಚಿಸಬೇಡಿ, ಮತ್ತೆ ಇವೆಲ್ಲವನ್ನೂ ಬರೆಯಲಿಕ್ಕೆ ಸಾಧ್ಯ,' ತನ್ನಲ್ಲೇ ಗೊಣಗಿಕೊಂಡ. ಮತ್ತೆ ಎದ್ದುನಿಂತು ತನ್ನ ಕೋಣೆಯಿಂದ ಹೊರಬಂದು, "ಯಾರಾದರೂ ಇದ್ದೀರಾ ?" ಎಂದು ಕೂಗಿದ.

"ನಾನು," ಅಡುಗೆ ಮನೆಯಿಂದ ಅವನ ಮಗ ಉತ್ತರಿಸಿದ.

"ನನಗೆ ಸಹಾಯ ಮಾಡು. ಆಂಜನೇಯ ಗುಡ್ಡದ ಮೇಲೆ ನಿಂತು ಕಾವೇರಿ ಕಾಲುವೆಯನ್ನು ಚಿತ್ರಿಸಬೇಕೆಂಬ ಮನಸ್ಸಾಗಿದೆ. ನನ್ನೆಲ್ಲಾ ಸಾಮಗ್ರಿಗಳನ್ನು ಒಂದಾಗಿ ಕಟ್ಟಿಕೊಡು."

ತರುಣ, ಉತ್ಸಾಹಿ ಯುವಕರೊಡಗೂಡಿ ಈ ಮುಪ್ಪಿನ ಚಿತ್ರಕಾರ ಹನುಮಂತನ ಗುಡ್ಡವನ್ನು ಏರತೊಡಗಿದ. ಹಾದಿಯಲ್ಲಿ ಅವರಿಗೆ ಹೇಳಿದ. "ಸೌಂದರ್ಯಕ್ಕೆ ನಾನಾ ಮುಖಗಳಿವೆ. ಒಂದೊಂದು ಮುಖ ಒಬ್ಬೊಬ್ಬರಿಗೆ ಕಾಣಿಸುತ್ತದೆ. ಆದುದರಿಂದ ಕಾವೇರಿಯ ಕಾಲುವೆಯನ್ನೇ ಎಲ್ಲರೂ ನಿಮ್ಮ-ನಿಮ್ಮದೇ ಆದ ರೀತಿಯಲ್ಲಿ ಚಿತ್ರಿಸಿ."

"ಒಂದೇ ಕಾಲುವೆಯಿರುವುದು," ಒಬ್ಬ ತರುಣ ಹೇಳಿದ.

"ಆದರೆ ನಾವು ಬಹಳ ಇದ್ದೇವಲ್ಲ," ಚಿತ್ರಕಾರ ನಿರ್ವಿಕಾರ ಭಾವನೆಯಿಂದ ಉತ್ತರಿಸಿದ. ತನಗಾಗಿ ಒಂದು ಪ್ರಶಸ್ತವಾದ ಸ್ಥಳವನ್ನಾರಿಸಿಕೊಂಡು ಚಿತ್ರಿಸಲು ತೊಡಗಿದ. ಕಾವೇರಿಯ ಕಾಲುವೆ ಅವನ ಮುಂದೆ ಆಳದಲ್ಲಿ ಹರಿಯುತ್ತಿದೆ. ಅದರ ಸುತ್ತ ನಿಂತ ಗುಡ್ಡದ ಪ್ರತಿಬಿಂಬ ಕಾಣುತ್ತಿದೆ ಸುಂದರವಾಗಿದೆ.

ಮೆಚ್ಚುಗೆಯಾದ ಬಣ್ಣವನ್ನು ಆರಿಸಿ ಮುಂದೆ ಇದ್ದ ಕ್ಯಾನ್‌ವಾಸಿನ ಮೇಲೆ ಗೆರೆಯನ್ನು



ಅವರವರು ಮಾಡಿದ ಪಾಪ ಅವರವರೇ ಹೊರಬೇಕು ಅನ್ನೋದು ಸುಳ್ಳಲ್ಲ ಕಣೋ...

ಮೂಡಿಸಿದ. ಮುಂದೆ ಸರಿಯುವುದು, ಕಾಲುವೆಯನ್ನು ನೋಡುವುದು ಮತ್ತೆ ಕುಂಚದಿಂದ ಸೆರೆಹಿಡಿಯುವುದು. ನಿರಂತರವಾಗಿ ಸಾಗಿತ್ತು ಅವನ ಚಿತ್ರಣ- ಕಾಲದಂತೆ, ಸೂರ್ಯನಂತೆ.

ಕಾಲುವೆ ಅವನಿಗೆ ನೀಲ ಆಕಾಶದ ಅಡಿಯಲ್ಲಿ ಬಿಳಿಯಾಗಿ ಕಂಡಿತು. ಸುತ್ತಲೂ ಹಸುರಾಗಿ ಬೆಳೆದುನಿಂತ ಬಯಲು ಸೂರ್ಯನ ಕಿರಣದಿಂದ ಮಿನುಗುತ್ತಿದೆ. ಅದರ ಪ್ರತಿಬಿಂಬ ಮತ್ತೂ ಚೆನ್ನಾಗಿ ನೀರಿನಲ್ಲಿ ಈಜಾಡುತ್ತಿದೆ.

ಸಜೀವವಾಗಿ ಕಾವೇರಿಯು ಕಾಲುವೆ ಕುಂಚದ ಮೂಲಕ ಕ್ಯಾನ್ವಾಸಿನ ಮೇಲೆ ಮೂಡಿತ್ತು. ಎಲ್ಲಾ ನೀಲಿಯ ಹಾಗೂ ಕಿತ್ತಳೆಯ ಬಣ್ಣದಿಂದ ಕೂಡಿತ್ತು. ದೂರದಲ್ಲಿ ಹೆದ್ದಾರಿಯ ತುಣುಕು ಮಾತ್ರ ಇತ್ತು.

ಚಿತ್ರಕಾರ ಎದ್ದುನಿಂತ. ಎದುರು ಎದ್ದು ನಿಂತಿದ್ದ ಬೆಟ್ಟವನ್ನು ವೀಕ್ಷಿಸಿದ. ಮತ್ತೆ ಅದೇ ದೃಷ್ಟಿಯಿಂದ ತನ್ನ ಚಿತ್ರಣವನ್ನು ನೋಡಿದ. ಆ ಹುಡುಗಿ ಚಿತ್ರಣವನ್ನು ಹಾದಿಯಲ್ಲಿ ಬರೆದದ್ದು, ಅದರ ಮೇಲೆ ಅಡಿಯಿಟ್ಟ ಜನ ಎಲ್ಲವನ್ನು ನೆನೆಯಿಸಿಕೊಂಡ. ಮತ್ತೆ ನಿಟ್ಟುಸಿರಿಟ್ಟು ಅಂದುಕೊಂಡ: ಯೋಚನೆಯಿಲ್ಲ. ಮತ್ತೆ ಇವೆಲ್ಲವನ್ನೂ ಬರೆಯಬಹುದು.

'ನಾನು ಮೊದಲು ಆ ಹುಡುಗಿಯನ್ನು ಹಾದಿಯಲ್ಲಿ ಚಿತ್ರಿಸುತ್ತಿರುವಂತೆ ಚಿತ್ರಿಸುತ್ತೇನೆ, ನಂತರ ಕಾವೇರಿಯನ್ನು ಮತ್ತೆ ಮತ್ತೆ ಚಿತ್ರಿಸುತ್ತೇನೆ. ಗುಡ್ಡದ ಮೇಲೆ ನಿಂತು, ಎತ್ತರದಲ್ಲಿ ನಿಂತು ಚಿತ್ರಿಸುತ್ತೇನೆ', ಎಂದುಕೊಂಡ.

ಕತ್ತಲು ತೆವಳುತ್ತಿತ್ತು. ಕ್ಯಾನ್ವಾಸನ್ನು ಎತ್ತಿಹಿಡಿದು ತನ್ನ ಸಾಮಗ್ರಿಯನ್ನು ಮತ್ತೆ ಜೋಡಿಸಿಕೊಂಡು ಕೆಳಗಿಳಿಯತೊಡಗಿದ. ಕತ್ತಲಿನ ಧೀಮಂತತೆಯಲ್ಲಿ ಅವನ ಬಿಳಿ ಕೂದಲು ಸಣ್ಣದಲ್ಲಿ ಗೆರೆ ಎಳೆದಂತೆ ಕಂಡುಬರುತ್ತಿತ್ತು. ಅವನು ಯೋಚಿಸುತ್ತಾ ನಡೆಯುತ್ತಿದ್ದ, ಇಳಿಯುತ್ತಿದ್ದ.

ಕತ್ತಲು ಬೆಳಕಿನ ಮೇಲೆ ಸಂಪೂರ್ಣ ಒಡೆತನ ಸಾಧಿಸಿತ್ತು. ಹಾದಿಗಾಣದಿದ್ದರೂ ಅವನು ಧೈರ್ಯದಿಂದ ನಡೆದಿದ್ದ. ಅವನಿಂದ 'ಯೋಚಿಸಬೇಡಿ, ಇವನ್ನು ಮತ್ತೆ ಬರೆಯಲು ಸಾಧ್ಯ' ಎಂಬ ಧ್ವನಿ ಪದೇ ಪದೇ ಹೊರಬರುತ್ತಿತ್ತು. ನಿಟ್ಟುಸಿರಿಟ್ಟ.

ಆತ ತನ್ನೆಲ್ಲಾ ಸಾಮಗ್ರಿಗಳನ್ನು ಹೊತ್ತು ಕತ್ತಲಲ್ಲಿ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ನಡೆಯುತ್ತಿದ್ದ. ಬಹಳ ದೂರವಿದ್ದ ಮನೆ ಕ್ರಮೇಣ ಹತ್ತಿರ ಹತ್ತಿರವಾಗುತ್ತಿತ್ತು. ಆದರೂ, ಎಷ್ಟು ನಡೆದರೂ ಅದು ಅಲ್ಲೇ ಇತ್ತು. ಬೀದಿ ದೀಪ ಕಂಡಾಗ ಹಿಂದಿರುಗಿ ನೋಡಿದ್ದ. ಅವನ ನೆರಳು ಅದ್ಭುತಾಕಾರವಾಗಿ ಬೆಳೆದು ನಿಂತಿತ್ತು. ಹಿಮಾಲಯವನ್ನು ಮೀರಿಸಿತ್ತು. ತನ್ನಲ್ಲಿ ತಾನೇ ಸಂತಸಗೊಂಡ. ಮುಂದೆ ತಿರುಗಿದಾಗ ಮುಗ್ಧ ಮಗುವಿನ ಚಿತ್ರ ಎದುರಾಯಿತು. ಅದರೆದುರು ಇವನು ಕ್ಷೀಣಿಸುತ್ತಿದ್ದ, ಶೂನ್ಯವಾಗುತ್ತಿದ್ದ, ಕುಬ್ಜನಾಗುತ್ತಿದ್ದ. ಆ ವೇಳೆಗೆ ದೀಪ ಮರೆಯಾಗಿ ಮನೆ ಎದುರಾಯಿತು. ಆಯಾಸದ ನಿಟ್ಟುಸಿರಿಟ್ಟ.

(ರಶಿಯನ್ ಕಥೆಯೊಂದರ ಸ್ಫೂರ್ತಿಯಿಂದ)

ಪ್ರಜಾಪ್ರಭುತ್ವವೆಂದರೆ ಪರರಿಂದ ನಿಯಂತ್ರಣಕ್ಕೊಳಗಾಗುವ ಬದಲು ತಮ್ಮನ್ನು ತಾವೇ ನಿಯಂತ್ರಣಕ್ಕೊಳಪಡಿಸಿಕೊಳ್ಳುವ ಕಲೆ.

—ಜಾರ್ಜ್ ಕ್ಲೆಮಾನ್‌ಶ್ಯೂ

ಧರ್ಮವೆಂದರೆ ಒಳ್ಳೆ ನಡತೆ, ಬರಿ ನಂಬುಗೆಯಲ್ಲ. —ರಾಧಾಕೃಷ್ಣನ್

ಸುಳ್ಳು ಹೇಳುವುದು ಸುಲಭ. ಆದರೆ ಒಂದೇ ಒಂದು ಸುಳ್ಳನ್ನು ಹೇಳುವುದು ಕಠಿಣ.

—ಇ. ಟಿ. ಎನ್.

ಅಪೂರ್ವ ಗುಣಧರ್ಮದ ಲೋಹ ಬೆರಿಲಿಯಂ

ವಿಶ್ವ ರಚನೆಗೆ ಅಡಿಗಲ್ಲಾಗಿರುವ ೧೦೩ ಮೂಲ ವಸ್ತುಗಳನ್ನು (elements) ರಸಾಯನ ಶಾಸ್ತ್ರಜ್ಞರು ಇಂದಿನವರೆಗೆ ಗುರುತಿಸಿದ್ದಾರೆ. ಇವುಗಳಲ್ಲಿ ಸುಮಾರು ೯೦ ರಷ್ಟು ನೈಸರ್ಗಿಕವಾಗಿ ಸಿಕ್ಕುತ್ತವೆ. ಉಳಿದವುಗಳನ್ನು ಹೆಚ್ಚಾಗಿ ಕೃತಕವಾಗಿ ಪ್ರಯೋಗಶಾಲೆಯಲ್ಲಿ ನಿರ್ಮಿಸಲಾಗಿದೆ. ಈ ೯೦ ಮೂಲವಸ್ತುಗಳಲ್ಲಿ ೭೦ ಕ್ಕೂ ಹೆಚ್ಚಾಗಿ ಲೋಹಗಳಾಗಿವೆ (metals). ಉಳಿದವುಗಳು ಅಲೋಹಗಳು (nonmetals). ಈ ಮೂಲವಸ್ತು ಲೋಹಗಳಲ್ಲಿ ಬಂಗಾರ, ಬೆಳ್ಳಿ, ಕಬ್ಬಿಣ, ತಾಮ್ರ, ಅಲ್ಯುಮಿನಿಯಂ, ಪಾರಜ ಮೊದಲಾದ ಪರಿಚಿತವಾದ ಲೋಹಗಳೂ ಬೆರಿಲಿಯಂ, ಟಿಟೇನಿಯಂ, ಜರ್ಮೇನಿಯಂ, ಝಿರ್ಕೋನಿಯಂ ಮೊದಲಾದ ಅಪರಿಚಿತವಾದ ಲೋಹಗಳೂ ಸೇರಿವೆ. ಹಿತ್ತಾಳಿ, ಕಂಚು, ಜರ್ಮನ್‌ಸಿಲ್ವರ್; ಸ್ಟೇನ್‌ಲೆಸ್‌ಸ್ಟೀಲ್ ಮೊದಲಾದವುಗಳು ಮಿಶ್ರಲೋಹಗಳಾಗಿವೆ (alloys). ಅವು ಮೂಲ ವಸ್ತುಗಳಲ್ಲ. ಈ ಮಿಶ್ರಲೋಹಗಳನ್ನು ಎರಡೋ ಅಥವಾ ಹೆಚ್ಚೋ ಮೂಲವಸ್ತು ಲೋಹಗಳನ್ನು ಮಿಶ್ರಣ ಮಾಡಿ ತಯಾರು ಮಾಡಲಾಗುತ್ತದೆ. ಮೂಲ ಲೋಹಗಳಲ್ಲಿ ಕಂಡುಬರದ ಅತ್ಯಂತ ಉಪಯುಕ್ತ ಗುಣಧರ್ಮಗಳು ಈ ಮಿಶ್ರಲೋಹಗಳಲ್ಲಿ ಇರುವದರಿಂದ ಇಂತಹ ಸಾವಿರಾರು ಮಿಶ್ರಲೋಹಗಳು ಬಳಕೆಯಲ್ಲಿವೆ. ಹೊಸ ಹೊಸ ಮಿಶ್ರಲೋಹಗಳ ತಯಾರಿಕೆ ದಿನ ನಿತ್ಯವೂ ಸಾಗಿರುತ್ತದೆ.

ಮಾನವನ ನಾಗರಿಕತೆಯು ಲೋಹಗಳ ಬಳಕೆಯನ್ನು ಅವಲಂಬಿಸಿದೆ ಎಂದರೆ ತಪ್ಪಾಗದು. ಲೋಹಗಳು ಬಳಕೆಯಲ್ಲಿ ಬರುವದಕ್ಕಿಂತ ಮೊದಲಿನ ಮಾನವ ಸಮಾಜ ಜೀವನವನ್ನು ನೆನಸಿಕೊಂಡರೆ ಅವನಿಗೆ ಕಲ್ಲು, ಕಟ್ಟಿಗೆ, ಮಣ್ಣು ಪ್ರಾಣಿಗಳ ಮೂಳೆಗಳು ಇವುಗಳ ಹೊರತು ಬೇರಾವ ಸಾಧನ ಸಾಮಗ್ರಿಗಳು ಉಪಲಬ್ಧವಿರಲಿಲ್ಲ. ಅಂತೆಯೇ ಆಗಿನ ನಾಗರಿಕತೆಯು ಮಟ್ಟ ತೀರ ಕೆಳದರ್ಜೆಯದಾಗಿತ್ತು. ಪ್ರಾಚೀನ ಇತಿಹಾಸಕಾರರು 'ನಾಗರಿಕತೆಯು'ನ್ನು 'ಕಲ್ಲಿನ ಯುಗ', 'ಕಂಚಿನ ಯುಗ', 'ತಾಮ್ರಯುಗ', 'ಕಬ್ಬಿಣ ಯುಗ' ಎಂದು ವಿಭಾಗಿಸಿರುವದೇ ನಾಗರಿಕತೆಗೆ ಲೋಹಗಳ ಬಳಕೆ ಎಷ್ಟು ಮಹತ್ವಪೂರ್ಣವಾದುದು ಎಂಬುದನ್ನು ತೋರಿಸಿ ಕೊಡುತ್ತದೆ.

ಇಂದಿನದು ವಿಜ್ಞಾನಯುಗ. ವಿಜ್ಞಾನದ ಸಹಾಯದಿಂದ ಮನುಷ್ಯ ಪರಮಾಣುವನ್ನು ಭೇದಿಸಿ ಅದರಲ್ಲಿ ಅಡಗಿರುವ ಅಪಾರ ಶಕ್ತಿ ಸಂಚಯವನ್ನು ಉತ್ಪನ್ನ ಮಾಡುವ ವಿಧಾನವನ್ನು ಕಂಡು ಹಿಡಿದಿದ್ದಾನೆ. ಆ ಶಕ್ತಿಯನ್ನು ದೊಡ್ಡ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನಾಗಿ

ಮಾರ್ಪಡಿಸಿ ಮಾನವ ಸಮಾಜಕ್ಕೆ ಒದಗಿಸಿ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕಾಗಿ ದೊಡ್ಡ ದೊಡ್ಡ ಪರಮಾಣು–ವಿದ್ಯುದಾಗಾರಗಳ (Nuclear power stations) ನಿರ್ಮಾಣ ನಡೆದಿದೆ. ಇವುಗಳ ನಿರ್ಮಾಣಕ್ಕೆ ಬರಿಯ ಪರಿಚಿತವಾದ ಲೋಹಗಳು ಸಾಲವು. ಹೊಸ ಹೊಸ ಗುಣಧರ್ಮಗಳನ್ನು ಹೊಂದಿದ ಅನೇಕ ಅಪರಿಚಿತವಾದ ಲೋಹಗಳೂ, ಅವುಗಳಿಂದ ತಯಾರಿಸಬಹುದಾದ ಮಿಶ್ರಲೋಹಗಳೂ ಬೇಕು. ರಾಕೆಟ್ಟುಗಳನ್ನು ನಿರ್ಮಿಸಿ ಚಂದ್ರಲೋಕಕ್ಕೂ, ಮಂಗಳಲೋಕಕ್ಕೂ ಹಾರಬೇಕೆನ್ನುವ ಮನುಷ್ಯನಿಗೆ, ರಾಕೆಟ್ಟುಗಳ ನಿರ್ಮಿತಿಗೆ 'ವಿಶಿಷ್ಟತರಹದ ಲೋಹ'ಗಳ ಅವಶ್ಯಕತೆ ಎನಿಸತೊಡಗಿದೆ. 'ಅನೇಕ ವಿಚಿತ್ರ ಗುಣಧರ್ಮಗಳನ್ನೊಡಗೂಡಿದ' ಲೋಹಗಳೋ ಮಿಶ್ರಲೋಹಗಳೋ ಬೇಕಾಗಿವೆ– ಎಷ್ಟು ದುಡ್ಡು ಖರ್ಚಾದರೂ ಸರಿ! ನೈಸರ್ಗಿಕವಾಗಿ ವಿರಳವಾಗಿ ಸಿಕ್ಕುವ ಹಾಗೂ ಇಲ್ಲಿಯವರೆಗೆ ಕೇವಲ ರಸಾಯನಶಾಸ್ತ್ರಜ್ಞನ ಪ್ರಯೋಗಶಾಲೆಯ ಪದಾರ್ಥಗಳಾದ ಅನೇಕ ಲೋಹಗಳ ಗುಣಧರ್ಮಗಳ ಪರೀಕ್ಷೆ ಈ ಹೊಸ ಅವಶ್ಯಕತೆಗಳ ಪರಿಸರದಲ್ಲಿ ಸೂಕ್ಷ್ಮವಾಗಿ ಮಾಡಲಾಗುತ್ತಿದೆ. ಈ ಪರೀಕ್ಷೆಯಲ್ಲಿ ಉತ್ತೀರ್ಣವಾದ ಲೋಹಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡುವ ಕಾರ್ಯವನ್ನೂ ಕೈಕೊಳ್ಳಲಾಗುತ್ತಿದೆ. ಅನೇಕ ಅಪರಿಚಿತ ಲೋಹಗಳು ಈ ರೀತಿ ಪರಿಚಿತಲೋಹಗಳಾಗಿ ಪರಿಣಮಿಸುತ್ತಿವೆ. ಒಂದು ಕಾಲಕ್ಕೆ ಬರಿಯ ರಸಾಯನಶಾಸ್ತ್ರದ ಪುಸ್ತಕಗಳಲ್ಲಿ ಸ್ಥಳ ದೊರಕಿಸುತ್ತಿದ್ದ ಲೋಹಗಳು ಇಂದು ಅತ್ಯವಶ್ಯವಾದ ವಸ್ತುಗಳಾಗಿ ಪರಿಣಮಿಸಿವೆ. ಅವುಗಳಿಲ್ಲದೆ ಇಂದಿನ ತಾಂತ್ರಿಕ ಮುನ್ನಡೆ ಅಸಾಧ್ಯವಾಗಿದೆ.

ಬೆರಿಲಿಯಂ ಇಂತಹ ಒಂದು ಲೋಹ. ಆದರ ಬಗ್ಗೆ ನಮಗೆಷ್ಟು ಗೊತ್ತಿದೆ?

ಪೃಥ್ವಿಯ ಭೂಕವಚದಲ್ಲಿ ಬೆರಿಲಿಯಂ ಲೋಹ ಶೇಕಡಾ ೦.೦೦೦೬ ರಷ್ಟು ಮಾತ್ರ ಸಿಕ್ಕುತ್ತದೆ. ಅನೇಕ ವಿಧದಲ್ಲಿ ಈ ಲೋಹ ನಮಗೆ ಪರಿಚಿತವಾದ ಅಲ್ಯುಮಿನಿಯಮ್ಮನ್ನು ಹೋಲುತ್ತದೆ. ಆದರೆ ಅಲ್ಯುಮಿನಿಯಂ ನಷ್ಟು ವಿಪುಲವಾದ ಲೋಹವಲ್ಲ. ಅಲ್ಯುಮಿನಿಯಂ ಶೇಕಡಾ ೭ ರಷ್ಟು ಭೂಮಿಯಲ್ಲಿ ಸಿಕ್ಕುತ್ತದೆ.

ಪಚ್ಚೆ (emerald) ಹಾಗೂ ನೀಲ (aqua marine) ಗಳನ್ನು ವಜ್ರದಂತೆ ಬೆಲೆಯುಳ್ಳ ಹರಳುಗಳೆಂದು ಮನುಷ್ಯ ಅನಾದಿಕಾಲದಿಂದಲೂ ಉಪಯೋಗಿಸುತ್ತ ಬಂದಿದ್ದಾನೆ. ಕಡು ಹಸಿರು ಬಣ್ಣದ ಪಚ್ಚೆ ಹರಳುಗಳು ರಶಿಯಾದ ಉರಲ ಪರ್ವತ ಶ್ರೇಣಿಯಲ್ಲಿಯೂ, ದಕ್ಷಿಣ ಅಮೇರಿಕೆಯಲ್ಲಿಯ ಕೋಲಂಬಿಯಾದಲ್ಲಿಯೂ ಹೆಚ್ಚಾಗಿ ದೊರಕುತ್ತವೆ. ನೀಲ ಹರಳುಗಳು ಬ್ರಾಝಿಲ್, ಸೈಬೇರಿಯಾ, ಆಫ್ರಿಕಗಳಲ್ಲಿ ಸಿಕ್ಕುತ್ತವೆ. ಭೂಗರ್ಭಶಾಸ್ತ್ರಜ್ಞರಿಗೆ 'ಬೆರಿಲ್' ಎಂಬ ಸಾಮಾನ್ಯ ಅದಿರು–ಕಲ್ಲು (Mineral) ಕೂಡ ಅನೇಕ ವರುಷಗಳ ಹಿಂದೆಯೇ ಪರಿಚಿತವಾಗಿತ್ತು.

ಕ್ರಿ. ಶ. ೧೭೯೮ರಲ್ಲಿ 'ಬೆರಿಲ್' ಗೂ 'ಪಚ್ಚೆ'ಗೂ– ಅವು ಬೆಳಕಿನ ಅಲೆಗಳೊಡನೆ ವರ್ತಿಸುವ ರೀತಿಯಲ್ಲಿ ಬಹಳ ಸಾಮ್ಯವಿದ್ದದ್ದು ಫ್ರೆಂಚ್ ಭೂಗರ್ಭಶಾಸ್ತ್ರಜ್ಞ ಹಾಯ್‌ಗೆ ಕಂಡು ಬಂದಿತು. ಆತ ಈ ವಿಚಾರವನ್ನು ರಸಾಯನಶಾಸ್ತ್ರಜ್ಞ ವ್ಯಾಕ್ವೆಲಿನ್‌ಗೆ ಹೇಳಿ, ಆತನಿಗೆ ಅವೆರಡನ್ನೂ ರಾಸಾಯನಿಕವಾಗಿ ಪೃಥಕ್ಕರಣ ಮಾಡಿ ನೋಡಲು ಕೇಳಿಕೊಂಡ. ವ್ಯಾಕ್ವೆಲಿನ್ ಪೃಥಕ್ಕರಿಸಿ ನೋಡಿದಾಗ ಅವೆರಡೂ ವಸ್ತುಗಳ ಘಟಕಗಳು ಒಂದೇಯಾಗಿದ್ದುದು ಕಂಡು ಬಂದಿತು. ಅಲ್ಲದೆ ಅವೆರಡರಲ್ಲಿಯೂ ಇನ್ನೂ ಗುರುತಿಸಲಾಗದ ಒಂದು ಹೊಸ ಮೂಲವಸ್ತುವಿದ್ದದ್ದನ್ನೂ ವ್ಯಾಕ್ವೆಲಿನ್ ಕಂಡುಕೊಂಡ. ಈ ಹೊಸ ಮೂಲವಸ್ತುವಿನ ಲವಣಗಳನ್ನು (Salts) ತಯಾರಿಸಿದಾಗ ಅವೆಲ್ಲ 'ಸಿಹಿ' ಯಾಗಿದ್ದವು. ಆದ್ದರಿಂದ ಈ ಹೊಸ ಮೂಲ ವಸ್ತುವಿಗೆ 'ಗ್ಲುಸಿನಿಯಂ' (Glucinium) ಎಂದು ನಾಮಕರಣ ಮಾಡಲಾಯಿತು. ಇಂದಿಗೂ ಫ್ರಾನ್ಸಿನಲ್ಲಿ 'ಗ್ಲುಸಿನಿಯಂ' ಹೆಸರೇ ಪ್ರಚಾರದಲ್ಲಿದೆ. ಕ್ರಿ. ಶ. ೧೮೨೮ರಲ್ಲಿ ಜರ್ಮನಿಯಲ್ಲಿ ವ್ಹೋಲರ್ ಎಂಬ

ರಾಸಾಯನಶಾಸ್ತ್ರಜ್ಞ ಮೊಟ್ಟಮೊದಲು ಆ ಹೊಸ ಮೂಲ ವಸ್ತುವನ್ನು ಶುದ್ಧ ಸ್ಥಿತಿಯಲ್ಲಿ ತಯಾರಿಸಿ, ಅದಕ್ಕೆ 'ಬೆರಿಲಿಯಂ' ಎಂದು ನಾಮಕರಣ ಮಾಡಿದ. ಇದೇ ಹೆಸರೇ ಈಗ ಹೆಚ್ಚಾಗಿ ಈಗ ಎಲ್ಲೆಡೆ ಪ್ರಚಲಿತವಿದೆ.

೧೯೧೬ರಷ್ಟೊತ್ತಿಗೆ ಜರ್ಮನಿಯಲ್ಲಿ ಬೆರಿಲಿಯಂ ಹಾಗೂ ತಾಮ್ರ ಇವುಗಳ ಮಿಶ್ರಣದಿಂದ ಉಂಟಾದ ಮಿಶ್ರ ಧಾತುವಿನಲ್ಲಿ ಅನೇಕ ವಿಶಿಷ್ಟ ಗುಣಗಳಿದ್ದುದು ಕಂಡುಬಂದಿತು. ೧೯೨೬ರಲ್ಲಿ ಅಮೇರಿಕೆಯ ಕೋರ್ಸನ್ ಎಂಬ ಲೋಹವಿಜ್ಞಾನಿ ಈ ಮಿಶ್ರಧಾತುವು ಹಳೆಯದಾದಷ್ಟೂ ಹೆಚ್ಚು ಶಕ್ತಿಯುತವಾಗುತ್ತದೆ ಎಂಬುದನ್ನು ಶೋಧಿಸಿದ. ಅಲ್ಲಿಂದ ಈಚೆಗೆ ವಿದ್ಯುದ್ವಿಭಜನೆಯ ಮೂಲಕ ಬೆರಿಲಿಯಮ್ಮನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸುವ ಪದ್ಧತಿಗಳನ್ನು ಶೋಧಿಸಲಾಗಿದೆ.

ಬೆರಿಲಿಯಂ ಲೋಹ ತೀರ ಹಗುರಾದದ್ದು. ಅದು ಅಲ್ಯುಮಿನಿಯಂಗಿಂತ ಸಾಕಷ್ಟು ಹಗುರಾಗಿದೆ. ಅಲ್ಲದೆ ಅದು ಕರಗಬೇಕಾದರೆ ೧೨೮೫° ಸೆಂಟಿಗ್ರೇಡ್ ಉಷ್ಣತಾಮಾನ ಬೇಕಾಗುತ್ತದೆ. ಅಲ್ಯುಮಿನಿಯಂನಂತೆ ಇದಕ್ಕೂ ಜಂಗು ಹತ್ತುವದಿಲ್ಲ. ಬೆರಿಲಿಯಂ ಹಾಗೂ ತಾಮ್ರದ ಮಿಶ್ರಧಾತುವು ಶುದ್ಧ ತಾಮ್ರದ ೭—೮ ಪಟ್ಟು ಶಕ್ತಿದಾಯಕವಾಗಿರುತ್ತದೆ. ಲಘುತ್ವ ಶಕ್ತಿ, ಜಂಗು ತಿನ್ನದೆ ಇರುವದು, ಹೆಚ್ಚಿನ ಉಷ್ಣತಾಮಾನವನ್ನು ತಡೆದುಕೊಳ್ಳುವ ಶಕ್ತಿ, ಹೆಚ್ಚು ದಿನ ತಾಳಿಕೆ ಇತ್ಯಾದಿ ಗುಣಧರ್ಮಗಳು ಬೇಕಾದಲ್ಲಿ ಬೆರಿಲಿಯಂ ಹಾಗೂ ಅದರ ಇತರ ಲೋಹಗಳೊಡನೆ ತಯಾರಿಸಿದ ಮಿಶ್ರ ಲೋಹಗಳು ಉಪಯೋಗಿಸಲ್ಪಡುತ್ತವೆ. ರಾಕೆಟ್ಟುಗಳು, ಕ್ಷಿಪಣಿಗಳು ವಿಶಿಷ್ಟ ಪ್ರಕಾರದ ವಿಮಾನಗಳು—ಇವೆಲ್ಲವುಗಳ ನಿರ್ಮಿತಿಯಲ್ಲಿ ಬೆರಿಲಿಯಂ ಲೋಹವನ್ನು ಉಪಯೋಗಿಸಲಾಗುತ್ತಿದೆ.

ಪರಮಾಣುಗಳೆಲ್ಲ ಪ್ರೋಟಾನ್, ನ್ಯೂಟ್ರಾನ್, ಹಾಗೂ ಇಲೆಕ್ಟ್ರಾನ್‌ಗಳೆಂಬ ಮೂರು ಮೂಲಕಣಗಳಿಂದ ನಿರ್ಮಾಣವಾಗಿವೆ ಎಂದು ನಾವೀಗ ಹೇಳುತ್ತೇವೆ. ಇವುಗಳಲ್ಲಿ ಪ್ರೋಟಾನ್, ಇಲೆಕ್ಟ್ರಾನ್‌ಗಳು ವಿದ್ಯುತ್ ಕಣಗಳು. ನ್ಯೂಟ್ರಾನ್ ವಿದ್ಯುದಂಶರಹಿತವಾದ ಕಣ. ಈ ನ್ಯೂಟ್ರಾನನ್ನು ೧೯೩೨ರಲ್ಲಿ ಪ್ರೊ. ಚಾಡವಿಕ್‌ರು ಶೋಧಿಸಿ ತೆಗೆದರು. ಆಗ್ಗೆ ಈ ನ್ಯೂಟ್ರಾನ್ ಕಣಗಳನ್ನು ಒದಗಿಸಿದ್ದು ಬೆರಿಲಿಯಂ ಲೋಹವೇ. ವಿಕಿರಣಶೀಲ ಪದಾರ್ಥ (radioactive) ಗಳಾದ ರೇಡಿಯಂ, ಯುರೇನಿಯಂ ಮುಂತಾದವುಗಳು ಯಾವಾಗಲೂ ಹೊರಸೂಸುತ್ತಿರುವ ಅಲ್ಫಾ ಕಣಗಳು ಬೆರಿಲಿಯಂ ಲೋಹದ ಮೇಲೆ ಎರಗಿದಾಗ ನ್ಯೂಟ್ರಾನ್‌ಗಳು ಉತ್ಪತ್ತಿಯಾಗುತ್ತವೆ. ಈ ಕಾರ್ಯವನ್ನು ಸಮೀಕರಣ ರೂಪವಾಗಿ ಕೆಳಗಿನಂತೆ ಬರೆಯುಬಹುದು.

$$ {}^{9}_{4}Be + {}^{4}_{2}He \longrightarrow {}^{12}_{6}C + {}^{1}_{0}n $$

ಆದ್ದರಿಂದ ರೇಡಿಯಂ ಹಾಗೂ ಬೆರಿಲಿಯಂ ಮಿಶ್ರಣವನ್ನು ನ್ಯೂಟ್ರಾನ್‌ಗಳ ಉತ್ಪತ್ತಿಗಾಗಿ ಉಪಯೋಗಿಸಬಹುದು. ಮೊಟ್ಟಮೊದಲು nuclear reactorನ ನಿರ್ಮಿತಿಗೆ ಕಾರಣೀಭೂತವಾದ ಫರ್ಮಿಯವರ ಸಂಶೋಧನೆಗೆ ನ್ಯೂಟ್ರಾನ್‌ಗಳು ಬೇಕಾದಾಗ ಇದೇ ಮಿಶ್ರಣವೇ ಅವರಿಗೂ ನ್ಯೂಟ್ರಾನ್‌ಗಳನ್ನು ಒದಗಿಸಿತು.

ಪರಮಾಣು ವಿದ್ಯುದಾಗರ ರಚನೆಯಲ್ಲಿಯೂ ಬೆರಿಲಿಯಂ ಬಹಳ ಉಪಯುಕ್ತ ಹಾಗೂ ಅತ್ಯವಶ್ಯಕ ಲೋಹವೆಂದು ಕಂಡುಬಂದಿದೆ. ಪರಮಾಣುಶಕ್ತಿಯುತ್ಪಾದನೆಗೆ ಯುರೇನಿಯಂ, ಪ್ಲುಟೋನಿಯಂ ಮುಂತಾದ ಪರಮಾಣು ಸ್ಫೋಟಕಗಳಲ್ಲಿ ನ್ಯೂಟ್ರಾನ್ ಕ್ರಿಯೆಯಿಂದ ಏರ್ಪಡುವ 'ಶ್ರೇಣಿಕ್ರಿಯೆ' (chain reaction) ಮೂಲಭೂತವಾದದ್ದು. ಈ ಶ್ರೇಣಿಕ್ರಿಯೆಯ ವೈಶಿಷ್ಟ್ಯವೆಂದರೆ ಒಮ್ಮೆ ಒಂದು ನ್ಯೂಟ್ರಾನು ಸ್ಫೋಟಕ ವಸ್ತುವಿನ ಒಂದು ಪರಮಾಣುವನ್ನು ವಿಚ್ಛೇದಿಸಿದರೆ ಸಾಕು, ಶಕ್ತಿಯುತ್ಪನ್ನವಾಗುವ ಜೊತೆಗೆ ಅನೇಕ ಹೊಸ ನ್ಯೂಟ್ರಾನ್‌ಗಳೂ ಉಂಟಾಗು

ತ್ತವೆ. ಈ ಹೊಸ ನ್ಯೂಟ್ರಾನ್‌ಗಳು ಬೇರೆ ಬೇರೆ ಪರಮಾಣುಗಳನ್ನು ವಿಚ್ಛೇದಿಸಿ ಶಕ್ತಿಯುತ್ಪಾದನೆಯನ್ನು ವರ್ಧಿಸುತ್ತ ಹೋಗುತ್ತವೆ. ಆದರೆ ಈ 'ಶ್ರೇಣಿಕ್ರಿಯೆ' ಸಿದ್ಧಿಸಬೇಕಾದರೆ, ಹೊಸದಾಗಿ ಉತ್ಪನ್ನವಾಗುವ ನ್ಯೂಟ್ರಾನ್‌ಗಳು ಅತಿ ವೇಗದವು ಆಗಿರಬಾರದು, ಹಾಗೂ ಅವು ಮಂತ್ರಾವ ವಸ್ತುವಿನಲ್ಲಿ ಹೀರಿಕೊಳ್ಳಲ್ಪಟ್ಟು ನಿರುಪಯುಕ್ತವಾಗಬಾರದು. ಬೆರಿಲಿಯಂನಲ್ಲಿ ಈ ಎರಡೂ ಗುಣಧರ್ಮಗಳೂ ಚೆನ್ನಾಗಿ ಹೊಂದಿಕೊಂಡಿವೆ. ಬೆರಿಲಿಯಂ ನ್ಯೂಟ್ರಾನುಗಳನ್ನು ಹೀರಿಕೊಳ್ಳುವುದಿಲ್ಲ, ಆದರೆ ಅವುಗಳನ್ನು ಪರಾವರ್ತಿಸುತ್ತದೆ. ಅಲ್ಲದೆ ಅಧಿಕವೇಗದ ನ್ಯೂಟ್ರಾನುಗಳ ವೇಗವನ್ನು ಮಂದಗೊಳಿಸುತ್ತದೆ. ಕಾರಣ ಸ್ಫೋಟಕ ಯುರೇನಿಯಂ ಅಥವಾ ಪ್ಲುಟೋನಿಯಂಗಳನ್ನು ಬೆರಿಲಿಯಂನ ಹೊದಿಕೆಯುಳ್ಳ ಟ್ಯೂಬುಗಳಲ್ಲಿ ಇಡಬಹುದು ಅಥವಾ ಸ್ಫೋಟಕ ಲೋಹದೊಂದಿಗೆ ಬೆರಿಲಿಯಂ ಮಿಶ್ರಲೋಹವನ್ನು ತಯಾರಿಸಿ ಅದನ್ನೇ ವಿದ್ಯುದಾಗಾರದಲ್ಲಿ ಉಪಯೋಗಿಸಬಹುದು. ಈ ರೀತಿ ಪರಮಾಣು ಶಕ್ತ್ಯುತ್ಪಾದನೆಯಲ್ಲಿ ಹಾಗೂ ಪರ್ಯಾಯವಾಗಿ ಪರಮಾಣು ಅಸ್ತ್ರಗಳ ನಿರ್ಮಿತಿಗೆ ಬೆರಿಲಿಯಂನ ಅವಶ್ಯಕತೆ ಇದೆ. ಭಾರತದಲ್ಲಿಯೂ 'ಬೆರಿಲ್' ಅದಿರು ಸಿಕ್ಕುತ್ತದೆ. ಮೊದಲು ಹೆಚ್ಚಾಗಿ ಅದನ್ನು ಬೇರೆ ರಾಷ್ಟ್ರಗಳಿಗೆ ನಿರ್ಯಾತ ಮಾಡಲಾಗುತ್ತಿತ್ತು. ಆದರೆ ಅದರ ಮಹತ್ವದ ಅರಿವಾದನಂತರ ಅದನ್ನೀಗ ಹೆಚ್ಚಾಗಿ ನಿರ್ಯಾತ ಮಾಡುವುದಿಲ್ಲ. ಭಾರತದ ಅಣುಶಕ್ತಿ ಆಯೋಗದವರು 'ಬೆರಿಲ'ನ್ನು ಸಂಶೋಧನಾಕಾರ್ಯಕ್ಕೆ ಉಪಯೋಗಿಸುತ್ತಿದ್ದಾರೆ

ಕ್ಷ-ಕಿರಣಗಳು ಬೆರಿಲಿಯಂನಲ್ಲಿ ಸುಲಭವಾಗಿ ಹಾಯ್ದು ಪಾರಾಗಿ ಹೋಗುತ್ತವೆ ಆದ್ದರಿಂದ ಕ್ಷ-ಕಿರಣಗಳ ಉತ್ಪಾದನೆಯಲ್ಲಿ ಬೆರಿಲಿಯಂವನ್ನು ಪಾರದರ್ಶಕದಂತೆ ಉಪಯೋಗಿಸಲಾಗುತ್ತದೆ ಬೆರಿಲಿಯಂ ಮಿಶ್ರಧಾತುವು ಪೆಟ್ಟು ಬಿದ್ದರೂ 'ಕಿಡಿ'ಯುತ್ಪನ್ನ ಮಾಡುವುದಿಲ್ಲ ಈ ಗುಣಧರ್ಮದ ಮೂಲಕ ಅದರಿಂದ ತಯಾರಾದ ಸುತ್ತಿಗೆ ಮೊದಲಾದ ಉಪಕರಣಗಳನ್ನು ಪೆಟ್ರೋಲಿಯಂ ಕಾರಖಾನೆಗಳಲ್ಲಿ ಹಾಗೂ 'ಕಿಡಿ'ಯಿಂದ ಸ್ಫೋಟ ಸಂಭವಿಸಬಹುದಾದಂತಹ ಕಲ್ಲಿದ್ದಲು ಗಣಿಗಳಲ್ಲಿಯೂ ಉಪಯೋಗಿಸಲಾಗುತ್ತದೆ. 'ಕಿಡಿರಹಿತ'ವಾದ ಅದರ ಗುಣದ ಮೂಲಕ ವಿಮಾನಗಳ ಕೆಲವು ಸೂಕ್ಷ್ಮಭಾಗಗಳ ನಿರ್ಮಿತಿಯಲ್ಲಿಯೂ ಅದರ ಉಪಯುಕ್ತತೆ ಬಹಳವಿದೆ. ಬೆರಿಲಿಯಂ ಭಸ್ಮ (oxide)ವು ಅತಿ ಹೆಚ್ಚು ಉಷ್ಣತಾಮಾನವನ್ನು ತಡೆದುಕೊಳ್ಳಲು ಶಕ್ಯವಾಗಿದೆ. ಅದರಿಂದಾಗಿ ಅದನ್ನು ಹೆಚ್ಚು ಉಷ್ಣತಾಮಾನದ 'ಕುಲುಮೆ'ಗಳ ಒಳಮೈ ಪರದೆ(coating)ಯ ರೂಪದಲ್ಲಿ ಉಪಯೋಗಿಸಲಾಗುತ್ತದೆ.

ಬೆರಿಲಿಯಂ ಲೋಹ, ಅದರ ಮಿಶ್ರಲೋಹಗಳು ಹಾಗೂ ಲವಣಗಳು ಇವೆಲ್ಲವುಗಳ ಉಪಯುಕ್ತತೆ ಅನೇಕ ದಿಶೆಗಳಲ್ಲಿ ಬೆಳೆದಿದೆ, ಬೆಳೆಯುತ್ತಿದೆ.

ಆದರೆ 'ಬೆರಿಲ್' ಅದಿರು ಕಲ್ಲಿನಿಂದ ಬೆರಿಲಿಯಂವನ್ನು ಬೇರ್ಪಡಿಸುವದು ಸುಲಭವಾದ ಕೆಲಸವಲ್ಲ. ನೈಸರ್ಗಿಕವಾಗಿ ಸಿಕ್ಕುವ 'ಬೆರಿಲ್'ನಲ್ಲಿ ಸುಮಾರು ಶೇಕಡಾ ೫ ರಷ್ಟು ಮಾತ್ರ ಬೆರಿಲಿಯಂ ಲೋಹವಿರುತ್ತವೆ. ಉಳಿದದ್ದೆಲ್ಲ ಅಲ್ಯುಮಿನಿಯಂ ಭಸ್ಮ ಹಾಗೂ ಉಸುಕು. ಬೆರಿಲನ್ನು ೧೬೦೦°C ವರೆಗೆ ಕಾಯಿಸಿ ಕರಗಿಸಿ, ನಂತರ ಸಲ್ಫ್ಯೂರಿಕ್ ಆಮ್ಲದಿಂದ ಅದರಲ್ಲಿಯ ಬೆರಿಲಿಯಂ ಹಾಗೂ ಅಲ್ಯೂಮಿನಿಯಂಗಳನ್ನು ದ್ರವಣರೂಪದಲ್ಲಿ ಶೋಷಿಸಲಾಗುತ್ತದೆ. ಆ ನಂತರ ಬೆರಿಲಿಯಂನಿಂದ ಅಲ್ಯುಮಿನಿಯಂ ಹಾಗೂ ಸಣ್ಣ ಪ್ರಮಾಣದಲ್ಲಿರುವ ಕಬ್ಬಿಣ, ತಾಮ್ರ ಇತ್ಯಾದಿಗಳನ್ನು ರಸಾಯನ ಕ್ರಿಯೆಗಳಿಂದ ಬೇರ್ಪಡಿಸಿ, ಶುದ್ಧವಾದ ಬೆರಿಲಿಯಂ ಭಸ್ಮವನ್ನು ತಯಾರಿಸಲಾಗುತ್ತದೆ. ಬೆರಿಲಿಯಂ ಭಸ್ಮವನ್ನು ಬೆರಿಲಿಯಂ ಲವಣವಾಗಿ ಮಾರ್ಪಡಿಸಿ ಆನಂತರ ವಿದ್ಯುದ್ವಿಭಜನೆಯ ಮೂಲಕ ಶುದ್ಧ ಬೆರಿಲಿಯಂವನ್ನು ಬೇರ್ಪಡಿಸಲಾಗುತ್ತದೆ.

ಇಷ್ಟೆಲ್ಲ ಪ್ರಯತ್ನಿಸಿ ಬೇರ್ಪಡಿಸಿದ ಬೆರಿಲಿಯಂ ಲೋಹಗಳಂತೆ ಉಪಯೋಗಿಸುವ

ಅವಸ್ಥೆಯಲ್ಲಿರುವುದಿಲ್ಲ. ಅದನ್ನು ಪುನಃ ಸಣ್ಣ ಪುಡಿಮಾಡಿ ಆ ಪುಡಿಯ ಮೇಲೆ ಹೆಚ್ಚಿನ ಒತ್ತಡ ಹಾಗೂ ಉಷ್ಣತಾಮಾನದ ಪರಿಣಾಮವಾಗಿ ಅದಕ್ಕೆ ಲೋಹರೂಪವನ್ನು ಕೊಡಲಾಗುತ್ತದೆ (Powder metallurgy). ಆಮೇಲೆ ಅದನ್ನು ಲೋಹದಂತೆ ಉಪಯೋಗಿಸಬಹುದು.

'ಬೆರಿಲಿಯಂ' ಹಾಗೂ ಅದರ ವಿವಿಧ ಲವಣಗಳನ್ನು ತಯಾರಿಸುವ ಕಾರಖಾನೆಯಲ್ಲಿ ಕೆಲಸ ಮಾಡುವವರು 'ಬೆರಿಲಿಯಂ'ನ ಕಣಗಳನ್ನು ಶ್ವಾಸೋಚ್ಛ್ವಾಸದ ಜೊತೆಗೆ ಹೆಚ್ಚಾಗಿ ಸೇವಿಸಿದರೆ ಅವರಿಗೆ 'ಪ್ಲೂರಸಿ' ತರಹ ಪುಪ್ಪುಸ ರೋಗವಾಗುವ ಸಂಭವವಿರುತ್ತದೆ. 'ಬೆರಿಲಿಯಂ'ನ ಈ ಅಪಾಯಕಾರಿ ಗುಣ ಗೊತ್ತಾಗುವ ಮೊದಲು ಅನೇಕ ಕೆಲಸಗಾರರು ರೋಗಕ್ಕೆ ತುತ್ತಾಗಿ ಮರಣ ಹೊಂದಿದ್ದುಂಟು. ಆದರೆ ಈಚೆಗೆ ಈ ಅಪಾಯದಿಂದ ರಕ್ಷಿಸುವ ವಿಧಾನಗಳನ್ನು ಕಾರ್ಖಾನೆಗಳಲ್ಲಿ ಉಪಯೋಗಿಸುತ್ತಿರುವುದರಿಂದ ಈ ತೊಂದರೆ ಕಡಿಮೆಯಾಗಿದೆ.

ಬೆರಿಲಿಯಂನ ಈ ವಿಷಾರಿ ಗುಣ ಹಾಗೂ ಅದು ದುರ್ಲಭವಾಗಿರುವುದರಿಂದ ಅದನ್ನು ರಾಕೆಟ್ಟು-ಇಂಧನದಂತೆ ಉಪಯೋಗಿಸಲಾಗುತ್ತಿಲ್ಲ. ಇವೆರಡು ಗುಣ ಇಲ್ಲದಿದ್ದರೆ ಅದರಷ್ಟು ಅತ್ಯುತ್ತಮ ರಾಕೆಟ್ಟು-ಇಂಧನ ಬೇರೆ ಯಾವ ಪದಾರ್ಥವೂ ಇಲ್ಲ. ಅಲ್ಪ ಭಾರದಲ್ಲಿ ಅತ್ಯಂತ ಹೆಚ್ಚು ಉಷ್ಣತೆಯನ್ನು ಉಂಟು ಮಾಡುವ ಪದಾರ್ಥಗಳಲ್ಲೆಲ್ಲ ಬೆರಿಲಿಯಂ ಶ್ರೇಷ್ಠವಾದದ್ದು. ೧ ಪೌಂಡಿನಷ್ಟು ಈ ಕೆಳಗಿನ ಪದಾರ್ಥವನ್ನು ಉರುವಲಿನಂತೆ ಉಪಯೋಗಿಸಿದಾಗ ಉಂಟಾಗುವ ಉಷ್ಣತೆ (ಬ್ರಿಟಿಶ್ ಥರ್ಮಲ್ ಯೂನಿಟ್ಟುಗಳಲ್ಲಿ) ಯನ್ನು ಕೆಳಗಿನ ಕೋಷ್ಟಕಗಳಲ್ಲಿ ಕೊಡಲಾಗಿದೆ.

		B Th. u. /lb.
೧) ಲಿಥಿಯಂ	...	೮೫೦೦ ,,
೨) ಬೋರಾನ್	...	೭೮೦೦ ,,
೩) ಮ್ಯಾಗ್ನೆಸಿಯಂ	...	೬೪೦೦ ,,
೪) ಅಲ್ಯುಮಿನಿಯಂ	...	೭೦೦೦ ,,
೫) ಬೆರಿಲಿಯಂ	...	೧೦೫೦೦ ,,
೬) ಪೆಟ್ರೋಲ್	...	೪೬೦೦ ,,

ಮೇಲಿನ ಕೋಷ್ಟಕಗಳಲ್ಲಿ ಮೊದಲಿನ ಐದು ಹಗುರ ಮೂಲವಸ್ತುಗಳಾಗಿವೆ. ಆರನೆಯ ವಸ್ತು ಪೆಟ್ರೋಲವನ್ನು ತುಲನಾತ್ಮಕ ದೃಷ್ಟಿಯಿಂದ ಕೊಡಲಾಗಿದೆ. ಬೆರಿಲಿಯಂ ಉತ್ಪಾದನೆ ಪ್ರತಿವರ್ಷ ಹೆಚ್ಚಾಗುತ್ತಿದೆ. ಬೆರಿಲಿಯಂನ ಭವಿತವ್ಯ ಉಜ್ವಲವಾಗಿದೆ. ✿



ಶ್ರೀಕೃಷ್ಣ ಪರಮಾತ್ಮ ಅಂದದ್ದು

"ಇಂದು
ಪೇಟೆಯಲ್ಲಿ ದೊರೆಯುತ್ತಿರುವ
ಆಹಾರ ಧಾನ್ಯಗಳು
ಬೇಳೆಯ ಕಾಳುಗಳು
ಎಣ್ಣೆ, ವನಸ್ಪತಿ, ತುಪ್ಪ
ಕಾಯಿಪಲ್ಲೆಗಳು, ಹಾಲು, ಮೊಸರು
ವಿಶೇಷತಃ
ರೇಶನ್ ಅಂಗಡಿಯಲ್ಲಿ
[illegible]
ಇವುಗಳಿಂದ
ಭಕ್ತರು
ತಯಾರಿಸಿ ಅರ್ಪಿಸುತ್ತಿರುವ
ನೈವೇದ್ಯ
ಕ್ಕಿಂತ
ಪೂತನಿಯ ಮೊಲೆ ಹಾಲು
ಎಷ್ಟೋ ಪಾಲು
ವಾಸಿಯಾಗಿತ್ತು!!"

[illegible]

ಜನುಮ ಜೀವ ಜನುಮ ಜೀವನ

ನಮ್ಮ ರಸ್ತೆ ಕೊನೆಯಲ್ಲಿದ್ದ, ದೊಡ್ಡ ಕಾಂಪೌಂಡಿನ ಹಳೇ ಬಂಗಲೆ ತುಂಬಾ ದಿವಸದಿಂದ ಖಾಲಿ ಬಿದ್ದಿತ್ತು. ಒಂದು ದಿನ ಆ ಮನೆಗೆ ಯಾರೋ ಬಾಡಿಗೆಗೆ ಬಂದರು ಅಂತ ಕೇಳಿ ಕುತೂಹಲವಾದ ನಮಗೆ, ಎಂಭತ್ತು ಎಂಭತ್ತೈದು ವಯಸ್ಸಿನ ವಿದೇಶಿ ಮಹಿಳೆಯೊಬ್ಬರು ಒಬ್ಬಂಟಿಗರಾಗಿ ಅಲ್ಲಿಗೆ ವಾಸಕ್ಕೆ ಬಂದದ್ದನ್ನು ನೋಡಿ ಬಹಳ ಆಶ್ಚರ್ಯವಾಯಿತು.

ಅವರು ಚಿಕ್ಕ ವಯಸ್ಸಿನಲ್ಲೇ ಇಂಗ್ಲೆಂಡಿನಿಂದ ಭಾರತಕ್ಕೆ ಬಂದವರು. ಭಾರತೀಯರನ್ನೇ ವಿವಾಹವಾಗಿದ್ದರಂತೆ. ಸೀರೆಯುಡುತ್ತಿದ್ದರು. ಆದರೆ ಯಾವಾಗಲೂ ಬಿಳೀ ಸೀರೆ, ಬಿಳೀ ಕುಪ್ಪಸ. ತಲೆ ತುಂಬಾ ಬೆಳ್ಳಿ ಎಳೆಯಂತೆ ಬಿಳೀ ಕೂದಲು. ಮಾಟವಾಗಿ ದಂತದ ಪ್ರತಿಮೆಯಂತಿದ್ದ ಅವರು, ದಿನಾಲೂ ಸಂಜೆ ನಾಲ್ಕು ಗಂಟೆಗೆ ಬುಟ್ಟಿ ಹಿಡಿದು ಮಾರ್ಕೆಟ್ಟಿಗೆ ಹೋಗಿಬರುತ್ತಿದ್ದರು.

ದಾರಿಯಲ್ಲಿ ಅವರು ಯಾರ ಜತೆಗೂ ಹೆಚ್ಚು ಮಾತಿಗೆ ಹೋಗುತ್ತಿರಲಿಲ್ಲ. ಆದರೆ ಮಕ್ಕಳು ಆಟವಾಡುತ್ತಿದ್ದರೆ ನೋಡುತ್ತಾ ನಿಂತುಬಿಡುವರು. ಒಂದೊಂದು ಸಲ ತಮ್ಮ ಬುಟ್ಟಿ ಕೆಳಗಿಟ್ಟು ಅದರಿಂದ ಎಲ್ಲಾ ಮಕ್ಕಳಿಗೂ ಒಂದೊಂದು ಬಾಳೆ ಹಣ್ಣೋ ಅಥವ ಕಿತ್ತಳೆ ಹಣ್ಣೋ ತೆಗೆದು ಕೊಟ್ಟು ಮುಂದೆ ಹೋಗುತ್ತಿದ್ದರು.

ನಮ್ಮ ರಸ್ತೆಯಲ್ಲಿಯೇ, ವರ್ಷಗಟ್ಟಲೆಯಿಂದ ಉಪಯೋಗಿಸದೇ ಬೀಗ ಹಾಕಿಟ್ಟಿದ್ದ ಒಂದು ಹತ್ತಿ ಗೋಡೌನಿತ್ತು. ಅಲ್ಲಿ ಯಾರೂ ಸುಳಿದಿದ್ದೇ ನಾವು ನೋಡಿರಲಿಲ್ಲ. ಈಚೆಗೆ ಆ ಗೋಡೌನಿನಿಂದ ದಿನಾಗಲೂ ರಾತ್ರಿ ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ಒಂದು ವಿಚಿತ್ರ ಕೂಗು ಕೇಳಲಾರಂಭಿಸಿ ಎಲ್ಲರಿಗೂ ದಿಗಿಲು ಹುಟ್ಟಿಸಿತು. ಎಲ್ಲರೂ ಅದೇನು ಅಂದುಕೊಳ್ಳುತ್ತಿರುವಷ್ಟರಲ್ಲಿಯೇ ಒಂದು ರಾತ್ರಿ ಬಿಳೀ ಬಟ್ಟೆಯುಟ್ಟಿದ್ದ ಆ ವಿದೇಶಿ ಮಹಿಳೆಯು ಗೋಡೌನಿನ ಹಿಂಭಾಗದ ಓಣಿಯೊಳಗೆ ಹೋದದ್ದನ್ನು ಎರಡನೆ ಷೋ ಸಿನಿಮ ನೋಡಿಕೊಂಡು ವಾಪಸ್ಸು ಹೋಗುತ್ತಿದ್ದವರು ಯಾರೋ ಕಂಡರಂತೆ.

ಅವತ್ತಿನಿಂದ "ವಿದೇಶಿ ಮುದುಕಿ ಮಾಟ ಮದ್ದು ಮಾಡುತ್ತೆ," ಎನ್ನುವ ಸುದ್ದಿ ಹಬ್ಬಿತು. ಅವರು ಮಾರ್ಕೆಟ್ಟಿಗೆ ಹೊರಟರೆ, ಆಡುತ್ತಿದ್ದ ಮಕ್ಕಳನ್ನು ತಾಯಂದಿರು ಒಳಗೆ ಕರೆದುಬಿಡುತ್ತಿದ್ದರು.

ಮಾಟ ಮದ್ದಿನಲ್ಲಿ ಅಷ್ಟು ನಂಬಿಗೆ ಇಲ್ಲದ ನನಗೆ, ಅವರ ಮೇಲೆ ಬಂದ ಅಪವಾದದಿಂದ ವ್ಯಸನವಾಯಿತು. ಹೇಗಾದರೂ ಮಾಡಿ ಇದನ್ನು ಪರೀಕ್ಷಿಸಿ ನೋಡಬೇಕೆಂದು ಮನಸ್ಸು ಮಾಡಿದೆ. ನೇರವಾಗಿ ಅವರನ್ನೇ ಕೇಳಿಬಿಡಬಾರದೇಕೆ ಎನ್ನಿಸಿತು. ಅವರ ಮನೆಗೆ ಹೋದೆ. ಅವರ ಹೆಸರು ಶ್ರೀಮತಿ ಸ್ಟೇನಿ ರಾಯ್ ಎಂದು ತಿಳಿಯಿತು. ತುಂಬಾ ಆದರಿಸಿದರು. "ಪತಿ ತೀರಿಕೊಂಡ ಮೇಲೆ ಭಾರತದಲ್ಲೇ ಮಕ್ಕಳ ಕಲ್ಯಾಣ ಕೇಂದ್ರವೊಂದರಲ್ಲಿ ಕೆಲಸ ಮಾಡುತ್ತಿದ್ದೆ. ಇನ್ನು ಮಾಡಲು ಶಕ್ತಿ ಇಲ್ಲ. ಸ್ವದೇಶಕ್ಕೆ ಹಿಂತಿರುಗುತ್ತೇನೆ. ಇಂಗ್ಲೆಂಡಿನಿಂದ ನನ್ನ ಮಗನೇ ಮುಂದಿನ ವರ್ಷ ಬಂದು ಕರೆದುಕೊಂಡು ಹೋಗುತ್ತಾನೆ." ಎಂದು ಹೇಳಿದರು. ಎಲ್ಲವೂ ಸಹಜವಾಗಿದೆ. ಆದರೆ ಇವರು ರಾತ್ರಿ ಹನ್ನೊಂದು ಗಂಟೆಯಲ್ಲಿ ಒಬ್ಬರೇ ಗೋಡೌನಿಗೆ ಹೋಗಿ ಮಾಡುವುದಾದರೂ ಏನು? ಕೇಳಲೋ ಬೇಡವೋ ಎಂದು ಹಿಂಜರಿದು ಕೊನೆಗೆ ಕೇಳಿಯೇಬಿಟ್ಟೆ. ಅವರ ಮುಖ ಮಂದಹಾಸದಿಂದ ತುಂಬಿತು. "ನಿನಗೆ ಇದಕ್ಕೆ ಉತ್ತರ ಬೇಕಾದರೆ ಇವತ್ತು ರಾತ್ರಿ ನೀನೂ ನನ್ನ ಜತೆಗೆ

ಬಾ," ಎಂದರು.

ಬೀದಿ ದೀಪದ ಬೆಳಕು ಸಹ ಬೀಳದ ಆ ಕತ್ತಲೆ ಗವಿಯಂತಿದ್ದ ಗೋಡೌನಿನ ಓಣಿ ದಾಟಿ ಹಿಂಭಾಗದ ಅಂಗಳಕ್ಕೆ ಬರುವ ಹೊತ್ತಿಗೆ ನನ್ನ ಎದೆ ಡವಡವ ಹೊಡೆದುಕೊಳ್ಳಲಾರಂಭಿಸಿತು. ಆದರೆ ನಿಶ್ಚಿಂತೆಯಾಗಿದ್ದ ಶ್ರೀಮತಿ ಸ್ವೀನಿ ರಾಯ್ ತಮ್ಮ ಬುಟ್ಟಿಯಿಂದ ಹತ್ತು ಹದಿನೈದು ಪ್ಲಾಸ್ಟಿಕ್ ತಟ್ಟೆಗಳನ್ನು ತೆಗೆದು ಕೆಳಗೆ ಸಾಲಾಗಿಟ್ಟರು. ನಾಲ್ಕೈದು ಡೈರಿ ಹಾಲಿನ ಸೀಸೆಗಳನ್ನು ತೆಗೆದು ಎಲ್ಲಾ ತಟ್ಟೆಗೂ ಹಾಲು ಸುರಿದರು. ಆಮೇಲೆ, ದಿನವೂ ಕೇಳಿ ಬರುತ್ತಿತ್ತಲ್ಲ, ಅದೇ ವಿಚಿತ್ರ ಧ್ವನಿಯಲ್ಲಿ ಮೂರು ಸಲ ಕೂಗಿದರು. ಏನಾಶ್ಚರ್ಯ!

ಅದೆಲ್ಲಿಂದಲೋ ಹತ್ತು ಹದಿನೈದು ನಾಯಿಗಳು, ಬೆಕ್ಕುಗಳು ಓಡಿಬಂದು, ಕಾದಾಟವಿಲ್ಲದೆ, ಸದ್ದಿಲ್ಲದೆ, ಒಂದೊಂದೂ ಒದೊಂದು ತಟ್ಟೆಯ ಹಾಲನ್ನು ಕುಡಿದುಕೊಂಡು ಬಾಯಿ ಚಪ್ಪರಿಸುತ್ತಾ ಹೊರಟು ಹೋದವು! ಇನ್ನೂ ಬೆಪ್ಪಾಗಿ ನೋಡುತ್ತಲೇ ನಿಂತಿದ್ದೆ. ಶ್ರೀಮತಿ ರಾಯ್ ಹೇಳಿದರು: "ನೋಡು, ಮನೆಗಳಲ್ಲಿ ಸಾಕಿದ ನಾಯಿ, ಬೆಕ್ಕುಗಳಿಗೆ ಎಂತಹ ಆರೈಕೆ ಸಿಗುತ್ತದೆ. ಮಕ್ಕಳಿಗೆ ಕೊಡುವ ಹಾಗೆ ಹಾಲು ಕೊಡುತ್ತಾರೆ ಆದರೆ ಪಾಪ! ಈ ಬಡ ಮಕ್ಕಳನ್ನು ಕೇಳುವವರ್‍ಯಾರು? ಹಾಗೇ ಹಸಿದೂ ಹಸಿದೂ ಒಂದು ದಿನ ಸತ್ತುಹೋಗುತ್ತವೆ. ಪಾಪ, ಏನೋ ನಮ್ಮ ಮನೆ ಸುತ್ತ ಮುತ್ತ ಇರುವ ಈ ಪ್ರಾಣಿಗಳಿಗಾದರೂ ಹೊಟ್ಟೆ ತುಂಬಿಸೋಣ ಅಂತ ನನ್ನ ಆಸೆ ಅಷ್ಟೆ."

—ರತ್ನ ರಾವ್

ಬೇಸಿಗೆಯ ರಜ. ನಮ್ಮ ಚಿಕ್ಕಮ್ಮನ ಮಗಳು ನಮ್ಮ ಮನೆಗೆ ಬಂದಿದ್ದಳು. ನಮ್ಮ ಹುಡಿಗೆಯೂ ಅವಳ ವಯಸ್ಸಿನವಳೇ. ಅವರಿಬ್ಬರಿಗೂ ಬೆಳಿಗ್ಗೆ ಟಿಫಿನ್ ಕೊಟ್ಟು, ನಾನು ಒಂದು ಅರ್ಜೆಂಟ್ ಪತ್ರ ಬರೆಯತೊಡಗಿದೆ. "ಪತ್ರ ಬರೆದು ಮುಗಿದರೂ ನಿಮ್ಮದಿನ್ನೂ ತಿನ್ನುವುದು ಆಗಿಲ್ಲ. ಈ ಪತ್ರ ಪೋಸ್ಟಿಗೆ ಹಾಕಿ ಬಂದು ತಿನ್ನಿರಿ," ಎಂದೆ. ಪೋಸ್ಟ್ ಡಬ್ಬಿ ನಮ್ಮ ಓಣಿಯಲ್ಲಿಯೇ ಇದೆ. ನಾನು ಪೇಟೆಗೆ ಹೋಗಬೇಕಿತ್ತು. ನಮ್ಮ ಮನೆಯವರು, "ಪಾಪ ತಿನ್ನಲಿಕ್ಕೆ ಕುಳಿತ ಹುಡುಗರನ್ನು ಏಕೆ ಎಬ್ಬಿಸಿದಿ? ನನ್ನ ಕಡೆ ಕೊಡಬೇಕಿತ್ತು," ಎನ್ನುವಷ್ಟರಲ್ಲಿಯೇ ಇಬ್ಬರೂ ಪತ್ರ ತೆಗೆದುಕೊಂಡು ಹೋಗಿದ್ದರು. ನಾನು ಪೇಟೆಯಿಂದ ಸ್ವಲ್ಪ ಸಾಮಾನು ತೆಗೆದುಕೊಂಡು ಅವಸರದಿಂದ ಬರುವಷ್ಟರಲ್ಲಿ ಪೋಸ್ಟ್ ಡಬ್ಬಿಯ ಹತ್ತಿರ ನಮ್ಮ ಚಿಕ್ಕಮ್ಮನ ಮಗಳು, ನಮ್ಮ ಹುಡಿಗಿ ಮತ್ತೂ ಅನೇಕರು ನಿಂತಿದ್ದರು. ನಾನು ಯಾಕೆ ಎಂದು ವಿಚಾರಿಸಲಾಗಿ ನಮ್ಮ ಚಿಕ್ಕಮ್ಮನ ಮಗಳು ಮುಖ ಸಣ್ಣದು ಮಾಡಿಕೊಂಡು, "ಪತ್ರ ಹಾಕುವಾಗ ಕೆಳಗೆ ಬಿತ್ತೋ ಇಲ್ಲವೋ, ಎಂದು ಕೈ ಹಾಕಿ ನೋಡುವುದರಲ್ಲಿ ಕೈಯಲ್ಲಿಯ ಉಂಗುರ ಪೋಸ್ಟ್ ಡಬ್ಬಿಯಲ್ಲಿ ಬಿದ್ದಿದೆ," ಎಂದಳು. ಪೋಸ್ಟ್ ತೆಗೆಯುವುದು ಹನ್ನೊಂದು ಗಂಟೆಗೆ. ಈಗ ೯ ಗಂಟೆ ಕೂಡ ಆಗಿಲ್ಲ ಎಂದುಕೊಂಡು ಮನೆಗೆ ಬಂದು ನಮ್ಮ ಯಜಮಾನರಿಗೆ, "ಈಗ ಏನು ಮಾಡುವುದು?" ಎಂದೆ. ಅವರು ಸಿಟ್ಟಿನಿಂದ, "ಎಲ್ಲ ಮಾಡಿಯಾಗಿದೆ. ಹೆಡ್ ಪೋಸ್ಟಿಗೆ ಫೋನು ಮಾಡಿದ್ದೇನೆ. ಯಾರಾದರೂ ಪೋಸ್ಟ್ ಮನ್ ಬರಬಹುದು," ಎಂದರು. ಅಷ್ಟರಲ್ಲಿಯೇ ಹುಡುಗರು ಓಡುತ್ತ ಬಂದು, "ಪೋಸ್ಟ್‌ಮನ್ ಮತ್ತು ಕ್ಲಾರ್ಕ್ ಬಂದಿದ್ದಾರೆ. ನಿಮ್ಮನ್ನು ಕರೆಯುತ್ತಾರೆ," ಎಂದರು. ಅಲ್ಲಿಗೆ ಹೋದ ಬಳಿಕ ಉಂಗುರದ ತೂಕ, ಹರಳಿನ ಬಣ್ಣ, ಬೆಲೆ, ಅಳತೆ ಎಲ್ಲವನ್ನೂ ಬರೆದುಕೊಂಡು, ಇಬ್ಬರ ಸಾಕ್ಷಿಯಿಂದ ನಮ್ಮ ಮನೆಯವರ ಸಹಿ ಮಾಡಿಸಿಕೊಂಡು ಉಂಗುರವನ್ನು ಕೊಟ್ಟರು.

–ಸುಧಾ ವಿ. ಮನಸೂರ

ಮೂಲರಾಜನಿಗೆ ಆದ ಶಿಕ್ಷೆ ಎಂಥದು?

ಬ್ರಿಟಿಷ್ ಅಧಿಕಾರಿಗಳಾದ ವಾನ್ಸ್ ಅಗ್ನ್ಯೂ ಹಾಗೂ ಲೆಫ್ಟಿನೆಂಟ್ ಆಂಡರ್‌ಸನ್‌ರ ಕೊಲೆ ಆಪಾದನೆಗಾಗಿ ಮುಲ್ತಾನಿನ ಗವರ್ನರ್ ದಿವಾನ್ ಮೂಲರಾಜನನ್ನು ಮಿಲಿಟರಿ ನ್ಯಾಯಾಲಯವು ನಡೆಸಿದ ವಿಚಾರಣೆಯು ಭಾರತೀಯ ಇತಿಹಾಸದಲ್ಲಿ ಮಹತ್ವದ್ದಾಗಿದೆ. ೧೮೪೮ ರ ಎಪ್ರಿಲ್‌ನಲ್ಲಿ ತಲೆದೋರಿದ ೨ ನೇ ಸಿಖ್ ಯುದ್ಧದ ಜೊತೆಗೇ ಮುಲ್ತಾನಿನಲ್ಲುಂಟಾದ ದಂಗೆ ಉಲ್ಬಣಾವಸ್ಥೆ ತಳೆದು, ಮೂಲರಾಜನ ವಿಚಾರಣೆಯು ನಡೆದುದರ ಜೊತೆಗೆ ಮಹಾರಾಜ ದುಲೀಪ್‌ಸಿಂಗನ ರಾಜ್ಯವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನವಾಯಿತು.

ದಿವಾನ್ ಸಾವನಮಲ್‌ರ ಹಿರೇ ಮಗ ದಿವಾನ್ ಮೂಲರಾಜನು, ತನ್ನ ತಂದೆಯ ಮರಣದ ನಂತರ ೧೮೪೪ ರಲ್ಲಿ ಮುಲ್ತಾನಿನ ನಜಿಮನಾದನು. ಈತನ ಅಧಿಕಾರಕ್ಕೊಳಪಟ್ಟಿದ್ದ ಕ್ಷೇತ್ರಗಳೆಂದರೆ ಮುಲ್ತಾನ್, ರಘುಂಗೆ, ಡೇರಾ ಇಸ್ಮಾಯಿಲ್‌ಖಾನ್, ದೇರಾ ಘಾಜಿ ಖಾನ್‌ನ ಜಿಲ್ಲೆಗಳು ಹಾಗೂ ಮಿಯಾಂವಾಲೀ ಜಿಲ್ಲೆಯ ಕೆಲ ಭಾಗಗಳು. ಮೂವತ್ತೈದು ಲಕ್ಷ ರೂಪಾಯಿಗಳ ಒಟ್ಟು ಕಂದಾಯದಲ್ಲಿ ಇಪ್ಪತ್ತಮೂರು ಲಕ್ಷ ರೂಪಾಯಿಗಳನ್ನು ಲಾಹೋರ್ ದರ್ಬಾರಿಗೆ ಒಪ್ಪಂದ ಪ್ರಕಾರ ಕೊಟ್ಟು ಉಳಿದುದನ್ನು ದಿವಾನನು ತನ್ನ ವೇತನ ಹಾಗೂ ಆಡಳಿತೆ ಖರ್ಚಿಗಾಗಿ ತನ್ನಲ್ಲಿಯೇ ಉಳಿಸಿಕೊಂಡನು.

ಮೂಲರಾಜನು ನಜಿಮನಾದ ಆರಂಭದಲ್ಲಿಯೇ, ಪರಿಸ್ಥಿತಿಯು ಸಂದಿಗ್ಧವಾಗಿತ್ತು. ಆತ ಹಲವು ಉಪಟಳಗಳಿಂದ ಬೇಸತ್ತಿದ್ದನು. ಬಹಳ ಸಮಯದಿಂದಲೂ ಶತ್ರುತ್ವ ಹಾಗೂ ಕೌಟುಂಬಿಕ ವೈಷಮ್ಯಗಳಿದ್ದ ರಾಜಾ ಹೀರಾ ಸಿಂಗನ ಪ್ರಭುತ್ವದಲ್ಲಿ ಕಾರ್ಯ ನಿರ್ವಹಿಸುವುದು ತ್ರಾಸದಾಯಕವೆಂದೇ ಆತ, ಲಾಹೋರ್ ದರಬಾರಿನಲ್ಲಿಯೇ ಅವಿತುಕೊಂಡಿದ್ದ. ಬ್ರಿಟಿಷ್ ರೆಸಿಡೆಂಟನಾಗಿದ್ದ ಸರ್ ಹೆನ್ರಿ ಲಾರೆನ್ಸ್‌ನ ಸಹಾಯದಿಂದ ಇದನ್ನೆಲ್ಲಾ ಆತ ತೊಡೆದು ಹಾಕಿದರೂ ಮುಲ್ತಾನಿನ ವರ್ತಕರಿಗೂ ತನ್ನ ಕುಟುಂಬಕ್ಕೂ ಕೆಲವು ಮತಭೇದ ಉಂಟಾದ್ದರ ಪರಿಣಾಮವಾಗಿ ಕೆಲವು ಹೊಸ ಬಿಕ್ಕಟ್ಟುಗಳುದ್ಭವಿಸಿದವು. ಮೂರು ವರ್ಷಗಳ ವರೆಗೆ ಹೆಚ್ಚುತ್ತಿದ್ದ ಈ ಬಿಕ್ಕಟ್ಟನ್ನು ಧೈರ್ಯದಿಂದ ಎದುರಿಸಿದ ಮೂಲರಾಜನು ೧೮೪೭ ರ ಡಿಸೆಂಬರ್ ೧೮ ರಂದು ಲಾಹೋರಿಗೆ ಬಂದು ಬ್ರಿಟಿಷ್ ರೆಸಿಡೆಂಟ್ ಜೋನ್ ಲಾರೆನ್ಸ್‌ನಿಗೆ ರಾಜೀನಾಮೆಯನ್ನು ಒಪ್ಪಿಸಿದನು.

೧೮೪೮ ರ ಮಾರ್ಚಿಯಲ್ಲಿ ಆತನ ರಾಜೀನಾಮೆಯನ್ನು ಹೊಸ ರೆಸಿಡೆಂಟ್ ಸರ್ ಫ್ರೆಡ್ರಿಕ್ ಕ್ಯೂರಿ ಸ್ವೀಕರಿಸಿ, ಮುಲ್ತಾನಿನ ಆಡಳಿತೆಗಾಗಿ ಸರ್‌ದಾರ್ ಕಹನ್‌ಸಿಂಗ ಮೇನ್‌ನನ್ನು ದಿವಾನನನ್ನಾಗಿ ಆರಿಸಿ, ಆತನ ಸಹಾಯಕ್ಕಾಗಿ ವಾನ್ಸ್ ಅಗ್ನ್ಯೂ ಹಾಗೂ ಲೆಫ್ಟಿನೆಂಟ್ ಆಂಡರ್‌ಸನ್ ಎಂಬಿಬ್ಬರು ಬ್ರಿಟಿಷ್ ಅಧಿಕಾರಿಗಳನ್ನು ಕಳುಹಿಸಿದನು.

ಏಪ್ರಿಲ್ ೫ ರಂದು, ಹೊಸ ದಿವಾನ ಸರದಾರ ಕಹನಸಿಂಗನ ತಂಡ, ೧,೫೦೦ ಮಂದಿ ಅಂಗರಕ್ಷಕರ ಜೊತೆಗೆ ಲಾಹೋರ್‌ನಿಂದ ಮುಲ್ತಾನಿಗೆ ತೆರಳಿತು. ಏಪ್ರಿಲ್ ೧೭ ರಂದು ಮುಲ್ತಾನ್ ತಲುಪಿದ ಈ ತಂಡದವರನ್ನು ಏಪ್ರಿಲ್ ೧೮ ಹಾಗೂ ೧೯ ರಂದು ಮೂಲರಾಜನ ಪರವಾಗಿ ದಿವಾನ್ ಜ್ವಾಲಾ ಸಹಾಯ ಆದರಪೂರ್ವಕ ಸ್ವಾಗತಿಸಿದನು. ಬ್ರಿಟಿಷ್ ತಂಡ, ಬೃಹತ್ತಾದ, ಆಧುನಿಕ ಸೌಲಭ್ಯಗಳಿಂದ ಕೂಡಿತ್ತು. ದಿವಾನನ ವಾಸಸ್ಥಾನ ಆಮ್-ಖಾಸ್‌ದಿಂದ ಕೇವಲ ಮೈಲಂತರದಲ್ಲಿರುವ ಈದಿಗಾಕಟ್ಟಡವನ್ನು ಅದು ತನ್ನ ವಾಸಕ್ಕೆ ತಕ್ಕೊಂಡಿತು-

ಆಡಳಿತೆ ನಡೆಸಲು ಅತಿ ಸುಲಭದಲ್ಲಿ ಮುಲ್ತಾನಿಗೆ ತೆರಳುತ್ತಿದ್ದೇವೆ ಎಂದು ತಿಳಿದಿದ್ದ ಆಗ್ನ್ಯೂ ಹಾಗೂ ಆಂಡರ್‌ಸನ್ ಇವರಿಬ್ಬರ ಗ್ರಹಿಕೆಗಳು ತೀರಾ ತಪ್ಪಾಗಿದ್ದವು. ಎರಡೇ ದಿನದ ಹೊಸ ಆಡಳಿತೆಯಲ್ಲಿ ಅಲ್ಲಿ ರುದ್ರ ನಾಟಕವೊಂದು ನಡೆಯುವಂತಾಯಿತು.

ಏಪ್ರಿಲ್ ೧೯ ರ ಮುಂಜಾನೆ ಮೂಲರಾಜನು ಲಾಹೋರ್‌ನಿಂದ ಬಂದ ತಂಡವನ್ನು ತನ್ನ ಕೋಟೆಯತ್ತ ಕರೆದೊಯ್ದು, ಅಲ್ಲಿಯ ಕಂದಕಗಳನ್ನೂ, ಸೇನಾ ಪಾಳ್ಯವನ್ನೂ ಶಸ್ತ್ರಾಗಾರವನ್ನೂ ತೋರಿಸಿ ತನ್ನ ಸೇನಾ ಬಲವನ್ನು ತೋರಿಸಿದನು. ಕಹನ್‌ಸಿಂಗನು ಮೂಲರಾಜನಿಂದ ಕೀಲಿಕೈ ಪಡೆದನು. ಅಧಿಕಾರ ಹಸ್ತಾಂತರದ ಕಾರ್ಯಗಳೆಲ್ಲಾ ಮುಗಿದು, ಅವರೆಲ್ಲ ಅಲ್ಲಿಂದ ಹಿಂತಿರುಗಿದರು. ತಂಡ ಕೆಲವೇ ದೂರ ಸರಿಯುವಷ್ಟರಲ್ಲಿ, ಆಗ್ನ್ಯೂ ಅವರನ್ನು ಆಕ್ರಮಿಸಲಾಯಿತು.

ಪ್ರತ್ಯಕ್ಷ ದರ್ಶಿಯೊಬ್ಬರ ಹೇಳಿಕೆಯಂತೆ ಮೂಲರಾಜನು, ತನ್ನ ಎಡ ಹಾಗೂ ಬಲ ಬದಿಯಲ್ಲಿ ಆಗ್ನ್ಯೂ ಹಾಗೂ ಆಂಡರ್‌ಸನ್‌ರ ಜೊತೆ ಕುದುರೆ ಮೇಲೆ ಕುಳಿತು ಬರುತ್ತಿದ್ದಾಗ, ಚಾಮರ ಹಿಡಿದಿದ್ದ ವ್ಯಕ್ತಿ ಆಗ್ನ್ಯೂ ಅವರನ್ನು ಭರ್ಚಿಯಿಂದ ತಿವಿದು ಪಲಾಯನಗೈದ. ಅಮೀರ್‌ಚಂದ್ ಎಂಬವ ತನ್ನ ಖಡ್ಗದಿಂದ ಅವರ ಭುಜ ಹಾಗೂ ಹಣೆಯ ಮೇಲೆ ಹೊಡೆದ. ಆಗ್ನ್ಯೂ ಅವರ ಇಬ್ಬರು ಸೈನಿಕರು ತಮ್ಮ ಕುದುರೆಯಿಂದ ಇಳಿದು ಅಮೀರ್ ಚಂದನನ್ನು ಖಡ್ಗದಿಂದ ಹೊಡೆದರು. ಇದರಿಂದ ಗಲ್ಲದ ಸಮೀಪ ಹಾಗೂ ಮೂಗಿನ ಕೊನೆಗೆ, ಚರ್ಮ ಪರಚಿ ಹೋಗಿ ರಕ್ತ ಸುರಿಯುತ್ತಿದ್ದಂತೆಯೇ ಆಕ್ರಮಣಕಾರಿ ಅಮೀರ ಚಂದನು ಸಮೀಪದ ಕಾಲುವೆಗೆ ಜಿಗಿದನು, ಮೂಲರಾಜನು ಆಮ್‌ಖಾಸ್‌ನತ್ತ ಓಟಕ್ಕಿತ್ತನು.

ಈ ಕೋಲಾಹಲದ ಮಧ್ಯೆ ಲೆಫ್ಟಿನೆಂಟ್ ಆಂಡರ್‌ಸನ್ ಸಹ ಘಾಸಿಗೊಂಡನು. ಕುದುರೆಯೇರಿ ಪಲಾಯನಗೈಯಲೆತ್ನಿಸಿದ ಆತನನ್ನು ಮೂಲರಾಜನ ಕಾವಲು ಪಡೆಯ ಕೆಲವರು ಬೆನ್ನಟ್ಟಿ ತಿವಿದರು. ಮೂಲರಾಜನ ಭಾವಂದಿರಾದ ಸರ್ದಾರ್ ಕಹನಸಿಂಗ ಹಾಗೂ ರಾಮಸಿಂಗ ಇಬ್ಬರು ಆಗ್ನ್ಯೂನನ್ನು ಆನೆಯ ಮೇಲೆ ಹೊರಿಸಿಕೊಂಡು ಈದಿಗಾಕ್ಕೆ ತೆರಳಿದರು. ಆಂಡರ್‌ಸನ್‌ನನ್ನು ಸಹ ಚಾಪೆಯೊಂದರಲ್ಲಿ ಕಟ್ಟಿ ಅಲ್ಲಿಗೇ ತರಲಾಯಿತು.

ಅಲ್ಲಿ, ಆಗ್ನ್ಯೂ ಅವರು ಲಾಹೋರಿನಲ್ಲಿದ್ದ ರೆಸಿಡೆಂಟರಿಗೆ ಪತ್ರ ಬರೆದು ಎಲ್ಲಾ ವಿವರಗಳನ್ನೂ ತಿಳಿಸಿದರು. ಮೂಲರಾಜ್ ಅವರಿಗೂ ಪತ್ರ ಬರೆದು ಅತ್ಯಾಚಾರವೆಸಗಿದ ದುಷ್ಟರನ್ನು ಬಂಧಿಸುವಂತೆ ಕೇಳಿಕೊಂಡರು. ಆದರೆ ಇದಾವುದೂ ದಿವಾನನ ಕೈ ಸೇರಲೇ ಇಲ್ಲ. ಆಕ್ರಮಣದಲ್ಲಿ ದಿವಾನ್‌ನ ಚಿತಾವಣೆ ಇದೆ ಎಂದು ನಂಬಲು ಸಾಧ್ಯವಿಲ್ಲವೆಂದೂ ಆಗ್ನ್ಯೂ ಅವರು ವಿವರಿಸಿದ್ದರು.

ಏತನ್ಮಧ್ಯೆ ಮೂಲರಾಜನ ಅಂಗರಕ್ಷಕರು ಸ್ವತ: ಅಧಿಕಾರ ಗ್ರಹಣ ಮಾಡಿದ್ದು ಮಾತ್ರವಲ್ಲದೆ, ವಾಸ್ತವಿಕವಾಗಿ ದಿವಾನನೇ ಆ ಪುಂಡರ ಕೈಯಲ್ಲಿ ಸೆರೆಯಾಳಾಗಿದ್ದನು. ಮುಸ್ಲಿಂ ಹಾಗೂ ಸೀಖ್ ಸೈನಿಕರು ಅವರ ಬೆಂಬಲಕ್ಕೆ ನಿಂತರು ಲಾಹೋರದಿಂದ ಬಂದ ಪಡೆಯ ವಿರುದ್ಧ ಹೋರಾಡುವುದಾಗಿ ಖುರಾನ್ ಹಾಗೂ ಗ್ರಂಥ ಸಾಹಿಬ್ ಸಾಕ್ಷಿಯಾಗಿ ಪ್ರಮಾಣವನ್ನು ಸ್ವೀಕರಿಸಿದರು.

ಮಧ್ಯಾಹ್ನ ೨ ಗಂಟೆ ಸುಮಾರಿಗೆ ಪರಿಸ್ಥಿತಿ

ಮತ್ತಷ್ಟು ವಿಕೋಪಕ್ಕೆ ಹೋದುದನ್ನು ಮನಗಂಡ ಆಗ್ನ್ಯೂ ಅವರು, ಲೆಫ್ಟಿನೆಂಟ್ ಎಡ್ವರ್ಡ್ಸ್ ಬನೂ, ಅವರಿಗೆ ಜರೂರು ಸಂದೇಶ ಕಳಿಸಿ, ಸಹಾಯಕ್ಕಾಗಿ ಒಂದು ರೆಜಿಮೆಂಟನ್ನು ಕಳುಹಿಸಬೇಕು ಅಥವಾ ಈ ಮೊದಲೇ ಕಳುಹಿಸಿದ್ದಲ್ಲಿ ಅದು ಅತಿ ವೇಗದಲ್ಲಿ ಬರುವಂತೆ ಹಾಗೂ ಹೆಚ್ಚಿನ ಮತ್ತೊಂದು ರೆಜಿಮೆಂಟನ್ನು ಕಳುಹಿಸಿ ಕೊಡುವಂತೆ ಸವಿಸ್ತರವಾಗಿ ತಿಳಿಸಿದರು.

ಏಪ್ರಿಲ್ ೨೦ ರಂದು ಇನ್ನೂ ಹೆಚ್ಚಿನ ದುರ್ಘಟನೆಗಳು ನಡೆದುವು. ಮುಂಜಾವೆ ೭ ಗಂಟೆಗೆ, ಕ್ರಾಂತಿಯೇಳುವಂತೆ, ಮೂಲರಾಜ ಹೆಸರಿನಲ್ಲಿ ಹೊರಬಿದ್ದ ಘೋಷಣೆಯು ರಾಜ್ಯವನ್ನೇ ಕೆರಳಿಸಿತು. ದಿನವಿಡೀ, ಮೂಲರಾಜನ ಹಾಗೂ ಕಹನ್‌ಸಿಂಗರ ಸೈನಿಕರ ನಡುವೆ ಅಸಂಬದ್ಧ ತೋಪಿನ ಕಾಳಗವೇ ನಡೆಯಿತು. ಸಂಜೆ ವೇಳೆಗೆ, ಲಾಹೋರ್ ಪಡೆಯು, ಅಸಮಾಧಾನಗೊಂಡದ್ದರಿಂದ ಈದಿಗಾದಲ್ಲಿದ್ದವರ ಸ್ಥಿತಿ ಶೋಚನೀಯವಾಗಿ, ೪—೫ ಗಂಟೆ ಸುಮಾರಿಗೆ ಅವರೆಲ್ಲ ಫರಾರಿಯಾದರು. ಕಹನ್‌ಸಿಂಗ ಹಾಗೂ ಬ್ರಿಟಿಶ್ ಅಧಿಕಾರಿಗಳ ಜೊತೆಗಿದ್ದ ಸೈನಿಕರು ದಂಗೆಕೋರರನ್ನು ಸೇರಿದರು. ಇದನ್ನರಿತ ಜಲಗಾರ ಸಿಖ್ ಗೋದಾರಸಿಂಗನ ಮುಂದಾಳ್ತನದಲ್ಲಿ ದುರುಳರ ಗುಂಪೊಂದು ಈದಿಗಾವನ್ನು ಪ್ರವೇಶಿಸಿ, ಆಗ್ನ್ಯೂ ಹಾಗೂ ಆಂಡರ್‌ಸನರನ್ನು ವಧಿಸಿತು. ಆಗ್ನ್ಯೂ ಅವರ ತಲೆಯನ್ನು ಗೋದಾರ್‌ಸಿಂಗ ಸ್ವತಃ ಕಡಿದು ಹಾಕಿದನು.

ಆಗ್ನ್ಯೂ ಅವರು ಏಪ್ರಿಲ್ ೧೯ ರಂದು ಬರೆದ ಪತ್ರ ೨೨ ರಂದು ಬನೂರವರಿಗೆ ತಲುಪಿ, ತಕ್ಷಣವೇ ಆತ ಸೈನ್ಯ ಸಮೇತ ಹೊರಟರೂ, ಮೂಲರಾಜನ ತಮ್ಮ ದಿವಾನ್ ಶ್ಯಾಮ್‌ಸಿಂಗನ ಬಲವಾದ ಸೈನ್ಯ ಆಗಲೇ ಮುಂದುವರಿದ ಕಾರಣ, ಆತ ಅರ್ಧ ದಾರಿಯಲ್ಲೇ ಹಿಂತಿರುಗಬೇಕಾಯಿತು.

ಮುಲ್ತಾನಿನ ಕೋಟೆ ಬಲವಾಗಿ ಭದ್ರಪಡಿಸಿದ್ದರಿಂದ ಮೂಲರಾಜನ ಸೈನ್ಯ ಹಿರಿದಾಗಿದ್ದರಿಂದಲೂ ಕ್ರಾಂತಿಕಾರರು, ವಿಜಯಿಗಳಾಗುವೆರೆಂಬ ಸಂದಿಗ್ಧಯಿಂದ ಉಬ್ಬಿ ಹೋದರು. ಆದರೆ, ಕೊನೆಗೂ, ಬ್ರಿಟಿಷರ ಪ್ರಯಾಸಕರವಾದ ಮುತ್ತಿಗೆ ಮತ್ತು ಅವರ ೫,೦೦೦ ಮಣದ ಮದ್ದು ಗುಂಡಿನ ದಿಬ್ಬ, ಕೋಟೆಯನ್ನು ಒಡೆದು ಹಾಕಿದವು.

ಶರಣಾಗತನಾಗದೆ ಬೇರೆ ದಾರಿಯಿಲ್ಲವೆಂದರಿತ ಮೂಲರಾಜನು, ೧೮೪೯ ಜನವರಿ ೩ ರಂದು, ಬ್ರಿಟಿಷ್ ಸೇನಾನಿ ಜನರಲ್ ವ್ಹಿಷ್‌ನಿಗೆ ಪತ್ರ ಬರೆದು ತಾನು ಶರಣಾಗುವುದಾಗಿಯೂ, ಅದಕ್ಕೆ ಬೇಕಾದ ಏರ್ಪಾಡಿಗಾಗಿ ತನ್ನ ವಕೀಲರನ್ನು ಕಳುಹಿಸುವುದಾಗಿಯೂ, ಹಾಗೂ ತನ್ನ ಜೀವ ರಕ್ಷಣೆ ಮತ್ತು ತನ್ನ ಹೆಂಗಳೆಯರ ಮಾನ ರಕ್ಷಣೆ ಬಯಸುವುದಾಗಿಯೂ ತಿಳಿಸಿದನು.

ಶರಣಾಗತಿಯು, ಯಾವುದೇ ಷರತ್ತಿಲ್ಲದೇ, ಸ್ವೇಚ್ಛೆಯಿಂದ ಕೂಡಿರಲೇಬೇಕೆಂದು ಜನರಲ್ ವ್ಹಿಷ್ ಇದಕ್ಕೆ ಪ್ರತ್ಯುತ್ತರವಿತ್ತನು.

೧೮೪೯, ಜನವರಿ ೨೨ ರ ಮುಂಜಾನೆ ೯ ಗಂಟೆಗೆ ಮೂಲರಾಜನು ತನ್ನ ಪರಿವಾರದ ಜೊತೆಗೇ ಬ್ರಿಟಿಷರಿಗೆ ಶರಣಾದನು. ಮುಲ್ತಾನಿನ ಪತನದ ಒಂದು ತಿಂಗಳ ಬಳಿಕ, ಫೆಬ್ರುವರಿ ೨೧ ರಂದು, ಸಿಖ್ಖರು ರಾವಲ್ಪಿಂಡಿಯಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ಶರಣು ಬಂದರು. ಮಾರ್ಚ್ ೨೯ ರಂದು, ಪಂಜಾಬು ಬ್ರಿಟಿಷ್ ಸಾಮ್ರಾಜ್ಯದ ಒಂದಂಗವಾಯಿತು.

ಮೂಲರಾಜನನ್ನು, ಆಗ್ನ್ಯೂ ಹಾಗೂ ಆಂಡರ್‌ಸನ್ನರ ಕೊಲೆ ಆರೋಪದ ಮೇಲೆ ವಿಚಾರಣೆ ನಡೆಸಿದುದು ರಾಜ್ಯದ ನೂತನ ಆಡಳಿತೆಯ ಕಾರ್ಯಕ್ರಮಗಳಲ್ಲಿ ಮೊದಲನೆಯದಾಯಿತು. ಆಗ್ನ್ಯೂ ಅವರ ನಿಜವಾದ ಹಂತಕ ಗೋದಾರ್‌ಸಿಂಗನನ್ನು, ಮೇಜರ್ ಪೋಲ್‌ರವರ ಅಧ್ಯಕ್ಷತೆಯಲ್ಲಿಯ ಸ್ಪೆಶಲ್ ಮಿಲಿಟರಿ ಕಮಿಶನ್ ವಿಚಾರಣೆ ನಡೆಸಿ ಆತನಿಗೆ ಗಲ್ಲು ಶಿಕ್ಷೆ ವಿಧಿಸಿತು.

ಮೂಲರಾಜನ ಮೇಲಿನ ಆಪಾದನೆಯು, ಯಾವ ಕಾನೂನಿನ– ಅಧೀನಕ್ಕೊಳಪಡದಿದ್ದರಿಂದ, ಆತನ ಮೇಲಿನ ಆರೋಪಣಾ ವಿಚಾರ

ಣೆಯು ಸಾರ್ವಜನಿಕರ ಕುತೂಹಲ ಕೆರಳಿಸಿದ ವಿಶೇಷ ವಿಚಾರಣೆಯಾಗಿತ್ತು.

೧೮೪೯ ಮೇ ೩೧ ರಂದು, ಲಾಹೋರಿನ ದರ್ಗ ದಿವಾನ್-ಇ-ಆಮ್‌ನಲ್ಲಿ ಮೂಲರಾಜನ ವಿಚಾರಣೆ ಪ್ರಾರಂಭವಾಗಿ ಹತ್ತೊಂಬತ್ತು ದಿನಗಳವರೆಗೆ ನಡೆಯಿತು. ವಿಚಾರಣೆಗಾಗಿ ಗವರ್ನರ್ ಜನರಲ್ಲರ ಅಧಿಕಾರದಲ್ಲಿ ಪ್ರತ್ಯೇಕ ಕಮಿಷನರನ್ನೂ ನೇಮಿಸಲಾಯಿತು. ಸರಕಾರದ ಪರವಾಗಿ, ಶ್ರೀ ಲಾರಿಂಗ್ ಬೌರಿಂಗ್‌ರವರೂ, ಆರೋಪಿ ಮೂಲರಾಜನ ಪರವಾಗಿ, ಪಂಜಾಬಿನ ಡೆಪ್ಯುಟಿ ಕಮೀಷರನಾಗಿದ್ದ ಕ್ಯಾಪ್ಟನ್ ಹೆಮಿಲ್ಟನ್‌ನ್ನನೂ ವಾದಿಸಿದರು. ಹೆಮಿಲ್ಟನ್ನನು ಸೈನಿಕ ವೃತ್ತಿಯವನಾಗಿದ್ದರಿಂದ, ಆತನಿಗೆ ಶಾಸನಸಮ್ಮತವಾದ ಯಾವುದೇ ತರಬೇತಿಯೂ ಇಲ್ಲದ್ದರಿಂದ, ಮೂಲರಾಜನ ವಿಚಾರಣೆಯಲ್ಲಿ ಇವನಿಗೆ ಹೆಚ್ಚಿನ ಶ್ರದ್ಧಾಸಕ್ತಿಗಳಿರಲಿಲ್ಲವಾದ್ದರಿಂದಲೂ ಮೂಲರಾಜನ ಪ್ರತಿವಾದವು ಆಶಾದಾಯಕವಾಗಿರಲಿಲ್ಲ.

ಮಿ. ವಾನ್ಸ್ ಅಗ್ನ್ಯೂ, ಹಾಗೂ, ಆಂಡರ್‌ಸನ್‌ರ ಕೊಲೆಗೆ, ಮೂಲರಾಜನೇ ಕಾರಣನೆಂದು ಆತನ ಮೇಲೆ ಆರೋಪ ಹೊರಿಸಲಾಗಿತ್ತು, ಆದರೆ ಮೂಲರಾಜನು, ಧೈರ್ಯವಾಗಿ ತಾನು ಅಪರಾಧಿಯಲ್ಲವೆಂದು ವಾದಿಸಿದನು.

ಪ್ರಾಸಿಕ್ಯೂಶನ್ ಕಡೆಯಿಂದ ಮಿ. ಲಾರಿಂಗ್ ಬೌರಿಂಗ್ ಅವರು, ಆರೋಪಿಯ ಮೇಲೆ ಹೊರಿಸಲಾದ ಆರೋಪಗಳನ್ನೆಲ್ಲಾ ಬಹಿರಂಗಪಡಿಸಿ ಸ್ಪಷ್ಟೀಕರಣ ನೀಡಿದರು.

ಮೂಲರಾಜನಿಗೆ, ತನ್ನ ಹುದ್ದೆಗೆ ರಾಜೀನಾಮೆ ಕೊಡುವುದಕ್ಕೂ, ಮುಲ್ತಾನನ್ನು ಹಸ್ತಾಂತರಿಸುವುದಕ್ಕೂ ಎಳ್ಳಷ್ಟೂ ಮನಸ್ಸಿರಲಿಲ್ಲ. ಲಾಹೋರಿನಿಂದ ಬ್ರಿಟಿಷ್ ಅಧಿಕಾರಿಗಳು ಬಂದಿದ್ದಾಗ, ಮೂಲರಾಜನು, ಸ್ವತಃ ಅವರಿಗೆ ಸೌಜನ್ಯದ ಸ್ವಾಗತ ನೀಡದೇ ಇದ್ದುದು, ಹೊಸ ಮರಿಷೀಮನಾಗಿ ನೇಮಕಗೊಂಡ ಕಹನ್‌ಸಿಂಗನನ್ನು ಅನಾದರದಿಂದ ಕಂಡದ್ದು, ಹಾಗೆಯೇ ಅಗ್ನ್ಯೂ ಅವರು ತಿವಿತಕ್ಕೊಳಗಾದಾಗ, ಆಕ್ರಮಣಕಾರಿಯನ್ನು ಅಗ್ನ್ಯೂ ಅವರಿಗೆ ಯಾವುದೇ ಸಹಾಯ ಮಾಡದೇ ತನ್ನ ಕುದುರೆಯೇರಿ ಅಲ್ಲಿಂದ ಪಲಾಯನಗೈದುದು ಇವೆಲ್ಲಾ ಮೂಲರಾಜನ ಮೇಲಿನ ಆರೋಪವನ್ನು ರುಜುಪಡಿಸಲು ಸಮರ್ಥವಾಗಿರುವುದಾಗಿ ಬೌರಿಂಗರು ವಾದಿಸಿದರು. ಏಪ್ರಿಲ್ ೧೯ರಂದು, ಮುಸ್ಲಿಂ ಹಾಗೂ ಸಿಖ್ ಸೈನಿಕರು ಮೂಲರಾಜನ ಸಮೀಪ ನಿಂತು ಲಾಹೋರ್ ಪಡೆಯ ವಿರುದ್ಧ ಹೋರಾಡಲು ಪ್ರತಿಜ್ಞೆ ಮಾಡಿದುದೂ, ಅದಕ್ಕೆ ಮೊದಲು ಅವರು ಸಭೆ ಸೇರಿದುದೂ, ಅದೇ ರೀತಿ ೨೦ ರಂದು ಸರದಾರರಿಗೆ, ದಂಗೆಯಿಂದ ದೂರವಿರುವಂತೆ ಪಂಜಾಬಿನ ಮಹಾರಾಜರು ಆಜ್ಞೆ ಕೊಟ್ಟಾಗ, ಅವರು ತಾವು ಮೂಲರಾಜನ ಹೇಳಿಕೆಯಂತೆ ವರ್ತಿಸುತ್ತಿದ್ದು ಅವರ ಆಜ್ಞೆಯನ್ನಲ್ಲದೇ ಬೇರಿನ್ನಾವುದನ್ನೂ ಗೌರವಿಸುವುದಿಲ್ಲವಾಗಿ ಮಾರುತ್ತರ ನೀಡಲು ಮೂಲರಾಜನೇ ಕಾರಣವೆಂಬುದು ಬೌರಿಂಗರ ವಾದವಾಗಿತ್ತು.

ವಾದಿಪರ ಹನ್ನೊಂದು ಸಾಕ್ಷಿ ಹೇಳಿಕೆಗಳನ್ನು ಹಾಜರು ಪಡಿಸಲಾಯಿತಾದರೂ, ರೆಸಿಡೆಂಟ್ ಜಾನ್ ಲಾರೆನ್ಸರ ಹೇಳಿಕೆಯನ್ನುಳಿದು ಉಳಿದುವೆಲ್ಲಾ ಅತ್ಯಂತ ಸತ್ವಹೀನ ಹೇಳಿಕೆಗಳಾದುವು.

ಕ್ಯಾಪ್ಟನ್ ಹೆಮಿಲ್ಟನ್ನರ, ಪ್ರಭಾವಪೂರ್ಣ ಪ್ರತಿವಾದಿಪರ ಸಾಕ್ಷಿ ಹೇಳಿಕೆಗಳು, ವಾದಿಪರ ಹೇಳಿಕೆಗಳನ್ನು ಹಿಮ್ಮೆಟ್ಟಿಸುವಂತಿತ್ತು. ಮೂಲರಾಜನ ಅದೃಷ್ಟ ಇಳಿಮುಖವಾದಿದ್ದರೂ ಆತನ ಪರವಾಗಿದ್ದ ಸಾಕ್ಷಿಗಳು ಪ್ರಶಂಸನೀಯವಾಗಿದ್ದವು.

ಎರಡೂ ಕಡೆಯ ಸಾಕ್ಷಿ ಹೇಳಿಕೆಗಳನ್ನು ನಡೆಸಿದ ನಂತರ ಹೆಮಿಲ್ಟನ್ನರು ತಮ್ಮ ವಾದವನ್ನು ಮಂಡಿಸಿದರು. ಮೂಲರಾಜನು, ಶಾಂತಿ ಸುವ್ಯವಸ್ಥೆ ಕಾಪಾಡುವ ವ್ಯಕ್ತಿ. ೧೮೪೬, ರಲ್ಲಿ ಲಾಹೋರ್ ಸರಕಾರದ ಪುನರ್ರಚನೆಯಾದಾಗ, ಅಲ್ಲಿ ದುಷ್ಪರಿಣಾಮಗಳ ಲಕ್ಷಣ ಕಂಡುಬಂದರೂ ಆತ ನಿರ್ಭೀತಿಯಿಂದ ತನ್ನ ರಾಜನಿಷ್ಠೆಯನ್ನು ಕಾಪಾಡಿಕೊಂಡಿದ್ದು

ಸ್ಥಿತಿ ಕಾರ್ಯಕ್ರಮಗಳೆಲ್ಲಾ, ಲಾರೆನ್ಸ್ ಅವರಿಂದ ಪ್ರಶಂಸಿಸಲ್ಪಟ್ಟಿವೆ. ಇದು ಬ್ರಿಟಿಷರ ಬಗೆಗೆ ಆರೋಪಿಗೆ ಇದ್ದ ಗೌರವಭಾವದ ಮಟ್ಟವನ್ನು ಸೂಚಿಸುವುದಾಗಿಯೂ ಹೆಮಿಲ್ಟನ್ನರು ವಾದಿಸಿದರು. ವಾದಿಪರ ಸಾಕ್ಷಿಗಾರರಾದ ಸಾದಿಕ್ ಮುಹ್ಮದ್, ಕುತುಬ್‌ಶಹ, ಮಿರ್ಜಾರ್ ಅಲೀ, ಹಾಗೂ ಬನ್ಸಿಧರರ ಸಾಕ್ಷಿ ಹೇಳಿಕೆಗಳನ್ನು ಖಂಡಿಸುತ್ತಾ, ಸುಳ್ಳು ಸಾಕ್ಷಿ ನುಡಿವ ಈ ಠಕ್ಕರ ಮಾತನ್ನೇ ಆಧಾರವಾಗಿಟ್ಟುಕೊಂಡು ಆರೋಪಿಯನ್ನು ಶಿಕ್ಷಿಸಕೂಡದೆಂದು ಹೆಮಿಲ್ಟನ್ನರು ತಮ್ಮ ವಾದದಲ್ಲಿ ಪ್ರತಿವಾದಿಸಿದರು.


ಮಿ ಅಗ್ನ್ಯೂ ಅವರು, ಆಕ್ರಮಣ ನಡೆದ ದಿನ, ಲಾಹೋರ್‌ನ ರೆಸಿಡೆಂಟರಿಗೆ ಬರೆದ ಪತ್ರದ ಸಾರಾಂಶವನ್ನೆತ್ತಿ, ಅದರಲ್ಲಿ ಅಗ್ನ್ಯೂ ಅವರು, ದಂಗೆಯ ಬಗ್ಗೆ ಮೂಲರಾಜನ ಕೈವಾಡವಿರುವುದಾಗಿ ತಾನು ಭಾವಿಸುವುದಿಲ್ಲವೆಂದೂ ಸ್ಪಷ್ಟಪಡಿಸಿರುವುದನ್ನು ಕೋರ್ಟಿನ ಗಮನಕ್ಕೆ ತಂದರು. ಹಾಗೆಯೇ, ಅಗ್ನ್ಯೂ ಅವರ ಕತ್ತರಿಸಿದ ರುಂಡವನ್ನು ಆರೋಪಿಯ ಮುಂದೆ ಹಾಜರು ಪಡಿಸಿರುವ ಬಗ್ಗೆ ಯಾವುದೇ ಸಾಕ್ಷಿ ಸಹ ಇಲ್ಲದಿರುವಾಗ ಆತ ಈ ಕೊಲೆಗೆ ಕಾರಣನೆಂದು ಹೇಳಲು ಸಾಧ್ಯವಿಲ್ಲ. ಆರೋಪಿಯು, ಯಾವುದೇ ತಕರಾರು ಇಲ್ಲದೇ ಶರಣಾಗಿದ್ದು, ಆತನ ವಿರುದ್ಧ ಹೊರಿಸಲಾದ ಆರೋಪವನ್ನು ಬ್ರಿಟಿಷ್ ಕೋಡ್ ದೃಢಪಡಿಸಲು ಸಾಧ್ಯವಿಲ್ಲವೆಂದೂ, ಬ್ರಿಟಿಷ್ ಕಾನೂನು ಇಲ್ಲಿಯ ಅಪರಾಧಿಗಳಿಗೆ ಅನ್ವಯಿಸದೇ ಇರುವುದರಿಂದ ಆರೋಪಿಯನ್ನು ಶಿಕ್ಷಿಸುವಂತಿಲ್ಲವೆಂದೂ ಹೆಮಿಲ್ಟನ್ನರು ತಮ್ಮ ಸುದೀರ್ಘ ವಾದದಲ್ಲಿ ಹೇಳಿದರು.

ಬೌರಿಂಗರು, ತಮ್ಮ ಪ್ರತಿವಾದದಲ್ಲಿ ಹ್ಯಾಮಿಲ್ಟನ್ನರು ನಿವೇದಿಸಿದ ವಿಷಯಗಳೆಲ್ಲಾ ಆಧಾರರಹಿತವಾಗಿದ್ದು, ಮುಲ್ತಾನಿನಲ್ಲಿ ನಡೆದ ದಂಗೆಗೂ, ಪರಿಣಾಮವಾಗಿ ಅಗ್ನ್ಯೂ ಹಾಗೂ ಆಂಡರ್‌ಸನ್ನರ ಕೊಲೆಗೂ ಮೂಲರಾಜನೇ ಕಾರಣನೆಂದೂ ವಾದಿಸಿ, ಆತನ ಸೈನಿಕರೂ ಆತನ ವಿರುದ್ಧ ವರ್ತಿಸಿದ್ದರೆ ಮತ್ತು ಆತನನ್ನು ಬಂಧನಕ್ಕೊಳಪಡಿಸಿದ್ದರೆ, ಆತ ಯಾವುದೇ ಹಿಂಸೆಗೂ ಒಳಪಡದೇ ಅಥವಾ ಆತನ ಖಜಾನೆಯೂ ಭದ್ರವಾಗಿದ್ದಿರಲು ಸಾಧ್ಯವಿರಲಿಲ್ಲವೆಂದೂ ಪ್ರತಿಯಾಗಿ ವಾದಿಸಿದರು.

ಎರಡೂ ಕಡೆಯ ಎಲ್ಲಾ ಸಾಕ್ಷಿಗಳನ್ನೂ ಪರಿಶೀಲಿಸಿದ ಕಮಿಶನ್ ಮುಲ್ತಾನಿನ ಮಾಜೀ ಗವರ್ನರ್ ಮೂಲರಾಜನನ್ನು, ಆತನ ಮೇಲಿನ ಆರೋಪಗಳಿಗಾಗಿ ಮರಣದಂಡನೆಗೆ ಗುರಿಪಡಿಸಿತಾದರೂ, ಈ ವಿಷಯದಲ್ಲಿ ಕ್ಷಮಾಪಣೆಯ ಅಂಗೀಕಾರವನ್ನು ಗವರ್ನರ ಜನರಲ್‌ರಿಗೆ ಬಿಟ್ಟುಕೊಟ್ಟಿತು.

ಬಳಿಕ ಗವರ್ನರ್ ಜನರಲ್ ಲಾರ್ಡ್ ಡಾಲ್‌ಹೌಸಿ, ಮರಣದಂಡನೆ ರದ್ದುಗೊಳಿಸಿ ಮೂಲರಾಜನಿಗೆ ಕರಿನೀರಿನ ಶಿಕ್ಷೆಯನ್ನು ವಿಧಿಸಿದನು.

ಆದರೆ ಮೂಲರಾಜನು ಮಾತ್ರ ಆ ಶಿಕ್ಷೆಗೂ ಒಳಗಾಗದೇ, ಕಲ್ಕತ್ತಾ ತಲುಪುವಷ್ಟರಲ್ಲಿಯೇ ಗಂಭೀರ ಅಸ್ವಸ್ಥತೆಗೊಳಗಾದನು. ಆತನನ್ನು ಬನಾರಸಿಗೆ ಮರಳಿ ತಂದರಾದರೂ ಆತ ಅಲ್ಲಿಗೆ ತಲುಪುವುದರ ಮೊದಲೇ ಚಿರವಿಶ್ರಾಂತಿಯ ಪರಂಧಾಮದ ಗುರಿ ತಲುಪಿದನು— ೧೮೫೧ ರ ಆಗೋಸ್ತು ೧೧. ರಂದು, ಆತ ತನ್ನ ೩೬ ರ ಎಳೆ ಪ್ರಾಯದಲ್ಲಿಯೇ ಇಹಲೋಕವನ್ನು ತ್ಯಜಿಸಿದನು.



ಮಾನವನನ್ನು ಪಶುಗಳಿಂದ ಬೇರ್ಪಡಿಸುವುದು ಯಾವುದೆಂಬುದು ಕೊನೆಗೂ ಗೊತ್ತಾಗಿಯೆ ಬಿಟ್ಟಿತು. ಅದು ಅವನ ಆರ್ಥಿಕ ತೊಂದರೆಗಳು.

—ಜೂಲ್ಸ್ ರೇನಾರ್ಡ್

ವೀಣಾವಿಲಾಸ

ರತ್ನಾಕರ ವರ್ಣಿಯ "ಭರತೇಶ ವೈಭವ"ದ ನಾಯಕ ಷಟ್ ಖಂಡ ಚಕ್ರವರ್ತಿ ಭರತ ಚಕ್ರೇಶ್ವರ ರಸಿಕ ಚಕ್ರವರ್ತಿಯಾಗಿದ್ದಂತೆ ಯೋಗಿ ಚಕ್ರವರ್ತಿಯೂ ಆಗಿದ್ದಾನೆ. ರಾಣೀವಾಸದಲ್ಲಿ ಶೃಂಗಾರರಸದ ಹೊನಲು ಹರಿಸಬಲ್ಲ ಭರತ ಚಕ್ರವರ್ತಿ ಮುನಿಗಳ ನೆರವಿಯಲ್ಲಿ ಅನುನಯದಿಂದ ಅವರನ್ನು ಓಲಗಿಸಿ ಒಲಿಸಿಕೊಳ್ಳಲೂ ಬಲ್ಲವನಾಗಿದ್ದ. ಇಂಥ ಭರತ ಚಕ್ರವರ್ತಿಯ ಯೋಗಭೋಗ ಸಾಧನಗಳನ್ನು ರತ್ನಾಕರವರ್ಣಿಯು ಹೃದಯಂಗಮವಾಗಿ ಬಣ್ಣಿಸಿದ್ದಾನೆ. 'ಶೃಂಗಾರಮೆ ರಸಂ' ಎಂದು ನೇಮಿಚಂದ್ರ ಕವಿಯು ಬಹುಹಿಂದೆಯೆ ಹೇಳಿರುವನಾದರೂ ಆ ಶೃಂಗಾರದ ಚಿತ್ರಣದಲ್ಲಿ ರತ್ನಾಕರವರ್ಣಿಯೇ ಮೇಲುಗೈ ಎಂದು ಹೇಳಬಹುದಾಗಿದೆ.

ಇಲ್ಲಿ ರಾಣಿ ಕುಸುಮಾಜಿ ತನ್ನ ಪತಿ ಭರತಚಕ್ರವರ್ತಿಯನ್ನು ವೀಣಾವಾದನ ವೈಖರಿಯಿಂದ ಮೆಚ್ಚಿಸಿದ ಭಾಗವನ್ನು ಆಯ್ದುಕೊಡಲಾಗಿದೆ. ಸಂಗೀತಾಲಾಪನೆಯ ಸಕಲ ಸುಖವನ್ನೂ ಕೇವಲ ಶಬ್ದಗಳ ಮೂಲಕ ಶ್ರಾವಕರಿಗೆ ನೀಡುವಲ್ಲಿ ರತ್ನಾಕರವರ್ಣಿ ಯಶಸ್ವಿಯಾಗಿದ್ದಾನೆಂದು ಬೇರೆ ಹೇಳಬೇಕಾಗಿಲ್ಲ.

ಏನಬಣ್ಣಿಸುವೆನಾ ಕುಸುಮಾಜಿ ಪಾಡುವ । ಗಾನವನಾ ವೀಣೆಗಿವಳು ॥
ತಾನೊಬ್ಬ ಸಖಿಯೋಯೆಂಬಂತೆ ಶಾರೀರ ಸ । ಮಾನವಾಗಿರಲು ಪಾಡಿದಳು ॥ ೧ ॥
ಕೆಂಬಾಯ ನಸುದೆರೆದಾಯೆಂದು ರಾಗವ । ನಂಬುಜಾನನೆ ತುಡುಕಿದಳು ॥
ತುಂಬಿಗಳೊಡನೆ ಘುಂಮೆಂದೆಡಬಲಕೆ ತೆ । ರಂಬೊಳೆದುವು ಶ್ರುತಿಗೊಡುತ ॥ ೨ ॥
ವೀಣೆಯುಳೊಮ್ಮೆ ತೋರುವಳು ರಾಗವ ತನ್ನ । ಗೋಣೊಳಗೊಮ್ಮೆ ತೋರುವಳು ॥
ವೀಣೆಯನೊಂದ ಬಿಟ್ಟೊಂದ ನುಡಿಸುವಳೀ । ಜಾಣೆಯೆಂಬಂತಿಹದಾಗ ॥ ೩ ॥
ವೀಣೆಯ ನುಡಿಸುತ ಪಾಡಿದರಿವಳೀಗ । ವೀಣೆಗಳೆರಡನೊಂದಾಗಿ ॥
ಹೂಣಿ ನುಡಿಸುತಿದ್ದಳೆಂಬೊಲಿಹುದು ಮುರ್ಝು । ರಾಣಿಯ ದನಿಯು ಚೆಲ್ವಿಕೆಯು ॥ ೪ ॥
ವೇಳೆಯರಿದು ಶ್ರುತಿಯರಿದು ಕಟ್ಟಣೆಯರಿ । ದಾಳಾಪದನುಭವವರಿದು ॥
ಕೇಳಿಸಿದಳು ಭರತಾಗಮ ಭರತ ಭೂ । ಪಾಲನ ಸತಿಗೆ ವಿಸ್ಮಯವೆ ॥ ೫ ॥
ಶ್ರೀರಾಗ ರಸವನಾಳಾಪಿಸಿ ಮಾಳವ । ಶ್ರೀರಾಗರಸವನೆತ್ತಿದಳು ॥
ಈ ರೀತಿಯಾಗೆ ಶ್ರೀರಾಗವಲ್ಲ ದರವು । ದಾರಿದ್ರ್ಯ ರಾಗವೆಂಬಂತೆ ॥ ೬ ॥
ಕೂಡೆ ಕಣ್ದೆರೆದು ನೋಡುತ ಪಾಡುವಳು ನಗೆ । ಗೂಡಿ ಪಾಡುವಳು ಮತ್ತೊಮ್ಮೆ ॥
ತೀಡುತ ತಂತಿಯೆತ್ತರಗಿ ದೃಷ್ಟಿಯನಿಟ್ಟು । ಪಾಡುವಳಾ ಗಾಡಿಕಾತಿ ॥ ೭ ॥
ಒಳಗುಮ್ಮಿದಾನಂದರಸ ತನ್ನ ತನು ತುಂಬಿ । ತುಳುಕಿ ಹೊರಗೆ ಸೂಸುವಂತೆ ॥
ತೆಳುವಸಿರಿಂದ ಬಾಯ್ದೆರೆಯೊಳು ಸುಸ್ವರ । ಹೊಳೆದು ಮೋಹಿಸುತಿದ್ದುದಾಗ ॥ ೮ ॥
ಸುಳಿನಾಭಿಯೊಳು ಪುಟ್ಟಿ ಮೆಲ್ಲಿದೆಯೊಳು ಬೆಳೆ । ದೊಳುಗೊರಳೊಳು ಪ್ರಾಯವಡೆದು ।
ಎಳೆಯುಳ ಬ್ರಹ್ಮರಂಧ್ರವನೇರಿ ಬಾಯ್ದೆರೆ । ಗಿಳಿದು ಮೋಹಿಸಿದುದಾಳಾಪ ॥ ೯ ॥

ಏನ ಕಲ್ತಳೊ ಎಲ್ಲಿ ಕಂಡಳೊ ಮರ್ಝು ಘುಂ । ಝಾನುಘುಂಝದೊಳು ಮೇಲ್ಮೇಲೆ ॥
ತಾನವ ಹೊಸ ಹೊಸತಾಗಿ ತಂದಳು ಜೇನ । ಸೋನೆಯು ಕರೆವಳೆಂಬಾಕೆ ॥ ೧೦ ॥
ಉಂಚದಿಂದೆತ್ತಿವಳಡಕದಿಂದಡಗಿಸಿ । ಮಿಂಚಿನಂತೊಡನೇಳಿಸುವಳು ॥
ಅಂಚೆಯು ನಡೆದಾಡಿಸುವಂತೆ ರಾಗದ । ಸಂಚುಗಾಣಿಸಿ ತೋರುತಿಹಳು ॥ ೧೧ ॥
ಬಂದ ತಾನವ ಬರಲೀಸದೆ ಹೊಸ ಹೊಸ । ತೊಂದೊಂದು ಪರಿಯು ತಾನಗಳಾ ॥
ತಂದು ತಂದೆದೆಗೊಳಿಸಿದಳು ಗಾನವ ಕರೆ । ತಂದು ತೋರಿಸುವಂತೆ ನೃಪಗೆ ॥ ೧೨ ॥
ತಾನ ತಾನಕೆ ರಾಯು ಹಿಗ್ಗುತಿಹನು ಗಂಡ । ಸಾನಂದಕವಳುಬ್ಬುತಿಹಳು ॥
ಗಾನವೊಪ್ಪಿದುದಾಗ ಗಂಧಗಿರಿಯು ಪವ । ಮಾನ ಕಂಪನೆ ಕೀಡಿದಂತೆ ॥ ೧೩ ॥
ಯೋಗದೊಳಾತ್ಮತತ್ವವೆ ಕಡೆ ದಶವಿಧ । ಭೋಗಕಂಗನೆ ಕಡೆಯೆಂದು ॥
ಯೋಗಶಾಸ್ತ್ರವ ಭೋಗಶಾಸ್ತ್ರವನೆರಡನು । ತೂಗಿ ತೋರ್ಪಡಿಸಿ ಪಾಡಿದಳು ॥ ೧೪ ॥
ರತಿಗಲಸಿಕೆಯೇತರಿಂದಹುದಭಿನವ । ರತಿಗೇತರಿಂದಿಚ್ಛೆಯುಹುದು ॥
ಹತ ಸುಖವಾವುದು ಹಿತ ಸುಖವಾವುದೆಂ । ದತಿಶಯದೋರಿ ಪಾಡಿದಳು ॥ ೧೫ ॥
ಬಿಸಿ ನಗೆಯಾವುದು ತಣ್ಣಗೆಯಾವುದು । ಹುಸಿ ನಗೆ ಮುಗುಳು ನಗೆಗಳು ॥
ರಸನಗೆಯೆಳೆ ನಗೆಯೆಂಬವೆಂತಿಹುವೆಂದು । ನಸುನಗುತ ಪಾಡಿದಳು ॥ ೧೬ ॥
ತೊಡೆಯು ಹೊಯ್ಲಾವಾಗ ತೋಳ ಹೊಯ್ಲಾವಾಗ । ಕಡೆ ಕಂಗಳೆಸುಗೆ ಯಾವಾಗ ॥
ನುಡಿಯು ಕೇಡಾವಾಗ ನಗೆಯು ಹುಟ್ಟುವಾಗ । ನುಡಿಯುಬೇಕೆಂದು ಪಾಡಿದಳು ॥ ೧೭ ॥
ಕಲೆಯು ಕಾಣಿಸ ಹಾಡುತಿದ್ದುದ ಮಂಚದ । ಕೆಲದ ಪುತ್ತಳಿಗಳ ಕಂಡು ॥
ಎಲೆಲೆ ಪರರು ಕೇಳ್ದರೆಂದು ಶಂಕಿಸಿ ನಿಲ್ಲ । ಲೊಲೆದಾಡಿ ಕೂಡೆ ಪಾಡುವಳು ॥ ೧೮ ॥
ಆದುದೌ ಕುಸುಮೆ ಚೆಲ್ವಾದುದೌ ಕುಸುಮಾಜಿ । ಭೇದಿಸಿ ಹಾಡಿದೌ ಕುಸುಮು ॥
ಓದುದು ಸೊಗಸಾದುದಿನ್ನೊಮ್ಮೆಯೆಂದು ವಿ । ನೋದಿಗಳರಸ ಕೇಳಿದನು ॥ ೧೯ ॥
ಆ ನುಡಿಗೇಳ್ದವಳುಬ್ಬಿ ಹಾಡುವಳದ । ಕಾ ನರನಾಥನುಬ್ಬುವನು ॥
ತಾನವಳಿಗೆ ಮೆಚ್ಚುತವಳು ತನಗೆ ಮೆಚ್ಚು । ತಾನಂದ ಗೋಷ್ಠಿ ಮಾಡಿದರು ॥ ೨೦ ॥
ಮೆಚ್ಚಿದಿನಿಯುಳೊಂದು ಹುಚ್ಚ ನುಡಿರೆಡೆ । ನೊಚ್ಚಗಾಗಿಹುದು ನಲ್ಲರಿಗೆ ॥
ಅಚ್ಚಗಾನವನಾಕೆ ಪಾಡುತಿರಲು ಕೇಳ್ದು । ಮೆಚ್ಚದಿಹನೆ ಚಕ್ರಧರನು ॥ ೨೧ ॥
ಗಲ್ಲವ ನಲುಗುವ ಮುಂಡೆಯು ತಡಹುವ । ನಲ್ಲಳೆ ಆಯ್ತು ಲೇಸೆಂಬಾ ॥
ಸೊಲ್ಲು ಸೊಲ್ಲಿಗೆ ಪುಟವೇರುತವಳು ತನ್ನ । ನಲ್ಲನ ಮುಂದೆ ಹಾಡಿದಳು ॥ ೨೨ ॥
ಬೆಳಗಿನೊಳೋಲಾಡುವಂತೆ ಸಂಗೀತದ । ಸುಳಿಯೊಳು ತೇಲಾಡುವಂತೆ ॥
ತೆಳುಗಾಳಿಯೇರಿ ಪೈಹಾಳಿಯು ಮಾಡುವಂ! ತೆಳೆವೆಂಗಳರಸಿ ಹಾಡಿದಳು ॥ ೨೩ ॥
ಕಡೆಗಣ್ಣ ರಶ್ಮಿಕೆಂಬಲ್ಗಳ ರಶ್ಮಿ ಬಾ । ಯ್ಮಡುಕೆ ಚೆಂದುಟಿಗಳ ರಶ್ಮಿ ॥
ಸಿಡಿದರಸನ ಮೇಲೆ ಹಾರತಿರಲು ಸೆಳೆ । ನಡುವಿನ ನೀರೆ ಹಾಡಿದಳು ॥ ೨೪ ॥
ಮುಡದಿ ಹಾಡುವದೊಂದು ಗಮಕಕೆ ಗಾನದ । ಕಡುಸವಿಗೆದೆಯೊಳು ಹಿಗ್ಗಿ ॥
ಎಡದ ತೋಳಿಂದ ಕೊರಳನಪ್ಪಿ ಚೆಂದುಟಿ । ವಿಡಿದು ಚುಂಬಿಸಿ ನಕ್ಕು ಬಿಡುವಾ ॥ ೨೫ ॥

ಸಂಗ್ರಹ : ದಲಕೆ


ಓ, ಸಾಠೆ
ಮಾಲ್ಟೆಕ್ಸ್ ಇಷ್ಟು
ರುಚಿಕರವಾಗಿರಲೇ
ಬೇಕು
ಅದರಲ್ಲಿ ಮಾಲ್ಟ್
ಇರುವುದರಿಂದ!
ತಾಜಾ, ಕುರುಕುರು ಅಲ್ಲದೇ ರುಚಿಯಲ್ಲಿ
ಅಪ್ರತಿಮ—ವ್ಹಾ!
ಈ ಬಿಸ್ಕಿಟ್‌ನ ಅಪ್ರತಿಮ ರುಚಿಗೆ ಅದರಲ್ಲಿರುವ
ಮಾಲ್ಟೇ ಕಾರಣ ಪಚನಕ್ಕೆ ಹಗುರ.
ಪೌಷ್ಟಿಕಾಂಶಗಳಿಂದ ತುಂಬಿದ ಮಾಲ್ಟೆಕ್ಸ್ ಬಿಸ್ಕಿಟ್
ಎಷ್ಟು ತಿಂದರೂ ಮತ್ತೆ ಮತ್ತೆ ತಿನ್ನಬೇಕೆನಿಸುತ್ತದೆ.
ಅದಕ್ಕೆ ಆ ಮಾಲ್ಟೇ ಕಾರಣ.
IS:1011
ಐ. ಯಸ್. ಐ. ಗುರುತಿರುವ
ಮಾಲ್ಟೆಕ್ಸ್ ಎಂದರೆ ಶ್ರೇಷ್ಟತೆಯ
ಖಾತ್ರಿ ನೀಡುವ ಬಿಸ್ಕಿಟ್.
SATHE MALTEX BISCUITS
ಸಾಠೆ

ಜಾಗ

ಎನ್. ಎಸ್. ರವೀಂದ್ರನಾಥ

ಆ ಬಸ್ಸಿಗಾಗಿ ಕಾದು ಕಾದು ನನಗಾಗಲೇ ಕಾಲು ನೋಯುತ್ತಿದ್ದವು. ಹಿಡಿದ ಸಣ್ಣ ಬ್ಯಾಗ್ ಕೂಡ ದೀರ್ಘ ನಿರೀಕ್ಷಣೆಯಿಂದ ಭಾರವೆನಿಸುತ್ತಿತ್ತು. ಅಲ್ಲಲ್ಲಿ ಅದೇ ಬಸ್ಸಿಗಾಗಿ ಕಾದು ನಿಂತಿದ್ದ ಜನ - ಲೋಕಾಭಿರಾಮವಾಗಿ ಮಾತಾಡುತ್ತಿದ್ದರು. ಟಿಕೆಟ್ ಕೊಡುತ್ತಿದ್ದ ಕಂಡಕ್ಟರನ ಬಳಿ ಹೋಗಿ, "ಇನ್ನೂ ಎಷ್ಟೊತ್ತಪ್ಪ ಬಸ್ಸು ಬರೋದು ?" ಎಂದು ಕೇಳಿದೆ. ನನ್ನ ಪ್ರಶ್ನೆ ಕೇಳುತ್ತಲೇ ತಾಳ್ಮೆ ಕಳೆದುಕೊಂಡವನಂತೆ ನೆಲಕ್ಕೊಮ್ಮೆ ಥೂತ್ ಎಂದು ಉಗುಳಿ ಕಣ್ಣಿಂದ ಕೆಂಡ ಕಾರುತ್ತಾ ನುಡಿದ, "ಈ ಬೇವಾರ್ಸಿ ಬಸ್ಸಿಗೇನಾಗಿದೆಯೋ... ನನಗೂ ಜನಕ್ಕೆ ಉತ್ತರ ಹೇಳಿ ಹೇಳಿ ಸಾಕಾಯಿತ್ರಿ." ಇವನ ಬಳಿ ಮಾತನಾಡಿ ಉಪಯೋಗವಿಲ್ಲವೆಂದುಕೊಂಡು ಬೇರೆಡೆ ಹೋಗಿ ನಿಂತು ರಸ್ತೆಯ ಮೇಲೆ ಹಾದುಹೋಗುವ ಯಾವ ವಾಹನದ ಶಬ್ದಕ್ಕೂ ನಮ್ಮ ಬಸ್ಸೇ ಬಂತೇನೋ ಎಂದು ನಿರೀಕ್ಷಿಸುತ್ತಾ ನಿಂತೆ.

ಮೈಸೂರಿನಿಂದ ರಂಗರಾಯ ಬರೆದ ಕಾಗದ ಮನೆಯಲ್ಲಿ ಕಿಡಿ ಹೊತ್ತಿಸಿತ್ತು. ಅವನ ಮಗಳು ರಮಾನನ್ನು ನನ್ನ ಮಗ ವಿಜು ಪ್ರೇಮಿಸಿದ್ದು, ಆ ಪ್ರೇಮವಿವಾಹಕ್ಕೆ ನನ್ನ ಆಶೀರ್ವಾದ ಕೋರಿದ್ದ. ಪತ್ರ ಕಾಣುತ್ತಲೇ ಮೈಯೆಲ್ಲಾ ಉರಿದುಹೋಗಿತ್ತು. ವಿಜು ತಾಯಿ ಕಣ್ಣೀರು ತೆಗೆದು ನುಡಿದಿದ್ದಳು, "ನಿಮಗೆ ನೂರು ಸಲ ಹೇಳಿದೆ. ಊರಲ್ಲೇ ಕಾಲೇಜಿರೋವಾಗ ಮೈಸೂರಿಗೇಕೆ ಓದೋಕೆ ಕಳಿಸಬೇಕಂತ. ನಮ್ಮ ಕಣ್ಣೆದುರಿಗೇ ಹೊಸದಾಗಿ ಸುರು ಆಗಿರೋ ಕಾಲೇಜಿನಲ್ಲಿ ಓದಲಿ ಅಂದ್ರೂ ದೊಡ್ಡ ಊರು, ದೊಡ್ಡ ಕಾಲೇಜು ಅಂತ ಮೈಸೂರಿಗೆ ಕಳಿಸಿದಿರಿ, ಅವನ ಕುಣಿತಕ್ಕೆ ತಾಳ ಹಾಕಿ. ಈಗ ನೋಡಿ. ವರ್ಷಗಟ್ಟಲೇ ನಾವು ಹೆಸರಿಟ್ಟುಕೊಂಡಿರೋ ಸಾವಿತ್ರಿ ಗತಿಯೇನಾಗಬೇಕು ?"

ಅವಳನ್ನು ಸಂತೈಸಿ ರಂಗರಾಯ ಬರೆದದ್ದು ನಿಜವೇ ಎಂದು ತಿಳಿಯಲು ವಿಜೂಗೆ ಟ್ರಂಕಾಲ್ ಮಾಡಿದ್ದೆ. ಅವನು ನಿಜ ಎಂದಷ್ಟೇ ಅಲ್ಲ, ರಮಾಳನ್ನೇ ಮದುವೆಯಾಗುವುದಾಗಿಯೂ ತಿಳಿಸಿದ್ದ. ನನಗುಳಿದದ್ದು ಒಂದೇ ದಾರಿ. ರಂಗರಾಯನಿಗೆ ಚೆನ್ನಾಗಿ ಛೀಮಾರಿ ಹಾಕಿ, ವಿಜು ಓದನ್ನು ಮಧ್ಯಕ್ಕೇ ನಿಲ್ಲಿಸಿ ಊರಿಗೆ ಅವನನ್ನು ಕರೆದುಕೊಂಡು ಬಂದುಬಿಡುವುದು.

ಕೊನೆಗೂ ಬರಬೇಕಾದ ಮೈಸೂರು ಬಸ್ಸು ಬಂತು. ಇದ್ದಕ್ಕಿದ್ದಂತೆ ಹೊರಟಿದ್ದರಿಂದ ಸೀಟ್ ರಿಜರ್ವ್ ಮಾಡಿಸಿರಲಿಲ್ಲ. ಜನಗಳ ನೂಕುನುಗ್ಗಲಿನಲ್ಲಿ ನಾನೂ ನುಗ್ಗಿ ಜಾಗ ಮಾಡಿಕೊಳ್ಳಬೇಕು. ಬಸ್ಸು ನಿಲ್ಲುತ್ತಿ-

ದ್ದಂತೆಯೇ ಅದರ ಹಿಂದೆಯೇ ಓಡಿದ ಜನಸಮೂಹದಲ್ಲಿ ನಾನೂ ಸೇರಿದೆ. ತಳ್ಳುತ್ತಿರುವ ಜನರನ್ನೇ ತಳ್ಳಿಕೊಂಡು ಮುಂದೆಹೋಗದಿದ್ದರೆ ಮೈಲುಗಟ್ಟಲೇ ನಿಲ್ಲಬೇಕಾದೀತು. ಇಳಿಯು ಬೇಕಾದ ಜನ ಇಳಿಯುವುದನ್ನೇ ಕಾದಿದ್ದ ಜನ ಕಂಡಕ್ಟರನನ್ನೂ ನುಗ್ಗಿಕೊಂಡು ಹತ್ತಿದರು. ಆ ವಿಪರೀತ ನೂಕುನುಗ್ಗಲಿನಲ್ಲಿ ಮೊದಲು ನಾನೂ ಒಬ್ಬನಾಗಲು ಸಾಧ್ಯವಾಗದೇ ಹೋದರೂ ನುಗ್ಗಾಟ ಕಡಿಮೆಯಾದನಂತರ ಉಳಿದವರನ್ನು ತಳ್ಳಿಕೊಂಡು ಬಸ್ಸು ಹತ್ತಿದೆ. ಒಳಹತ್ತಿದ ನನ್ನನ್ನು ಮುಂದೆ ತಳ್ಳುತ್ತ ಮತ್ತಷ್ಟು ಜನ ಹಿಂದೆ ಹತ್ತಿದರು.

ರಿಜರ್ವೇಶನ್ ಸೀಟುಗಳು ಹಿಂಭಾಗದ ವರೆಗೂ ಆಗಿದ್ದವು. ಉಳಿದ ಜಾಗಗಳಲ್ಲಾಗಲೇ ಮುಂದೆ ಹತ್ತಿದ ಜನ ಕುಳಿತಿದ್ದರು. ನಾನು ನಿಂತೇ ಪ್ರಯಾಣ ಮಾಡಬೇಕೆನ್ನುವುದು ಖಚಿತವಾಯಿತು. ಬಸ್ಸಿನ ಹಿಂದಿನ ಸಾಲನ್ನೊಮ್ಮೆ ನೋಡಿದೆ. ಅಲ್ಲಿ ಹೆಂಗಸೊಬ್ಬಳು ಇಬ್ಬರು ಮಕ್ಕಳನ್ನು ಅಕ್ಕ ಪಕ್ಕದಲ್ಲಿ ಸೀಟಿನ ಮೇಲೆ ಕೂಡ್ರಿಸಿಕೊಂಡಿದ್ದಳು ಆ ಮಕ್ಕಳನ್ನು ಏಳಿಸಿ ಇನ್ನಿಬ್ಬರು ಅಲ್ಲೇಕೆ ಕುಳಿತುಕೊಳ್ಳಬಾರದೆಂದು ಯೋಚಿಸುತ್ತಿದ್ದೆ. ಅಷ್ಟರಲ್ಲಿ ನನ್ನ ಹಿಂದೆ ನಿಂತಿದ್ದವನು, 'ಏನಮ್ಮಾ ಮನೆ ಮಕ್ಕಳನ್ನೆಲ್ಲಾ ಸೀಟಿನ ಮೇಲೆ ಕೂರಿಸಿದರೆ ಇಲ್ಲಿ ನಿಂತಿರೋ ದೊಡ್ಡೋರ ಗತಿಯೇನು? ಹುಡುಗರು ನಿಂತ್ಕೋತಾವೆ ಏಳ್ಸಮ್ಮಾ,' ಎನ್ನುತ್ತಾ ಆ ಮಕ್ಕಳನ್ನು ಎಳೆದುಹಾಕುವುದಕ್ಕೇ ಹೊರಟ. ಆ ಹೆಂಗಸಿಗೆ ವಿಪರೀತ ಕೋಪ ಬಂದಿತು. 'ಯಾಕಪ್ಪಾ, ಈ ಮಕ್ಕಳಿಗೆ ಕೊಟ್ಟಿರೊ ಪೂರ್ತಿ ಚಾರ್ಜ್ ನಿನ್ನ ಜೇಬಿನಿಂದ ಕೊಟ್ಟಿದಿಯಾ? ವಯಸ್ಸಾದ್ದಕ್ಕೆ ನಿಂಗೇನು ಕೋಡು ಮೂಡಿದಾವೆ? ಹೌದು ಅನ್ನಂಗೆ ದುಡ್ಡ ತೆತ್ತು ಟಿಕೆಟ್ ಕೊಂಡು ಕೂರಿಸಿದಿವಿ,' ಎಂದು ಅವನಿಗೆ ಛೀಮಾರಿ ಹಾಕಿ ಇಳಿಸಿದ ಮಕ್ಕಳನ್ನು ಸೀಟಿನ ಮೇಲೆ ಕೂರಿಸಿ, 'ಅವನು ಇಳಿ ಅಂದ ಅಂತ ಇಳಿದ್ರೆಲ್ಲಾ ಟಿಕೆಟ್ ತಗಂಡಿದೀವಿ ಅಂತ ಹೇಳಾಕೆ ನಿಮ್ಮ ಬಾಯಿ ಸೇದಿ ಹೋಗೇತೇನೋ? ನಿಮಗೆ ಮೈಲುಗಟ್ಟಲೆ ನಡಿಯಾಕೆ ಹಚ್ಚಬೇಕು' ಎಂದು ಮಕ್ಕಳಿಗೆ ಚೆನ್ನಾಗಿ ಗದರಿಸಿ ಆ ಮನುಷ್ಯನ ಕಡೆಗೆ ದುರುಗುಟ್ಟಿ ನೋಡಿದಳು. ಅವನು ಪೆಚ್ಚಾಗಿ ನಿಂತ.

ಕಂಡಕ್ಟರ್ ಟಿಕೇಟು ಕೊಟ್ಟು ಮುಗಿಯುತ್ತಲೂ ಬಸ್ಸು ಚಲಿಸಿತು. ನನ್ನ ಸ್ವಲ್ಪ ಮುಂಭಾಗದಲ್ಲಿ ಹೆಂಗಸರ ಸೀಟಿನ ಮೇಲೆ ಲಗ್ಗೇಜ್ ಸ್ಟ್ಯಾಂಡ್‌ನಲ್ಲಿದ್ದ ಸೂಟಕೇಸೊಂದು ಬೀಳುವಹಾಗಿತ್ತು. ಆ ಸೂಟ್‌ಕೇಸಿನ ಕೆಳಕ್ಕೆ ನೇರವಾಗಿ ಮಧ್ಯ ವಯಸ್ಸಿನ ಹೆಂಗಸೊಬ್ಬಳು ಕುಳಿತಿದ್ದಳು. ಬಸ್ಸಿನ ಕುಲುಕಾಟಕ್ಕೆ ಸೂಟ್‌ಕೇಸು ಮುಂದಕ್ಕೆ ಜರುಗುತ್ತಾ ಆ ಹೆಂಗಸಿನ ತಲೆಮೇಲೆ ಬೀಳುವಂತಿತ್ತು. ಅದನ್ನು ಗಮನಿಸಿದ ಆಕೆ ವಿಷಯವನ್ನು ಕಂಡಕ್ಟರನಿಗೆ ತಿಳಿಸಿದಳು. ಕಂಡಕ್ಟರನಿಗೂ ಅದು ಬೀಳುವಂತೆ ಕಂಡಿತು. 'ಯಾರದ್ರೀ ಆ ಸೂಟ್‌ಕೇಸು? ಬಸ್‌ಮೇಲೆ ಹಾಕಿಸೋದರ ಬದಲು ಒಳಗಿಟ್ಟಿದ್ದೀರಿ,' ಎನ್ನುತ್ತಾ ಸುತ್ತಲೂ ದೃಷ್ಟಿ ಹಾಯಿಸಿದ. ಅದು ತನ್ನದೆನ್ನುವಂತೆ ನನ್ನ ಪಕ್ಕದ ಸೀಟಿನಲ್ಲಿ ಕುಳಿತ ಯುವಕನೊಬ್ಬ ಸನ್ನೆ ಮಾಡಿದ. ಸೂಟ್‌ಕೇಸನ್ನು ಕೆಳಗಿಟ್ಟುಕೊಳ್ಳಲು ಕಂಡಕ್ಟರ್ ಸೂಚಿಸಿದಾಗ ಯುವಕನಿಗೆ ರೇಗಿತು, 'ಇಂಪಾಸಿಬಲ್, ನಾನು ಬಾಂಬೇಯಿಂದ ಬರ್ತಾ ಇದ್ದೀನಿ ಒಬ್ಬರೂ ಹೀಗೆ ನಾನ್‌ಸೆನ್ಸಾಗಿ ಮಾತಾಡಲಿಲ್ಲ' ಎಂದ.

'ನನ್ನ ತಲೆ ಮೇಲೆ ಪೆಟ್ಟಿಗೆ ಬಿದ್ದರೆ ಯಾರಪ್ಪಾ ಜವಾಬ್ದಾರಿ,' ಎಂದು ಆ ಹೆಂಗಸು ಕೂಗಿದಳು.

'ನೋಡಿ,' ಆ ಯುವಕ ಕಾರಣ ಕೊಡಲು ಯತ್ನಿಸುತ್ತಿದ್ದ, 'ಅದು ಸರ್ಟಿಫೈಡ್ ಲಗ್ಗೇಜು. ಅದು ಬೀಳಲ್ಲ. ಬಿದ್ದರೆ ಎಲ್ಲಾ ಜವಾಬ್ದಾರೀನೂ ನಂದು.'

'ತಲೆಮೇಲೆ ಬಿದ್ದು ತಲೆ ಒಡೆದರೆ ನಿಂದೆಂಥ ದಪ್ಪ ಜವಾಬ್ದಾರಿ.' ಆ ಹೆಂಗಸು ಮತ್ತೊಮ್ಮೆ ಅರಚಿ ಹೇಳಿದಳು, 'ನೋಡಪ್ಪಾ ಕಂಡಕ್ಟರೇ, ಆ ಪೆಟ್ಟಿಗೆ ಇಲ್ಲಾ ಬೇರೆ ಇಡಿಸು, ಇಲ್ಲಾ ನಾನೇ ಬೇರೆ ಕಡೆ ಕೂರೋದಕ್ಕೆ ಜಾಗ ಮಾಡಿಕೊಡು'.

ಕಂಡಕ್ಟರು ಆ ಸೂಟ್‌ಕೇಸನ್ನು ಲಗೇಜ್

ಸ್ಟ್ಯಾಂಡಿನಿಂದ ತೆಗೆದು, 'ನೋಡ್ರಿ ಮಿಸ್ಟರ್, ಇದನ್ನ ಬಸ್ ಮೇಲೆ ಹಾಕ್ಸಿ, ಇಲ್ಲದಿದ್ರೆ ನಿಮ್ಮ ತೊಡೆ ಮೇಲೆ ಇಟ್ಕೊಳ್ಳಿ' ಎಂದು ಯುವಕನಿಗೆ ವರ್ಗಾಯಿಸಿದ.

ಆ ಯುವಕನಿಗೆ ಕ್ಷಣಕಾಲ ಏನೂ ಮಾಡಲೂ ತೋಚದಾಯಿತು. ಆ ಸೂಟ್‌ಕೇಸನ್ನು ಮತ್ತೆ ಲಗೇಜ್ ಸ್ಟ್ಯಾಂಡ್ ಮೇಲಿಡುವಂತಿಲ್ಲ. ಬಸ್ ಮೇಲೆ ಹಾಕಿಸಲು ಬಸ್ಸು ಬೇರೊಂದು ಊರಲ್ಲಿ ನಿಲ್ಲುವವರೆಗೂ ಕಾಯಬೇಕು. ಸೀಟಿನ ಕೆಳಗೆ ತೂರಿಸಲು ಜನರಿಗೆ ನಿಲ್ಲುವುದಕ್ಕೂ ಸ್ಥಳಾವಕಾಶವಿಲ್ಲದಷ್ಟು ಸ್ಥಳ ಭರ್ತಿ. ನಾನು ನನ್ನ ಕಾಲಬಳಿ ಸ್ವಲ್ಪ ಸ್ಥಳ ಮಾಡಿಕೊಂಡು ಸೂಟ್‌ಕೇಸನ್ನು ಅಲ್ಲಿಡಲು ತಿಳಿಸಿದೆ. ಆ ಯುವಕನಿಗೆ ನನ್ನ ಸಲಹೆಯಿಂದ ತುಂಬ ಸಂತೋಷವಾಗಿ ಹೇಳಿದ, 'ನೋಡಿ ಸರ್, ಈ ಪ್ಯಾಸೆಂಜರ್‌ಗಳಿಗೆ ಸ್ವಲ್ಪನೂ ಸಹಕಾರ ಬುದ್ಧಿ ಇಲ್ಲ. ಸೂಟ್‌ಕೇಸು ಬೀಳಲ್ಲ, ಅದು ಸರ್ಟಿಫೈಡ್ ಲಗ್ಗೇಜು ಅಂತ ಎಷ್ಟು ಹೇಳಿದರೂ ಅಲ್ಲಿಂದ ತೆಗೆಸಿದರು ನೋಡಿ. ನಮ್ಮ ದೇಶ ಯಾಕೆ ಈ ಸ್ಥಿತಿಗಿಳೀತು ಗೊತ್ತಾ ಸಾರ್...' ದೇಶದ ರಾಜಕೀಯ ಹಗರಣಕ್ಕೆ ಸೂಟ್‌ಕೇಸ್ ತೆಗೆಸಿದ ಆ ಹೆಂಗಸೇ ಕಾರಣವೆನ್ನುವಂತೆ ಭಾಷಣ ಬಿಗಿದು, 'ತಾವೆಲ್ಲಿಗೆ ಸಾರ್ ?' ಎಂದು ಕೇಳಿದ. ಮೈಸೂರಿಗೆಂದು ಹೇಳಿದಾಗ ನನಗೆ ಸಹಾನುಭೂತಿ ತೋರಿಸುತ್ತಾ, 'ಅಯ್ಯೋ ದೂರದ ಪ್ರವಾಸ. ಹೇಗೆ ನಿಂತೇ ಇರ್ತೀರಿ,' ಎಂದು ಗೊಣಗಿಕೊಂಡು, 'ಸರಿ ಸಾರ್. ನೋಡಿ ನಾನು ಎಲ್ಲರಂತಲ್ಲ. ಸ್ವಲ್ಪ ದೂರ ಕೂತಿರ್ತೀನಿ, ನಂತರ ಸ್ವಲ್ಪ ದೂರ ನನ್ನ ಸೀಟಲ್ಲಿ ನೀವು ಕೂತ್ಕೊಳ್ಳಿ. ಇಬ್ಬರೂ ಸೀಟನ್ನು ಶೇರ್ ಮಾಡಿಕೊಳ್ಳೋಣ,' ಎಂದು ಹೇಳಿ ಮುಂದಿದ್ದ ಆ ಹೆಂಗಸನ್ನು ದುರುಗುಟ್ಟಿ ನೋಡಿದ. ನಾನು ಅವನಿಗೆ ಥ್ಯಾಂಕ್ಸ್ ಹೇಳಿ ಒಪ್ಪಿಕೊಂಡೆ.

ಬಸ್ಸು ವೇಗವಾಗಿ ಚಲಿಸುತ್ತಾ ರಸ್ತೆಯ ಇಕ್ಕೆಲಗಳಲ್ಲಿ ಹಬ್ಬಿದ ಮರಗಳ ಸಾಲು ದೂರದಲ್ಲಿ ಒಂದಕ್ಕೊಂದು ಹೆಣೆದುಕೊಂಡು ಉಂಟು ಮಾಡಿದ ಕಗ್ಗತ್ತಲ ಗುಹೆಯಲ್ಲಿ ಪ್ರವೇಶಿಸುವಂತೆ ಕಾಣುತ್ತಿತ್ತು. ಕಂಡಕ್ಟರ್ ಟಿಕೆಟ್ ಚೆಕಿಂಗ್ ಆರಂಭಿಸಿದ್ದ. ನಾನು ನನ್ನ ಕೋಟಿನ ಒಳಜೇಬಲ್ಲಿ ಕೈಹಾಕಿ ನೋಡಿ ಟಿಕೆಟ್ ಇರುವುದನ್ನು ನಿಶ್ಚಯಪಡಿಸಿಕೊಂಡೆ. ಕಂಡಕ್ಟರ್ ಟಿಕೆಟ್ ಕೇಳುತ್ತಾ ನನ್ನ ಬಳಿ ಬಂದು ನನ್ನ ಟಿಕೆಟ್ ಚೆಕ್ ಮಾಡಿ ಹೋದ. ಮುಂದಿನ ಸೀಟಲ್ಲಿ ಕುಳಿತ ಒಬ್ಬ ಮುದುಕರು ಎಲ್ಲೋ ತೀರ್ಥಯಾತ್ರೆಗೆ ಹೊರಟವರಂತೆ ಕಾಣುತ್ತಿತ್ತು. ಕೂದಲನ್ನೆಲ್ಲಾ ಮೇಲಕ್ಕೆ ಬಾಚಿ ಹೂ ಸುತ್ತಿದ್ದ ಜುಟ್ಟಿನ ಮೇಲೆ ಪದೇ ಪದೇ ಕೈ ಆಡಿಸುತ್ತಿದ್ದವರು ಟಿಕೆಟ್ ಚೆಕಿಂಗ್ ಆರಂಭವಾಗುತ್ತಲೇ ಚಡಪಡಿಸುತ್ತಿರುವುದು ಕಾಣುತ್ತಿತ್ತು. ಕಂಡಕ್ಟರ್ ಅವರ ಬಳಿ ಹೋಗುತ್ತಲೇ ಅವರು ಬಿರುಸಾಗಿ ಜೇಬನ್ನೆಲ್ಲಾ ತಡಕಾಡುತ್ತಿದ್ದರು. ಅವರ ತಡಕಾಟ ಕಂಡು ಕಂಡಕ್ಟರ್, 'ಇದು ರಿಜರ್ವ್ ಆಗಿರೋ ಸೀಟು, ಇಲ್ಲಿ ಯಾಕೆ ಕುಳಿತಿರಿ,' ಎಂದು ಕೇಳಿದ. 'ನನ್ನ ಹಿರೇ ಮಗ ಇಲ್ಲಿ ಕೂರ್ಸಿ ಹೋದ ಸ್ವಾಮಿ,' ಎಂದು ಮುದುಕರು ಹೇಳಿದಾಗ ಕಂಡಕ್ಟರು ಟಿಕೆಟ್ ತೋರಿಸಲು ಹೇಳಿದ. 'ನನ್ನ ಮಗ ಟಿಕೆಟ್ ತಗೊಂಡಿದ್ದ. ಅವನೇ ತಗೊಂಡು ಹಾಗೇ ಮನೆಗೆ ಹೋದನೋ ಏನೋ,' ಎಂದು ಮುದುಕರು ನುಡಿದಾಗ ಕಂಡಕ್ಟರನಿಗೆ ರೇಗಿತು. 'ನೋಡಿ, ಟಿಕೆಟ್ ತೋರಿಸಿದರೆ ಸರಿ. ಇಲ್ಲದಿದ್ರೆ ಟಿಕೆಟ್ ಇಲ್ಲದೆ ಪ್ರಯಾಣ ಮಾಡ್ತಿರೋದು ಒಂದು, ರಿಜರ್ವೇಶನ್ ಸೀಟಲ್ಲಿ ಕುಳಿತಿರೋದು ಎರಡು, ಇದಕ್ಕೆಲ್ಲಾ ದಂಡ ತೆರಬೇಕಾಗುತ್ತೆ. ಮೊದಲು ಅಲ್ಲಿಂದ ಏಳಿ', ಎಂದು ಕಂಡಕ್ಟರ್ ಗದರಿಸಿದಾಗ ಮುದುಕರು, 'ನೋಡ್ರಿ, ನನ್ನ ಮಗ ಇದೇ ನನ್ನ ಸೀಟು ಅಂತ ತೋರಿಸಿ ಕೂರ್ಸಿ ಹೋಗಿದಾನೆ. ನಾನು ಟಿಕೆಟ್ ಕೊಂಡಿದೀನಿ,' ಎಂದರು. ಉಳಿದವರನ್ನೆಲ್ಲ ಚೆಕ್ ಮಾಡಿ ಬರುವುದರಲ್ಲಿ ಟಿಕೆಟ್ ತೋರಿಸದಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆಂದು ಮುದುಕರಿಗೆ ಎಚ್ಚರಿಕೆ ಕೊಟ್ಟು ಕಂಡಕ್ಟರ್ ಒಮ್ಮೆ ಡ್ರೈವರ್ ಕಡೆ ನೋಡಿ ತನ್ನ ಕೆಲಸ ಮುಂದುವರಿಸಿದ.

ಮುದುಕರು ತಮ್ಮ ಅಂಗಿಯ ಜೇಬು, ಒಳಂಗಿಯ ಜೇಬುಗಳನ್ನೆಲ್ಲಾ ಹುಡುಕಿ ತಮ್ಮ ಕೈಚೀಲದಲ್ಲಿ ಕೈಯಾಡಿಸಿದರೂ ಟಿಕೆಟ್ ಸಿಕ್ಕಂತೆ ಕಾಣಲಿಲ್ಲ. ಅವರ ಅವಸ್ಥೆಯನ್ನು ನೋಡಿ ಅವರ ಪಕ್ಕದಲ್ಲಿ ಕುಳಿತ ಒಬ್ಬ ಯಜಮಾನರು ಅವರ ಹುಡುಕಾಟದಲ್ಲಿ ಸಹಾಯ ಮಾಡತೊಡಗಿದರು. ಕ್ಷಣಕಾಲ ಬಸ್ಸಿನಲ್ಲಿದ್ದ ಜನರ ದೃಷ್ಟಿ ಮುದುಕರ ಮೇಲೆ ಕೇಂದ್ರೀಕೃತವಾಯಿತು. ಸೂಟ್‌ಕೇಸಿನ ಯುವಕ ನನ್ನ ಕಡೆ ಚೇಷ್ಟೆಯ ನಗು ಬೀರುತ್ತಾ 'ಪಕ್ಕಾ ಮುದುಕ. ಓಲ್ಡ್ ಹ್ಯಾಕ್... ಮುದಿ ಹದ್ದು' ಎಂದ. ಅಷ್ಟರಲ್ಲೇ ಯಜಮಾನರು ಯಾವುದೋ ಐಡಿಯಾ ಹೊಳೆದವರಂತೆ, 'ಅಲ್ರೀ ಕಂಡಕ್ಟರೇ, ಇವರ ಬಳಿ ಟಿಕೆಟ್ ಇಲ್ಲ ಅಂದ ಮಾತ್ರಕ್ಕೆ ಟಿಕೆಟ್ಟೇ ಕೊಂಡಿಲ್ಲ ಅಂತ ಹ್ಯಾಗೆ ಹೇಳ್ತೀರಿ' ಎಂದು ಸವಾಲು ಹಾಕಿದರು.

ಕಂಡಕ್ಟರ್ ಆ ಪ್ರಶ್ನೆಯಿಂದ ಒಮ್ಮೆಲೇ ಸಿಟ್ಟಿಗೆದ್ದ. 'ನೀವು ಹೋಟಲಲ್ಲಿ ಮಸಾಲೆ ದೋಸೆ ತಿಂದರೆ ನಿಮ್ಮ ಕೈ ಬಾಯಿಗೆ ದೋಸೆ ವಾಸನೆ ಅಂಟಿರಲ್ವೆ ಸ್ವಾಮಿ ? ಟಿಕೆಟ್ ಕೊಂಡಿದ್ದರೆ ಅದನ್ನ ಎಸೆಯೋಕೆ ಅವರೇನು ಬೆರಳು ಚೀಪೋ ಮಕ್ಕಳೆ ?' ಎಂದ.

'ಹಾಗಲ್ಲಪ್ಪ,' ಯಜಮಾನರು ಅವನಿಗೆ ಸಮಾಧಾನ ನುಡಿಯಲು ಹೇಳಿದರು, 'ಇವರು ಕುಳಿತಿರೋದು ರಿಜರ್ವ್ ಆಗಿರೋ ಸೀಟಲ್ಲಿ, ಇವರೇ ರಿಜರ್ವ್ ಮಾಡಿಸದಿದ್ದರೆ ರಿಜರ್ವ್ ಮಾಡಿಸಿದ ಬೇರೆಯವರು ತಮ್ಮ ಜಾಗದಲ್ಲಿ ಇವರು ಕೂತಿದ್ದಾರೆಂತ ನಿಮ್ಮ ಚೆಕಿಂಗ್ ಶುರು ಆಗೋ ಮೊದಲೇ ತರಲೆ ಮಾಡ್ತಿರಲಿಲ್ಲವೆ ? ನೀವೇ ಹೇಳಿ.'

ಯಜಮಾನರ ವಾದ ಕೂಡಲೇ ಎಲ್ಲರಿಗೂ ಹಿಡಿಸಿತು. 'ಹೌದು ಹೌದು' ಎಂದು ನಾವೆಲ್ಲಾ



ತಲೆಹಾಕಿದೆವು. ಆದರೆ ಕಂಡಕ್ಟರ್ ಸೋಲೊಪ್ಪಿಕೊಳ್ಳಲು ಸಿದ್ಧನಿರಲಿಲ್ಲ. ಅವನಿಗೆ ಸ್ವಲ್ಪ ಬಾಯಿ ಕಟ್ಟಿದಂತಾದರೂ ಕೂಡಲೇ ಮರು ಸವಾಲು ಹಾಕಿದ, 'ನೀವು ಹೇಳೋದು ಜಾರಿಕೆ ಮಾತು ರಾಯರೇ. ಬೇರೆಯವರು ರಿಜರ್ವ್ ಮಾಡಿಸಿ ಅವರು ಈ ದಿನ ಆಕಸ್ಮಾತ್ ಬರದೇ ಹೋಗಿರಬಹುದು. [illegible] ಸ್ಥಳದಲ್ಲೇ ಇವರು ಕೂತಿದಾರೆ. ಅಂದಮಾತ್ರಕ್ಕೆ ಇವರು ಟಿಕೆಟ್ ಕೊಂಡಿದ್ದಾರೆ ಅಂತ ಅರ್ಥವೇ ?"

'ಛೆ, ಛೆ ಹಾಗಾಗೋದು ಅಪರೂಪ,' ಯಜಮಾನರು ಲೊಚಗುಟ್ಟಿದರು.

'ಅಪರೂಪವೆಂಥದು,' ಕಂಡಕ್ಟರ್ ಏರಿಸಿದ ದನಿಯಲ್ಲಿ ನುಡಿದ, 'ದಿನ ಬೆಳಗಾದರೆ ಇಂಥ ಸಂಗತಿ ಅನುಭವಿಸಿ ಅನುಭವಿಸಿ ಈ ಉದ್ಯೋಗಾನೇ ಸಾಕಾಗಿದೆ. ಯಾರ್ಯಾರದೋ ಜಾಗದಲ್ಲಿ ಯಾರ್ಯಾರೋ ಪ್ರಯಾಣ ಮಾಡ್ತಿರ್ತಾರೆ... ಹೇಳೋರಿಲ್ಲ, ಕೇಳೋರಿಲ್ಲ. ಟಿಕೆಟ್‌ಲೆಸ್ ಟ್ರಾವೆಲ್ ಒಂದು ಅಪರಾಧ ಕಣ್ರಿ.'

ಯಜಮಾನರ ವಾದಕ್ಕೆ ತಲೆಹಾಕಿದ್ದ ನನಗೆ ಇವನ ವಾದವೂ ಸರಿಯಲ್ಲವೇ ಎನಿಸಿತು. ಸೂಟ್‌ಕೇಸಿನ ಯುವಕ ಕಂಡಕ್ಟರನನ್ನು ಮೆಚ್ಚಿಕೊಳ್ಳುತ್ತಾ 'ಟಿಕೇಟ್ ಲೆಸ್ ಹದ್ದು...ಮುದಿ ಹದ್ದು' ಎಂದು ಮುದುಕನ ಕಡೆ ನೋಡಿದ.

ಟಿಕೆಟ್‌ಲೆಸ್ ಟ್ರಾವೆಲ್ ಎನ್ನುತ್ತಲೂ ನನಗೆ ವಿಜಯನ ಜ್ಞಾಪಕ ಬಂದಿತು. ಅವನೂ ಟಿಕೆಟ್‌ಲೆಸ್ ಟ್ರಾವೆಲ್ ಮಾಡುತ್ತಿದ್ದಾನಲ್ಲವೆ? ಹೆತ್ತು ಹೊತ್ತು ಸಾಕಿದ ನಮ್ಮ ಅನುಮತಿಯಿಲ್ಲದೆ, ಹೋಗಲಿ ಒಂದು ಔಪಚಾರಿಕ ಸಮ್ಮತಿಯೂ ಇಲ್ಲದೆ ರಮಾಳನ್ನು ಮದುವೆಯಾಗಲು ಹೇಗೆ ನಿಶ್ಚಯಿಸಿದ ? ಸಾವಿತ್ರಿಯ ಗತಿಯೇನೆಂದು ಯೋಚಿಸಬಾರದಿತ್ತೆ ?

ರಂಗರಾಯರಿಂದ ಕಾಗದ ಬಂದ ಮೇಲೆ ಸಾವಿತ್ರಿಯ ತಂದೆ ಕೃಷ್ಣಪ್ಪನನ್ನು ಕರೆಸಿದ್ದೆ. ನನ್ನ ಹಾಗೂ ಕೃಷ್ಣಪ್ಪನ ಮಧ್ಯೆ ಯಾವ ವಿಷಯವೂ ರಹಸ್ಯವಲ್ಲ. ನಾನೂ ಕೃಷ್ಣಪ್ಪ ಸೇರಿಯೇ ನನ್ನವಳ ಇಚ್ಛೆಗೆ ವಿರುದ್ಧವಾಗಿ ವಿಜಯನನ್ನು ಮೈಸೂರಿಗೆ ಓದಲು ಕಳಿಸಿದ್ದೆವು. ರಂಗರಾಯರ ಕಾಗದವನ್ನು ಕೃಷ್ಣಪ್ಪನಿಗೇ ಓದಲು ಕೊಟ್ಟೆ. ಪತ್ರ ಓದಿ ಅವನ ಮುಖ ಇಳಿದುಹೋಯಿತು. ಟ್ರಂಕ್‌ಕಾಲ ಮಾಡಿದಾಗ ವಿಜಯನಿಂದ ಬಂದ ಉತ್ತರವನ್ನೂ ತಿಳಿಸಿ, 'ಇದೆಂಥ ಕಾಲ ಕೃಷ್ಣಪ್ಪ! ಈಚೀಚೆಗೆ ಈ ಲವ್ ಮ್ಯಾರೇಜು, ರಿಜಿಸ್ಟರ್ಡ್ ಮದುವೆಗಳೇ ಹೆಚ್ಚಾದುವಲ್ಲ. ಈ ಗಂಡು ಹೆಣ್ಣುಗಳಿಗೆ ಹೇಳೋರು ಕೇಳೋರೇ ಇಲ್ಲವೆ?' ಎಂದು ಅಚ್ಚರಿ ವ್ಯಕ್ತಪಡಿಸಿದ್ದೆ. ವಿಜಯನ ನಡತೆ ಅವನ ಸ್ವಾಭಿಮಾನಕ್ಕೆ ಕೊಡಲಿ ಪೆಟ್ಟು ಹಾಕಿದಂತೆ ಕಂಡಿತು.

'ಯಾರನ್ನು ಯಾಕೆ ಬೈಬೇಕು ?' ಕೃಷ್ಣಪ್ಪ ನುಡಿದ, 'ಯಾರ ಯಾರ ಜಾಗ ಎಲ್ಲೆಲ್ಲಿದೆಯೋ ಯಾರಿಗೆ ಗೊತ್ತು. ನಿನ್ನ ಮಗ ಸಾವಿತ್ರೀನ ಮದುವೆ ಆಗದಿದ್ದರೆ ನಾನೇನೂ ಅವಳನ್ನು ಬಾವಿಗೆ ತಳ್ಳಲ್ಲ.' ನಾನು ತಪ್ಪಿತಸ್ಥನಂತೆ ಮುಖ ಕೆಳಗೆ ಹಾಕಿದೆ. 'ನಿನ್ನನ್ನು ನಾನು ಬೈತಾ ಇಲ್ಲ,' ಅವನು ಹೇಳಿದ, ವಿಜುಗೆ ಸಾವಿತ್ರಿ ಬೇಡವಾಗಿದ್ದರೆ ಅಂಥ ಮದುವೆ ಮಾಡಿಯೂ ಪ್ರಯೋಜನವೇನು ಹೇಳು. ಜನ ಸ್ವಲ್ಪ ದಿನ ಅದೂ ಇದೂ ಆಡ್ಕೋತಾರೆ. ಆಮೇಲೆ ಸಾವಿತ್ರೀನ್ನೂ ಬೇರೆ ಕಡೆ ಕೊಟ್ಟು ಮದುವೆ ಮಾಡಿದರೆ ಎಲ್ಲ ತಣ್ಣಗಾಗುತ್ತೆ.' 'ಇಲ್ಲ, ಹಾಗಾಗೋದಕ್ಕೆ ಬಿಡಲ್ಲ,' ಎಂದು ಕತ್ತೆತ್ತಿ ನೋಡಿದೆ. ಕೃಷ್ಣಪ್ಪ ಅಲ್ಲಿರಲಿಲ್ಲ. ಅವನ ಮನಸ್ಸಿಗೆ ಆಳವಾದ ಗಾಯವಾಗಿತ್ತು.

ಕಂಡಕ್ಟರ್ ಎಲ್ಲಾ ಕಡೆ ಚೆಕಿಂಗ್ ಮುಗಿಸಿ ಮತ್ತೆ [illegible] ಮುದುಕರ ಬಳಿ ಬಂದಿದ್ದ. ಮುದುಕರಿಗೆ ಇನ್ನೂ ಟಿಕೆಟ್ ಸಿಕ್ಕದೆ, ಏನು ಮಾಡುವುದೋ ತಿಳಿಯದೆ ಒದ್ದಾಡುತ್ತಿದ್ದರು. ಕಂಡಕ್ಟರ್ ಬಸ್ಸನ್ನು ನಿಲ್ಲಿಸಿ ಬಿಡುವುದಾಗಿ ಎಚ್ಚರಿಕೆ ಕೊಡುತ್ತಿದ್ದ. ಕೆಲವರು ಮುದುಕರೊಬ್ಬರಿಗಾಗಿ ಬಸ್ ಏಕೆ ನಿಲ್ಲಿಸಬೇಕೆಂದು ಕೇಳುತ್ತಿದ್ದರು. 'ಹೌದಪ್ಪಾ ಕಂಡಕ್ಟರೇ,' ನಾನೂ ನುಡಿದೆ, 'ಒಬ್ಬರಿಂದಾಗಿ ಎಲ್ಲಾ ಪ್ರಯಾಣಿಕರಿಗೂ ಯಾಕೆ ತೊಂದರೆ ?' ಹಾಗೆ ನಾನು ಹೇಳುತ್ತಿದ್ದಂತೆ ವಿಜು ತನಗೊಬ್ಬನಿಗಾಗಿ ಎಲ್ಲರಿಗೂ ತೊಂದರೆ ಕೊಡಲು ಹಿಂಜರಿಯುತ್ತಿಲ್ಲವಲ್ಲ ಎಂದು ನೊಂದುಕೊಂಡೆ.

'ಸರಿ, ಆ ಮುದುಕರ ಟಿಕೆಟ್ ಹಣಾನ ನೀವು ಕೊಡಿ ಮತ್ತೆ,' ಎಂದು ಕಂಡಕ್ಟರ್ ಮರು ಸವಾಲು ಹಾಕಿದ. ಅದಕ್ಕೆ ಎಲ್ಲರೂ ತುಟಿಪಿಟಿಕ್ಕೆನ್ನದೆ ಕುಳಿತಿದ್ದರು. 'ಸರಿಯಪ್ಪಾ, ನಿಲ್ಲಿಸೋದು ನಿಲ್ಲಿಸ್ರಿ,' ಯಜಮಾನರು ನುಡಿದರು, 'ಎಲ್ಲಾದರೂ ಕಾಫಿ-ಟೀ ಸಿಗೋ ಕಡೆ ನಿಲ್ಲಿಸು.' ಅವರ ಮಾತಿಗೆ ಕೆಲವರು ನಕ್ಕರು. ನಾನು ಸ್ವಲ್ಪ ಬಗ್ಗಿ ಹೊರಗೆ ಇಣುಕಿ ನೋಡಿದೆ. ಬಸ್ಸು ಕಾಡೊಂದನ್ನು ಸೀಳಿದ ರಸ್ತೆಯಲ್ಲಿ ವೇಗವಾಗಿ ಓಡುತ್ತಿತ್ತು.

ಕಂಡಕ್ಟರ್ ಡ್ರೈವರ್‌ಗೆ ಬಸ್ ನಿಲ್ಲಿಸಲು ಸೂಚನೆ ಕೊಟ್ಟುಬಿಟ್ಟ. ಬಸ್ ನಿಂತಿತು. ಕೆಲವರು ಮೂತ್ರ ವಿಸರ್ಜನೆಗೆಂದು ಮರಗಳ ಮರೆಗೆ ಓಡಿದರು. ಕೆಲವರು ಮುದುಕರನ್ನು ಸುತ್ತುವರಿದು ಹಣವಿದೆಯೋ ಎಂದು ಕೇಳುತ್ತಿದ್ದರು. ಮತ್ತೆ ಕೆಲವರು ಮುದುಕರನ್ನು ಪೋಲೀಸಿನವರಿಗೆ ಕೊಡಲು ಸಲಹೆ ನೀಡುತ್ತಾ, ಸದ್ಯಕ್ಕೆ ಬಸ್ಸು ಬಿಡಲು ಹೇಳುತ್ತಿದ್ದರು. ಕಂಡಕ್ಟರ್ ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ಹೆಮ್ಮೆಯಿಂದ ಒಂದು ಕಡೆ ಬೀಡಿ ಹಚ್ಚಿಕೊಂಡು ನಿಂತಿದ್ದ.

ಅಷ್ಟರಲ್ಲಿ ಖಾಲಿ ಟ್ಯಾಕ್ಸಿಯೊಂದು ಬರುತ್ತಿರುವುದು ಕಂಡಿತು. ಕೆಲವರು ಅದನ್ನು ನಿಲ್ಲಿಸಲು ಕೈಮಾಡಿದರು. ಟ್ಯಾಕ್ಸಿ ಬಸ್ಸಿನಿಂದ ಸ್ವಲ್ಪದೂರಕ್ಕೆ ಹೋಗಿ ನಿಂತಿತು. ಮುದುಕರ ಪಕ್ಕದಲ್ಲಿ ಕುಳಿತಿದ್ದ ಯಜಮಾನರೂ ಮತ್ತಿಬ್ಬರು ಅವರಲ್ಲಿ ತೂರಿಕೊಂಡರು. ಅವರಿಗೆ ಬಹಳ ತುರ್ತು ಕೆಲಸವಿತ್ತೆಂದು ಕಾಣುತ್ತದೆ. ಟ್ಯಾಕ್ಸಿ ಕ್ಷಣದಲ್ಲೇ ಧೂಳೆಬ್ಬಿಸುತ್ತಾ ರಸ್ತೆಯ ಮತ್ತೊಂದು ತುದಿಯಲ್ಲಿ ಮರೆಯಾಯಿತು.

ಯಜಮಾನರ ಜಾಗ ಈಗ ಬಸ್ಸಿನಲ್ಲಿ ಖಾಲಿಯಾದಂತೆನಿಸಿತು. ಕೂಡಲೇ ನಾನು ಬಸ್ಸು ಹತ್ತಿ ಅವರ ಸ್ಥಳದಲ್ಲಿ ಕುಳಿತು, ನಿಂತು ನಿಂತು ನೋಯುತ್ತಿದ್ದ ಕಾಲನ್ನು ನಿಡಿದಾಗಿ ಚಾಚಿ ಆಕಳಿಸಿದೆ.

'ಯುರೇಕಾ!' ಸೂಟ್‌ಕೇಸಿನ ಯುವಕ ಒಮ್ಮೆಲೇ ಕೂಗಿದ. ಅವನು ಮುದುಕರ ಜುಟ್ಟಿನಿಂದ ಟಿಕೆಟ್ಟನ್ನು ತೆಗೆದಿದ್ದ. ಮುದುಕರು ಟಿಕೆಟ್ ಕೊಂಡು ಆಗಾಗ್ಗೆ ಜುಟ್ಟಿನ ಮೇಲೆ ಕೈಯಾಡಿಸುತ್ತಿದ್ದಾಗ ಟಿಕೆಟ್ ಅಲ್ಲಿದ್ದ ಹೂದಾರದಲ್ಲಿ ಸಿಕ್ಕಿಕೊಂಡು ಕೂದಲು ಮರೆಮಾಡಿತ್ತೆಂದು ಅವರಿಂದ ವಿವರಣೆ ಸಿಕ್ಕಿತು. ಎಲ್ಲರಿಗೂ ಇದೊಂದು ದೊಡ್ಡ ತಮಾಷೆಯಾಯಿತು. ಟಿಕೆಟ್ಟನ್ನು ಕಂಡಕ್ಟರನಿಗೆ ತೋರಿಸುತ್ತಲೇ ಬಸ್ಸು ಹೊರಟಿತು. ನಾನೂ ಮೈಚಾಚಿ ನಿದ್ದೆಮಾಡ ತೊಡಗಿದೆ.

'ರಾಯರೇ. ರಾಯರೇ.' ಎನ್ನುತ್ತಾ ಯಾರೋ ಮೈ ಕುಲುಕಿಸಿದಂತಾಗಲು ಕಣ್ಣುಬಿಟ್ಟೆ. ಆಗ ಟ್ಯಾಕ್ಸಿಯಲ್ಲಿ ಹೋಗಿದ್ದ ಯಜಮಾನರು ನನ್ನನ್ನು ಎಬ್ಬಿಸುತ್ತಿದ್ದರು. ಬಸ್ಸು ಮಧ್ಯೆ ಒಂದು ಊರಲ್ಲಿ ನಿಂತಿತ್ತು. 'ಓಹ್.' ಎನ್ನುತ್ತಾ ಆಕಳಿಸಿ, 'ನೀವು ಟ್ಯಾಕ್ಸಿಯಲ್ಲಿ ಹೋಗಿರಲಿಲ್ಲವೆ?' ಎಂದು ಕೇಳಿದೆ. ಆ ಟ್ಯಾಕ್ಸಿ ಈ ಊರಿನತನಕ ಮಾತ್ರ ಬರುವುದಿತ್ತಂತೆ. ಅವ-




ಇವೆಲ್ಲಾ ಎರವಲು ತಂದ ಅಮೂಲ್ಯ ಸಂಗ್ರಹ ಆದ್ದರಿಂದ ಇದನ್ನು ಯಾರಿಗೂ ಓದಲು ಕೊಡೊಲ್ಲ.

ಸ್ಥಳದಲ್ಲಿ ನಾವು ಇದು ಎಲ್ಲಿಯತನಕ ಹೋಗುತ್ತೆ ಅನ್ನೋದನ್ನೂ ವಿಚಾರಿಸದೆ ಹತ್ತಿಬಿಟ್ಟೆವು' ಎಂದರು ಯಜಮಾನರು. ಅವರಿಗೆ ತಮ್ಮ ರಿಜರ್ವ್ ಆದ ಜಾಗ ಖಾಲಿಯಾಗುವುದು ಬೇಕಿತ್ತು. ನಾನು ಅದನ್ನು ಗ್ರಹಿಸಿದೆ. 'ಆಯಿತು, ನಿಮ್ಮ ಜಾಗ ಬಿಟ್ಟುಕೊಟ್ಟೆ,' ಎನ್ನುತ್ತಾ ಜಡದೇಹವನ್ನು ಎಬ್ಬಿಸಲಾರದೇ ಎಬ್ಬಿಸುತ್ತಾ ಮತ್ತೆಲ್ಲಾದರೂ ಸ್ಥಳ ಖಾಲಿಯಾಗಿದೆಯೋ ಎಂದು ನೋಡಿದೆ. ಬಸ್‌ನ ಹಿಂಭಾಗದಲ್ಲಿ ಕಂಡಕ್ಟರನ ಸೀಟಿನ ಪಕ್ಕದ ಜಾಗ ಖಾಲಿಯಿತ್ತು. ನಾನು ಅದನ್ನು ಹಿಡಿಯಲು ಯಜಮಾನರಿಗೆ ಜಾಗ ಬಿಟ್ಟುಕೊಟ್ಟೆ. ನಂತರ ಮುದುಕರನ್ನು ಸರಿಸಿ ಸ್ಥಳಮಾಡಿಕೊಂಡು ಹಿಂದಿಯ ಸೀಟಿನ ಕಡೆ ನಡೆದೆ. ನಾನು ಆ ಸ್ಥಳ ಮುಟ್ಟುವುದರೊಳಗೆ ಬಸ್ ಬಾಗಿಲಿನಿಂದ ಕಾಲು ಗಾಯವಾದ ಒಬ್ಬ ಹುಡುಗ ಹತ್ತಿ ನಿಧಾನವಾಗಿ ಅಲ್ಲಿ ಕುಳಿತ. ಅವನ ಬಲಗಾಲಿಗೆ ಬ್ಯಾಂಡೇಜ್ ಕಟ್ಟಲಾಗಿತ್ತು. ನಾನು ಮತ್ತೆಲ್ಲಾದರೂ ಸೀಟು ಖಾಲಿಯಾಗಿದೆಯೇನೋ ಎಂದು ನೋಡಿದೆ. ಎಲ್ಲಾ ಜಾಗಗಳೂ ಭರ್ತಿ ಇದ್ದವು. ಕಂಡಕ್ಟರ್ ರೈಟ್ ಕೊಡುತ್ತಲೇ ಬಸ್ಸು ಚಲಿಸಿತು.

ನಾನು ಬಸ್ಸಿನ ಉದ್ದಕ್ಕೂ ಮೇಲೆ ಹಾದು-ಹೋಗಿದ್ದ ಬಾರನ್ನು ಬಲಗೈಯಲ್ಲಿ ಹಿಡಿದುಕೊಂಡು ನಿಂತೆ. ದೂರ ಪ್ರಯಾಣದಿಂದ ಕಾಲು ನೋಯುತ್ತಿತ್ತು. ಅದೃಷ್ಟ ಎನ್ನುವಂತೆ ಸಿಕ್ಕಿದ್ದ ಜಾಗದಿಂದ ಯಜಮಾನರು ನನ್ನನ್ನು ಎಬ್ಬಿಸಿದ್ದರು. ಮತ್ತೆ ಹಿಂಬದಿಯ ಸೀಟು ಹಿಡಿಯುವುದರೊಳಗೆ ಅಲ್ಲಿ ಗಾಯವಾದ ಹುಡುಗ ಕುಳಿತಿದ್ದ. ಹೋಗಲಿ, ಈ ಜಾಗದಲ್ಲಿ ಗಾಯವಾದ ಹುಡುಗ ಕುಳಿತಿದ್ದಾನೆ ಎಂದು ಸಮಾಧಾನ ಪಟ್ಟಿತು ಮನಸ್ಸು. ನನ್ನ ಜಾಗವನ್ನು ಕಾಲು ಊನವಾದ ಹುಡುಗನಿಗೆ ಬಿಟ್ಟುಕೊಟ್ಟಿದ್ದೇನೆ ಎಂದುಕೊಂಡಾಗ ಒಂದು ಬಗೆಯ ತೃಪ್ತಿಯಾಯಿತು. ಆದರೆ ಅದು ನನ್ನ ಜಾಗವೆ ಹೌದು. ಒಂದು ಕ್ಷಣ ನಾನು ಮುಂದೆ ಬಂದಿದ್ದರೆ ನನಗೆ ಆ ಜಾಗ ಸಿಗುತ್ತಿರಲಿಲ್ಲವೇ? ಸಾವಿತ್ರಿಗೆ ವಿಜುವನ್ನೂ ಮೊದಲೇ ನಿಶ್ಚಯಿಸಿದ್ದರೂ ಅವಳಿಗೆ ವಿಜು ಸಿಗುವನೆ? ಏನಾದರಾಗಲಿ, ಸಾವಿತ್ರಿಗೆ ವಿಜು ಸಿಗಲೇಬೇಕು ಎಂದುಕೊಳ್ಳುತ್ತಿದ್ದಂತೆಯೇ ನಾನೆಲ್ಲೋ ಈ ದಿನ ಮೈಸೂರಿನ ವರೆಗೂ ನಿಂತೇ ಪ್ರಯಾಣ ಮಾಡಬೇಕೆಂದು ಗ್ರಹಚಾರವಿರುವಂತೆ ಕಾಣುತ್ತದೆ ಎಂದುಕೊಂಡೆ. ವಿಜು ಯಾರನ್ನು ಮದುವೆಯಾದರೂ ನನಗೊಬ್ಬಳು ಸೊಸೆ ಬರುವುದಂತೂ ಖಂಡಿತ ತಾನೆ. ನಾನು ಕುಳಿತ ಜಾಗದಿಂದ ಆ ಯಜಮಾನರು ಎಬ್ಬಿಸಿದರಲ್ಲ... ಹೌದು, ಅದು ಅವರು ರಿಜರ್ವ್ ಮಾಡಿಸಿದ ಜಾಗ. ವಿಜು ರಮಾಳನ್ನೇ ಮದುವೆಯಾಗುವುದು ದೈವ ನಿಶ್ಚಿತವಾದರೆ ನಾನೇನು ಮಾಡುವುದು?

ನನ್ನ ಸುತ್ತಲೂ ವಿಜು, ಸಾವಿತ್ರಿ ಮತ್ತು ರಮಾರ ಚಿತ್ರಗಳು ಸುತ್ತುತ್ತಿದ್ದವು. ಅವುಗಳ ಮಧ್ಯೆ ಗಾಯದ ಹುಡುಗ, ಯಜಮಾನರು ಮತ್ತು ಮುದುಕರ ಚಿತ್ರಗಳೂ ಜೊತೆಗೂಡುತ್ತಿದ್ದವು. ಒಂದು ಜಾಗ ಹಿಡಿಯಲು ಎಷ್ಟೊಂದು ಪರದಾಟ ಎಂದುಕೊಳ್ಳುತ್ತಿದ್ದಂತೆಯೇ ನನ್ನ ಸೊಸೆ ಸಾವಿತ್ರಿಯೋ ರಮಾನೋ ಎಂದು ಯೋಚಿಸುತ್ತಿದ್ದೆ. ನಿಂತು ನಿಂತು ನನ್ನ ದೇಹ ದಣಿಯುತ್ತಿತ್ತು. ನನಗೆ ಯಾವುದನ್ನೂ ನಿಶ್ಚಯಿಸಲಾಗಲಿಲ್ಲ. ನಿಂತುಕೊಂಡೇ ತೂಕಡಿಸಲಾರಂಭಿಸಿದೆ. ಆ ಮಂಪರಿನಲ್ಲಿ ಏನೇನೋ ಕನಸು ಬೀಳುತ್ತಿದ್ದವು. ವಿಜು ರಮಾಳ ಕತ್ತಿಗೆ ತಾಳಿಕಟ್ಟುತ್ತಿದ್ದ, ನಾನು ಅಕ್ಷತೆಕಾಳು ಎರಚುತ್ತಿದ್ದೆ. ✡


ಮನೋಭಾವನೆಗೆ ಆನಂದ ತರುವ
Arthi
ವಾಶ್-ವನ್-ವೇರ್ 2x2 ಪಾಪ್ಲಿನ್ಸ್
Lavanya
ವಾಶ್-ವನ್-ವೇರ್ 2x2 ಕ್ಯಾಂಬ್ರಿಕ್ಸ್
Suchitra
ಪಾಪ್ಲಿನ್ಸ್
Pushpanjali
ವಾಶ್-ವನ್-ವೇರ್ ಬಣ್ಣದ ಕ್ಯಾಂಬ್ರಿಕ್
ಪಾಪ್ಲಿನ್ಸ್
ದಾವಣಗೆರೆ
ಫೇಶನೆಬಲ್ ಬಟ್ಟೆಗಳು
ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್
ದಾವಣಗೆರೆ, ಕರ್ನಾಟಕ.
Thomas/DCM 16 9/kan



ಪುರಾಣ ಪ್ರಸಿದ್ಧ ಪಕ್ಷಿ ಗರುಡ

'ಕಲಾಪೂರ್ಣ'

ಕಶ್ಯಪ ಮುನಿಗೆ ಇಬ್ಬರು ಹೆಂಡಿರು. ಕದ್ರು ಮತ್ತು ವಿನತೆ. ವಿನತೆಯ ಮಗ ವೈನತೇಯ ಅಥವಾ ಗರುಡ ಸವತಿಯೊಡನೆ ಕಟ್ಟಿದ ಪಂಥವೊಂದರಲ್ಲಿ ಸೋತ ವಿನತೆ ಕದ್ರುವಿನ ದಾಸಿಯಾಗಬೇಕಾಯಿತು. ಒಡತಿ ಕದ್ರು ಒಂದು ದಿನ ತನ್ನ ಮಕ್ಕಳಾದ ನಾಗಗಳನ್ನು ಎತ್ತಿಕೊಂಡು ಆಕಾಶ ವಿಹಾರಗೈದು ಬರಬೇಕೆಂದು ಗರುಡನಿಗೆ ಆಜ್ಞಾಪಿಸಿದಳು. ಗರುಡ ಬಹು ಎತ್ತರದಲ್ಲಿ ಆಕಾಶಯಾನ ಮಾಡಿ ಹಿಂತಿರುಗಿದಾಗ ಸೂರ್ಯನ ರಶ್ಮಿಳಕ್ಕೆ ಕದ್ರುವಿನ ಅನೇಕ ಮಕ್ಕಳು ಸತ್ತುಹೋದವು. ಕದ್ರು ಆತನಿಗೆ ಬಾಯ್ತುಂಬ ಬಯ್ದಳು. ಸವತಿ ವಿನತೆಯನ್ನೂ ಆಡಿಕೊಂಡಳು. ಈ ದಾಸ್ಯದಿಂದ ಬಿಡುಗಡೆ ಹೊಂದಬೇಕೆಂದಾತ ನಿರ್ಧರಿಸಿದ, ಅಲ್ಲದೆ ತನ್ನ ತಾಯಿಯನ್ನೂ ದಾಸ್ಯದಿಂದ ವಿಮುಕ್ತಿಗೊಳಿಸಲು ಗರುಡ ಸಂಕಲ್ಪಿಸಿದ. ದಾಸ್ಯ ನಿವಾರಣೆಗೆ ಸ್ವರ್ಗದ ಅಮೃತ ತರುವುದೇ ಮಾರ್ಗವೆಂದು ತಿಳಿದು ಸ್ವರ್ಗಕ್ಕೆ ದಾಳಿಯಿಟ್ಟ. ರಕ್ಷಕ ಗಂಧರ್ವರನ್ನು ಜವಗೆಡಿಸಿದ, ಕಾವಲಿದ್ದ ಘಟಸರ್ಪ ಸಂಹರಿಸಿದ. ಇಂದ್ರನೊಡನೆ ಹೋರಾಡಿದ. ಅಮೃತ ಕುಂಭ ಪಡೆದ. ನಾಗಗಳು ಆಹಾರವಾಗಿರುವಂತೆ ಇಂದ್ರನಿಂದ ವರ ಪಡೆದ. ಮಲತಾಯಿಗೆ ಅಮೃತ ಕುಂಭ ಕೊಟ್ಟು ದಾಸ್ಯದಿಂದ ವಿಮೋಚನೆ ಪಡೆದ; ತಾಯಿಯನ್ನು ಬಿಡುಗಡೆಗೊಳಿಸಿದ. ಇವನ ಪರಾಕ್ರಮಕ್ಕೆ ಮೆಚ್ಚಿ ವಿಷ್ಣು ಇವನನ್ನು 'ಸುಪರ್ಣ' ನೆಂದು ಕರೆದ; ತನ್ನ ಧ್ವಜ ಲಾಂಛನವಾಗಿರಿಸಿ ಕೊಂಡ; ವಾಹನವಾಗಿ ಇವನನ್ನು ತನ್ನ ಬಳಿ ಇರಿಸಿಕೊಂಡ

'ಮಾತಾಪಿತರ ಸೇವೆಗಾಗಿ ರಾಜ್ಯಾಧಿಕಾರ ತ್ಯಜಿಸಿದ ಜೀಮೂತವಾಹನ ಮಲಯ ರಾಜ್ಯದ ರಾಜಕುವರಿಯನ್ನು ಮದುವೆಯಾಗಿದ್ದ. ಭಾವ ಮೈದುನನೊಡನೆ ಮಲಯ ರಾಜ್ಯದ ಸಾನು ಪ್ರದೇಶದಲ್ಲಿ ಸಂಚರಿಸುತ್ತಿದ್ದಾಗ ನಾಗಗಳ ಮೂಳೆಗಳ ರಾಶಿ ಕಂಡು, ಕಾರಣ ವಿಚಾರಿಸಿದ. ಸರದಿಯಂತೆ ಒಂದೊಂದು ನಾಗ ಗರುಡನ ಆಹಾರವಾಗುತ್ತಿರುವುದನ್ನು ತಿಳಿದ. ಈ ತ್ಯಾಗಿ ತನ್ನ ಆತ್ಮಾರ್ಪಣೆಯಿಂದ ಒಂದು ನಾಗನ ಪ್ರಾಣವನ್ನಾದರೂ ಉಳಿಸುವ ಮನ ಮಾಡಿದ. ಶಂಖಚೂಡನ ಬದಲು ತಾನು ಬಲಿಪೀಠ ಏರಿದ ಆಹಾರಕ್ಕೆ ಬಂದ ಗರುಡ, ತನಗಾಗಿ ಮೀಸಲಾಗಿರುವ ಕೆಂಪು ವಸ್ತ್ರಾಚ್ಛಾದಿತ ನಾಗವಿದೆಂದೇ ಭಾವಿಸಿ ಜೀಮೂತ ವಾಹನನನ್ನು ಕಚ್ಚಿ ಒಯ್ದನು.

ಕುಕ್ಕಿ ತಿನ್ನುತ್ತಿರುವಾಗ ವಸ್ತುಸ್ಥಿತಿ ಅರಿವಾಯಿತು. ಪಶ್ಚಾತ್ತಾಪಪಟ್ಟು ಗರುಡ, ಇಂದ್ರ ಲೋಕಕ್ಕೆ ಹೋಗಿ ಅಮೃತ ಭಾಂಡೆಯನ್ನು ತಂದು ಜೀಮೂತ ವಾಹನನನ್ನೂ, ಮೃತರಾದ ನಾಗಗಳನ್ನೂ ಬದುಕಿಸಿದ.

ಮೇಲಿನ ಎರಡೂ ಕತೆಗಳು ಗರುಡನ ಪರಾಕ್ರಮ ಕುರಿತಾದದ್ದು. ಮೊದಲನೆಯ ಕತೆ ಮಹಾಭಾರತದ ಆದಿಪರ್ವದಲ್ಲಿ ಸವಿಸ್ತಾರವಾಗಿ ಉಕ್ತವಾಗಿದೆ. ಎರಡನೆಯದು ಹರ್ಷ ವಿರಚಿತ 'ನಾಗಾನಂದ' ನಾಟಕದಲ್ಲಿ ನಿರೂಪಿಸಲ್ಪಟ್ಟ ಕತೆ.

ಗಾತ್ರ, ಗಾಂಭೀರ್ಯಗಳಿಗೆ ಹೆಸರಾದ ಗರುಡ ಪಕ್ಷಿ ಪಕ್ಷಿಗಳ ರಾಜ. ಈತ ಶಕ್ತಿ, ಶೌರ್ಯ ಹಾಗೂ ವೈಭವಗಳ ಸಂಕೇತವಾಗಿದ್ದಾನೆ. ಪುರಾತನ ಕಾಲದಿಂದಲೂ ಗರುಡ ಪ್ರಖ್ಯಾತ. ಅಷ್ಟಾದಶ ಪುರಾಣಗಳಲ್ಲಿ ಈತನ ಹೆಸರಿನ ಒಂದು ಪುರಾಣವೇ ಉಂಟು. ಸೃಷ್ಟಿಕ್ರಮ, ಯುಗಚಕ್ರ, ವಂಶಾವಳಿ, ವಿಷ್ಣುಪೂಜೆ, ವೈಷ್ಣವ ಧರ್ಮಕ್ರಮ, ಪವಿತ್ರ ಯಾತ್ರಾಸ್ಥಳ, ಸತ್ತ ಮೇಲೆ ಜೀವಾತ್ಮನಿಗೊದಗುವ ಗತಿ, ಕರ್ಮ, ಪುನರ್ಜನ್ಮ, ಮೋಕ್ಷ, ಉತ್ತರಕ್ರಿಯೆ, ಪಿತೃಪೂಜೆ ಮುಂತಾದ ವಿಷಯಗಳನ್ನು ದೀರ್ಘವಾಗಿ ವಿಷ್ಣು ಗರುಡನಿಗೆ ಹೇಳಿದನೆಂದೂ, ಅದನ್ನೇ ಗರುಡ ತನ್ನ ಪಿತನಿಗೆ ನಿರೂಪಿಸಿದನೆಂದೂ ಆ ಕಾರಣದಿಂದಾಗಿ ಇದಕ್ಕೆ 'ಗರುಡ ಪುರಾಣ' ಎಂದು ಹೆಸರು ಬಂತೆಂದೂ ಉಲ್ಲೇಖಿಸಲಾಗಿದೆ.

ಗರುಡನ ಜನ್ಮವಾದುದಾದರೂ ಒಂದು ವಿಶಿಷ್ಟ ಉದ್ದೇಶಕ್ಕಾಗಿಯೇ. ಅರವತ್ತು ಸಾವಿರ ಸಂಖ್ಯೆಯಲ್ಲಿದ್ದ ವಾಲಖಿಲ್ಯ ಋಷಿಗಳನ್ನು ಇಂದ್ರನು ಅವಮಾನಿಸಿದ. ಅಂಥ ದುರಹಂಕಾರಿ ಇಂದ್ರನ ಗರ್ವಭಂಗವಾಗುವುದು ವಾಲಖಿಲ್ಯರಿಗೆ ಬೇಕಾಯಿತು. ಕಶ್ಯಪ–ವಿನತೆಯರಿಗೆ ಹುಟ್ಟುವ ಮಗನಿಂದ ಅದು ಸಾಧ್ಯ ಎಂದು ಅವರಿಗೆ ತಿಳಿದದ್ದರಿಂದ ಅವರು ತಪಸ್ಸನ್ನಾಚರಿಸಿ ವೈನತೇಯನು ಜನಿಸುವುದಕ್ಕೆ ಕಾರಣರಾದರು. ಕಾರಣಾಂತರಗಳಿಂದ ವೈನತೇಯನು ಇಂದ್ರನೊಡನೆ ಸೆಣಸಿ ಆತನ ಪರಾಭವ ಮಾಡಿದ ಕಥೆ ಪ್ರಸಿದ್ಧವಿದೆ. ಇಂದ್ರ ಈತನಿಗೆ ಸೋಲುವುದೇನು ಬಂತು; ಅಮೃತ ಕುಂಭವನ್ನೇ ಅರ್ಪಿಸಬೇಕಾಯಿತು.

ವಿಷ್ಣು ಪ್ರೀತಿ ಪಾತ್ರನಾದ ಈತನು ಸಜ್ಜನನೆಂದೇ ಖ್ಯಾತನಾದರೂ ಸ್ವಾಮಿ ಭಕ್ತನೆಂದೇ ಗೌರವಿಸಲ್ಪಟ್ಟಿದ್ದರೂ ಈತನಿಗೂ ಅಹಂಕಾರದ ಮದ ತಟ್ಟದೆ ಹೋಗಲಿಲ್ಲ. ಕೇವಲ ವಿಷ್ಣುವನ್ನೇಕೆ ಶ್ರೀದೇವಿ–ಭೂದೇವಿಯರನ್ನೂ ತಾನು ಹೊತ್ತೊಯ್ಯಬಲ್ಲೆ ಎಂಬ ಅಹಂಕಾರ ಒಮ್ಮೆ ಈತನನ್ನು ಕಾಡಿತು. ಸರ್ವಾಂತರ್ಯಾಮಿ ವಿಷ್ಣುವಿಗೆ ಇದು ತಿಳಿದು, ಉಪಾಯದಿಂದ ಅದನ್ನು ನಿವಾರಿಸಲು ಯತ್ನಿಸಿದ. ಗರುಡನನ್ನು ಕರೆದು ಆತನ ಹೆಗಲ ಮೇಲೆ ತನ್ನ ತೋಳನ್ನಿಟ್ಟು "ಅಯ್ಯಾ, ಎಲ್ಲಿ ಮೇಲಕ್ಕೇರು, ಹಾರು ನೋಡೋಣ" ಎಂದ ಪ್ರಭು ವಿಷ್ಣು. ಗರುಡ ಎಷ್ಟೇ ತಿಣುಕಿದರೂ ನೆಲ ಬಿಟ್ಟು ಮೇಲೇರಲು ಆಗಲಿಲ್ಲ. ಆಗ ವಿಷ್ಣು "ಏನಯ್ಯಾ ಇಷ್ಟೇ ಏನು ನಿನ್ನ ಸಾಮರ್ಥ್ಯ" ಎಂದು ಮೂದಲಿಸಿದ. ಗರುಡನಿಗೆ ವಿವೇಕೋದಯವಾಯಿತು.

ಗರುಡ ಹೀಗೆ ಒಮ್ಮೆ ಸಂಚಾರದಲ್ಲಿದ್ದಾಗ ಮಾರ್ಗಾಯಾಸದಿಂದ ಆಶ್ರಮವೊಂದರಲ್ಲಿ ವಿಶ್ರಾಂತಿ ಪಡೆಯಲು ಬಯಸಿದ. ಆ ಆಶ್ರಮದ ಒಡತಿ ಶಾಂಡಿಲಿ ಎಂಬವಳು. ಅತಿಥಿ ಬಂದಿದ್ದಾನೆಂದು ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಿದಳು. ಆ ಸುಂದರ ಋಷಿ ಪತ್ನಿಗೆ ಮನಸೋತ ಗರುಡನು ಅವಿನಯದಿಂದ ಆಕೆಯನ್ನು ಕೆಣಕಿದ. ಆಕೆಯ ತಪ್ತದೃಷ್ಟಿ ಬಿದ್ದ ಕ್ಷಣವೇ ಗರುಡನ ರೆಕ್ಕೆಗಳು ಉದುರಿ ಹೋದವು. ಕಂಗಾಲಾದ ಗರುಡನು ಆ ಋಷಿ ಪತ್ನಿ ಪತಿವ್ರತೆ ಶಾಂಡಿಲಿಯನ್ನು ಅಪಾರ ಸ್ತುತಿಗೈದು ಆಕೆಯ ಕೃಪೆಯನ್ನು ಗಳಿಸಿದ. ತನ್ನ ರೆಕ್ಕೆಗಳನ್ನು ಮರಳಿ ಪಡೆದುಕೊಂಡ. ಇಂದ್ರನನ್ನು ಗೆದ್ದ ಪರಾಕ್ರಮಿ ವೈನತೇಯನ ಜೀವನದ ಇನ್ನೊಂದು ಮುಖ ಇದು.

ಭಾರತದ ಹಲವು ವೈಷ್ಣವ ದೇವಾಲಯಗಳಲ್ಲಿ 'ಗರುಡ'ನ ಮೂರ್ತಿಯನ್ನು ಕಾಣಬಹುದಾಗಿದೆ. ಮಾನವ ಆಕೃತಿ; ಬಾಗಿದ ಕೊಕ್ಕು;

ಇಬ್ಬದಿಯಲ್ಲೂ ರೆಕ್ಕೆಗಳು–ಇದು ಶಿಲ್ಪಿಗಳು ಗರುಡನನ್ನು ಚಿತ್ರಿಸಿದ ರೀತಿ. ಬೇಲೂರಿನ ಚೆನ್ನಕೇಶವ ದೇವಾಲಯದ ಇದಿರು ಇರುವ ಗರುಡ ಗಮನ ಸೆಳೆವ ಮೂರ್ತಿ. ಶ್ರೀದೇವಿ, ಭೂದೇವಿಯರ ನಡುವೆ ಒಪ್ಪುವ ವಿಷ್ಣುವನ್ನು ಹೊತ್ತು ಹಾರುವ ಗರುಡನ ಸುಂದರ ಚಿತ್ರ ಬರೆದ ರವಿವರ್ಮನ ಕಲಾಕೃತಿ ಸಹಸ್ರಾವಧಿ ಮನೆಯ ಗೋಡೆಗಳನ್ನು ಅಲಂಕರಿಸಿವೆ.

ಗರುಡನ ಖ್ಯಾತಿ ಭಾರತವೊಂದರಲ್ಲಿಯೇ ಅಲ್ಲ: ಕ್ರಿ. ಪೂ. ೧೦೪ ರ ವೇಳೆಗೆ 'ಗರುಡ'ನು ರೋಮನ್ನರ ಲಾಂಛನವಾಗಿದ್ದ! ಅವರು ಮುದ್ರಿಸಿದ್ದ ನಾಣ್ಯಗಳಲ್ಲಿ, ಪದಕಗಳ ಮೇಲೆ ಗರುಡನ ಚಿತ್ರವಿತ್ತು! ಮಾನವ ಪ್ರಭುವೆಂದು ಪ್ರತೀತಿ ಪಡೆದ ಪುರಾಣಪುರುಷ ಜ್ಯೂಪಿಟರ್‌ನ ಅತ್ಯಂತ ಪ್ರಿಯಪಕ್ಷಿ ಈ ಗರುಡ! ಕ್ರಿ. ಶ. ೧-೦೦ ರ ಅನಂತರ ಯುರೋಪಿನ ಅನೇಕ ರಾಜರು ತಮ್ಮ ಗುರಾಣಿಗಳ ಮೇಲೆ ಗರುಡ ಪಕ್ಷಿಯ ಲಾಂಛನ ಕೆತ್ತಿಸಿಕೊಂಡರು. ಗರುಡನ ಬಗ್ಗೆ ಅಭಿಮಾನ ಹೊಂದಿದ ಜರ್ಮನಿ, ರಷ್ಯ, ಆಸ್ಟ್ರಿಯ, ಪೋಲೆಂಡ್ ಚಕ್ರವರ್ತಿಗಳು ಎರಡು ತಲೆ ಹೊಂದಿದ ಗರುಡನನ್ನು ಯೋಚಿಸಿಕೊಂಡು, ಅದನ್ನು ರಾಷ್ಟ್ರಲಾಂಛನವನ್ನಾಗಿ ಮಾಡಿಕೊಂಡರು! ಕಪ್ಪು ಬಣ್ಣದ ಗರುಡ ಪ್ರಶ್ಯದೇಶದ ಲಾಂಛನವಾಗಿತ್ತು! ೧೭೭೬ ರ ವೇಳೆ, ಅಮೇರಿಕೆಯ ನಾಣ್ಯಗಳೂ ಗರುಡನ ಚಿತ್ರ ಮುದ್ರಿಸಿಕೊಂಡು ಚಲಾವಣೆಗೆ ಬಂದಿದ್ದವು!

ಈ ವಿಶ್ವವ್ಯಾಪೀ ಪ್ರಭಾವದ ಗರುಡನಿಗೆ ಇಂಗ್ಲೀಷಿನಲ್ಲಿ ಬ್ರಾಹ್ಮಿಣಿ ಕೈಟ್ ಎಂದು ಕರೆಯಲಾಗುತ್ತಿದೆ. ಹ್ಯಾಲಿಯಾಸ್ಟರ್ ಇಂಡಸ್ ಎಂಬುದು ಇದರ ವೈಜ್ಞಾನಿಕ ನಾಮ. ಹದ್ದು, ಗಿಡುಗ, ಡೇಗೆ, ರಣಹದ್ದು, ಗೂಬೆ ಮುಂತಾದ ಪಕ್ಷಿಗಳ ಹತ್ತಿರ ಸಂಬಂಧಿಯಾದ ಗರುಡ ಫಾಲ್ಕನಿ ಫಾರ್ಮಿಸ್ ಗಣದ ಆಕ್ಸಿಪಿಟ್ರಿಡೀ ಕುಟುಂಬದ ಬ್ಯೂಟಿಯಾನಿನೀ ಉಪಕುಟುಂಬಕ್ಕೆ ಸೇರಿದ ಒಂದು ಹಕ್ಕಿ.

ಇದರ ಉದ್ದ ಸುಮಾರು ೪೮ ಸೆಂಟೀಮೀಟರ್‌ಗಳಷ್ಟು. ತಲೆ, ಕತ್ತು, ಎದೆ, ಬೆನ್ನಿನ ಮುಂಭಾಗ ಶ್ವೇತ ವರ್ಣದಿಂದಿರುವುದು ಸಾಮಾನ್ಯ. ದೇಹದ ಉಳಿದ ಭಾಗ ಕೆಂಪು ಮಿಶ್ರಿತ ಕಂದು. ಬಲವಾದ ಕೊಕ್ಕು. ಇವು ತೀರಾ ಹರಿತವೂ ಕೂಡ. ಇದರ ದೃಷ್ಟಿ ತುಂಬಾ ತೀಕ್ಷ್ಣ. ಬಲಯುತ ರೆಕ್ಕೆ, ಹಾಗೂ ಅವು ತೀರಾ ಅಗಲ. ಸಾಮಾನ್ಯವಾಗಿ ಒಂದೊಂದು ರೆಕ್ಕೆಯ ಅಗಲ ೩೮ ರಿಂದ ೪೦ ಸೆಂ. ಮೀ. ಗಳಷ್ಟು! ಗರುಡನ ಧ್ವನಿ ತೀಕ್ಷ್ಣ ಸಿಳ್ಳನ್ನು ಹೋಲುತ್ತದೆ. ಅಪರೂಪವಾಗಿ ಸತ್ತ ಪ್ರಾಣಿ ಭುಂಜಿಸುವ ಗರುಡನ ಮುಖ್ಯ ಆಹಾರ: ಹಲ್ಲಿ, ಹಾವು, ಕೋಳಿ, ಕೀಟ, ಮೀನು, ಕಪ್ಪೆ,

ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನಗಳಲ್ಲಿ ಕಂಡುಬರುತ್ತಿರುವ ಗರುಡನಿಗೆ ಮೊದಲಿನ ಗೌರವವಾಗಲೀ, ಸ್ಥಾನಮಾನಗಳಾಗಲೀ ಈಗ ಅಲಭ್ಯ. ಆದರೂ ಅವು ತಮ್ಮ ನಿರಂತರ ಅನ್ವೇಷಕ ಬುದ್ಧಿ ಬಿಟ್ಟಿಲ್ಲ; ತಮ್ಮ ಬಗೆ ರೂಢಿಸಿಕೊಳ್ಳುವುದನ್ನು ಹಿಂದೆಹಾಕಿಲ್ಲ.

ಗರುಡ ತನ್ನ ಪ್ರಭುವಿನಲ್ಲಿ ಅನನ್ಯ ಭಕ್ತಿ ಇರಿಸಿಕೊಂಡಿದ್ದ ಕತೆ ಎಷ್ಟರಮಟ್ಟಿಗೆ ಜನತೆಯ ಮೇಲೆ ಪ್ರಭಾವಬೀರಿತ್ತೆಂದರೆ–ಕರ್ನಾಟಕದಲ್ಲಿ ಅದೆಷ್ಟೋ ಮಂದಿ ತಮ್ಮ ಪ್ರಭುವಿನ ಮೇಲಿನ ನಿಷ್ಠೆಯಿಂದಾಗಿ 'ಗರುಡ'ರೆಂದೇ ಕರೆಸಿಕೊಂಡಿದ್ದಾರೆ. ಈ ಗರುಡರ ಪರಾಕ್ರಮ, ಸಾಧನೆ, ಪ್ರಾಣತ್ಯಾಗಗಳಿಗೆ ಸಂಬಂಧಿಸಿದ ಅನೇಕ ಪ್ರಸಂಗಗಳು ಕನ್ನಡ ಶಾಸನಗಳಲ್ಲಿ ದೊರೆಯುತ್ತವೆ. ರಾಸೇಯ, ಬೇಬಿಯಣ್ಣ, ಕುವರ ಲಕ್ಷ್ಮ, ಕಾಮೇಯನಾಯಕ ಮುಂತಾದವರು—'ಗರುಡ'ರೆಂದು ಪ್ರಖ್ಯಾತರಾಗಿದ್ದಾರೆ. ಈ ಗರುಡರ ಆತ್ಮಾರ್ಪಣೆಯ ನೆನಪಿಗಾಗಿ ದೇವಾಯತನದ ಇದಿರು 'ಗರುಡಗಂಬ' ಸ್ಥಾಪಿಸುವುದು ಆಗ ಅನುಸರಿಸುತ್ತಿದ್ದ ರೀತಿ.

ಗರುಡ ಶಿವೋಲ್ಲಂಘನ ಮಾಡಿರುವ ಪಕ್ಷಿ, ಇದರ ಹಲವು ಬಗೆಗಳು ಬರ್ಮ, ಇಂಡೋ-ಚೀನ, ಮಲಯ, ಸಾಲೋಮನ್ ದ್ವೀಪಗಳಲ್ಲಿಯತನಕ ಹರಡಿವೆ! ✡

ಕೊರಿಯಾ-ಭಾರತ ಸಂಬಂಧ

ದಶಾವತಾರಗಳ ನಾಡು ಭಾರತ. ಹತ್ತನೇ ಅವತಾರ ಇನ್ನೂ ಆಗಬೇಕು. ಒಂಭತ್ತನೇ ಅವತಾರ ಎನಿಸಿದ ಬುದ್ಧ ಭಾರತದಲ್ಲಿ ಪ್ರಚಲಿತವಾಗಿದ್ದ ಕರ್ಮಕಾಂಡದ ವಿರುದ್ಧ ಸಿಡಿದೆದ್ದು ಸ್ವತಂತ್ರವಾಗಿ ಬೌದ್ಧ ಧರ್ಮವನ್ನು ಸ್ಥಾಪಿಸಿದ. ಮುಂದೆ ಈ ಬೌದ್ಧಧರ್ಮ ಏಶಿಯಾದ ಎಲ್ಲ ರಾಷ್ಟ್ರಗಳಲ್ಲಿಯೂ ಪ್ರಸಾರ ಹೊಂದಿ ಅನುಯಾಯಿಗಳನ್ನು ಪಡೆಯಿತು. ಈ ಬೌದ್ಧಧರ್ಮವು ಉತ್ತರಕ್ಕೆ ಚೀನವನ್ನು ಪ್ರವೇಶಿಸಿ, ಅಲ್ಲಿಂದಲೂ ಮುಂದೆ ಕೊರಿಯಾದ ವರೆಗೂ ಚಾಚಿತು. ಭಾರತದಿಂದ, ಚೀನದಿಂದ ಬೌದ್ಧ ಭಿಕ್ಷುಗಳು ಕೊರಿಯಾಕ್ಕೆ ಹೋಗಿ ಬೌದ್ಧ ಧರ್ಮವನ್ನು ಅಲ್ಲಿ ಪ್ರಸಾರ ಮಾಡಿದರು ಎಂದು ತಿಳಿದು ಬರುತ್ತದೆ.

ಕೊರಿಯಾಕ್ಕೂ ಸಾಕಷ್ಟು ಪ್ರಾಚೀನವಾದ ಚರಿತ್ರೆ ಇದೆ. ಆ ದೇಶದಲ್ಲಿ ಪ್ರಚಲಿತವಿರುವ ಒಂದು ದಂತ ಕಥೆಯ ಪ್ರಕಾರ ಕ್ರಿಸ್ತಪೂರ್ವ ೨೩೩೩ ನೇ ವರ್ಷದಲ್ಲಿ ಸೃಷ್ಟಿಕರ್ತನ ಮಗನಾದ ಹಾನುಂಗ ಎಂಬವನು ನೇರವಾಗಿ ಸ್ವರ್ಗದಿಂದ ಕೊರಿಯಾಕ್ಕೆ ಇಳಿದು, ಅಲ್ಲಿಯ ಅಪೂರ್ವ ಸುಂದರಿಯೊರ್ವಳನ್ನು ಕಂಡು ಅವಳ ಮೇಲೆ ಒಲಿದ. ಆಕೆಯು ತಾಂಗೂನ್ ಎಂಬ ಮಗುವಿಗೆ ಜನ್ಮವಿತ್ತಳು. ಆತನೇ ಕೊರಿಯಾದ ಪ್ರಥಮ ರಾಜ. ಆತನ ವಂಶದವರು ಕ್ರಿ. ಪೂ. ೧೧೨೨ ರ ವರೆಗೆ ಕೊರಿಯಾದ ಮೇಲೆ ಪ್ರಭುತ್ವ ನಡೆಸಿದರು. ನಂತರ ಚೀನದ ಕಿಜಾ ಎಂಬ ಪಂಡಿತನು ತನ್ನ ಐದು ಸಾವಿರ ಜನರೊಡನೆ ಕೊರಿಯಾಕ್ಕೆ ವಲಸೆ ಬಂದು ಹೊಸ ರಾಜಮನೆತನವನ್ನು ಸ್ಥಾಪಿಸಿದ. ಈತನ ವಂಶದವರು ಕ್ರಿ. ಪೂ. ೧೦೩ ರ ವರೆಗೆ ಕೊರಿಯಾವನ್ನು ಆಳಿದರು.

ನಂತರ ಕೊರಿಯಾದಲ್ಲಿ ಪ್ರಖ್ಯಾತ ತ್ರಿರಾಜ್ಯಗಳ ಉದಯವಾಯಿತು. ದಕ್ಷಿಣ ಮಂಚೂರಿಯಾ ಹಾಗೂ ಉತ್ತರ ಕೊರಿಯಾ ಪ್ರದೇಶಗಳು ಕೊಗುರ್ಯೊ ರಾಜ ಮನೆತನದ (ಕ್ರಿ. ಪೂ. ೩೭ ರಿಂದ ಕ್ರಿ. ಶ. ೬೬೮) ವಶದಲ್ಲಿ, ಹಾನ್ ನದಿಯ ಸುತ್ತಲಿನ ಪ್ರದೇಶವು ಪೇಕಚೆ ಮನೆತನದ (ಕ್ರಿ. ಪೂ. ೧೮ ರಿಂದ ಕ್ರಿ. ಶ. ೬೬೦) ವಶದಲ್ಲಿ ಹಾಗೂ ದಕ್ಷಿಣದ ನಾಗಡೊಂಗ ನದಿಯ ಪ್ರದೇಶ ಸಿಲ್ಲಾ ಮನೆತನದ (ಕ್ರಿ. ಪೂ. ೫೭ ರಿಂದ ಕ್ರಿ. ಶ ೯೩೫) ವಶದಲ್ಲಿ ಉಳಿದು ಅಭಿವೃದ್ಧಿ ಹೊಂದಿದವು

ಸಮಕಾಲೀನವಾಗಿ ಬಾಳಿದ ಈ ಮೂರೂ ರಾಜ್ಯಗಳಲ್ಲಿ ಬಳಕೆ ಸಾಕಷ್ಟಿತ್ತು. ಆದರೂ ಅವುಗಳಲ್ಲಿ ಸಿಲ್ಲಾ ರಾಜ್ಯ ಹೆಚ್ಚು ಮಹತ್ವಾಕಾಂಕ್ಷಿ ಎಂದು ಹೇಳಬಹುದು. ಕ್ರಿ ಶ ೬೬೦ ರಿಂದ ಎಂಟು ವರ್ಷಗಳ ಅವಧಿಯಲ್ಲಿ ಸಿಲ್ಲಾ ರಾಜರು ಭೇದೋಪಾಯದಿಂದ ಉಳಿದೆರಡು ರಾಜ್ಯಗಳನ್ನು ಕೈವಶಪಡಿಸಿಕೊಂಡು ತಾವೇ ಸಾರ್ವಭೌಮರಂತೆ ಆಳಿದರು

ಈ ತ್ರಿರಾಜ್ಯಗಳ ಉಚ್ಛ್ರಾಯ ಕಾಲದಲ್ಲಿ ಅಂದರೆ ಕ್ರಿಶ್ತ ಶಕದ ಆರಂಭದಲ್ಲಿಯೇ ಬೌದ್ಧ

ಧರ್ಮವು ಕೊರಿಯಾಕ್ಕೆ ಕಾಲು ಚಾಚಿತು. ಚೀನದಿಂದ ಹಾಗೂ ಭಾರತದಿಂದ ಧರ್ಮೋಪದೇಶಕರು ಈ ಕೊರಿಯಾಕ್ಕೆ ಬಂದು ಬೌದ್ಧ ಧರ್ಮದ ಪ್ರಸಾರ ನಡೆಸಿದರು ಎಂದು ತಿಳಿದು ಬರುತ್ತದೆ. ಅಂದಿನಿಂದಲೇ ಕೊರಿಯಾಕ್ಕೆ ಭಾರತದ ಸಂಪರ್ಕ ಉಂಟಾಯಿತು ಎಂದರೆ ಸತ್ಯವನ್ನೇ ಆಡಿದಂತಾದೀತು.

೫೫ ಅಡಿ ಎತ್ತರದ ಬುದ್ಧ



ಕೊರಿಯಾದಲ್ಲಿ ಬೌದ್ಧ ಧರ್ಮದ ಬೆಳವಣಿಗೆ ಕುರಿತು ಮೂರು ಘಟ್ಟಗಳನ್ನು ಕಲ್ಪಿಸಲಾಗಿದೆ. ಪ್ರಾರಂಭದ ಐದು ಶತಮಾನಗಳಲ್ಲಿ ಬೌದ್ಧ ಧರ್ಮದ ಪ್ರಸಾರ ಹೆಚ್ಚುತ್ತ ನಡೆಯಿತು. ಮುಂದಿನ ಐನೂರು ವರ್ಷಗಳಲ್ಲಿ ಅದು ಕೊರಿಯಾದಲ್ಲಿ ತನ್ನ ಹಿರಿಮೆಯನ್ನು ಕಾಪಾಡಿಕೊಂಡಿತು. ಆದರೆ ೧೩೯೨ ರಿಂದ ೧೯೧೦ ರ ವರೆಗಿನ ಅವಧಿಯಲ್ಲಿ ಬೌದ್ಧ ಧರ್ಮ ಅಧೋಗತಿಗಿಳಿಯಿತು. ತ್ರಿರಾಜ್ಯಗಳ ಅವಸಾನದ ನಂತರ ಬಂದ ಕೊರಿಯಾ ಆಧಿಪತ್ಯವು ಬೌದ್ಧ ಧರ್ಮದ ವಿಕಾಸಕ್ಕೆ ಅವಕಾಶ ನೀಡಿತಾದರೂ ತದನಂತರದ ಈ ವಂಶಮಾತ್ರ ಬೌದ್ಧ ಧರ್ಮವನ್ನು ಕೆಳಕ್ಕೆ ತುಳಿಯಲು ಪ್ರಯತ್ನಿಸಿತು. ೧೯೧೦ ರ ನಂತರ ಕ್ರಿಸ್ತ ಧರ್ಮದ ಪ್ರಸಾರವೂ ಹೆಚ್ಚಿತು. ೧೯೭೧ರ ಜನಗಣತಿಯ ಪ್ರಕಾರ ಕೊರಿಯಾದ ಮೂರೂಕಾಲು ಕೋಟಿ ಜನಸಂಖ್ಯೆಯಲ್ಲಿ ಬೌದ್ಧರ ಸಂಖ್ಯೆ ಕೇವಲ ೭೧ ಲಕ್ಷದಷ್ಟಿದೆ.

ಕೊರಿಯಾದಲ್ಲಿ ಬೌದ್ಧ ಧರ್ಮವು ಏಳನೇ ಶತಮಾನದಲ್ಲಿ ರಾಷ್ಟ್ರ ಧರ್ಮವಾಗಿತ್ತು. ಕೊರಿಯಾ ಸಂಪೂರ್ಣವಾಗಿ ಸಿಲ್ಲಾ ಆಧಿಪತ್ಯಕ್ಕೆ ಒಳಗಾದ ಮೇಲೆ ಆ ದೇಶದಲ್ಲಿ ಅನೇಕ ಬೌದ್ಧ ದೇವಾಲಯಗಳೂ ಶಿಲ್ಪಗಳೂ ತಲೆಯೆತ್ತಿದವು. ಅಲ್ಲಲ್ಲಿ ಸುಂದರವಾದ ಬುದ್ಧ ವಿಗ್ರಹಗಳನ್ನೂ ಸ್ಥಾಪಿಸಲಾಯಿತು. ಈಗಿನ ಸಿಯೋಲದಿಂದ ಸುಮಾರು ೮೦ ಕಿ. ಮೀ. ದೂರದಲ್ಲಿರುವ ಸೋಕ್ನಿ ಪರ್ವತದಲ್ಲಿ ಶಿಲೆಯಲ್ಲಿ ಕಡೆದ ೫೫ ಅಡಿ ಎತ್ತರದ ಪದ್ಮಸ್ಥಿತ ಬುದ್ಧ ವಿಗ್ರಹ ತುಂಬಾ ಸುಂದರವಾಗಿದೆ; ವಿಶ್ವವಿಖ್ಯಾತವಾಗಿದೆ. ಶ್ರವಣಬೆಳಗೊಳದ ಗೊಮ್ಮಟನನ್ನು ಜ್ಞಾಪಕಕ್ಕೆ ತರುವಂತಿದೆ.

ತ್ರಿರಾಜ್ಯಗಳ ಅವಸಾನದ ನಂತರ ತಲೆಯೆತ್ತಿದ ಕೊರಿಯಾ ಮನೆತನದ ಕೋಜೊಂಗ ಎಂಬ ಅರಸನು ಬುದ್ಧ ಗ್ರಂಥವಾದ ತ್ರಿಪಿಟಕ

ವನ್ನು ೮೧೨೫೮ ಫಲಕಗಳ ಮೇಲೆ ಕೆತ್ತಿಸಿ ತನ್ನ ಧರ್ಮಪರಾಯಣತೆಯನ್ನು ತೋರ್ಪಡಿಸಿದ್ದಾನೆ. ಆ ಫಲಕಗಳನ್ನು ಕೆತ್ತಲು ೧೬ ವರ್ಷಗಳ ಕಾಲಾವಧಿ ಬೇಕಾಯಿತಂತೆ. ಮಹಾ ಸಾಹಸದಿಂದ ರಚಿಸಲಾದ ಈ ಗ್ರಂಥಕ್ಕೆ "ತ್ರಿಪಿಟಕಾ ಕೋರಿಯಾನಾ" ಎಂದು ನಾಮಕರಣ ಇದೆ. ಈ ಎಲ್ಲ ಫಲಕಗಳನ್ನು ಗ್ಯೊಂಗಸಂಗ ನಾಮಡೋ ಪ್ರಾಂತದಲ್ಲಿ ಹೇನ್‌ಸಾ ಬುದ್ಧ ಮಂದಿರದಲ್ಲಿ ಸಂರಕ್ಷಿತವಾಗಿ ಕಾದಿಡಲಾಗಿದೆ. ಕೋರಿಯಾದಲ್ಲಿ ಸದ್ಯಕ್ಕೆ ಬೌದ್ಧ ಧರ್ಮದ ೧೬ ಪ್ರಭೇದಗಳು ಆಚರಣೆಯಲ್ಲಿವೆ. ಕ್ರಿಸ್ತ ಶಕದ ಪ್ರಾರಂಭದಲ್ಲಿ ಭಾರತದಿಂದ ಕೋರಿಯಾ ತಾನು ಪಡೆದ ಬೌದ್ಧ ಧರ್ಮವನ್ನು ಇಂದಿಗೂ ಉಳಿಸಿಕೊಂಡು ಬಂದಿರುವದು ಗಮನಾರ್ಹ.



ಅಯೋಧ್ಯಾ ರಾಜಕುಮಾರಿಯು ಕೋರಿಯಾಕ್ಕೆ ಸಾಗಿ ಹೋದ ಸಮುದ್ರಯಾನ ಮಾರ್ಗ.



ಕೋರಿಯಾ ಮತ್ತು ಅಯೋಧ್ಯಾಗಳಲ್ಲಿ ಕಂಡು ಬರುವ ಸೂರ್ಯ ಹಾಗೂ ಮೀನ ಚಿಹ್ನಗಳು.

ಕೋರಿಯಾ ಭಾರತದೊಡನೆ ಬೆಳೆಸಿಕೊಂಡ ಧಾರ್ಮಿಕ ಸಂಬಂಧ ಈ ರೀತಿಯದಾದರೆ ಇನ್ನೊಂದು ರೀತಿಯ ಸಂಬಂಧ ಇದಕ್ಕೂ ಆಕರ್ಷಕವಾಗಿದೆ. ಭಾರತದ ಅಯೋಧ್ಯೆಯ ರಾಜಕುಮಾರಿಯೊಬ್ಬಳು ಕ್ರಿ. ಶ. ೪೮ ರ ಜೂನ ತಿಂಗಳ ೨೭ ಕ್ಕೆ ಸಮುದ್ರ ಪರ್ಯಟನ ಮಾಡಿ ಕೋರಿಯಾವನ್ನು ತಲುಪಿದಳು. ಆಕೆ ತನ್ನ ಜೊತೆಗೆ ಭಾರತದಿಂದ ಒಂದು ಸ್ತೂಪವನ್ನು ಒಯ್ದಿದ್ದಳು ಎಂಬ ಸಂಗತಿ ಕೋರಿಯಾದಲ್ಲಿ ಇತ್ತೀಚೆಗೆ ಶೋಧವಾಗಿದೆ. ಆಕೆಯು ಒಯ್ದ ಸ್ತೂಪದ ಮೇಲೆ ಸೂರ್ಯ ಚಿಹ್ನವಿತ್ತು, ಮತ್ತು ಆ ಸ್ತೂಪಕ್ಕೆ ಬಳಸಿದಂಥ ಕಲ್ಲು ಕೋರಿಯಾದಲ್ಲಿ ಸಿಗುವದೇ ಇಲ್ಲ ಎಂದೂ ಸಂಶೋಧನೆಯಲ್ಲಿ ಕಂಡು ಬಂದಿದೆಯಂತೆ. ತ್ರಿರಾಜ್ಯಗಳ ಕುರಿತು ಹದಿಮೂರನೇ ಶತಮಾನದಲ್ಲಿ ಭಿಕ್ಷು ಯಾನ್ ಎಂಬವನು ಬರೆದ 'ಸಂಗುಕ್‌ಯುಸಾ' ಗ್ರಂಥವನ್ನು ಇಂದಿನ ಸಂಶೋಧಕ ಶ್ರೀಮಾನ್ ಲೀ ಜೋಂಗ್ ಕೀ ಅವರು ಪರಿಶೀಲಿಸುತ್ತಿದಾಗ ಈ ಅಂಶಗಳು

ಬೆಳಕಿಗೆ ಬಂದಿವೆಯಂತೆ. ಆ ಅಯೋಧ್ಯಾ ರಾಜಕುಮಾರಿಯು ಕ್ರಿ. ಶ. ೪೮ರಲ್ಲಿ ಕೋರಿಯಾಕ್ಕೆ ಬಂದಿದ್ದಲ್ಲದೆ ಅಲ್ಲಿಯ ಅಂದಿನ ಅರಸು ಕಿಮ್ ಸುರೋನನ್ನು ವಿವಾಹವಾದದ್ದಾಗಿಯೂ ವಿದಿತವಾಗುತ್ತದೆ. ಆಕೆಯ ಕುರಿತು ಹೆಚ್ಚಿನ ವಿವರಗಳು ಉಪಲಬ್ಧವಿಲ್ಲ. ಆದರೆ ಆಕೆಯ ಸಮಾಧಿ ಮಾತ್ರ ಕಯು ಅಥವಾ ಗಯು ರಾಜ್ಯ (ಕ್ರಿ. ೪೨ ರಿಂದ ೫೬೨) ದ ರಾಜಧಾನಿ 'ಕಿಂಬೇ'ದಲ್ಲಿ ಇನ್ನೂ ಕಾಣಸಿಗುತ್ತದೆ. ಆ ಸಮಾಧಿ ಮಂದಿರದ ಬಾಗಿಲಿನ ಚೌಕಟ್ಟಿನ ಮೇಲೆ ಎರಡು ಮೀನಗಳನ್ನು ಕೆತ್ತಲಾಗಿದೆ. ಆ ಸಂಕೇತಗಳೇನು ಎಂಬ ಬಗ್ಗೆ ಅಲ್ಲಿಯ ಬೌದ್ಧಧರ್ಮೀಯರು ತಲೆ ಕೆಡಿಸಿಕೊಳ್ಳುತ್ತಿದ್ದರಂತೆ. ಆದರೆ ಸಂಶೋಧಕ ಲೀ ಜೊಂಗ ಕೀ ಅವರು ಎರಡು ವರ್ಷಗಳ ಹಿಂದೆ ಭಾರತಕ್ಕೆ ಬಂದಿದ್ದಾಗ ಅಯೋಧ್ಯೆಯ ವರೆಗೂ ಪ್ರಯಾಣ ಬೆಳೆಸಿ ತಮ್ಮ ಶಂಕೆಗೆ ಸಮಾಧಾನವನ್ನು ಕಂಡುಕೊಂಡರು.

ಅಯೋಧ್ಯೆಯ ಮನೆ ಮನೆಗಳ ಬಾಗಿಲುಗಳ ಮೇಲೆ ಮೀನುಗಳ ಚಿಹ್ನೆಗಳನ್ನೂ ಸೂರ್ಯನ ಚಿಹ್ನೆಗಳನ್ನೂ ಕಂಡ ಲೀ ಅವರಿಗೆ ಆನಂದೋದ್ರೇಕವಾಯಿತಂತೆ. ಕೋರಿಯನ್ನರ ತಲೆ ಕೆಡಿಸಿದ್ದ ಈ ಚಿಹ್ನೆಗಳು ಇಲ್ಲಿ ಅಯೋಧ್ಯೆಯಲ್ಲಿ ಇಷ್ಟು ವಿಪುಲವಾಗಿರುವಾಗ ಕೋರಿಯಾಕ್ಕೆ ಬಂದ ರಾಜ ಕುಮಾರಿ ಇಲ್ಲಿಯವಳೇ ಎಂದು ಅವರಿಗೆ ಖಚಿತವಾಯಿತು. ಆತ ಆ ಚಿಹ್ನೆಗಳ ಫೋಟೋ ಹೊಡೆದದ್ದೇ ಹೊಡೆದದ್ದು. ಗಂಡಕೀ ನದಿ ತೀರದಲ್ಲಿರುವ ಅಯೋಧ್ಯೆ ನಗರವೇ ಮೀನಿನ ಆಕಾರದಲ್ಲಿದೆ ಎಂದು ಸ್ಕಂದ ಪುರಾಣದಲ್ಲಿ ಬರೆದುದನ್ನು ಲೀ ಪ್ರತ್ಯಕ್ಷ ಕಂಡುಕೊಂಡ. ಅಂತೇ ಇವರಿಗೆ ಈ ಮೀನಗಳು ಆದರದ ಸಂಕೇತಗಳಾಗಿರಬೇಕು ಎಂದೂ ಅಂದುಕೊಂಡ. ಇಷ್ಟೇ ಅಲ್ಲ, ಭಾರತದಲ್ಲಿಯ ವಿದ್ವಾಂಸರೊಡನೆ ಚರ್ಚಿಸಿ ತನ್ನ ಅಭಿಪ್ರಾಯವನ್ನು ಖಚಿತಪಡಿಸಿಕೊಂಡ.

ಭಾರತ ಕೋರಿಯಾಗಳ ಎರಡು ಸಾವಿರ ವರ್ಷಗಳ ಸಂಬಂಧದ ಎಳೆ ಈಗ ಸಿಕ್ಕಂತಾಗಿದೆ. ಲೀ ಅಂಥ ಸಂಶೋಧಕರು ಈ ಸಂಬಂಧದ ಸಮಗ್ರ ಇತಿಹಾಸಿಕ ವಿವರಗಳನ್ನು ಸಂಶೋಧಿಸಲು ಕಟಿಬದ್ಧರಾಗಿದ್ದಾರೆ. ಭಾರತೀಯ ಸಂಶೋಧಕರ ಸಹಾಯ ಅವರಿಗಿದೆ ಎಂದು ಭಾವಿಸಬಹುದಾಗಿದೆ. ✡



ವಿಕ್ರಮ ಸ್ಥಾಪಿಸಿದ ಗೋವು

ಅಮೇರಿಕೆಯ ಪೆನ್ಸಿಲ್ವಾನಿಯಾದ ಜೋರಿಂಗ್ ಸ್ಪ್ರಿಂಗ್ ಎಂಬಲ್ಲಿಯ ಒಂದು ಆಕಳು, ೧೯೭೪ ರಲ್ಲಿ, ಪ್ರಪಂಚದಲ್ಲಿಯ ಯಾವದೇ ಆಕಳು ನೀಡಬಹುದಾದ್ದಕ್ಕಿಂತ ಹೆಚ್ಚಿಗೆ ಹಾಲನ್ನು ಕೊಟ್ಟಿದೆ ಎಂದು ವರದಿಯಾಗಿದೆ. ಹತ್ತು ವರ್ಷ ವಯಸ್ಸಿನ ೧೬೦೦ ಪೌಂಡು ತೂಕದ ಈ ಹೊಲ್‌ಸ್ಟೀನ್ ಜಾತಿಯ ಆಕಳು 'ಕೊರಿನಿ'ಯು ಕಳೆದ ವರ್ಷದಲ್ಲಿ ೫೦೭೫೯ ಪೌಂಡು ಹಾಲು ಕರೆದಿದೆ ಎಂದು ಅದರ ಒಡೆಯ ಕೆನೆಥ್ ಮೌರಿ ಹೇಳುತ್ತಾನೆ. ಸರಾಸರಿ ದಿನಕ್ಕೆ ೧೪೦ ಪೌಂಡು ಹಾಲು ಕರೆದಂತಾಯಿತು. ಗೋಪೂಜಕರೆಂದೆನಿಸಿಕೊಳ್ಳುವ ಭಾರತೀಯರಿಗೆ ಇದೊಂದು ಪಾಠ ಅಲ್ಲವೇ?

ಅದ್ಭುತ ಹುಚ್ಚ

ಡಾ. ಬಾಪೂರಾವ ನಾಡಗೌಡ

ಆ ಘಟನೆಗೆ ಇಪ್ಪತ್ತು ವರುಷಗಳು ಕಳೆದು ಹೋದವು. ಇಂದಿಗೂ ನೀವು 'ಅಸ್ಕಿ'ಗೆ ಹೋದರೆ, ಹೊಲ ಮನೆ ಎತ್ತು ದನ ಕರಗಳ ಬಗೆಗೆ ಮಾತು ತೆಗೆದರೆ ನಿಶ್ಚಿತವಾಗಿಯೂ ನಿಮಗೆ ಆ ಅದ್ಭುತ 'ಹುಚ್ಚ'ನ ಕಥೆಯನ್ನು ಅಲ್ಲಿಯವರು ಹೇಳದಿರಲಾರರು.

ಸಿಂದಗಿ ತಾಲೂಕಿನ ಅಸ್ಕಿಯ ಸೋಮನಗೌಡರು ಹಿರಿಯ ರೈತರಲ್ಲೊಬ್ಬರು. ಅವರದು ಎಂಟು ಎತ್ತಿನ ಕಮತ. ತಮ್ಮ ಕಮತಕ್ಕೆ ಬೇಕಾಗುವ ಎತ್ತುಗಳನ್ನು ದೂರ ದೂರದಿಂದ ತಂದಿದ್ದರು. ಒಮ್ಮೆ ಹೊಲದ ಕೆಲಸ ಒಳ್ಳೇ ಜೋರಿನಿಂದ ನಡೆದಾಗಲೇ ಆಕಸ್ಮಿಕವಾಗಿ ಒಂದು ಎತ್ತು ಸತ್ತಿತು. ಒಳ್ಳೆಯ ಎತ್ತನ್ನು ತರಲು ಬಹಳ ದಿನಗಳು ಬೇಕಾಗಬಹುದೆಂದು ಅವರು ಯೋಚಿಸಿ, ಕೆಲಸದ ಒತ್ತಡದ ಕಾರಣದಿಂದ ಸದ್ಯ ಯಾವುದಾದರೂ ಒಂದು ಎತ್ತನ್ನು ತಂದರಾಯಿತೆಂದು, ನೆರೆಹಳ್ಳಿಯಾದ ತುಂಬಗಿಯಿಂದ ಸಾಧಾರಣ ತರಗತಿಯ ಬಡಕಲ ಮೈಕಟ್ಟಿನ ಬಿಳಿಯ ಎತ್ತನ್ನು ತಂದರು. ಅದನ್ನು ತಂದ ದಿನ ಆಳುಗಳಿಗೆ ಸಂತೋಷವೇನೂ ಆಗಲಿಲ್ಲ. ಭವ್ಯವಾಗಿ ಕಾಣುವ ಏಳು ಎತ್ತುಗಳ ಮಧ್ಯೆ ಇದು ಸಣಕಲಾಗಿ ಕಂಡಿತು. ಆಳುಗಳಲ್ಲಿ ಯಾರೋ ಒಬ್ಬ ಇದಕ್ಕೆ 'ಹುಚ್ಚ' ಎಂದು ಹೆಸರಿಟ್ಟನು. ಸರಿ. ಇದನ್ನು ಎಲ್ಲರೂ ಹುಚ್ಚನೆಂದೇ ಕರೆದರು. ಆದರೆ ಆ ಹುಚ್ಚ ಅದ್ಭುತವಾಗಿತ್ತು.

ಒಂದು ಸುಗ್ಗಿ ಮುಗಿಯುವ ಹೊತ್ತಿಗೆ, ಅದು ಪ್ರತಿಯೊಬ್ಬರ ಲಕ್ಷ್ಯವನ್ನು ತನ್ನತ್ತ ಸೆಳೆದಿತ್ತು; ಆಳುಗಳು ಅದನ್ನು ಎಷ್ಟರ ಮಟ್ಟಿಗೆ ಪರೀಕ್ಷಿಸುತ್ತಿದ್ದರೆಂದರೆ, ಅದರ ಸರಪಳಿಯನ್ನು ಬಿಚ್ಚಿ 'ಇವೊತ್ತು ಎರೀಗೆ ಹೋಗೋದು, ಎಂದು ಹೇಳಿದರೆ ನೇರವಾಗಿ ಎರಿ ಹೊಲಕ್ಕೆ ಹೋಗುತ್ತಿತ್ತು. ಸೋಮನಗೌಡರಿಗೆ ನಾಲ್ಕು ಕಡೆ ಬೇರೆ ಬೇರೆ ಹೊಲಗಳಿದ್ದವು. ಆಯಾ ಹೊಲಗಳ ಹೆಸರನ್ನು ಅದು ಚೆನ್ನಾಗಿ ಪರಿಚಯ ಮಾಡಿಕೊಂಡಿತ್ತು.

ಒಂದು ದಿನ ರಾಶಿಯನ್ನು ಹೇರಿಕೊಂಡು ಗಾಡಿ ಸಂಜೆಗೆ ಮನೆಗೆ ಹೊರಟಿತ್ತು. ಊರೊಳಗಿನ ಒಂದು ತಿರುವಿನಲ್ಲಿ ಹುಚ್ಚ ನಿಂತು ಬಿಟ್ಟಿತು. ಮೇಲೆ ಕುಳಿತ ಆಳು, ಬಾಯಿ ಮಾಡಿದ, ಕೈ ಎತ್ತಿದ, ಬೆದರಿಸಿದ. ಆದರೆ ಅದು ಹೆಜ್ಜೆ ಕಿತ್ತಲಿಲ್ಲ, ಮತ್ತು ಮುಂದೆ ನಡೆಯಲಿಲ್ಲ. ಆತನಿಗೆ ಸಿಟ್ಟು ವಿಪರೀತ ಬಂದಿತು. ಬಾರಕೋಲಿನಿಂದ ಎರಡು ಏಟು ಸೆಳೆದ. ಆದರೆ ಹುಚ್ಚ ಹಾಗೇ ನಿಂತಿತ್ತು. ಆಗ ಆಳಿಗೆ ಸಂಶಯ ಬಂದಿತು. ಇಷ್ಟು ಹೊತ್ತಿಗೆ ಸೋಮನಗೌಡರೂ ಅಲ್ಲಿಗೆ ಬಂದಿದ್ದರು. ಆಳು ಕೆಳಗೆ ಇಳಿದು ಚನ್ನಾಗಿ ಪರೀಕ್ಷಿಸಿದಾಗ

ಗಾಲಿಯ 'ಕೀಲು' ಅದು ಹೇಗೋ ಬಿಚ್ಚಿ ಹೋಗಿತ್ತು; ಇಷ್ಟೇ ಅಲ್ಲ ಒಂದು ಹೆಜ್ಜೆ ಮುಂದೆ ಇಟ್ಟಿದ್ದರೆ ಭಾರೀ ಅನಾಹುತವೇ ಆಗುತ್ತಿತ್ತು! ತುಂಬಿದ ಗಾಡಿ ಹೊರಳಿ ಬೀಳುತ್ತಿತ್ತು, ಮತ್ತು ಮೇಲೆ ಕುಳಿತ ಆಳಿಗೂ ಅಪಘಾತವಾಗುತ್ತಿತ್ತು. ಹುಚ್ಚನಿಗೆ ಹೊಡೆದ ಬಗ್ಗೆ ಆಳಿಗೆ ಬಹಳೇ ಪಶ್ಚಾತ್ತಾಪವಾಯಿತು. ಮುಂದೆ ಸಾಮಾನ್ಯವಾಗಿ ಯಾರೂ ಅದರ ಮೇಲೆ ಕೈ ಮಾಡುತ್ತಿರಲಿಲ್ಲ.

ಹುಚ್ಚನಿಗೆ ಆತ್ಮಾಭಿಮಾನ ಬಹಳ. ಅದು ಅನೇಕ ಸಂದರ್ಭದಲ್ಲಿ ಅದನ್ನು ವ್ಯಕ್ತಪಡಿಸಿದ್ದೂ ಉಂಟು.

ಒಮ್ಮೆ ಒಬ್ಬ ರೈತನ ಹೊಲದಲ್ಲಿ ಗೋದಿ ರಾಶಿ ಮಾಡಿ ೨೫ ಚೀಲಗಳನ್ನು ಒಂದೇ ಗಾಡಿಯಲ್ಲಿ ತುಂಬಿದ್ದರು. ಊರಿಯ ರೈತರೆಲ್ಲ ಕೂಡಿ 'ಹುಚ್ಚ'ನನ್ನೇ ಈ ಗಾಡಿಗೆ ಹೂಡುವದು ಎಂದು ನಿರ್ಧರಿಸಿ, ಅದನ್ನೇ ತಂದರು. ಸೋಮನಗೌಡರು ಅದರ ಮೈದಡವಿ, ಚಪ್ಪರಿಸಿ, ಗಾಡಿಯ ಬಳಿ ತಂದರು. ಅದು ಗಾಡಿಯ ಬಳಿ ಬರುತ್ತಲೇ ಮೊಳಕಾಲುಗಳ ಮೇಲೆ ಬಗ್ಗಿ ನಿಂತು ತನ್ನ ಕುತ್ತಿಗೆಯನ್ನು ನೊಗದ ಬುಡಕ್ಕೆ ಸೇರಿಸಿ ಜೋರಿನಿಂದ ಎತ್ತಿತು. ಆದರೆ ಗಾಡಿ ಏಳಲಿಲ್ಲ. ಸಂಜೆಗತ್ತಲು ಆವರಿಸಿತು. ಮತ್ತೆ ಒಂದೆರಡು ಸಲ ತನ್ನ ಸರ್ವಶಕ್ತಿಯನ್ನು ಪ್ರಯೋಗಿಸಿ ಎತ್ತಲು ಪ್ರಯತ್ನಿಸಿತು. ಗಾಡಿ ಅಲುಗಾಡಲಿಲ್ಲ. ಅದರ ಬಾಯಿಗೆ ಬುರುಗು ಬರಹತ್ತಿತು. ಸೋಮನ ಗೌಡರಿಗೆ ತಡೆಯಲಾಗಲಿಲ್ಲ. ಬುರುಗು ಸುರಿಸುತ್ತ, ತೇಕುತ್ತ ನಿಂತಿದ್ದ. ಹುಚ್ಚನನ್ನು ಅವರು ಕರೆದುಕೊಂಡು ಮನೆಗೆ ನಡೆದರು. ಆ ದೃಶ್ಯವನ್ನು ನೋಡುತ್ತಿದ್ದ ಕೆಲವು ರೈತರಿಗೂ ಕೆಡುಕೆನಿಸಿತಾದರೆ ಇನ್ನು ಕೆಲವರು ಒಳಗೊಳಗೇ ನಗುತ್ತಿದ್ದರು. ಮನೆಗೆ ಬರುತ್ತಲೇ ಆಳುಗಳು 'ಹುಚ್ಚ'ನಿಗೆ ಗುಗ್ಗರಿ ತಂದು ಇಟ್ಟರು. ಗೌಡರು, ಎತ್ತಿನ ಮೈ ತಿಕ್ಕಿದರು. ಅದು ಗುಗ್ಗರಿಯನ್ನು ತಿನ್ನಲೇ ಇಲ್ಲ; ನೀರನ್ನೂ ಮುಟ್ಟಲಿಲ್ಲ.

ಬೆಳಗಾಗುತ್ತಲೇ ಹೊರಗೆ ಜಗ್ಗತೊಡಗಿತು. ಆಳು ಸರಪಳಿಯನ್ನು ಬಿಚ್ಚಿದ. ಅದು ನೇರವಾಗಿ ಗಾಡಿಯ ಕಡೆಗೆ ಧಾವಿಸಿತು. ಕೆಲವರು ಇದನ್ನು ನೋಡಿದವರು, ಅದರ ಬೆನ್ನು ಹಿಂದೆ ಓಡತೊಡಗಿದರು. ಅದು ಗಾಡಿಯ ಬಳಿ ಬರುತ್ತಲೇ ಮೊದಲಿನಂತೆ ಮೊಳಕಾಲ ಮೇಲೆ ನಿಂತು ತನ್ನ ಕುತ್ತಿಗೆಯನ್ನು ನೊಗದ ಬುಡಕ್ಕೆ ಹಾಕಿ ಜೋರಿನಿಂದ ಕುತ್ತಿಗೆಯನ್ನು ಕೊಡಹಿತು. ಆಶ್ಚರ್ಯ!! ಗಾಡಿಯ ಈಸಿನ 'ಕುದುರೆಗೆ ಹಗ್ಗ ಕಟ್ಟಿ ನೆಲದಲ್ಲಿ ಹೂಳಿದ ಕಲ್ಲಿಗೆ ಬಲವಾಗಿ ಬಿಗಿಯಲಾಗಿತ್ತು. 'ಹುಚ್ಚ'ನ ಬಲವಾದ ಶಕ್ತಿಗೆ ಹಗ್ಗ ಕಿತ್ತಿ ಗಾಡಿ ಹೊರಳಿ ಇನ್ನೊಂದು ದಿಕ್ಕಿಗೆ ಮುಖ ಮಾಡಿ ನಿಂತಿತು. ಇದೆಲ್ಲವನ್ನೂ ನೋಡುತ್ತಿದ್ದ ತರುಣ ರೈತರು



ಕೇಕೆ ಹಾಕುತ್ತ ಊರಿಗೆ ಸುದ್ದಿ ಮುಟ್ಟಿಸಿದರು. ಇನ್ನೊಂದು ಬಲವಾದ ಎತ್ತನ್ನೂ, ಕರಡಿ ಮಜಲನ್ನೂ ತಂದು, ಮೆರವಣಿಗೆಯಲ್ಲಿ ರಾಶಿಯನ್ನು ತಂದರು. ಮನೆಯಲ್ಲಿಯ ಹೆಣ್ಣು ಮಕ್ಕಳು 'ಹುಚ್ಚ'ನಿಗೆ ಆರತಿ ಬೆಳಗಿದರು. 'ನಿವಾಳಿ' ತೆಗೆದು ಒಳಗೆ ಕರೆತಂದರು. ಗೋದಿಯನ್ನು ಒಡೆದು ಬುಟ್ಟಿಯಲ್ಲಿ ತಂದಿಟ್ಟರು. ಯಥೇಚ್ಛವಾಗಿ ತಿಂದು ನೀರು ಕುಡಿಯಿತು. ಗಾಡಿಯ ಕುದುರೆಗೆ ಹಗ್ಗ ಕಟ್ಟಿದ ಕುಹುಕಿಗಳನ್ನು ಹಿರಿಯರು ತರಾಟೆಗೆ ತೆಗೆದುಕೊಂಡರು.

ಹಂತಿಯ ಸಂದರ್ಭದಲ್ಲಿ ಎಂದೂ ಅದಕ್ಕೆ ಹಗ್ಗ ಕಟ್ಟುತ್ತಿರಲಿಲ್ಲ. ಅದು ತಾನಾಗಿಯೇ ಉಳಿದ ಎತ್ತುಗಳ ಜೊತೆಯಲ್ಲಿ ಕೊನೆಯಲ್ಲಿ ತಿರುಗುತ್ತಿತ್ತು. ಅದಕ್ಕೆ ಮುಪ್ಪು ಆಡರಿಸಿದಂತೆ ಅದರ ಕೆಲಸ ಕಡಿಮೆ ಮಾಡಲಾಯಿತು. ಅದು ತೀರಿಕೊಂಡಾಗ ಅಸ್ಕಿಯ ರೈತರ ಕಣ್ಣೀರು ಕೋಡಿಯಾಗಿ ಹರಿಯಿತು. ಅದರ ಅಂತಿಮ ಯಾತ್ರೆಯನ್ನು ದೊಡ್ಡ ಪ್ರಮಾಣದಲ್ಲಿ ಬಾಜಾ ಬಜಂತ್ರಿಗಳೊಂದಿಗೆ ಹೊರಡಿಸಲಾಯಿತು. ಹೊಲದಲ್ಲಿ, ಸಮಾಧಿ ಮಾಡಿದರು. ಆ ಸಮಾಧಿಯ ಬಳಿ ಈಗ ಯಾವ ಗುರುತೂ ಇಲ್ಲ; ಬರಹವೂ ಇಲ್ಲ. ಮೂಕ ಬಸವಣ್ಣನ– ಹುಚ್ಚನ ಕಥೆ– ಮೂಕವದನರಾಗಿ ಕೇಳಬೇಕೇ ಹೊರತು ಅಲ್ಲಿ ಯಾವ ಕುರುಹೂ ಇಲ್ಲ, ಸೋಮನ ಗೌಡರೂ ತೀರಿಕೊಂಡು ೧೭–೧೮ ವರುಷಗಳಾಗಿವೆ. ಇವೆಲ್ಲ ಘಟನೆಗಳನ್ನು ಕಣ್ಣಾರೆ ಕಂಡವರು. ಸಾಕಷ್ಟು ಜನ ಇನ್ನೂ ಅಸ್ಕಿಯಲ್ಲಿದ್ದಾರೆ. ✡



ಚಂದ್ರಗುಪ್ತನ ಕಾಲದಲ್ಲಿ....

ಹೆಂಡದಂಗಡಿಗಳನ್ನು ಗುತ್ತಿಗೆಗೆ ಕೊಡಲಾಗುತ್ತಿತ್ತು. ಗಡಂಗಿಗೆ ಬರುವವರು ಸಂಶಯ ಚರಿತ್ರರಾದುದರಿಂದ ಅವರ ಗುಟ್ಟನ್ನು ಹೊರಗೆಡಹುವದೂ ಗುತ್ತಿಗೆದಾರನ ಕೆಲಸವಾಗಿತ್ತು. ಗಿರಾಕಿಗಳಿಗೆ ಪ್ರತ್ಯೇಕ ಮಲಗುವ ಕೋಣೆಗಳಿರಬೇಕಲ್ಲದೆ ಅಲ್ಲಿ ಗಂಧ ಮಾಲ್ಯ ಪಾನೀಯಗಳ ವ್ಯವಸ್ಥೆ ಇರಬೇಕು. ರೂಪವತಿಯರಾದ ವೇಶ್ಯೆಯರ ಮುಖಾಂತರ ಅವರ ಗುಟ್ಟನ್ನು ಅರಿತುಕೊಳ್ಳಬೇಕು.

ಪ್ರಮತ್ತರಾಗಿ ಮಲಗಿದವರ ಹಣ ಅಥವಾ ಒಡವೆಗಳ ಅಪಹರಣವಾದರೆ ಗುತ್ತಿಗೆದಾರನು ಹಾನಿ ತುಂಬಿ ಕೊಡಬೇಕಾಗುವದು.

ಗಡಂಗದ ಹೊರಗೆ ಹೆಂಡವನ್ನು ಒಯ್ಯಲು ಪ್ರತಿಬಂಧವಿತ್ತು ಆದರೂ ಸದ್ಗೃಹಸ್ಥನಿಗೆ ಪರಿಮಿತ ಮಿತಿಯಲ್ಲಿ ಮನೆಗೊಯ್ಯಲು ಅನುಮತಿ ನೀಡಲಾಗುತ್ತಿತ್ತು. ಉತ್ಸವ ಸಮಾರಂಭಗಳ ಕಾಲದಲ್ಲಿ ನಾಲ್ಕು ದಿನ ಅನಿರ್ಬಂಧ ಮದ್ಯಪಾನ ಸಾರಲಾಗುತ್ತಿತ್ತು.

—"ಕೌಟಿಲೀಯ ಅರ್ಥಶಾಸ್ತ್ರ"

ರೈಲಿನಲ್ಲಿಯ ಅಲಾರ್ಮ್ ಸರಪಳಿ

ಶ್ಯಾಮ ಹುದ್ದಾರ

ರೈಲುಗಾಡಿಗಳ ಓಡಾಟ ಪ್ರಾರಂಭವಾದ ಮೊದಮೊದಲು ರೈಲಿನ ಡಬ್ಬಿಗಳಲ್ಲಿದ್ದ ಸರಪಳಿ ಸಾಮಾನ್ಯ ಪ್ರಯಾಣಿಕರ ಅನುಕೂಲತೆಗಾಗಿ ಇದೆಯೆಂಬುದು ಆಗಿನ ಜನರಿಗೆ ತಿಳಿದಿರಲಿಲ್ಲ. ಯಾಕೆಂದರೆ, ಬ್ರಿಟಿಶರ ಆಡಳಿತದಲ್ಲಿ ಅಧಿಕಾರಿಗಳಿಂದ ಹಿಡಿದು ರೈಲು ನಡೆಸುವ ಡ್ರೈವ್ಹರರೂ ಆ ಸರಪಳಿಯ ವಿಷಯವನ್ನು ಗೌಪ್ಯವಾಗಿಟ್ಟುದುದಲ್ಲದೆ ಪ್ರತಿಯಾಗಿ ಜನತೆಯಲ್ಲಿ ಒಂದು ತರದ ಭಯ–ಭೀತಿ ಹುಟ್ಟುವಂತೆ ವರ್ತಿಸುತ್ತಿದ್ದರು. ಇದರಿಂದಾಗಿ ಆ ಸರಪಳಿಯ ಬಗೆಗೆ ಸಾರ್ವಜನಿಕರಲ್ಲಿ ಭಯಗ್ರಸ್ತ ಭಾವನೆಯೆ ಹೆಚ್ಚಾಯಿತು.

ಈ ರೀತಿ ಹಬ್ಬಿಕೊಂಡ ಹೆದರಿಕೆಯನ್ನು ಹೋಗಲಾಡಿಸಿ, ಸರಪಳಿಯ ಪೂರ್ಣ ಪ್ರಯೋಜನ ಎಲ್ಲ ಪ್ರಯಾಣಿಕರಿಗೂ ತಿಳಿಯುವಂತೆ ಮಾಡಲು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಮಹಾರಾಷ್ಟ್ರದ ಧುಳಿಯ ದಿವಂಗತ ವಿ. ಗ. ಜಾವಡೆಕರ ಎಂಬವರ ಮುಖಂಡತ್ವದಲ್ಲಿ ರಾಷ್ಟ್ರವ್ಯಾಪಿ ದೊಡ್ಡ ಚಳವಳಿಯೇ ನಡೆಯಿತು. ಜಾವಡೇಕರರು ಪ್ರಸಿದ್ಧ ವಕೀಲರು. ಇವರು ಸ್ವತಃ ಹಾಗೂ ತಮ್ಮ ನೇತೃತ್ವದಲ್ಲಿ ಇನ್ನಿತರ ಜನರಿಂದ ಬೇರೆ ಬೇರೆ ಕಾರಣಕ್ಕಾಗಿ ಸರಪಳಿ ಜಗ್ಗಿಸಿ, ಓಡುವ ರೈಲುಗಾಡಿಯನ್ನು ನಿಲ್ಲಿಸಹತ್ತಿದರು. ನ್ಯಾಯಾಲಯಗಳಲ್ಲಿಯೂ ಈ ಕುರಿತಾದ ಖಟ್ಲೆಗಳನ್ನು ಉಚಿತವಾಗಿ ನಡೆಸಿದರು. ಬ್ರಿಟಿಶ್ ಕಂಪನಿ ಸರಕಾರದ ಪುಸ್ತಕದಲ್ಲಿ ಜನತೆಯಿಂದ ಮರೆಮಾಡಿ ಇಟ್ಟ ರೈಲಿನಲ್ಲಿಯ ಸರಪಳಿಯ ಕಾನೂನನ್ನು ಜಾವಡೇಕರರು ಸಾರ್ವಜನಿಕರಿಗೆ ತಿಳಿಯುವಂತೆ ಬಯಲಿಗೆ ತಂದರು.

ರೈಲುಗಾಡಿಯಲ್ಲಿರುವ ಸರಪಳಿಗೆ ಅಲಾರ್ಮ್ ಚೈನ್, ಡೇಂಜರ್ ಸಿಗ್ನಲ್–ಎಚ್ಚರಿಕೆಯ ಸರಪಳಿ–ಮುಂತಾಗಿ ಕರೆಯಲಾಗಿದ್ದು, ಪ್ರತಿಯೊಂದು ಡಬಿಯಲ್ಲಿ ಹಾಯುವ ಸರಪಳಿಗೆ ಹಾಕಿದ ಹಿಡಿಕೆಯ ಕೆಳಬದಿಗೆ ಕೆಂಪು ಬಣ್ಣದಿಂದ ಮುದ್ರಿಸಿದ ಒಂದು ಬೋರ್ಡ್ ಹಾಕಲಾಗಿದೆ. ಅದರಲ್ಲಿ ಕೆಳಗಿನ ವಿಷಯವನ್ನು ಬರೆದಿರುತ್ತದೆ.

ALARM CHAIN

To stop train, pull chain.
penalty for improper use Rs, 50/–

"Improper use"– ದುರುಪಯೋಗ ಅಂದರೇನು ? ಅರ್ಥಾತ್ 'ಯೋಗ್ಯ ಉಪಯೋಗ'ವೆಂದರೇನು ? ಎಂಬ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಪ್ರವಾಸಿಕರ ಲಕ್ಷ್ಯಕ್ಕೆ ಯಾವಾಗಲೂ ಬರುತ್ತಿರಲಿಲ್ಲ. Alarm Chain— ಎಚ್ಚರಿಕೆಯ ಸರಪಳಿಯನ್ನು

ಭಯಂಕರ ಸಂಕಟ ಸಮಯದಲ್ಲಿ ಮಾತ್ರ ಉಪಯೋಗಿಸುವುದೆಂದೇ ಜನತೆಯ ಸಾಮಾನ್ಯ ಕಲ್ಪನೆಯಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಈ ಬೋರ್ಡ್ ಹೆಚ್ಚಾಗಿ ಇಂಗ್ಲಿಷ್ ಭಾಷೆಯೊಂದರಲ್ಲಿಯೇ ಇದ್ದವು. ಇಂಗ್ಲೀಷ ಭಾಷೆ ಬಹು ಜನರಿಗೆ ತಿಳಿಯದ್ದರಿಂದ ಸರಪಳಿಯ ಸಾಧಕ-ಬಾಧಕದ ವಿಚಾರ ಇದ್ದಿರಲಿಲ್ಲ.

ಆದರೆ ರೈಲಿನಲ್ಲಿರುವ ಸರಪಳಿಯ ನಿಜವಾದ ಹೆಸರು Means of Communication between the guard and the passengers (ಗಾರ್ಡ ಮತ್ತು ಪ್ರಯಾಣಿಕರ ನಡುವಿನ ಸಂಪರ್ಕ ಸಾಧನ) ಎಂದಿದೆ. ಕೇಂದ್ರ ಸರಕಾರದ ಆಜ್ಞೆ ಇರದಿದ್ದರೂ ತಾವೇ ಸ್ವತಃ ರೈಲಿನಲ್ಲಿ ಈ ಸರಪಳಿಯ ವ್ಯವಸ್ಥೆ ಮಾಡಿಕೊಳ್ಳಲು ರೈಲ್ವೆ ಇಲಾಖೆಯ ಯಾವದೇ ಕಾನೂನು ನಿರ್ಬಂಧಿಸಿದ್ದಿಲ್ಲ. ಬಲು ಹಿಂದೆ ಓಡಾಡುತ್ತಿದ್ದ 'ಬಾರ್ಸಿ ಲೈಟ' ರೈಲಿನ ವಿಷಯದಲ್ಲಿ ಕೇಂದ್ರ ಸರಕಾರವು ಅಂಥ ಆಜ್ಞೆ ಮಾಡಿರಲಿಲ್ಲವಾದ್ದರಿಂದ ಸಂದೇಶ-ಸರಪಳಿಯ ವ್ಯವಸ್ಥೆ ಬಾರ್ಸಿ ಲೈಟ್ ರೈಲು ಇರುವ ವರೆಗೂ ಅವುಗಳಲ್ಲಿ ಇದ್ದಿಲ್ಲ. ಆದರೆ ಕೇಂದ್ರ ಸರಕಾರದ ಆಜ್ಞೆಯ ಪ್ರಕಾರ ಒಂದು ವೇಳೆ ರೈಲ್ವೆ ಇಲಾಖೆಯವರು ತಮ್ಮ ಗಾಡಿಗಳಲ್ಲಿ ಸರಪಳಿಯ ವ್ಯವಸ್ಥೆ ಮಾಡಲು ತಪ್ಪಿದರೆ, ರೈಲ್ವೆ ಆಕ್ಟ ೯೪ ರ ಪ್ರಕಾರ ಅದು ಅಪರಾಧವೆನಿಸುತ್ತದೆ.

ರೈಲ್ವೆ ಆಕ್ಟಿನ ೧೦೮ನೆಯ ಕಲಮಿನಲ್ಲಿ ಈ 'ಸಂದೇಶ-ಸರಪಳಿ'ಯನ್ನು ಎಂಥ ಪರಿಸ್ಥಿತಿಯಲ್ಲಿ ಉಪಯೋಗಿಸಬಾರದೆಂಬ ಬಗ್ಗೆ ವಿವರಣೆ ಕೊಡಲಾಗಿದೆ. ಅದು ಹೀಗಿದೆ:

"If a passenger without reasonable and sufficient cause makes use of the means of communication, he shall be punished with fine which may extend to Rs. 50/-."

ಅಂದರೆ ಯೋಗ್ಯ ಹಾಗೂ ಸಬಲ ಕಾರಣವಿಲ್ಲದೆ ಯಾರು ಈ ಸರಪಳಿ ಎಳೆಯುತ್ತಾರೋ ಅವರಿಗೆ ೫೦/- ರೂಪಾಯಿ ವರೆಗೂ ದಂಡ ವಿಧಿಸಲಾಗುವುದು. ಭಯಂಕರ ಸ್ವರೂಪದ ಆಪತ್ಕಾಲದಲ್ಲಿದ್ದಾಗ ಸರಪಳಿ ಎಳೆದು ಗಾಡಿ ನಿಲ್ಲಿಸುವ ಹಕ್ಕು ಪ್ರಯಾಣಿಕರಿಗೆ ಇರುವುದರ ಜೊತೆಗೆ ಇನ್ನಿತರ ಸಂದರ್ಭದಲ್ಲಿ ಯೋಗ್ಯ ಹಾಗೂ ಸಕಾರಣವೆಂದು ಕಂಡು ಬಂದಾಗಲೂ ಸಹ ಸರಪಳಿ ಎಳೆದು ಗಾಡಿಯನ್ನು ನಿಲ್ಲಿಸಬಹುದೆಂಬ ಮಾತು ಮೇಲಿನ ವ್ಯಾಖ್ಯೆಯಿಂದ ಸ್ಪಷ್ಟವಾಗುತ್ತದೆ.

೧. ಮರೆವು ಸಕಾರಣವಲ್ಲ

ನವಸಾರಿ ರೈಲು ನಿಲ್ದಾಣದಲ್ಲಿ ಗಾಡಿ ನಿಂತಿದ್ದಾಗ ಒಬ್ಬ ಪ್ರಯಾಣಿಕ ಗಾಡಿಯಿಂದ ಕೆಳಗಿಳಿದು ಪ್ಲಾಟ್ ಫಾರ್ಮಿನ ಬೆಂಚಿನ ಮೇಲೆ ಬದಿಯಲ್ಲಿ ತನ್ನ ಕೋಟು ಇಟ್ಟು ಕುಳಿತು



ಕೊಂಡಿದ್ದನು. ಅವನು ಯಾವುದೋ ಗುಂಗಿನಲ್ಲಿರುವಾಗ ಗಾಡಿ ಹೊರಟಿತು. ಈ ಪ್ರಯಾಣಿಕ ಗಾಡಿ ಹೋಗುತ್ತದೆಂದು ಅದನು ಹತ್ತಬೇಕೆಂಬ ಅವಸರದಲ್ಲಿ ತನ್ನ ಕೋಟನ್ನು ಅಲ್ಲಿಯೇ ಮರೆತು ಗಾಡಿ ಏರಿದನು. ಕೋಟಿನಲ್ಲಿ ಬೆಲೆಯುಳ್ಳ ವಸ್ತುಗಳಿದ್ದವು. ಅವನು ಕೂಡಲೇ ಸರಪಳಿ ಎಳೆದು, ಗಾಡಿ ನಿಲ್ಲಿಸಿ ಕೋಟು ತೆಗೆದುಕೊಂಡ ಆದರೆ ಗಾಡಿಯನ್ನು ನಿಲ್ಲಿಸಲು ಇದು ಸಬಲ ಕಾರಣವಲ್ಲವೆಂದು ಹೈಕೋರ್ಟ್ ತೀರ್ಪು ನೀಡಿತು.

೨. ಕಾಗದ-ಪತ್ರಗಳಿಗಾಗಿ–

ಒಬ್ಬ ಸಾವುಕಾರನು ತನ್ನ ಸಾಲಗಾರನ ಮೇಲೆ ಸಾಲದ ವಸೂಲಿಗಾಗಿ ಕೋರ್ಟಿನಲ್ಲಿ ದಾವೆ ಹೂಡಿದ್ದನು. ನ್ಯಾಯ ವಿಚಾರಣೆ ಮುಗಿದ ನಂತರ ಅವರಿಬ್ಬರೂ ತಮ್ಮ ಊರಿಗೆ ಹೊರಟರು. ಕರ್ಮಧರ್ಮ ಸಂಯೋಗದಿಂದ ಅವರಿಬ್ಬರೂ ರೈಲಿನ ಒಂದೇ ಡಬ್ಬಿಯಲ್ಲಿ ಕೂಡಿದರು. ಸಾವುಕಾರನ ಹತ್ತಿರ ಖಾತೆ-ಕಿರ್ದಿಯ ಗಂಟು ಒಂದಿತ್ತು. ಆ ಖಾತೆ-ಕಿರ್ದಿಗಳ ಆಧಾರದಿಂದ ತನ್ನ ಮೇಲೆ ದಾವೆ ಹೂಡಿದ್ದಾನೆಂದು ತಿಳಿದ ಸಾಲಗಾರನು ಆ ಗಂಟನ್ನು ಇಲ್ಲದಂತೆ ಮಾಡಬೇಕೆಂದು ರೈಲು ಕಿಡಿಕಿಯಿಂದ ಅದನ್ನು ಹೊರಗೆ ಒಗೆದು ಬಿಟ್ಟನು. ಆಗ ಆಗ ಸಾವುಕಾರನು ಸರಪಳಿ ಜಗ್ಗಿ ಗಾಡಿ ನಿಲ್ಲಿಸಿ ತನ್ನ ಲೆಕ್ಕ-ಪತ್ರದ ಗಂಟನ್ನು ತಿರುಗಿ ತಂದನು. ಈ ಸಂದರ್ಭದಲ್ಲಿ ಹೈಕೋರ್ಟ್ ಸರಪಳಿ ಎಳೆದುದು ಸಕಾರಣವೆಂದು ನಿರ್ಣಯ ಕೊಟ್ಟಿತು.

೩. ಡಬ್ಬಿಯಲ್ಲಿ ಗದ್ದಲ ಹೆಚ್ಚಾದರೆ

ಇಂಟರ್ ಕ್ಲಾಸಿನಲ್ಲಿ ಪ್ರವಾಸ ಮಾಡುವಾಗ ಅದರಲ್ಲಿರುವ ಸ್ಥಳಗಳಿಗಿಂತ ಹೆಚ್ಚು ಪ್ರಯಾಣಿಕರು ಒಳಸೇರಿ ಕುಳಿತಿದ್ದಾರೆಂದು ಸರಪಳಿ ಎಳೆದು ಗಾಡಿಯನ್ನು ನಿಲ್ಲಿಸಲಾಯಿತು. ಇದು ಯೋಗ್ಯಕಾರಣವಾಗಿದೆಯೆಂದು ಹೈಕೋರ್ಟ್ ನಿರ್ಣಯ ಕೊಟ್ಟಿತಲ್ಲದೆ ಗಾಡಿಯಲ್ಲಿ ಹೆಚ್ಚು ಗದ್ದಲವಾಗದಂತೆ ನೋಡುವದು ರೇಲ್ವೆ ಸಿಬ್ಬಂದಿಗಳ ಕರ್ತವ್ಯವಾಗಿದೆಯೆಂದೂ ಆದರೆ ಅವರು ತಮ್ಮ ಕರ್ತವ್ಯ ತಪ್ಪಿದ್ದನ್ನು ಲಕ್ಷ್ಯಕ್ಕೆ ತಂದ ಬಗೆಗೆ ನೌಕರರು ಸರಪಳಿ ಎಳೆದವರಿಗೆ ಕೃತಜ್ಞರಾಗಿರಬೇಕೆಂದೂ ಹೈಕೋರ್ಟ್ ತನ್ನ ಅಭಿಪ್ರಾಯ ವ್ಯಕ್ತಪಡಿಸಿತು.

ಪ್ರಯಾಣಿಕರಿಗೆ ರೈಲಿನಲ್ಲಿಯ ಸರಪಳಿ ಎಳೆಯುವ ಹಕ್ಕು ಇದೆ ಆದರೆ ಅದನ್ನು ಕೃತಿಗಿಳಿಸುವಾಗ ಸಂದರ್ಭದ ಮಹತ್ವವನ್ನು ಅರಿತುಕೊಳ್ಳುವುದು ಅವಶ್ಯ. ☼



ತನುವಿನ ಅವಲೋಹನ ಕಡಿಸಿ, ಮನದ ಸಂಚಲವ ನಿಲಿಸಿ
ಸಕಲ ಕರಣಂಗಳನರಿವಿಂಗಾಹುತಿಯಿಕ್ಕಿ
ಸುಜ್ಞಾನ ಪ್ರಭೆಯನ್ನುಟ್ಟು, ಸುಜ್ಞಾನ ಪ್ರಭೆಯ ಹೊದೆದು
ಸುಜ್ಞಾನ ಪ್ರಭೆಯ ಸುತ್ತಿ, ಸುಜ್ಞಾನ ಪ್ರಭೆಯ ಹಾಸಿ
ಮಹಾಜ್ಞಾನದಲ್ಲಿ ನಿರ್ಭಾವದಲ್ಲಿ ನಿರ್ಭಾವ ಸಂಪನ್ನನಾದ ಮಡಿವಾಳನ
ಮಡಿಯ ಪ್ರಸಾದವ ನಾನು ಹೊದೆದ ಕಾರಣ
ನಿರ್ಮಳನಾದೆನು. ನಿಜೈಕ್ಯನಾದೆನು, ನಿಶ್ಚಿಂತನಾದೆನು

–ಪ್ರಭುದೇವರು

ಅವರಿಗೆ ಮರಣ ಬಂದಾಗ

ಬಾದಲ

"ಸಾಕಾಯಿತ್ರವ್ವಾ ನಮ್ಮ ಅತ್ತೀ ಕಾಲಾಗ, ಇದ್ದು ಮನೀ ಸೇರಲಿಲ್ಲಾ, ಸತ್ತು ಸ್ವರ್ಗ ಸೇರಲಿಲ್ಲ" ಎಂದು ಶಾಲಿನಿ ತನ್ನ ಗೆಳತಿ ಮಾಲಿನಿಗೆ ಹೇಳುತ್ತಿದ್ದಳು.

"ಅಂದ್ಹಂಗ, ಇನ್ನೂ ಗುಣಾನ ಆಗಿಲ್ಲೇನು ನಿಮ್ಮ ಅತ್ತಿ. ಅರ್ಧಾಂಗ ವಾಯು ಹೊಡೆದು ಐದು ವರುಷ ಆದರೂ ಆಗಿರಬೇಕಲ್ಲ. ಆತು ಅತ್ತೆಯ ಸೇವಾ ಮಾಡಿದ ಪುಣ್ಯ ಸಿಗತದ ನಿನಗ."

"ಗುಣ ಅಂತ ಎಲ್ಲೀದ ಬಂತು, ದಿನದಿನಕ್ಕೂ ಅವರ ಪ್ರಕೃತಿ ಕೆಡಲಿಕ್ಕೇ ಹತ್ತೇದ. ಡಾಕ್ಟರರೂ ಬಾಯಿ ಬಿಟ್ಟು ಹೇಳವಲ್ಲರು, ನಮ್ಮವರಿಗೂ ತಾಯಿ ಮ್ಯಾಲೆ ಅಂತಃಕರಣ ಉಕ್ಕಿ ಹರಿಯುಲಿಕ್ಕೆ ಹತ್ತೇದ. ಎಷ್ಟು ದುಡ್ಡು ಸುರೀತಾರೊ ಸುರೀಲಿ, ತಾಯೀ ಆರೈಕೆಗೆ. ಮನ್ಯಾಗ ಮಕ್ಕಳು ಅಂಗೀ ಕಾಣದ ಕೂತಾವ."

"ಬರೂ ಫೀ ಬಿಟ್ಟು ಡಾಕ್ಟರರು ಏನ ಮಾಡತಾರ, ಅದರಾಗ್ಗ ಕೊಡುವವರು ಇರಲಿಕ್ಕೆ, ಅಲ್ಲ ಶಾಲಿ, ಇದ್ದಷ್ಟು ದಿವಸ ಸಂಭಾಳಿಸಬೇಕವ್ವ. ಏನು, ಗುಣಾ ಆಗೂದಿಲ್ಲಂಥ ಅವರ ವಿಷಾ ಹಾಕಿ ಕೊಲ್ಲಲಿಕ್ಕೆ ಬರತದ" ಎಂದು ಮಾಲಿನಿಯ ಸಮಾಧಾನ.

ಮನೆಯಲ್ಲಿ ಆ ಮುದಿ ಅತ್ತೆಯೊ ದೇವರು ನನ್ನ ಯಾಕ ಒಯ್ಯಲೊಲ್ಲ ಅಂತ ದಿನಾಲೂ ಹಲಬುತ್ತಿರುತ್ತಾಳೆ. ಆ ಮುದುಕಿಯನ್ನು ಆಕೆಯ ಯಮಯಾತನೆಗಳಿಂದ ಹೇಗೆ ಮುಕ್ತ ಮಾಡಬೇಕು ಎಂಬುದು ಮಗ— ಸೊಸೆ ಇಬ್ಬರಿಗೂ ಗೊತ್ತಿಲ್ಲ. ಹಣೆಯುಬರಹದಾಗ ಅನುಭೋಗಿಸುವದು ಬರದದ ಅಂತ ದಿನಾ ಕಳೆಯುತ್ತಿದ್ದಾರೆ.

ಇನ್ನೊಬ್ಬ ಮುದುಕನಿಗೆ ಕ್ಷಯ. ಯಾವ ಔಷಧೋಪಚಾರಕ್ಕೂ ಅದು ಮಣಿದಿಲ್ಲ. ಅಥವಾ ಅಷ್ಟು ದುಬಾರಿಯ ಔಷಧೋಪಚಾರ ಪಡೆಯಲು ಆತನಿಗೆ ಸಾಧ್ಯವಿಲ್ಲ. ಮಗನ ಅಂದಿನ ಗಳಿಕೆ ಕುಟುಂಬದ ಅಂದಿನ ಗಂಜಿಗೂ ಸಾಲುವದಿಲ್ಲ. ಸಾಮಾನ್ಯ ಔಷಧ ಪಥ್ಯಗಳಿಂದ ಆತ ಜೀವ ಹಿಡಿದುಕೊಂಡಿದ್ದಾನಷ್ಟೆ. ಆತನ ಇಂಥ ದುರ್ಭರ ಬಾಳಿಗೆ ಮುಕ್ತಿ ಎಲ್ಲಿದೆ? ಆತ ಆತ್ಮಹತ್ಯೆ ಮಾಡಿಕೊಳ್ಳಬೇಕೆ?

ಇನ್ನೊಬ್ಬ ಪ್ರೌಢ. ವಯಸ್ಸು ಸುಮಾರು ೫೦ರ ಅಂಚಿನಲ್ಲಿರಬೇಕು, ಆತನಿಗೆ ಕ್ಯಾನ್ಸರ್ ಎಂದು ಡಾಕ್ಟರರು ಹೇಳಿ ಎರಡು ವರ್ಷಗಳಾಗಿವೆ. ಅದು ಆತನ ಗಂಟಲನ್ನು ಹಿಡಿದಿರುವದರಿಂದ ನೀರು ಕುಡಿಯಲೂ ಸಾಧ್ಯವಿಲ್ಲ. ಅವನಿಗಾಗಿ ಆತನ ಮಗ ತನ್ನ ಜೀವ ಸಣ್ಣ ಮಾಡಿಕೊಳ್ಳುತ್ತಿದ್ದಾನೆ. ಮನೆಯಲ್ಲಿಯ ತಾಯಿ, ತಾನು, ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳಿಗೆ ಒಪ್ಪೊತ್ತು ಅರೆಹೊಟ್ಟೆಯಿಂದಾದರೂ ಇಟ್ಟು ತಂದೆಯ ಚಿಕಿತ್ಸೆಗೆ ಸಾವಿರಗಟ್ಲೆ ಹಣ ಸುರಿಯುತ್ತಿದ್ದಾನೆ. ಡಾಕ್ಟರರೂ ಆಸೆ ಬಿಟ್ಟಿದ್ದಾರೆ. ಆದರೆ ಆ ಪ್ರೌಢ ರೋಗಿಗೆ ತನ್ನ ಜೀವದ ಮೇಲಿನ ಆಸೆ ಹೋಗಿಲ್ಲ. ತನ್ನ ಮಗ ತನ್ನನ್ನು ಇನ್ನೂ ಒಳ್ಳೆಯ ಡಾಕ್ಟರನಿಗೆ

ತೋರಿಸುತ್ತಿಲ್ಲ ಎಂದು ಆತನ ಗೊಣಗಾಟ. ಈ ತಂದೆ ಸತ್ತು ಹೋದರೆ ಎರಡು ಹೊತ್ತು ಹೊಟ್ಟೆ ತುಂಬ ಊಟ ಆದರೂ ಮಾಡಬಹುದು ಎಂದು ಮಗ ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿದ್ದಾನೆ. ತಾಯಿ ಇದ್ದಾಳೆ. ಬಹಿರಂಗವಾಗಿ ಈ ಮಾತನ್ನು ಆತ ಆಡುವಂತಿಲ್ಲ. ಇನ್ನು ಆ ತಂದೆಯ ಚಿಕಿತ್ಸೆಯ ವೆಚ್ಚ ಆತನಿಗೆ ತಲೆ ಭಾರವಾಗಿ ಬಿಟ್ಟಿದೆ.

ಇನ್ನೊಂದು ಅನುಕಂಪನೀಯ ಉದಾಹರಣೆ. ಯುವಕನೊಬ್ಬ ಸ್ಕೂಟರ ಅಪಘಾತದಲ್ಲಿ ಕೈ ಕಾಲು ಮುರಿದುಕೊಂಡು ಪ್ರಜ್ಞಾಹೀನ ಅವಸ್ಥೆಯಲ್ಲಿದ್ದಾನೆ. ಹಾಗೆ ಎಚ್ಚರಿಲ್ಲದೆ ಆತ ಆಸ್ಪತ್ರೆಯಲ್ಲಿ ಬಿದ್ದುಕೊಂಡೇ ಹತ್ತು ವಾರಗಳಾಗಿವೆ. ತೆರೆದ ಕಣ್ಣು ತೆರೆದಂತೆಯೇ ಇವೆ. ತಂದೆ, ತಾಯಿ ಯಾರು ಬಂದರೂ ಗುರುತಿಸಲು ಆತನಿಗೆ ಅಸಾಧ್ಯ. ಡಾಕ್ಟರರ ಚಿಕಿತ್ಸೆಯ ಪರಿಣಾಮವಾಗಿ ಎದೆ ಹೊಡೆದುಕೊಳ್ಳುತ್ತಿದೆ. ಉಸಿರಾಟ ಇನ್ನೂ ಇದೆ. ತಂದೆಗೊ ಮಗನನ್ನು ಬದುಕಿಸಿಕೊಳ್ಳುವ ಕಾತರ. ಆದರೆ ಯಾತನೆ ಅನುಭವಿಸುವುದು ಆ ನಿಶ್ಚೇಷ್ಟ ಯುವಕ. ತಂದೆಯ ಆಶೆ ಈಡೇರುವಂತಿಲ್ಲ. ಡಾಕ್ಟರರು ಇದನ್ನರಿತಿದ್ದರೂ ತಂದೆಗೆ ನಿರಾಶೆಯ ಉತ್ತರ ನೀಡುವಂತಿಲ್ಲ. ತಂದೆಯ ಪ್ರಯತ್ನ ಆತನ ಯಾತನೆಗಳನ್ನು ಹೆಚ್ಚಿಸುತ್ತಿದೆ ಅಷ್ಟೆ.

ಈ ಎಲ್ಲ ದೃಷ್ಟಾಂತಗಳನ್ನು ನಮ್ಮ ಸುತ್ತ ಮುತ್ತಲಿನ ಜೀವನದಿಂದಲೇ ಆಯ್ದುಕೊಳ್ಳಲಾಗಿದೆ. ನಿಜವಾದ ಕಣ್ಣಿದ್ದವರಾರಿಗೂ ಇವು ಗೋಚರಿಸದಿರವು. ಈ ಎಲ್ಲ ಸಂದರ್ಭಗಳಲ್ಲಿ ಮರಣವೇ ಮುಕ್ತಿ ಎಂಬುದು ಸ್ಪಷ್ಟ. ಆದರೆ ಇಂಥ ರೋಗಿಗಳನ್ನು, ಅವರ ಇಚ್ಛೆಯಂತೆಯೇ ಆಗಲಿ, ಜೀವನ್ಮುಕ್ತ ಮಾಡಲು ಕಾಯಿದೆಯ ಪ್ರಕಾರ ಅವಕಾಶ ಇಲ್ಲ. ಇಷ್ಟೇ ಅಲ್ಲ, ಭಾರತೀಯರಲ್ಲಿ ಯಾರೂ ಸ್ವಂತದ ಮರಣವನ್ನು ಬೇಡಿ ಪಡೆವ ಎದೆಗಾರಿಕೆ ತೋರಲಾರರು. ರೋಗವು ಉಲ್ಬಣಾವಸ್ಥೆಯಲ್ಲಿರುವಾಗ, ಅದು ಚಿಕಿತ್ಸೆಯಿಂದ ಅಲ್ಪ ಸ್ವಲ್ಪ ಉಪಶಮನವಾಗುವವರೆಗೆ ಮಾತ್ರ, 'ದೇವರೇ ನನ್ನನ್ನು ಒಯ್ಯಬಾರದೇ' ಎಂದು ನರಳುವರುಂಟು. ಪೂರ್ತಿಯಾಗಿ ಸ್ವೇಚ್ಛೆಯಿಂದ ಪ್ರಾಣತ್ಯಾಗಕ್ಕೆ ಯಾವ ರೋಗಿಯೂ ಎಂಥ ರೋಗಿಯೂ ಸಿದ್ಧನಾಗಲಾರ ಎಂಬುದು ಅನುಭವದ ಮಾತು. ಶರ್ಯತ್ತಿನ ಕುದುರೆಗಳು ಕಾರಣಾಂತರಗಳಿಂದ ಊನಾದಾಗ ಅವನ್ನು ಗುಂಡಿಟ್ಟು ಕೊಂದು ಬಿಡುತ್ತಾರೆ ಎಂದು ಕೇಳಿದ್ದೇವೆ. ಜೀವನದ ಶರ್ಯತ್ತಿನಲ್ಲಿ ಓಡಲಾಗದ ಮೋಳಿನಂಥವರನ್ನು ಉಪಾಯಾಂತರಗಳಿಂದ ಜೀವನ್ಮುಕ್ತರನ್ನಾಗಿಸಿದರೆ ತಪ್ಪೇನು! ಭಾರತೀಯ ಸಂಸ್ಕೃತಿ ಅಂಥದಕ್ಕೆ— ಅಸ್ಪದ ಕೊಡುವುದಿಲ್ಲ ನಿರುಪಾಯಂದ ಮಾತು.

ವಿದೇಶದಲ್ಲಿಯ ಇಂಥ ಅಸಾಧ್ಯ ರೋಗಿಯೊಬ್ಬನ ಕುರಿತು ತಿಳಿದು ಬಂದ ಕಥೆ ಇಂತಿದೆ. ಆತನಿಗೂ ಪಾರ್ಶ್ವ ವಾಯುವಿನಿಂದ ಜೀವ ಸಾಕಾಗಿ ಹೋಗಿತ್ತು. ಆತ ತನ್ನ ಮಗನನ್ನು ಕರೆದು, "ಮಗೂ ನನ್ನ ರೋಗ ಗುಣವಾಗುವದಿಲ್ಲ. ಇಂಥ ಹತಾಶ ಪರಾವಲಂಬಿ ಜೀವನ ನನಗೆ ಸಾಕಾಗಿ ಹೋಗಿದೆ. ನನ್ನನ್ನು ಮುಕ್ತನನ್ನಾಗಿಸು, ನೀನೂ ಮುಕ್ತನಾಗು" ಎಂದು ಗೋಗರೆದು ಕೇಳಿಕೊಂಡ. ಆಗ ಪಿತೃವಾಕ್ಯ ಪರಿಪಾಲಕನಾದ ಮಗ ನಗರದಲ್ಲಿಯ ಖ್ಯಾತ ಡಾಕ್ಟರರ ಸಭೆಯನ್ನೇ ತನ್ನ ಮನೆಯಲ್ಲಿ ಕರೆದ. ತಂದೆಯ ರೋಗದ ಚರಿತ್ರೆಯನ್ನೆಲ್ಲ ಅವರೆದುರು ನಿವೇದಿಸಿದ. ಎಂಥ ಚಿಕಿತ್ಸೆಯಿಂದ ಈತ ಗುಣಹೊಂದಬಲ್ಲ ಎಂದೂ ಅವರನ್ನು ವಿಚಾರಿಸಿದ. ಅವರೆಲ್ಲರೂ ಆ ರೋಗಿಯನ್ನು ಕೂಲಂಕಷವಾಗಿ ಪರೀಕ್ಷಿಸಿ, ಆತ ಎಂಥ ಚಿಕಿತ್ಸೆಯಿಂದಲೂ ಗುಣ ಹೊಂದಲಾರ ಎಂದು ಒಕ್ಕೊರಲಿನಿಂದ ಹೇಳಿದರು. ಆಗ ಮಗ ತಂದೆಯ ಇಚ್ಛೆ ಪೂರೈಸಿದ. ಆತ ಸ್ವರ್ಗಕ್ಕೇರಿದರೆ ಈತ ನರಕದಿಂದ ಉದ್ಧಾರನಾದ.

ಇಂಥ ಘಟನೆಗಳು ನಡೆಯುವುದು ತೀರ ಅಪವಾದಾತ್ಮಕ. ಯುದ್ಧಗಳಲ್ಲಿ ಎದುರಾಳಿಗಳನ್ನು ಕೊಂದರೆ ಪಾಪವಲ್ಲ, ರಾಷ್ಟ್ರಭಕ್ತಿ ಎನಿಸುತ್ತದೆ. ಗರ್ಭಪಾತವನ್ನು ಕಾಯಿದೆಬದ್ಧವಾಗಿಸಿ ಹುಟ್ಟಲಿರುವ ಮಕ್ಕಳನ್ನು ಹೊಸಗಿ

ಹಾಕುವದು ಪಾಪ ಎನಿಸುವುದಿಲ್ಲ. ಸಾಮಾಜಿಕ ಅಗತ್ಯ ಎನಿಸುತ್ತದೆ. ಗರ್ಭಪಾತವನ್ನು ಕಾಯದೇಬದ್ಧಗೊಳಿಸುವುದಕ್ಕೂ ಪ್ರಾರಂಭದಲ್ಲಿ ಪ್ರಬಲವಿರೋಧ ಇದ್ದೇ ಇತ್ತು. ಕಾಲಕ್ರಮೇಣ ಸಮಾಜ ಸ್ವಾಸ್ಥ್ಯಕ್ಕಾಗಿ ಸಾಮಾಜಿಕರು 'ಗರ್ಭಪಾತ'ವನ್ನು ಅಂಗೀಕರಿಸಿದರು. ಅಂದಾಗ ಇಂಥ ಅಸಾಧ್ಯರೋಗಿಗಳಿಗೂ ಸುಖಮರಣ ನೀಡುವುದಕ್ಕಾಗಿ ಒಂದು ಏರ್ಪಾಡು ನಡೆಯಬಾರದೇಕೆ? ಕ್ರಮಬದ್ಧಗೊಳಿಸಬಾರದೇಕೆ?

ಇಂಥ ಪ್ರಯತ್ನಗಳು ಭಾರತದಲ್ಲಿ ನಡೆದಿಲ್ಲ. ಆದರೆ ವಿದೇಶಗಳಲ್ಲಿ ಈ ಶತಮಾನದಲ್ಲಿ ಅಲ್ಲಲ್ಲಿ ನಡೆದಿರುವುದು ಮಾತ್ರ ಕಂಡುಬರುತ್ತದೆ. ಅಸಾಧ್ಯ ರೋಗಿಗಳಿಗೆ 'ಮರಣದಾನ'ವನ್ನು ನೀಡುವ ಅವಕಾಶವಿರುವಂತೆ ಕಾಯದೆ ರಚಿಸಲು ಬ್ರಿಟಿಶ್ ಪಾರ್ಲಿಮೆಂಟಿನಲ್ಲಿ ೧೯೩೬ ರಲ್ಲಿ ಮತ್ತು ೧೯೫೦ ರಲ್ಲಿ ವಿಧೇಯಕಗಳನ್ನು ಮಂಡಿಸಲಾಯಿತು ಆದರೆ ಯಶಸ್ಸು ದೊರೆಯಲಿಲ್ಲ.

ಅಸಾಧ್ಯರೋಗಿಗೆ 'ಮರಣದಾನ' ಪಡೆವ ಹಕ್ಕು ಇರಬೇಕು ಎಂಬ ಬೇಡಿಕೆಯನ್ನು ವಿಶ್ವಸಂಸ್ಥೆಯೆದುರು ೧೯೫೨ ರಲ್ಲಿ ಮಂಡಿಸಲಾಯಿತು. ಆದರೆ ಮಾನವೀಯ ಹಕ್ಕು ಬಾಧ್ಯತೆಗಳ ಪಟ್ಟಿಯಲ್ಲಿ ಅದಿನ್ನೂ ಸೇರ್ಪಡೆ ಆದಂತೆ ಕಾಣುವುದಿಲ್ಲ. ಆದರೆ ಪಾಶ್ಚಾತ್ಯದೇಶಗಳಲ್ಲಿ ಈ ಕುರಿತು ವಿಚಾರಪ್ರವಾಹವು ತೀವ್ರವಾಗಹತ್ತಿದೆ ಮತ್ತು ಕಾಲಾಂತರದಲ್ಲಿ ಮನ್ನಣೆ ದೊರೆಯುವ ಆಸೆಯೂ ಇರಬಹುದು

ವೈದ್ಯ ಶಾಸ್ತ್ರದಲ್ಲಿ ಭರದಿಂದ ಪ್ರಗತಿ ಆಗಹತ್ತಿದೆ. ಮಾನವದೇಹದ ಅಂಗಾಂಗಳನ್ನು ಕಿತ್ತಿ ಜೋಡಿಸುವ ಕಲೆ ಅವಗತವಾಗುತ್ತಿದೆ. ಮುಖವನ್ನೇ ಬದಲಿಸುವ ಪ್ಲಾಸ್ಟಿಕ್ ಸರ್ಜರಿ ರೂಢವಾಗುತ್ತಲಿದೆ. ಇವೆಲ್ಲ ಡಾಕ್ಟರರಿಗೆ ಸಂಬಂಧಿಸಿದ ವಿಷಯಗಳಾಗಿರುವಂತೆ, ಮಾನವ ಪ್ರಾಣಿಯ ಜೀವ ಉಳಿಸುವದು ಅವರ ಕರ್ತವ್ಯವಾಗಿರುವಂತೆ ಅಸಾಧ್ಯ ರೋಗಿಗಳಿಗೆ ಮರಣದಾನ ನೀಡೇವದೂ ಕೂಡ ಅವರ ಕರ್ತವ್ಯ ಎಂದು ಭಾವಿಸಿದರೆ ತಪ್ಪಾಗಲಾರದು.



"ಸಾರ, ನಿಮ್ಮ ಮಗಳ ಮದುವೆಯ ಸಂದರ್ಭದಲ್ಲಿ ನಿಮಗೊಂದು ಪ್ರೆಜೆಂಟೇಶನ್ ಕೊಡಬೇಕೂಂತ ಇದ್ದೀವಿ. ನೀವು ನಮ್ಮ ಸಂಬಳ ಏರಿಸ್ತೀರಾ?

ಪಾಶ್ಚಾತ್ಯರು ಈ ರೀತಿಯಲ್ಲಿ ವಿಚಾರ ಮಾಡಹತ್ತಿದ್ದಾರೆ. ರೋಗಿಗೆ ಯಮಯಾತನೆ ಸಹಿಸಲಾಗದಿದ್ದಾಗ ಸುಖಮರಣಬೇಕಿದ್ದರೆ ಯಾಕಾಗಬಾರದು ? ಆದರೆ ಭಾವನಾತ್ಮಕವಾಗಿರುವ ಈ ವಿಷಯಕ್ಕೆ ಕಾಯಿದೆಯ ಬೆಂಬಲ ದೊರೆತರೆ ಮಾತ್ರ ಆ ದಾರಿ ಮುಕ್ತವಾಗಬಲ್ಲುದು, ಇಲ್ಲದಿದ್ದರೆ ಮುಕ್ತಿ ಸಾಧ್ಯವಿಲ್ಲ.

ಇನ್ನೊಂದು ಮಾತು. ರಾಜಕೀಯ ಅಥವಾ ಸಾಮಾಜಿಕ ಉದ್ದೇಶಗಳಿಗಾಗಿ ಆಮರಣ ಉಪವಾಸ ಕೈಕೊಂಡು ಪ್ರಾಣ ತ್ಯಾಗ ಮಾಡುವುದನ್ನು ಸಮಾಜವು ಸಹಿಸಬಲ್ಲುದು. ಆ ವ್ಯಕ್ತಿ ತನ್ನ ಸ್ವಂತಕ್ಕಿಂತ ಹೆಚ್ಚಾಗಿ ಇತರರ ವರ್ಚಸ್ಸಿಗೆ ಬಲಿಯಾಗಿ ಪ್ರಾಣ ತ್ಯಾಗಕ್ಕೆ ಸಿದ್ಧನಾಗುತ್ತಾನೆ. ಅದು ಹಿಂಸೆ ಅನಿಸಲಾರದಾದರೆ ಅಸಾಧ್ಯ ರೋಗಿಯು ತಾನಾಗಿ ಬಯಸಿ "ಮರಣದಾನ"ವನ್ನು ಕೇಳಿದರೆ ಅವನಿಗೇಕೆ ಅದನ್ನು ನಿರಾಕರಿಸಬೇಕು?

ಈ ಅಭಿಪ್ರಾಯವನ್ನು ಭಾರತವು ಒಪ್ಪಲು ಇನ್ನೂ ಸಿದ್ಧವಾಗಿಲ್ಲ ಎಂಬುದು ಮಾತ್ರ ಸತ್ಯ.

ಭಾರತವಷ್ಟೇ ಏಕೆ ಜಗತ್ತಿನ ಇತರ ಯಾವ ರಾಷ್ಟ್ರವೂ 'ಮರಣದಾನ'ದ ತತ್ತ್ವವನ್ನು ಒಪ್ಪುವದು ಕಠಿಣವೇ ಆಗುತ್ತದೆ. ಈ ವಿಷಯದ ಚರ್ಚೆ ಪ್ರತಿ ನಾಲ್ಕೈದು ವರ್ಷಕ್ಕೊಮ್ಮೆ ತೀವ್ರಸ್ವರೂಪ ಧಾರಣಮಾಡುತ್ತದೆ. ಸಾಕಷ್ಟು ವಾದವಿವಾದಗಳಾಗಿ, ಇನ್ನೇನು ಈ ಬಗ್ಗೆ ನಿರ್ಣಯ ಸ್ವೀಕೃತವಾಗುತ್ತದೇನೋ ಎಂಬ ಘಟ್ಟಕ್ಕೆ ಬಂದಾಗ ಮತ್ತೆ ಎಲ್ಲವೂ ತಣ್ಣಗಾಗುತ್ತದೆ.

ಮರಣದಾನದಿಂದ ಪುಣ್ಯ ದೊರಕುವದು ಎಂದು ವಾದಿಸುವವರೂ ಇದ್ದಾರೆ. ಒಂದು ದೃಷ್ಟಿಯಿಂದ ಇದು ನಿಜವೆನಿಸಬಹುದಾದರೂ ತಾವಾಗಿಯೇ ಮುಂದಾಗಿ ದಾನಮಾಡಿ ಪುಣ್ಯ ಕಟ್ಟಿಕೊಳ್ಳುವಂಥ ದಾನವಲ್ಲ ಈ ಮರಣದಾನ. ಅಸಾಧ್ಯ ರೋಗಿಯು ತನ್ನ ಜೀವಕ್ಕೆ ಬೇಸತ್ತು ಕುಟುಂಬಕ್ಕೆ ಭಾರವಾಗಿ ಆತನ ರೋಗ ಕೂಡ ನಿವಾರಣೆ ಆಗುವದು ಅಶಕ್ಯ ಎಂಬ ಅಭಿಪ್ರಾಯವಿದ್ದಾಗ ಡಾಕ್ಟರರು ಅನಿವಾರ್ಯವಾಗಿ ಮರಣದಾನವನ್ನು ಆತನಿಗೆ ಕರುಣಿಸಬೇಕಾಗುತ್ತದೆ. ಈ ಡಾಕ್ಟರರು ಕೂಡ ಎಷ್ಟೇ ಕಠೋರರು ಎಂದುಕೊಂಡರೂ ಮಾನವರೇ ಆಗಿರುವದರಿಂದ ಅವರೂ ಇಂಥ ಮರಣದಾನವನ್ನು ನೀಡಲು ಬಹಳಷ್ಟು ಮೀನಮೇಷ ಮಾಡುತ್ತಾರೆ. ಅವರು ಪುಕ್ಕರಿದ್ದರಂತೂ ತಾವು ಕರುಣೆಯಿಂದಲೇ ಕೊಂದು ಮುಕ್ತಿ ನೀಡಿದವ ಭೂತವಾಗಿ ತಮ್ಮನ್ನೇ ಕಾಡಿದರೆ ಹೇಗೆ ಎಂದು ಇಂಥ ಉಸಾಬರಿಗೆ ಕೈಹಾಕುವದೇ ಇಲ್ಲ. ಹೀಗಾಗಿ ಈ ಮರಣದಾನದ ವಿಷಯ ಇನ್ನೂ ಚರ್ಚೆಯ ಘಟ್ಟದಲ್ಲಿಯೇ ಉಳಿದುಕೊಂಡಿದೆ.

ಇದಕ್ಕೂ ಒಂದು ಕಾರಣ ಇದೆಯೇನೊ ಅನಿಸುತ್ತದೆ. ಮೂವತ್ತು ವರ್ಷಗಳ ಹಿಂದೆ ಟಾಯ್‌ಫಾಯ್ಡ ಎಂದಕೂಡಲೇ ಡಾಕ್ಟರರೇ ಹೆದರಿ ಕಂಗಾಲಾಗುತ್ತಿದ್ದರು. ಈಗ ಅದನ್ನು ಯಾರೂ ಲೆಕ್ಕಕ್ಕೆ ತಂದುಕೊಳ್ಳುವದಿಲ್ಲ. ಶಸ್ತ್ರ-ಚಿಕಿತ್ಸೆ ಶಾಸ್ತ್ರದಲ್ಲಿಯೂ ಸಾಕಷ್ಟು ಪ್ರಗತಿಯಾಗಿದೆ. ಅಂದು ಅಸಾಧ್ಯವೆನಿಸಿದ್ದ ರೋಗಗಳಿಗೆ ಇಂದು ಮದ್ದುಗಳನ್ನು ಕಂಡುಹಿಡಿಯಲಾಗಿದೆ. ಹೀಗಿರುವಾಗ ಯಾವದೊಂದು ರೋಗ ಅಸಾಧ್ಯ ಎಂಬುದನ್ನು ಒಪ್ಪಲಿಕ್ಕೇ ಡಾಕ್ಟರರು ಸುಲಭದಲ್ಲಿ ಸಿದ್ಧರಾಗುವುದಿಲ್ಲ. ರೋಗಿಯ ಮೇಲೆ ಪ್ರಯೋಗಗಳು ಅಖಂಡವಾಗಿ ನಡೆದೇ ಇರುತ್ತವೆ. ಯಶಾಪಯಶಗಳು ರೋಗಿಯ ಪ್ರಾರಬ್ಧವನ್ನೇ ಅವಲಂಬಿಸುತ್ತವೆ.

ಏನೇ ಆಗಲಿ, ಕೆಲವು ಸಂದರ್ಭಗಳಲ್ಲಿ ಮರಣದಾನವೊಂದು ವರವಾಗಿ ಪರಿಣಮಿಸಬಲ್ಲುದು ಎಂಬ ಮಾತನ್ನು ತೆರೆದು ಹಾಕಲಿಕ್ಕಾಗದು. ಆದರೆ ಆ ಸಂದರ್ಭಗಳಾವವು ಎಂಬುದನ್ನೇ ನಿರ್ಧರಿಸಲು ಇನ್ನೂ ಸಾಧ್ಯವಾಗಿಲ್ಲ. ಅಂತೇ ಈ ವಿಚಾರದಲ್ಲಿ ಜಾಗತಿಕ ನಿರ್ಣಯ ಇನ್ನೂ ರೂಪುಗೊಂಡಿಲ್ಲ. ✡

ಬೆಟ್ಟ ಮತ್ತು ನಾನು

ಬಿ. ಆರ್. ಅಂಬಾ

ಇದೇ ಈ ಚಾಮುಂಡಿ ಬೆಟ್ಟದ ಬಗ್ಗೆ ನನ್ನ ಅಭಿಮಾನ ಕಂಡು ಹಿಂದೊಮ್ಮೆ ಗಿರಿಜಾ ಅಣಕಿಸಿದ್ದಳು. "ಚಾಮುಂಡಿ ಬೆಟ್ಟದಲ್ಲಿ ಏನಿದೆ? ಬರೀ ಕಲ್ಲು-ಮಣ್ಣು." ಅಂತ–ಆಗ ಸುಜಿ ಹೇಳಿದ್ದಳು, "ಮನುಷ್ಯನಲ್ಲಿ ಏನಿದೆ? ರಕ್ತ–ಮಾಂಸ."

ಈ ಬೆಟ್ಟದಲ್ಲಿ ಏನಿಲ್ಲ, ಏನಿದೆ! ಹೌದು, ಅಲ್ಲಿ–ಬರಿಯ ಕಲ್ಲೇ–ಮಣ್ಣು ತುಂಬಿದೆ. ಹಾಗೇ ಅಲ್ಲಿ ಮೈಸೂರರಸರ ಕುಲದೇವತೆ ಚಾಮುಂಡೇಶ್ವರಿ ನೆಲೆಸಿದ್ದಾಳೆ. ಬೆಟ್ಟಕ್ಕೆ ಬಂದವರನ್ನು ಹೆದರಿಸಲೋ ಎಂಬಂತೆ ಬಿಚ್ಚುಗತ್ತಿ ಹಿಡಿದು ಬಿರುಗಣ್ಣಿಂದ ನೋಡುತ್ತಾ ಮಹಿಷಾಸುರ ನಿಂತಿದ್ದಾನೆ. ಆದರೆ ನನಗೆ ಬೆಟ್ಟದ ಆಕರ್ಷಣೆ ಇದ್ಯಾವುದೂ ಅಲ್ಲ. ನನ್ನ ಪಾಲಿಗೆ ಚಾಮುಂಡಿ ಬೆಟ್ಟ ಬರಿಯ ಕಲ್ಲುಮಣ್ಣು ತುಂಬಿದ ವಸ್ತು [illegible] ಧಾರ್ಮಿಕ ಕ್ಷೇತ್ರವೂ ಅಲ್ಲ. ಅದೊಂದು ವ್ಯಕ್ತಿಯಾಗಿಬಿಟ್ಟಿದೆ ನನ್ನ ಬಾಳಲ್ಲಿ–ಅಣ್ಣ–ಅಮ್ಮನಂತೆ, ತಾತ–ಅಜ್ಜಿಯಂತೆ, ತಮ್ಮ–ತಂಗಿಯಂತೆ, ಗೆಳತಿಯರಂತೆ. ಅದಕ್ಕೆಂದೇ ಬೆಟ್ಟವನ್ನು ನೋಡುತ್ತಿರುವ ಹಾಗೇ ನನಗರಿವಿಲ್ಲದಂತೆಯೇ ಪರಿಚಿತ ನಗು ನನ್ನ ತುಟಿಗಳೆಡೆಯಲ್ಲಿ ಮೂಡುತ್ತದೆ.

ಮುಂಜಾವಿನಲ್ಲಿ ನಾನೆದ್ದು ಮನೆಯ ಮುಂದಿನ ಬೃಂದಾವನದ ಸುತ್ತು ಬರುತ್ತೇನೆ. ಪಕ್ಕದಲ್ಲೇ ಬೆಳೆದು ನಿಂತ ಸೀಬೆಗಿಡದ ಬಾಗಿದ ಕೊಂಬೆಗೆ ನನ್ನ ತಲೆ ತಗುಲಿದಾಗ, ಎಲೆಗಳಿಂದ ಉದುರಿಬಿದ ಮಂಜಿನ ಹನಿಗಳಿಂದ ತೋಯ್ದ ಮೈಗೆ, ಮಂಗಳಸ್ನಾನ ಮಾಡಿದಂತಾಗುತ್ತದೆ. ಚಳಿಗಾಲದ ಎಷ್ಟೋ ದಿನಗಳಲ್ಲಿ ಬೆಟ್ಟವೇ ಮೈಸೂರಿನಿಂದ ಮಾಯವಾದಂತೆ – ಪೂರಾ ಮಂಜಿನಿಂದ ಆವೃತವಾಗಿಬಿಡುತ್ತದೆ. ಸೂರ್ಯ ಮೇಲೇರಿ ಬಂದು, ಅದನ್ನು ಮುಸುಕಿದ ಮಂಜಿನ ಮುಸುಕು ತೆರೆದಾಗ ಬೆಟ್ಟ ನಗುತ್ತದೆ. 'ನೋಡು-ಭ್ರಮೆಗೂ ಸತ್ಯಕ್ಕೂ ಇರುವ ಅಂತರ ಇಷ್ಟೇ' ಎನ್ನುವಂತೆ.

ಕೈಯಲ್ಲಿ ಬುಟ್ಟಿ ಹಿಡಿದು ಪಾರಿಜಾತ ಮರದಡಿಗೆ ಸಾಗುತ್ತೇನೆ. ಹಾಗೆಯೇ ಮತ್ತೊಮ್ಮೆ ಬೆಟ್ಟದೆಡೆಗೆ ದೃಷ್ಟಿ ಹರಿಸುತ್ತೇನೆ. ಸೂರ್ಯ ಬೆಟ್ಟದ ಮೇಲೆ ಸವಾರಿ ಮಾಡಿ, ಆಕಾಶದೆಡೆಯಲ್ಲಿ ಕುಪ್ಪಳಿಸುವುದರಲ್ಲಿರುತ್ತಾನೆ. ಸೂರ್ಯನ ಎಳೆ ಬಿಸಿಲಿಗೆ ಕೆಂಬಣ್ಣದಿಂದ ಹೊಳೆವ ಅರಳಿ–ಚಿಗುರುಗಳ ಹಿಂದಿನಿಂದ ದಿನವೂ ಇದೇ ಬೆಟ್ಟವನ್ನೇ ನಾನು ನೋಡುವುದು. ಆದರೇ ಪ್ರತಿ ದಿನ ನೋಡುವಾಗಲೂ ಆ ಬೆಟ್ಟ ಮತ್ತಷ್ಟು

ಎತ್ತರವಾದಂತೆನಿಸುತ್ತದೆ. ಒಂದು ಕ್ಷಣ ಆಶ್ಚರ್ಯವಾಗುತ್ತದೆ. ಆದರೆ ತಕ್ಷಣ ಯಾವುದೋ ನಿರಾಶೆಯ ಮುಸುಕು ನನ್ನನ್ನು ಆವರಿಸುತ್ತದೆ.

ನಾನಿಲ್ಲಿ ನಿಂತೇ ಬೆಟ್ಟದಷ್ಟೆತ್ತರ ಆಸೆಗಳ ಮಹಲನ್ನು ಕಟ್ಟಿದ್ದೇನೆ. ಅಷ್ಟೇ ಎತ್ತರದಿಂದ ಕುಸಿಯುವುದನ್ನೂ ಕಂಡಿದ್ದೇನೆ; ಅದರಡಿಯಲ್ಲಿ ಸಿಲುಕಿ ನುಜ್ಜುಗುಜ್ಜಾಗಿದ್ದೇನೆ. ನನ್ನ ನೋವು-ನಲಿವುಗಳ ಸಾಕ್ಷಿಯಾಗಿ ಅದು ಅಲ್ಲಿ ನಿಂತಂತೆನಿಸುತ್ತದೆ.

ನನ್ನ ಒಂಟಿತನದ ಘಳಿಗಯಲ್ಲಿ ನನ್ನೆದುರಿಗೆ ನಿಂತು ಮೌನವಾಗಿ ಸಂಭಾಷಿಸುತ್ತದೆ. ಬೆಟ್ಟ ಭರವಸೆ ಕೊಡುತ್ತದೆ. ಇಷ್ಟುದ್ದಕ್ಕೂ ಮೈ-ಚಾಚಿ, ಆಕಾಶದೆಡೆಗೆ ಮುಖ ಮಾಡಿ ಮಲಗಿರುವ ಬೆಟ್ಟ ಯಾವುದಕ್ಕಾದರೂ ಕಾತುರವಾಗಿದೆಯೇನು? ಏನನ್ನಾದರೂ ನಿರೀಕ್ಷಿಸುತ್ತಿದೆಯೇನು? ಅದು ಸುಮ್ಮನೆ ಮೈ ಚಾಚಿ ಮಲಗಿರುತ್ತದೆ, ಚಳಿಗೆ-ಗಾಳಿಗೆ, ಬಿಸಿಲು-ಮಳೆಗೆ, ಧ್ಯಾನಾಸಕ್ತ ಋಷಿಯಂತೆ ತಲ್ಲೀನವಾಗಿ, ನಿರ್ವಿಕಾರವಾಗಿ, ನಿರ್ಲಿಪ್ತತೆಯಿಂದ.

ಕೆಳಗೆ ಬೆಟ್ಟದ ಬುಡದಲ್ಲಿ, ನನ್ನ ಬಾಲ್ಯಕಾಲ ಚಾಚಿ ಮಲಗಿರುತ್ತದೆ. ಒಮ್ಮೊಮ್ಮೆ ಯಾವುದೋ ಸಣ್ಣ ಸಪ್ಪಳಕ್ಕೆ ಅದು ಎವೆತೆರೆದು ಎಚ್ಚರವಾಗಿ ಆಕಳಿಸುತ್ತದೆ. ಹಾಗೆಯೇ ಸ್ಪಷ್ಟಾಸ್ಪಷ್ಟವಾಗಿ ನೆನಪು ದೂರದಲ್ಲಿ ಮಿನುಗುತ್ತದೆ-ರಾತ್ರಿಯ ಸಮಯದಲ್ಲಿ ಬೆಟ್ಟದ ಮೇಲೆ ಚಲಿಸುವ ವಾಹನಗಳ ಬೆಳಕು ಆಗೊಮ್ಮೆ ಈಗೊಮ್ಮೆ ಕಾಣಿಸಿ ಮರೆಯಾಗುವಂತೆ. ರಾತ್ರಿಯ ಸಮಯದಲ್ಲಿ ಚಾಮುಂಡಿ ಬೆಟ್ಟದ ಮೇಲೆ ಕಾಣುವ ದೂರದ ಸಾಲು ದೀಪ; ಅಜ್ಜಿಯ ಕರಿಮಣಿಸರದ ಹೂವಿನಂತೆ ತೋರುತ್ತಿತ್ತು-ಬೆಟ್ಟಕ್ಕೆ ದೀಪದ ಸರಮಾಲೆ. ಬೆಳಗಾಗ್ಗದ್ದು ತಾತನ ಬೆನ್ನ ಮೇಲೆ ಸವಾರಿ ಮಾಡುವಾಗ, ಸೂರ್ಯ ಅಲ್ಲೇ ಬೆಟ್ಟದ ಹಿಂದಿನಿಂದ ಜಿಗಿದು ಬೆಟ್ಟದ ಬೆನ್ನ ಮೇಲೆ ಸವಾರಿ ಮಾಡಿ ನಂತರ ಆಕಾಶಕ್ಕೆ ಜಿಗಿಯುತ್ತಿದ್ದ.

ಹಿಂದೆಯೂ ನಾನು ಮುಂಜಾವಿನಲ್ಲಿ ಎದ್ದು, ತಾತನ ಪೂಜೆಗೆಂದು ಹೂವನ್ನು ಸಂಗ್ರಹಿಸುತ್ತಿದ್ದೆ- ಚಳಿಗೆ, ಹೂವಿನ ಕಾವಿಗೆ ಮೈಕಟ್ಟಿ ಕುಳಿತ, ಸೂರ್ಯನ ಎಳೆ ಕಿರಣಕ್ಕೆ ತನ್ನೆದೆಯಲ್ಲಿ ಹುದುಗಿಸಿದ ಮಂಜಿನ ಮುತ್ತುಗಳನ್ನು ಮಿಣುಗುಟ್ಟಿಸುತ್ತಾ ಕುಳಿತ, ಹೊಚ್ಚಹೊಸ ಪಾರಿಜಾತ ಹೂಗಳನ್ನು ಮೃದುವಾಗಿ ಬಿಡಿಸುತ್ತಿದ್ದೆ. ಕೊಂಬೆ ಹಿಡಿದು ಜಗ್ಗುವ ಸಮಯದಲ್ಲಿ, ಆ ಕೊಂಬೆಯಲ್ಲಿ ಗೂಡುಕಟ್ಟಿರುವ ಹಕ್ಕಿಯು ನೆನಪಾಗಿ, ಮೊಟ್ಟೆಯ ಮೇಲೆ ನಿರೀಕ್ಷೆಯಲ್ಲಿ ಬೆಚ್ಚಗೆ ಕಾವುಕೂತ ತಾಯಿ ಹಕ್ಕಿ, ನಾನು ಕೊಂಬೆ ಜಗ್ಗಿದ ರಭಸಕ್ಕೆ ಬೆಚ್ಚಿ ಹಾರದಿರಲೆಂದು ಹಾಗೆ ಕೊಂಬೆ ಬಿಟ್ಟು ಮುಂದೆ ಸಾಗುತ್ತಿದ್ದೆ. ಈಗಲೂ ಹಾಗೆಯೇ ಹೂವನ್ನು ಸಂಗ್ರಹಿಸುತ್ತೇನೆ. ಪೂರ್ವದೆಡೆಗೆ ದೃಷ್ಟಿ ಬೀರಿ ಬ್ರಹ್ಮರೂಪವಾದ ಸೂರ್ಯನನ್ನು ವೀಕ್ಷಿಸುತ್ತೇನೆ. ಎಲ್ಲಾ ನೋಡುತ್ತಾ ಕಳೆದ ಹಿಂದಿನ ದಿನಗಳ ಮೆಲುಕು ಹಾಕುತ್ತೇನೆ. ಹಾಗೆಯೇ ಯಾವುದೋ ನೋವಿನ ತೆರೆಯೊಂದು ಹೃದಯದಾಳದಲ್ಲೆದ್ದು ಬೀಳುತ್ತದೆ. ಮೊದಲಿನಂತೆ ನಾನೀಗ ನಿಷ್ಕಲ್ಮಷ ಹೃದಯದಿಂದ ಈ ಆನಂದವನ್ನು ಅನುಭವಿಸಲಾರೆ.

ಹಿಂದೆಲ್ಲಾ ಈ ಬೆಟ್ಟವನ್ನೇರಲು ನನಗೆಷ್ಟು ಉತ್ಸಾಹ ಇತ್ತು. ಈಗಲೂ ಕೂಡ. ಸ್ವಲ್ಪ ಪ್ರಯಾಸವಾದರೂ ಬೆಟ್ಟವನ್ನೇರುವುದರಲ್ಲಿ ಆಸ್ಥೆ ತಪ್ಪಿಲ್ಲ. ಬೆಟ್ಟ ಹತ್ತುವಾಗ, ಈಗ, ನಡುನಡುವೆ ಕುಳಿತು-ನಿಂತು ಮಾಡಿದರೂ, ಕಡೆಗೂ ಬೆಟ್ಟ ಹತ್ತಿದಾಗ ಎಷ್ಟೋ ತೃಪ್ತಿ, ಹೌದು. ನಾನು ಈ ಬೆಟ್ಟವನ್ನು ತುಂಬಾ ಪ್ರೀತಿಸುತ್ತೇನೆ. ನಾನು ಚಿಕ್ಕವಳಿದ್ದಾಗ ಬೆಟ್ಟ ಹತ್ತುತ್ತಿದ್ದುದನ್ನು ನೆನೆದರೇ, ಆಗಲೂ ಈಗಿನಷ್ಟೇ ಆಸ್ಥೆ-ಪ್ರೀತಿಯಿಂದಲೇ ಹತ್ತುತ್ತಿದ್ದೆ ಎನ್ನಿಸುತ್ತದೆ. ಆದರೆ ಆಗ ಆಟ ಆಡಿದಂತೆ, ಮನೆಯ ಮುಂದಿನ ಮೆಟ್ಟಿಲನ್ನು ಜಿಗಿದಾಡುತ್ತ ಓಡಾಡುವಂತೆಯೇ ಹತ್ತುತ್ತಿದ್ದೆ. ಬೆಟ್ಟ ಹತ್ತುತ್ತಿದ್ದೇನೆಂಬ ಅರಿವೇ ಆಗಿರಲಿಲ್ಲ ಈಗ ಆ ಅರಿವಿನೊಡನೆ ಬೆಟ್ಟವನ್ನು ಹತ್ತುತ್ತೇನೆ!

ಬೆಟ್ಟದಷ್ಟು ಎತ್ತರವಾಗಿ, ಅಲ್ಲ, ಇದರ ಮೇಲಿನ ದೇವಸ್ಥಾನದ ಗೋಪುರದಷ್ಟು

ಎತ್ತರವಾಗಿ ಬೆಳೆಯಬೇಕೆಂಬುದು, ಬಾಲ್ಯದ ಕನಸುಗಳಲ್ಲಿ ಒಂದಾಗಿತ್ತಾಗ, ಹೌದು, ಆಗ ಯಾರಾದರೂ ಎತ್ತರದವರನ್ನು ನೋಡಿದರೇ, ಆ ಎತ್ತರದ ಸರಿಯಾದ ಕಲ್ಪನೆ ನನಗಾಗುತ್ತಿರಲಿಲ್ಲ. ಎತ್ತರದವರು ಅಂದರೇ, ಅರ್ಧ ತೆಂಗಿನಮರದಷ್ಟೆತ್ತರ ಅಂದುಕೊಳ್ಳುತ್ತಿದ್ದೆ. ನಂತರ ನಾನು ಬೆಳೆದಂತೆ ತಿಳಿಯಿತು. ನಾನೆಂದೂ ಬೆಟ್ಟದಷ್ಟೆತ್ತರ ಅಥವಾ ಅದರ ಅರ್ಧದಷ್ಟೂ, ಉಹೂಂ ತೆಂಗಿನ ಮರದ ಅರ್ಧದಷ್ಟು ಎತ್ತರವೂ ಬೆಳೆಯಲಾರೇ ಅಂತ. ಬೆಟ್ಟದ ಮೇಲೆಯೇ ಹತ್ತಿನಿಂತು, ಆ ಎತ್ತರದ ಧಾರ್ಷ್ಟ್ಯವನ್ನು ಅನುಭವಿಸಬೇಕಷ್ಟೇ. ಆದರೆ ಶಕ್ತಿ ಕುಂದಿದಂತೆ, ದಿನಗಳೆದಂತೆ, ಈ ಬೆಟ್ಟವನ್ನು ಹತ್ತಲಾರೆ. ಬಹುಶಃ ಅಷ್ಟು ಹೊತ್ತಿಗೆ ಎತ್ತರದ ಧಾರ್ಷ್ಟ್ಯ ಅನ್ನುವ ಭ್ರಮೆ ಇರಲಾರದೇನೋ'.

ಕಾಲದ ಪರಿವರ್ತನೆಯನ್ನು ನಾನದರ ಮೇಲೆ ಕಂಡಿದ್ದೇನೆ. ಬೆಳಗಿನ ಜಾವದಲ್ಲೆದ್ದ ಎಳೆ ಸೂರ್ಯ ತನ್ನ ಕಿರಣಗಳಿಂದ ಬೆಟ್ಟದ ಮೈಗೆಲ್ಲಾ ಬಂಗಾರದ ಬಣ್ಣ ಬಳಿದು ಮೇಲೇರಿದಾಗ, ಬೆಟ್ಟ ಬೆಳ್ಳಿಯ ಬಣ್ಣಕ್ಕೆ ತಿರುಗುತ್ತದೆ. ಸಂಜೆಯಲ್ಲಿ ಸೂರ್ಯ ಮುಳುಗುವಾಗ ವರ್ಣರಂಜಿತವಾದ ಬೆಟ್ಟ ರಾತ್ರಿಯಲ್ಲಿ ಮೈತುಂಬಾ ಕತ್ತಲು ಮುಸುಕಿಟ್ಟು ಮಲಗುತ್ತದೆ.

ಇದೇ ಕಾಲದ ಪರಿವರ್ತನೆಯನ್ನು, ಆ ಬೆಟ್ಟದ ಕಾಲಕೆಳಗೆ ಮೈಚಾಚಿರುವ ರಸ್ತೆಗಳು, ಮನೆಗಳೂ ಕಂಡಿವೆ. ಅದೆಲ್ಲಾ ಹಿಂದೆ ಇದ್ದುದಾದರೂ ಅದರಲ್ಲೆಷ್ಟೋ ಬದಲಾವಣೆ, ರಸ್ತೆಯ ಬದಿಯಲ್ಲಿ ಖಾಲಿ ಇದ್ದ ಜಾಗಗಳಲ್ಲೀಗ ಹೊಸ-ಹೊಸ ಮನೆ ಎದ್ದಿವೆ. ಆ ಜನಗಳಲ್ಲೊ, ಹಳಬರೆಷ್ಟೋ ದೂರ ಸರಿದಿದ್ದಾರೆ, ಹೊಸಬರೆಷ್ಟು ಬಂದು ಸೇರ್ಪಡೆಯಾಗಿದ್ದಾರೆ. ದೈನಂದಿನ ವ್ಯಾಪಾರದಲ್ಲಿ, ಜೀವನದ ಆಗುಹೋಗುಗಳಲ್ಲಿ ಎಷ್ಟೋ ವೈಪರೀತ್ಯ ಉಂಟಾಗಿದೆ. ಯಾವ ಬದಲಾವಣೆ ಹೊಂದಿಲ್ಲದೆ ಇರುವುದೆಂದರೇ ಈ ಚಾಮುಂಡಿ ಬೆಟ್ಟ. ಎಲ್ಲಾ ಆಗು-ಹೋಗುಗಳನ್ನು ವೀಕ್ಷಿಸುತ್ತಾ, ಎಲ್ಲಕ್ಕೂ ಸಾಕ್ಷಿಯಾಗಿ ನಿಂತಿದೆ ಬೆಟ್ಟ. ಅದೇ ಸತ್ಯ-ನಿತ್ಯ. ಅದು ಭೂತ ವರ್ತಮಾನ ಭವಿಷ್ಯತ್ತು ಎಲ್ಲದ್ದಕ್ಕೂ ಸೇತುವೆ ಕಲ್ಪಿಸುತ್ತಾ ನಿಂತಿದೆ.

ಹಿಂದೆ ನನ್ನೊಡನೆ ಕೂಡಿ-ಆಡಿ- ಬೆಳೆದವರನ್ನೆಲ್ಲಾ ಈಗ ನೆನೆಯುವಾಗ, ಅವರೆಲ್ಲಾ ಎಲ್ಲೊ ದೂರದಲ್ಲಿ ಕನಸಿನ ಚಿತ್ರದ ಬೊಂಬೆಗಳಂತೆ ಕಾಣುತ್ತಾರೆ ಅನ್ನಿಸುತ್ತದೆ- ನಾವೆಲ್ಲಾ ಎಷ್ಟು ಬೇಗ ಬೆಳೆದುಬಿಟ್ಟೆವು. ಬೆಳೆಯುತ್ತಿದ್ದೇವೆಂಬ ಅರಿವು ನಮ್ಮಲ್ಲಿ ಮೂಡುವ ಮೊದಲೇ ಬೆಳೆದುಬಿಟ್ಟೆವು, ಯಾಕೋ ವಿಪರೀತ ಆಶ್ಚರ್ಯವಾಗುತ್ತದೆ. ಆ ಬೆಟ್ಟದ ಮೇಲೆ ದೆವ್ವಗಳೊಂದಿಗೆ ಕುಡಿದು ಮಲಗಿದ ರಿಪ್-ವಾನ್-ವಿಂಕಲ್ ಮುದುಕನಾಗಿ ಎದ್ದಾಗ ಆಗಿರಬಹುದಾದಂತಹ ಅನುಭವ.

ಅದೇ ಗುಂಗಿನಲ್ಲಿ ಹಿಂದೆ ಬಂದು ಮನೆಯೊಳಕ್ಕೆ ಕಾಲಿಡುತ್ತೇನೆ. ಹೊರಗೆ ಡೋಲಿನ ಶಬ್ದವಾಗುತ್ತದೆ. ಇಲ್ಲಿ ಅದೆಲ್ಲಾ ತೀರ ಮಾಮೂಲು. ದಿನಂಪ್ರತಿ ಎಷ್ಟೋ ಹೆಣಗಳು ಇದೇ ಬಿದಿಯಲ್ಲಿಯೇ ಬೆಟ್ಟದ ಬಡಕ್ಕೆ ಸಾಗುತ್ತವೆ. ನಾನು ಚಿಕ್ಕವಳಿದ್ದಾಗ, ಈ ಶಬ್ದ ಕಿವಿಗೆ ಬೀಳುತ್ತಲೇ, ಏನೋ ಕುತೂಹಲದಿಂದ, ಮನೆಯೊಳಗಿಂದ ಓಡಿಬಂದು, ಕಂಪೌಂಡಿನ ಬಳಿ ನಿಲ್ಲುತ್ತಿದ್ದ ನೆನೆಪಾಯಿತು. ಆದರೆ ಈಗ್ಯಾಕೋ ಎಲ್ಲಾ ತಕ್ಷಣ ಗಿರಗಿರನೆ ತಿರುಗಿದಂತೆನಿಸಿತು. ಯಾವುದೋ ಅವ್ಯಕ್ತ ಆಶಂಕೆ ಮನದಾಳದಲ್ಲಿ ಸುಳಿದುಹೋಯಿತು. ಬೆಟ್ಟದಮೇಲೆ ಮೋಡದ ಕರಿನೆರಳು ಸರಿದಾಡುವಂತೆ, ಏನಾಗಿಬಿಟ್ಟದೆ ಈಗ; ಯಾವುದೂ ಶಾಶ್ವತವಲ್ಲ, ನಿಜವಲ್ಲ- ಅಮ್ಮ-ಅಪ್ಪ, ತಾತ-ಅಜ್ಜಿ, ತಮ್ಮ-ತಂಗಿ, ಕಡೆಗೆ ನಾನೂ ಯಾವುದೂ... ನೀರ ಮೇಲಣ ಗುಳ್ಳೆಯಂತಿಹುದೀ ಸಂಸಾರ ಎಂಬ ಭಾವನೆ ಬಲವಾಗಿ ಹೃದಯವನ್ನು ಹಿಡಿಯುತ್ತದೆ. ✡

ಹೆದ್ದಾರಿಯ ವಸತಿಗೃಹ

ಮೋಟೆಲ್

ಆರ್. ಶ್ರೀನಾಗೇಶ್ ★

ಹೋಟೆಲ್ ಉದ್ಯಮದಲ್ಲಿ ಇಂದು ಶರವೇಗದಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ವಿಭಾಗ ಎಂದರೆ ಮೋಟೆಲ್. (Motel). ಟ್ರಾಫಿಕ್‌ಜಾಮ್ ಹಾಗೂ ಪಾರ್ಕಿಂಗ್ ತೊಂದರೆಗಳನ್ನು ಎದುರಿಸಲು ಸೃಷ್ಟಿಯಾದ ಮೋಟೆಲ್ ಸ್ವಂತ ವಾಹನಗಳಲ್ಲಿ ದೀರ್ಘ ಪ್ರವಾಸ ಕೈಗೊಂಡವರಿಗೆ ಅತ್ಯುತ್ತಮವಾದ ಮಾರ್ಗ ಮಧ್ಯದ ವಸತಿ ಗೃಹ. ಸಾಮಾನ್ಯವಾಗಿ ಊರ ಹೊರವಲಯದ ಸಮೀಪ, ಹೆದ್ದಾರಿಯಲ್ಲಿ ಮೋಟೆಲ್‌ಗಳು ಕಟ್ಟಲ್ಪಡುತ್ತವೆ. ಮೊದಲು "ಟೂರಿಸ್ಟ್ ಕ್ಯಾಬಿನ್" ಎಂಬ ಹೆಸರಿನಲ್ಲಿ ಇದು ಆರಂಭವಾಯಿತು. ಪ್ರವಾಸಿಕರ ತಂಗುವಿಕೆಗಾಗಿ ಸಣ್ಣ ಸಣ್ಣ ಕ್ಯಾಬಿನ್‌ಗಳು ಇರುತ್ತಿದ್ದವು. ಪ್ರವಾಸಿಗ ತನಗೆ ಅತ್ಯಗತ್ಯವಾದ ವಸ್ತುಗಳನ್ನು ಮಾತ್ರ ರೂಮಿಗೆ ಕಾರಿನಿಂದ ತೆಗೆದುಕೊಂಡು ಹೋಗಬಹುದಾದ್ದರಿಂದ ಅನಗತ್ಯವಾಗಿ ಸಾಮಾನು ಸರಂಜಾಮುಗಳನ್ನು ಹೊತ್ತು ತಿರುಗುವುದು ತಪ್ಪಿತು. ಲೌಂಜ್‌ನಲ್ಲಿ ತನಗೆ ಬೇಕಾದ ಉಡುಪನ್ನು ಧರಿಸಿ ಓಡಾಡಲು ಅವಕಾಶವಿದ್ದುದರಿಂದ ಮನಸ್ಸಿಗೆ ನಿರಾಳವೆನಿಸುತ್ತಿತ್ತು (ಇತರೇ ಹೋಟೆಲುಗಳಲ್ಲಿ ಉಡುಪಿನ ನಿಯಮಗಳಿರುತ್ತವೆ).

ಪ್ರವಾಸಿಗನಿಗೆ ಕಾರನ್ನು ತನ್ನ ಕೋಣೆಯ ಎದುರಿಗೇ ಅಥವಾ, ಸಮೀಪದಲ್ಲೇ ಪಾರ್ಕ ಮಾಡಲು ಸೌಲಭ್ಯವಿರುವ ಕಾರಣ ಆತ ಕಾರಿನಿಂದ ಕೋಣೆಗೆ ಮತ್ತು ಕೋಣೆಯಿಂದ ಕಾರಿಗೆ ನೇರವಾಗಿ ಓಡಾಡಲು ಸಾಧ್ಯವಿತ್ತು. ಇದರಿಂದ ತಮ್ಮ ಅಗತ್ಯಗಳಿಗಾಗಿ ಓಡಾಡುತ್ತಿದ್ದ ಆಳುಗಳಿಗೆ ಕೊಡುತ್ತಿದ್ದ ಭಕ್ಷೀಸು ಪ್ರವಾಸಿಗನಿಗೆ ಉಳಿಯಿತು. ಇವುಗಳಲ್ಲದೆ ವಸತಿ ಶುಲ್ಕ ಕಡಿಮೆಯಿರುತ್ತಿದ್ದುದು ಮತ್ತೊಂದು ಆಕರ್ಷಣೆ.

ಇವೆಲ್ಲ ಕಾರಣಗಳಿಂದ ಮೋಟೆಲ್‌ಗಳು ತುಂಬ ಜನಪ್ರಿಯವಾಗತೊಡಗಿದುವು. ಜನಪ್ರಿಯತೆ ಹೆಚ್ಚಿದಂತೆ ಪ್ರವಾಸಿಗರಿಗೆ ಸೌಲಭ್ಯಗಳೂ ಹೆಚ್ಚತೊಡಗಿದುವು. ಉತ್ತಮ ದರ್ಜೆಯ ಹಾಸಿಗೆ, ಪೀಠೋಪಕರಣಗಳು, ಕಾಫಿ, ಐಸ್ ಮುಂತಾದುವನ್ನು ಕೊಡುವ ಸ್ವಯಂಚಾಲಿತ ಯಂತ್ರಗಳು, ಲಾಂಡ್ರಿ ಸೌಲಭ್ಯ ಇವೇ ಮುಂತಾದುವು ಅವರಿಗೆ ಸಿಗಲಾರಂಭಿಸಿದುವು. ರೇಡಿಯೋ, ಟೆಲಿವಿಷನ್‌ಗಳು ಪ್ರತಿ ಕೋಣೆಯಲ್ಲೂ ಸ್ಥಾಪಿತವಾದವು.

ಸಂಗೀತದ ಟೇಪ್‌ಗಳೂ ದೊರೆಯುತ್ತಿದ್ದುವು.

ಇಂದು ಮೋಟೆಲ್‌ಗಳಿಗೆ ಇರಬೇಕಾದ ಕನಿಷ್ಠ ಗುಣಮಟ್ಟ ಇಂತಿದೆ:

ಕನಿಷ್ಠ ೧೫ ಕೊಠಡಿಗಳಿರಬೇಕಲ್ಲದೆ ಅವುಗಳಲ್ಲಿ ಕಾಲುಂಶವಾದರೂ ಹವಾ ನಿಯಂತ್ರಿತವಾಗಿರಬೇಕು. ಕೋಣೆಗೇ ಹೊಂದಿಕೊಂಡಂತಹ ಶೌಚಗೃಹಗಳು, ಗ್ಯಾರೇಜು, ವಾಹನಗಳಿಗೆ ಪ್ರತ್ಯೇಕ ಪಾರ್ಕಿಂಗ್ ಹಾಗೂ ಸರ್ವಿಸಿಂಗ್ ಸೌಲಭ್ಯ, ಪ್ರತಿ ಕೋಣೆಯಲ್ಲೂ ಶೈತ್ಯೀಕರಣ ವ್ಯವಸ್ಥೆ ಇರಬೇಕು. ಇವಲ್ಲದೆ ದೂರವಾಣಿ, ಅಂಚೆಕಚೇರಿ, ರೇಡಿಯೋ, ದಿನಪತ್ರಿಕೆಗಳೂ ಹಾಗೂ ಕ್ರೀಡಾ ಸೌಲಭ್ಯಗಳೂ ಅಗತ್ಯ.

ದೀರ್ಘ ಪ್ರವಾಸ ಕೈಗೊಂಡಿರುವವರು ಮಾರ್ಗ ಮಧ್ಯದಲ್ಲಿ ವಿಶ್ರಮಿಸಿಕೊಳ್ಳಲು ಉದ್ದೇಶಿತವಾದ ಮೋಟೆಲ್‌ಗಳು ಕಡಿಮೆ ವೆಚ್ಚದಲ್ಲಿ ವಸತಿ ಸೌಲಭ್ಯ ಒದಗಿಸುವುದಕ್ಕೆ ಬಹುಮುಖ್ಯ ಕಾರಣವೆಂದರೆ ಊರಹೊರವಲಯದಲ್ಲಿ ಕಟ್ಟಲ್ಪಟ್ಟಿರುವುದರಿಂದ ಸುಲಭ ದರದಲ್ಲಿ ಸೈಟು ಸಿಗುವುದು. ಪ್ರವಾಸಿಗರು ತಮಗಿಷ್ಟ ಬಂದಷ್ಟು ಕಾಲ ತಂಗುವ ಅವಕಾಶ ಕಲ್ಪಿಸಿಕೊಡುವುದರಿಂದ ದೂರ ಪ್ರಯಾಣ ಕೈಗೊಂಡಿರುವವರು ಮಾರ್ಗ ಮಧ್ಯೆ ಒಂದೆರಡು ಗಂಟೆ ವಿಶ್ರಮಿಸಿಕೊಳ್ಳಲು ಮೋಟೆಲ್‌ಗಳು ಸಹಕಾರಿ.

ಹೋಟೆಲ್‌ಗಳಲ್ಲಿ ದೊರೆಯುವ ಅನೇಕ ಬಗೆಯ ಸೌಲಭ್ಯಗಳು ಮೋಟೆಲ್‌ಗಳಲ್ಲಿ ಕಡಿಮೆ ವೆಚ್ಚದಲ್ಲಿ ಸಿಗುವ ಕಾರಣ ಇವೆರಡರ ನಡುವೆ ತೀವ್ರ ಪೈಪೋಟಿಯಿದೆ. ಅಮೇರಿಕದಲ್ಲಿ ೧೯೬೦ರ ದಶಕದ ಮಧ್ಯ ಭಾಗದಲ್ಲಿ ಸುಮಾರು ೪೦.೦೦೦ ಮೋಟೆಲ್‌ಗಳಿದ್ದುವು. ಅದೇ ಸಮಯದಲ್ಲಿದ್ದ ಹೋಟೆಲ್‌ಗಳ ಸಂಖ್ಯೆ ಸುಮಾರು ೨೫,೦೦೦.

೧೯೪೮—೬೦ರ ಅವಧಿಯಲ್ಲಿ ಮೋಟೆಲ್‌ಗಳ ಸಂಖ್ಯೆ ದ್ವಿಗುಣವಾಯಿತೆಂದರೆ ಅವುಗಳ ಜನಪ್ರಿಯತೆ ವೇದ್ಯವಾಗುವುದು. ಇವು ವಾಹನ ಹೊಂದಿರುವ ಪ್ರವಾಸಿಗರಿಗಾಗಿಯೇ ವಿಶೇಷ

ಹಾಸನದ ಮೋಟೆಲ್



ವಾಗಿ ನಿಯೋಜಿತವಾದುದರಿಂದ "ಮೋಟಾರ್ ಹೋಟೆಲ್" ಎಂದು ಕರೆಯಲ್ಪಟ್ಟು ಕಾಲಾಂತರದಲ್ಲಿ ಆ ಹೆಸರು ಸಂಕ್ಷಿಪ್ತರೂಪ ಹೊಂದಿ ಇಂದು ಮೋಟೆಲ್ ಎಂಬ ಅಭಿದಾನ ಬಳಕೆಯಲ್ಲಿದೆ.

ಭಾರತದಲ್ಲಿ ಮೋಟೆಲ್ ಉದ್ಯಮ ೧೯೭೭ರಲ್ಲಿ ಆರಂಭವಾಯಿತು. ಕರ್ನಾಟಕದ ಹಾಸನದಲ್ಲಿ ಸರಕಾರೀ ವಲಯದಲ್ಲಿ ಭಾರತದ ಪ್ರಪ್ರಥಮ ಮೋಟೆಲ್ ಆ ವರ್ಷ ಜುಲೈ ತಿಂಗಳಲ್ಲಿ ಡಾ. ಸರೋಜಿನೀ ಮಹಿಷಿ ಅವರಿಂದ ಉದ್ಘಾಟಿಸಲ್ಪಟ್ಟಿತು. ಆ ನಂತರ ಅದೇ ವರ್ಷ ಡಿಸೆಂಬರಿನಲ್ಲಿ ಜಮ್ಮು ನಗರದಲ್ಲಿ ಭಾರತದ ಎರಡನೆಯ ಮೋಟೆಲ್ ಆರಂಭವಾಯಿತು.

ಈ ಎರಡೂ ಮೋಟೆಲ್‌ಗಳು ಭಾರತದ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಪೊರೇಷನ್ನಿನಿಂದ (I T D C) ನಡೆಸಲ್ಪಡುತ್ತಿದ್ದು ಅಲ್ಲಿಯ ನೌಕರರೆಲ್ಲ ಪಂಚತಾರಾ ಹೊಟೆಲಿನ ಮಟ್ಟದಲ್ಲಿ ಸೇವೆ ಸಲ್ಲಿಸಲು ತರಬೇತಾದವರು.

ಈ ಮೋಟೆಲ್‌ಗಳ ಕೋಣೆಗಳೆಲ್ಲ ಡಬಲ್ ರೂಮ್ (Double Room) ಗಾತ್ರದವೇ ಆಗಿದ್ದು ಪ್ರತಿ ಕೋಣೆಯಲ್ಲಿ ಹಾಸಿಗೆ, ಡ್ರೆಸ್ಸಿಂಗ್ ಟೇಬಲ್, ಕಬೋರ್ಡ್ (Cupboard), ದೂರವಾಣಿ ಇತ್ಯಾದಿ ಸೌಲಭ್ಯಗಳು ಇವೆ. ಉತ್ತಮ ಮಟ್ಟದ ಬಾರ್ ಮತ್ತು ರೆಸ್ಟೋರೆಂಟ್ ಹಾಗೂ ವಿಶಾಲವಾದ ಸಭಾಂಗಣ ಇತರ ಸೌಲಭ್ಯಗಳು.

ಇಲ್ಲಿ ವಸತಿ ಸೌಲಭ್ಯ ಮೂರು ವಿಧ: ಯೂರೋಪಿಯನ್, ಅಮೇರಿಕನ್ ಹಾಗೂ ಮೊಡಿಫೈಡ್ ಅಮೇರಿಕನ್ ಎಂದು. ಮೊದಲನೆಯ ವಿಧದಲ್ಲಿ ವಿಧಿಸುವ ಬಾಡಿಗೆ ವಸತಿಗೆ ಮತ್ತು ಒಂದು ಉಪಾಹಾರಕ್ಕೆ; ಎರಡನೆಯದರಲ್ಲಿ ವಸತಿ, ಊಟ, ತಿಂಡಿ ಎಲ್ಲ ಸೇರಿದ್ದರೆ ಮೂರನೆಯದರಲ್ಲಿ ವಸತಿ, ಒಂದು ಊಟ, ಒಂದು ತಿಂಡಿ ಸೇರಿವೆ.

ಹಾಸನ ಮತ್ತು ಜಮ್ಮು ಮೋಟೆಲುಗಳ ಸುತ್ತ ಮುತ್ತ ಪ್ರೇಕ್ಷಣೀಯ ಸ್ಥಳಗಳು ಸಾಕಷ್ಟಿದ್ದು ಅಲ್ಲಿಗೆ ಹೋಗಿ ಬರಲು ವಾಹನ ಸೌಲಭ್ಯವೂ ಪ್ರವಾಸೋದ್ಯಮ ಕಾರ್ಪೊರೇಷನ್ನಿನ ವತಿಯಿಂದ ಸಿಗುತ್ತದೆ. ಅಲ್ಲದೆ ಈ ಕಾರ್ಪೊರೇಶನ್ನಿನ ಅಧೀನದಲ್ಲಿರುವ ಯಾವುದೆ ಹೊಟೆಲಿನಿಂದ ಅದೇ ಬಗೆಯ ಮತ್ತಾವುದೇ ಹೊಟೆಲ್ ಅಥವಾ ಮೋಟೆಲ್‌ನಲ್ಲಿ ಸ್ಥಳ ಕಾದಿರಿಸುವ ಅವಕಾಶವಿರುವುದರಿಂದ ಸ್ಥಳ ಸಿಗುವಿಕೆಯ ಬಗ್ಗೆ ಯಾವುದೇ ಅನಿಶ್ಚಿತತೆಯಿರುವುದಿಲ್ಲ.

ಹಾಸನ ಮೋಟೆಲ್

ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿರುವ ಹಾಸನದ ಮೋಟೆಲ್ ೨೭ ಕೊಠಡಿಗಳನ್ನು ಹೊಂದಿದ್ದು ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಮುಂತಾದ ಸ್ಥಳಗಳಿಗೆ ಕೇಂದ್ರ ಸ್ಥಾನದಲ್ಲಿದೆ. ಅಲ್ಲಿಗೆ ಹೋಗಿ ಬರಲು ITDC ಯವರ ವಾಹನ ಸೌಕರ್ಯವಿದೆ. ಬೆಂಗಳೂರಿನಿಂದ ಅಂಬಾಸೆಡರ್ ಕಾರಿನಲ್ಲಿ



ಅಂತದ್ದೇನೂ ಆಗಿಲ್ಲಾರಿ. ನಿಮ್ಮನ್ನ ಏಪ್ರಿಲ್ ಫೂಲ್ ಮಾಡೋಕೆ ತುಂಬಾ ಸೀರಿಯಸ್ ಆಗಿದೆ ಅಂತ ಫೋನ್ ಮಾಡಿದ್ದೆ ಅಷ್ಟೆ.

ಬೇಲೂರು ಹಳೇಬೀಡು ಶ್ರವಣಬೆಳಗೊಳಗಳಿಗೆ (ಐದು ಮಂದಿ) ಹೋಗಿಬರಲು ತಗಲುವ ವೆಚ್ಚ ಸುಮಾರು ೫೦೦ ರೂ. ಹವಾ ನಿಯಂತ್ರಿತ ಕಾರಿನಲ್ಲಾದರೆ ೯೦೦ ರೂ.

ಇಲ್ಲಿ ಭಾರತೀಯ ಹಾಗೂ ಕಾಂಟಿನೆಂಟಲ್ ಊಟ ದೊರೆಯುತ್ತದೆ. ಉಪಾಹಾರದ ಬೆಲೆ ೭ ರೂ. ಊಟದ ಬೆಲೆ ೧೯ ರೂ. ಹವಾ-ನಿಯಂತ್ರಿತ ಕೋಣೆಗಳ ಬಾಡಿಗೆ ದಿನಕ್ಕೆ ಸಿಂಗಲ್ ೪೫ ರೂ. ಡಬಲ್ ೬೫ ರೂ. ಉಳಿದವಕ್ಕೆ ೩೦ ರೂ ಮತ್ತು ೫೦ ರೂ.

ಜಮ್ಮು ಮೋಟೆಲ್ :

೫೦ ಕೊಠಡಿಗಳಿವೆ. ೧೧ ಹವಾನಿಯಂತ್ರಿತವಾದವು. ಒಂದು ಹವಾ ನಿಯಂತ್ರಿತ ಸೂಟ್ (suite) ಸಹ ಇದೆ. ಪ್ರವಾಸ ಹಾಗೂ ತೀರ್ಥ ಕ್ಷೇತ್ರಗಳಿಗೆ ಕೇಂದ್ರದಲ್ಲಿ ಇರುವ ಕಾರಣ ತುಂಬಾ ಜನಪ್ರಿಯವಾಗಿದೆ.

ಮೂರಂತಸ್ತಿನ ಕಟ್ಟಡ ಇಳಿಜಾರಾದ ಪ್ರದೇಶದಲ್ಲಿದ್ದು ಪ್ರತಿ ಕೋಣೆಗೂ ಬಾಲ್ಕನಿಯಿದೆ. ಅಲ್ಲಿಂದ ತಾವಿಕಣಿವೆ, ಜಮ್ಮು ನಗರ ಹಾಗೂ ಸುಂದರವಾದ ಬೆಟ್ಟಗುಡ್ಡಗಳು ಮನಮೋಹಕ ದೃಶ್ಯಗಳನ್ನು ನೋಡಬಹುದು. ಹವಾ ನಿಯಂತ್ರಿತ ನಾಗಿನ್ ಬಾರ್ ಹಾಗೂ ಗುಲಿಸ್ತಾನ್ ರೆಸ್ಟೋರಾಂಟ್‌ಗಳು ಇವೆ; ರೆಸ್ಟೋರಾಂಟಿನಲ್ಲಿ ಒಮ್ಮೆಗೆ ಎಪ್ಪತ್ತು ಮಂದಿ ಆಹಾರ (ಭಾರತೀಯ ಅಥವಾ ಪಾಶ್ಚಿಮಾತ್ಯ ಶೈಲಿ) ಸೇವಿಸಲು ಅವಕಾಶವಿದೆ. ಹಾಸನದಲ್ಲಿರುವ ಸೌಲಭ್ಯಗಳ ಜೊತೆಗೆ ಇಲ್ಲಿ ಲಾಂಡ್ರಿ, ಸೇಫ್ ಡಿಪಾಸಿಟ್, ಅಂಚೆ ಸೌಲಭ್ಯಗಳು, credit card ಗಳು ಮುಂತಾದ ವಿಶೇಷ ಸೌಲಭ್ಯಗಳು ಇವೆ.

ಸುತ್ತಮುತ್ತ ಪ್ರವಾಸ ಮಾಡಲು ರೋಪ್ ಅಥವಾ ಕಾರ್ ಸೌಲಭ್ಯ ಇದೆ. ಸಭೆಗಳನ್ನು ನಡೆಸಲು ನೂರು ಸೀಟುಗಳುಳ್ಳ ಹವಾ ನಿಯಂತ್ರಿತ ಸಭಾಂಗಣವಿದೆ.

ಭಾರತದ ಪ್ರವಾಸೋದ್ಯಮ ಅಭಿವೃದ್ಧಿ-ಕಾರ್ಪೋರೇಶನ್ನು ಭಾರತದ ನಾನಾಕಡೆ (ಕೋಣಾರ್ಕ, ಕುಲು, ವಿಜಾಪುರ, ಬುದ್ಧ-ಗಯಾ ಮುಂತಾದ ಕಡೆ) ಟೂರಿಸ್ಟ್ ಕಾಟೇಜಸ್ ಹೊಂದಿದೆ. ಇವುಗಳನ್ನೆಲ್ಲ ಕ್ರಮೇಣ ಮೋಟೆಲ್‌ಗಳಾಗಿ ಪರಿವರ್ತಿಸುವ ಯೋಜನೆಯನ್ನು ಅದು ಹಾಕಿಕೊಂಡಿದೆ.

ಪಾಶ್ಚಾತ್ಯ ಮೋಟೆಲ್‌ಗಳು

ಪಾಶ್ಚಾತ್ಯಜನಜೀವನ ಸಂಸ್ಕೃತಿಗಳು ಬೇರೆ ಬಗೆಯವಾದ್ದರಿಂದ ಅಲ್ಲಿಯ ಮೋಟೆಲ್‌ಗಳಿಗೂ ಇಲ್ಲಿಯವಕ್ಕೂ ಅಂತರಗಳಿವೆ.

ಪಾಶ್ಚಾತ್ಯ ಮೋಟೆಲ್‌ಗಳಲ್ಲಿ ಐಸ್, ಡ್ರಿಂಕ್ಸ್ ಮುಂತಾದವುಗಳನ್ನು ಉಚಿತವಾಗಿ ಕೊಡುವ ಸ್ವಯಂಚಾಲಿತ ಯಂತ್ರಗಳಿವೆ. ಪ್ರವಾಸಿಗ ಮೊದಲೇ ಸ್ಥಳಕಾದಿರಿಸಿದ್ದಲ್ಲಿ ಆತ ರಿಶೆಪ್ಶನ್ ಹಾಲಿಗೆ ಹೋಗುವ ಅಗತ್ಯವಿಲ್ಲ. ನೇರವಾಗಿ ತನ್ನ ಕಾರಿನಿಂದ ಕೋಣೆಗೆ ಹೋಗಿ ತನಗೆ ಬೇಕಾದಷ್ಟು ಕಾಲ ಇದ್ದು ಹೋಗಬಹುದು. ಎಷ್ಟೋ ವೇಳೆ ಮೋಟೆಲಿನ ಆಡಳಿತ ವರ್ಗಕ್ಕೆ ಪ್ರವಾಸಿಗ ಬಂದು ಹೋದುದೇ ಗೊತ್ತಾಗುವುದಿಲ್ಲ.

ನಮ್ಮಲ್ಲಿ ಸಿಗುವ ಸೌಲಭ್ಯಗಳನ್ನು ದುರುಪಯೋಗಪಡಿಸಿಕೊಳ್ಳುವ ಜನವೇ ಹೆಚ್ಚಿರುವುದರಿಂದ ಈ ರೀತಿಯ ಸೌಲಭ್ಯಗಳನ್ನು ಒದಗಿಸುವುದು ಕಷ್ಟ. ಆದರೂ ಪಾಶ್ಚಾತ್ಯರ ಅನುಕರಣೆ ಹೆಚ್ಚುತ್ತಿರುವುದರಿಂದ ಮೋಟೆಲ್‌ಗಳೂ ಹೆಚ್ಚುವ ಸಂಭವ ಇಲ್ಲದಿಲ್ಲ.

ITDC ಯ ಯಾವುದೇ ಒಂದು ಹೊಟೆಲ್ ಅಥವಾ ಮೋಟೆಲ್‌ನಿಂದ ಮತ್ತಾವುದೇ ಹೊಟೆಲ್ ಅಥವಾ ಮೋಟೆಲ್‌ಗಳಲ್ಲಿ ಸ್ಥಳ ಕಾದಿರಿಸಲು ಅವಕಾಶವಿರುವುದು ಒಂದು ವಿಶಿಷ್ಟ ಸೇವೆ. ಭಾರತದ ಮೋಟೆಲ್‌ಗಳಲ್ಲಿ ವಸತಿಯ ಬಾಡಿಗೆ ಹಾಗೂ ಊಟ ತಿಂಡಿಯ ಖರ್ಚು ಬಿಟ್ಟರೆ ಬೇರಾವ ವೆಚ್ಚವೂ (ಅಂದರೆ ಸೇವಾಶುಲ್ಕ ಇತ್ಯಾದಿ) ಇರುವುದಿಲ್ಲ. ✿

ಇಂದಿನ ಮಗು: ಮಾತಿಗೆ ಮುಂದು

ಕೆ. ಎಲ್. ದತ್ತ

[ಮಗು ಮಾತನಾಡಲು ಅಂದರೆ ಹೆರವರೊಡನೆ ಸಂಪರ್ಕ ಬೆಳೆಸಲು ಪ್ರಯತ್ನಿಸುವದು ಯಾವಾಗಿನಿಂದ ಪ್ರಾರಂಭವಾಗುತ್ತದೆ ಎಂಬ ಕುರಿತು ಒಂದು ವಿಶ್ಲೇಷಣೆ.]

ನಮ್ಮ ಮಗು ಒಂದು ವರ್ಷದ್ದಾಗಿದೆ. ಇನ್ನೂ ಮಾತಾಡುವದೇ ಇಲ್ಲ. ಹೋಗಲಿಬಿಡಿ, ಕೆಲವು ಮಕ್ಕಳಿಗೆ ಎರಡು ವರ್ಷಕ್ಕೆ ಬಾಯಿ ಬರುತ್ತದಂತೆ. ಚುರುಕಾಗಿದ್ದಾನೊ ಇಲ್ಲವೊ ಅಷ್ಟೇ ಸಾಕು ಎಂಬ ಮಾತುಗಳನ್ನು ಮಕ್ಕಳ ತಾಯಂದಿರು ಆಗೀಗ ತಮ್ಮ ಮಕ್ಕಳ ಬಗೆಗೆ ಆಡಿಕೊಳ್ಳುವದನ್ನು ಕೇಳುತ್ತಿರುತ್ತೇವೆ.

ಇಂದಿನ ಮಕ್ಕಳು ನಮಗಿಂತ ಜಾಣರು, ಬಲು ಚುರುಕು : ಎರಡು ತಿಂಗಳಿಗೇ ಗುರುತು ಹಿಡಿಯುತ್ತವೆ ಎಂಬ ನುಡಿಗಳನ್ನು ಕೇಳುತ್ತಿರುತ್ತೇವೆ. ಈ ಎರಡನೆ ಮಾತೇ ಈಗ ಹೆಚ್ಚಾಗಿ ಪ್ರತೀತಿಗೆ ಬರುವದುಂಟು. ಇದು ಕೇವಲ ಅನುಭವದಿಂದ ಮನದಟ್ಟಾಗುವ ಮಾತೇ ಅಥವಾ ಇದಕ್ಕೆ ವೈಜ್ಞಾನಿಕ ಆಧಾರಗಳೇನಾದರೂ ಇವೆಯೆ ? ಎಂದು ವಿಚಾರಿಸಿದಾಗ ಇಂದಿನ ಮಕ್ಕಳು ಬೇಗನೆ ಮಾತಾಡತೊಡಗುತ್ತವೆ ಎಂಬುದನ್ನು ವೈಜ್ಞಾನಿಕ ಸಂಶೋಧನೆಗಳ ಮೂಲಕ ಪ್ರತಿಪಾದಿಸಲಾಗುತ್ತಿದೆಂಬುದು ಗೋಚರಕ್ಕೆ ಬರುವುದು. ಮಕ್ಕಳು ಮಾತು ಕಲಿಯಲು ಬಹಳ ಸಮಯ ತೆಗೆದುಕೊಳ್ಳುವವು ಎಂಬ ಈ ಮೊದಲಿನ ನಂಬಿಕೆ ಸುಳ್ಳಾಗುವ ದಿನಗಳು ಬಂದಿವೆ.

ಬ್ರಿಟನ್ನಿನ ಎಡಿನ್‌ಬರ್ಗ್ ವಿಶ್ವವಿದ್ಯಾಲಯದ ಡಾ. ಕೋಲ್ವಿನ್ ಟ್ರೆವರ್ದನ್ ಅವರು ಮಕ್ಕಳ ನರಮಂಡಲ ವ್ಯವಸ್ಥೆ, ಸಂಪರ್ಕ ಜ್ಞಾನಾಸಕ್ತಿಗಳ ಕುರಿತು ನಡೆಸಿರುವ ಸಂಶೋಧನೆಗಳು ಕೆಲ ಮಹತ್ವದ ಅಂಶಗಳನ್ನು ಹೊರಗೆಡವಿವೆ. ನವಜಾತ ಶಿಶುವು ಹೊರ ಜಗತ್ತನ್ನು ಸಮರ್ಪಕವಾಗಿ ಎದುರಿಸಲಾರದು ಎಂದು ಮನೋವಿಜ್ಞಾನಿಗಳ ಕಲ್ಪನೆ. ಆದರೆ ನವಜಾತ ಶಿಶು ಪ್ರಪಂಚವನ್ನು ಎದುರಿಸಲು ಸಂಪೂರ್ಣ ಸನ್ನದ್ಧವಿರುತ್ತದೆ ಎಂದು ಡಾ. ಟ್ರೆವರ್ದನ್ ಅವರ ಹೇಳಿಕೆ. ನವಜಾತ ಶಿಶುವಿನ ಜ್ಞಾನತಂತುಗಳು ಸಂಪೂರ್ಣ ಬೆಳವಣಿಗೆ ಹೊಂದಿರುತ್ತವೆ; ಮಿದುಳಿನಲ್ಲಿ ಇನ್ನೂ ಅಲ್ಲಲ್ಲಿ ಸಂಪರ್ಕ ಸ್ಥಾಪಿತವಾಗಿರಲಿಕ್ಕಿಲ್ಲ ಎಂದು ಡಾ. ಟ್ರೆವರ್ದನ್ ಹೇಳುತ್ತಾರೆ. ನವಜಾತ ಶಿಶುವಿನ ನರಮಂಡಲ ಸಂಪೂರ್ಣ ಬೆಳವಣಿಗೆ ಹೊಂದಿದ್ದರೂ ಹೊರಜಗತ್ತಿನ ಸಂಪರ್ಕ ಕಲ್ಪಿಸಿಕೊಳ್ಳಲು ಇನ್ನೂ ಸಿದ್ಧವಾಗಿರುವದಿಲ್ಲ ಎಂದು ಮನೋವಿಜ್ಞಾನಿಗಳು ಇತ್ತೀಚಿನವರೆಗೂ ಹೇಳುತ್ತಿದ್ದರು. ಇಂಥ ವಿರೋಧಾಭಾಸದ ಹೇಳಿಕೆಯು ಡಾ. ಟ್ರೆವರ್ದನರನ್ನು ನವಜಾತ ಶಿಶುಗಳ ಹಾಗೂ ಎಳೆಮಕ್ಕಳ ಮನೋವ್ಯಾಪಾರಗಳ ಕುರಿತು ಸಂಶೋಧನೆ ನಡೆಸುವಂತೆ ಪ್ರೇರೇಪಿಸಿತು.

ಅವರ ಸಂಶೋಧನ ರೀತಿ ಬಹಳ ಸುಲಭವಾಗಿತ್ತು. ಆದರೆ ಪರಿಶ್ರಮಕಾರಿಯಾಗಿತ್ತು. ಮಕ್ಕಳು ತಮ್ಮ ತಾಯಂದಿರ ಅಥವಾ ಆಟಿಗೆಗಳ ಸಮ್ಮುಖದಲ್ಲಿ ವ್ಯಕ್ತಪಡಿಸುವ ಪ್ರತಿಕ್ರಿಯೆಗಳ ಫಿಲ್ಮ ತೆಗೆಯುವದರಲ್ಲಿಯೇ ಗಂಟೆಗಟ್ಲೆ ಅವಧಿ ಕಳೆಯಬೇಕಾಗುತ್ತಿತ್ತು. ನಂತರ ಆ ಮಕ್ಕಳು ತಮ್ಮ ಸುತ್ತುಮುತ್ತಲಿನ ವಾತಾವರಣದ ಬಗ್ಗೆ ವ್ಯಕ್ತಪಡಿಸಿದ ಪ್ರತಿಕ್ರಿಯೆಗಳ ಸ್ವರೂಪದ ಕುರಿತು ಸಂಶೋಧನೆ ಮಾಡಬೇಕಾಗುತ್ತಿತ್ತು. ಚಿಕ್ಕಮಕ್ಕಳು ಜೀವಂತ ವ್ಯಕ್ತಿಗಳ ಕುರಿತು ತೋರುವ ಪ್ರತಿಕ್ರಿಯೆ, ಆಟಿಗೆ ಮುಂತಾದ ನಿರ್ಜೀವ ವಸ್ತುಗಳ ಕುರಿತು ಪ್ರದರ್ಶಿಸಿದ ಪ್ರತಿಕ್ರಿಯೆಗಳಿಗಿಂತ ಭಿನ್ನವಾಗಿದ್ದುದು ಕಂಡುಬಂದಿತು. ಇವೆರಡೂ ಪ್ರಕಾರದ ಪ್ರತಿಕ್ರಿಯೆಗಳ ಕುರಿತು ಡಾ. ಟ್ರೆವರ್ಧನ್ ಹಾಗೂ ಅವರ ಸಂಗಡಿಗರು ಇನ್ನಷ್ಟು ಪ್ರಯೋಗಗಳನ್ನು ನಡೆಸಿದರು.


ಚಲಿಸುವ ವಸ್ತುವನ್ನು ಎಳೆಮಕ್ಕಳು ತಮ್ಮ ಕಣ್ಣುಗಳಿಂದ ಹಿಂಬಾಲಿಸುತ್ತವೆ, ಅದು ಚಲಿಸಿದತ್ತ ಮುಖ ಹೊರಳಿಸುತ್ತವೆ. ತಮ್ಮ ಕೈಕಾಲುಗಳನ್ನು ಅಲ್ಲಾಡಿಸಿ ಆ ವಸ್ತುವನ್ನು ಹಿಡಿದುಕೊಳ್ಳುವಂತೆ ಪ್ರಯತ್ನಿಸುತ್ತವೆ, ಸಾಧ್ಯವಿದ್ದರೆ ಅದನ್ನು ಬಾಯಿಗೆ ತುರುಕಿಕೊಳ್ಳಲೂ ನೋಡುತ್ತವೆ. ಆದರೆ ಈ ಚಲಿಸುವ ವಸ್ತು ಅಲ್ಲದೆ ತಾಯಿ ಅಥವಾ ಇನ್ನಾರಾದರೂ ಹಿರಿಯರು ಅದರ ಸಮ್ಮುಖಕ್ಕೆ ಬಂದಾಗ ಅದರ ಪ್ರತಿಕ್ರಿಯೆ ಬೇರೆ ಸ್ವರೂಪದ್ದಾಗುತ್ತದೆ. ಅದು ಮೊದಲಿನಂತೆ ಅಂದರೆ ವಸ್ತುವನ್ನು ಗ್ರಹಿಸಲು ಪ್ರಯತ್ನಿಸಿದಂತೆ ತಾಯಿಯನ್ನು ಹಿಡಿಯಲು ಪ್ರಯತ್ನಿಸದೆ, ಅವಳೊಡನೆ ಸಂಭಾಷಣೆಗೆ ತೊಡಗುತ್ತದ.

ಶಿಶುಗಳು ಸಜೀವ–ನಿರ್ಜೀವ ವಸ್ತುಗಳೆಲ್ಲವನ್ನೂ ಏಕಪ್ರಕಾರವಾಗಿ ಕಾಣುತ್ತವೆ ಎಂದು ಮನೋವಿಜ್ಞಾನಿ ಜೀನಪೀಜೆಟ್ ಹೇಳಿದ ಮಾತಿಗೆ ಡಾ. ಟ್ರೆವರ್ಧನ್ ಅವರ ಈ ಸಂಶೋಧನೆ ಭಿನ್ನವಾಗಿದೆ. ಮನುಷ್ಯರು ಆಟಿಗೆಗಳಿಂದ ಭಿನ್ನವಾಗಿದ್ದಾರೆ ಎಂಬುದನ್ನು ಅನುಭವದಿಂದ ಅರಿತ ಶಿಶುಗಳು ಈ ರೀತಿ ಭಿನ್ನಪ್ರತಿಕ್ರಿಯೆ ತೋರ್ಪಡಿಸುತ್ತಾರೆ ಎನ್ನುವ ಡಾ. ಟ್ರೆವರ್ಧನ್‌ರ ಅಭಿಪ್ರಾಯ ಸಾಧುವೆನಿಸುತ್ತದೆ.

ಅಂದರೆ ನವಜಾತ ಶಿಶುಗಳ ನರಮಂಡಲ ಇಂಥ ಭೇದ ಗುರುತಿಸಬಲ್ಲಷ್ಟು ಬೆಳವಣಿಗೆ ಹೊಂದಿರುತ್ತದೆ ಎಂದು ಅರ್ಥವಾಗುತ್ತದೆ.

ಮಾನವರ ಮುಖ ಹೇಗೆ ಇರುತ್ತದೆ ಎಂಬುದನ್ನು ಈ ಎಳೆ ಮಕ್ಕಳು ತಿಳಿದಿರುತ್ತವೆ ಅಲ್ಲದೆ ತಮಗೂ ಅಂಥ ಮುಖ ಇದೆ ಎಂಬುದನ್ನೂ ಅರಿತಿರುತ್ತವೆ. ನಾಲ್ಕು ವಾರಗಳ ಶಿಶುವು ತನ್ನ ತಾಯಿ ನಾಲಿಗೆ ಚಾಚಿ ಚೇಷ್ಟಿಸಿದಾಗ ಅದೂ ತನ್ನ ನಾಲಿಗೆ ಚಾಚಿ ಅಣಕಿಸುತ್ತದೆ ಎಂಬುದೇ ಇದಕ್ಕೆ ಸಾಕ್ಷಿ ಎಂದು ಇನ್ನೊಬ್ಬ ಮನೋವಿಜ್ಞಾನಿ ಟಾಮ್ ಬಾವರ್ ಹೇಳುತ್ತಾನೆ.

ಮಕ್ಕಳು ಪ್ರತ್ಯಕ್ಷವಾಗಿ ಶಬ್ದಗಳನ್ನು ಉಚ್ಚ



ನಾನು ಬಾಯಲ್ಲಿ ಹೇಳೋದ್ನೆಲ್ಲಾ ರೈಟಿಂಗ್‌ನಲ್ಲಿ ಕೆ. ಡಿ ಅಂಕ್ಕೀಳ್ತೀರಲ್ಲಾ! ಮಿಸ್ಟರ್... ನಾನೇನು ಅಷ್ಟೊಂದು ಹುಂಬನೇ?... ಕಾಗದದ ಅಭಾವವಿರೋದ್ರಿಂದ ಮಿತವ್ಯಯ ಮಾಡಿ ಅಂತ ಬೋರ್ಡ್ ಆರ್ಡರ್ರೇ ಇದೆ.

ರಿಸಿ ಮಾತಾಡುವ ಮುನ್ನ ಅವುಗಳ ಸಂಭಾಷಣಾ ವೈಖರಿ ಎಂತಿರುತ್ತದೆ ಎಂಬ ಮಾತು ಬರುತ್ತದೆ. ಆ ಅವಧಿಯಲ್ಲಿ ಮಕ್ಕಳು ಬಾಯಿ ತೆರೆದು ಆ–ಊ–ಹಿ ಎಂದು ಆಡುತ್ತವೆ, ಧ್ವನಿ ಹೊರಡುತ್ತದೆ. ಆದರೆ ಶಬ್ದಗಳು ಹೊರಬರುವುದಿಲ್ಲ, ಎಂದು ಡಾ. ಟ್ರೆವರ್ದನ್‌ರ ನಿವೇದನೆ. ಮಕ್ಕಳ ಆ ಕಾಲದ ಬಾಯಿ ಹಾಗೂ ನಾಲಗೆಗಳ ಚಲನವಲನ ನಿರೀಕ್ಷಿಸಿದಾಗ ಅವು ನಿಜವಾಗಿಯೂ ಮಾತಾಡಲು ಪ್ರಯತ್ನಿಸುತ್ತಿವೆ ಎಂಬುದು ಹೊಳೆಯದಿರದು.

ಮಕ್ಕಳ ಈ ಬಾಯಿ ಚಲನವಲನವಷ್ಟೆ ಸಂಪರ್ಕ ಸಾಧನವಾಗಿಲ್ಲ. ಮಾತು ಬರುವದಕ್ಕೆ ಮುಂಚೆ ಮಕ್ಕಳು ಕೈಕಾಲುಗಳ ಹಾವಭಾವದಿಂದ ಹಿರಿಯರೊಂದಿಗೆ ತಮ್ಮ ಸಂಪರ್ಕ ಬೆಳೆಸಲು ಯತ್ನಿಸುತ್ತಿರುತ್ತವೆ. ಹಿರಿಯರು ಸಂಭಾಷಿಸುವಾಗ ಮಾಡುವ ಹಾವ ಭಾವಗಳನ್ನೇ ಇವು ಹೋಲುತ್ತಿರುವದೂ ಒಂದು ವಿಶೇಷ. ಮಗು ಹಿರಿಯರೊಡನೆ ಅಥವಾ ತನ್ನ ತಾಯಿಯೊಡನೆ ಇಂಥ ಹಾವ ಭಾವಗಳಿಂದ ಸಂಭಾಷಿಸುತ್ತಿರುವಾಗ ಅದರ ಅಂಗಾಂಗ ಚಲನವಲನಗಳೂ ಅದೇ ರೀತಿಯವಾಗಿರುವದನ್ನು ಗಮನಿಸಬಹುದು. ಇದನ್ನೆಲ್ಲ ಗಮನಿಸಿದಾಗ ಸಂಪರ್ಕ ಸಾಧನಾ ವ್ಯವಸ್ಥೆಯೊಂದು ಜನ್ಮಿಸಿದಾಗಲೆ ಶಿಶುವಿನಲ್ಲಿ ಪೂರ್ತಿಯಾಗಿರುತ್ತದೆ ಮತ್ತು ಎಂಟು ವಾರಗಳ ಅವಧಿಯಲ್ಲಿ ಅದನ್ನು ಸಂಪೂರ್ಣ ಬಳಕೆಗೆ ತರಲಾಗುತ್ತದೆ ಎಂಬುದು ಸ್ಪಷ್ಟವಾಗದಿರದು. ಆ ಮಗು ಶಬ್ದಸಂಪತ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳಲು ಶಕ್ತವಾಗುವದಕ್ಕಿಂತ ಸಾಕಷ್ಟು ಮೊದಲೇ ಅದಕ್ಕೆ ಸಂಪರ್ಕ ಸಾಧನೆಯ ಭಾಷೆಯೊಂದು ಸ್ವಾಭಾವಿಕವಾಗಿ ಅವಗತವಾಗಿರುತ್ತದೆ ಎಂಬುದು ಸ್ಪಷ್ಟ.

ಮಕ್ಕಳೊಡನೆ ಮಾತಾಡುವವರು ಈ ಕೆಳಗಿನ ಅಂಶಗಳನ್ನು ಗಮನಿಸಿರಬಹುದು. ಸಾವಧಾನದಿಂದ ಒಂದೊಂದೇ ಅಕ್ಷರ ಉಚ್ಚರಿಸುತ್ತಾರೆ. ಭಾಷೆ ಬಾಲಭಾಷೆಯಾಗಿರುತ್ತದೆ, ಮಕ್ಕಳ ಧ್ವನಿಗಳನ್ನೇ ಹಿರಿಯರು ಪದೇ ಪದೇ ಅನುಕರಿಸುತ್ತಾರೆ. ಇವೆಲ್ಲ ಮಕ್ಕಳಿಗೆ ಮಾತಾಡಲು ಕಲಿಸುವ ವಿಧಾನಗಳು ಎಂದೇ ಹೇಳಬಹುದು. ಈ ಶಿಕ್ಷಣ ಬಹಳ ವಿನಾಯಾಸದಿಂದ ನಡೆಯುತ್ತದೆ. ಹಿರಿಯರಿಗೆ ಆನಂದವನ್ನೂ ನೀಡುತ್ತದೆ. ಮಕ್ಕಳು ಹಿರಿಯರ ಬಾಯಿಯ ಚಲನವಲನಗಳನ್ನು ಅನುಕರಿಸುತ್ತ ಕ್ರಮೇಣ ಮಾತನಾಡಲು ಕಲಿತುಕೊಳ್ಳುತ್ತವೆ. ಆದರೆ ಮಾತು ಬರುವ ಮುನ್ನ ಶಿಶುವು ಹಿರಿಯರ ಬಾಯಿ ತುಟಿಗಳ ಚಲನವಲನಗಳನ್ನು ಅದೆಷ್ಟೋ ಸಮರ್ಪಕವಾಗಿ ಅನುಕರಿಸಿದರೂ ಹಿರಿಯರು ಗಮನಿಸುವದಿಲ್ಲ. ಅಂತೇ ಮನೋವಿಜ್ಞಾನಿಗಳು ಮಗುವಿಗೆ ಮಾತು ಬರಲು ಬಹಳಷ್ಟು ಸಮಯ ಬೇಕು ಎಂದು ಹೇಳಿದ್ದಾರೆ.

ಮಗುವು ಐದು ತಿಂಗಳದ್ದಾಯಿತೆಂದರೆ ಸಂಭಾಷಣೆಯಲ್ಲಿ ಅದು ಭಾಗವಹಿಸಲು ಸಮರ್ಥವಾಗುತ್ತದೆ. ಯಾವದೊಂದು ವಸ್ತುವನ್ನು ದಿಟ್ಟಿಸಿ ನೋಡುತ್ತ ಹಿರಿಯರ ಗಮನವನ್ನು ಅತ್ತ ಸೆಳೆಯುತ್ತದೆ. ಮಗುವಿನ ದೃಷ್ಟಿ ಎಲ್ಲಿದೆಂಬುದು ಹಿರಿಯರಿಗೆ ತಿಳಿದ ಕೂಡಲೆ ಆ ವಸ್ತುವಿನ ಕುರಿತು ಅವರಲ್ಲಿ ಸಂಭಾಷಣೆ ಪ್ರಾರಂಭವಾಗುತ್ತದೆ.

ಇಷ್ಟೊತ್ತಿಗಾಗಲೇ ಮಕ್ಕಳ ಪ್ರತಿಕ್ರಿಯೆಗಳಲ್ಲಿ ಕೂಡ ವ್ಯತ್ಯಾಸ ಕಂಡು ಬರತೊಡಗುತ್ತದೆ. ಗಂಡು ಮಗುವಿನ ಅಂಗಾಂಗ ಚಲನವಲನಗಳು ಹೆಚ್ಚು ಉತ್ಸಾಹ ಶಕ್ತಿಯನ್ನು ಪ್ರದರ್ಶಿಸಿದರೆ ಹೆಣ್ಣು ಮಕ್ಕಳ ಚಲನವಲನಗಳು ನಸು ನಾಜೋಕಿನಿಂದ ಕೂಡಿರುತ್ತವೆ.

ಹಿರಿಯರ ಮಾತಿನ ಧ್ವನಿತರಂಗಗಳು ಹಾಗೂ ಮಕ್ಕಳ ಬಾಯಿಯ ಚಲನವಲನಗಳ ತರಂಗಗಳಲ್ಲಿ ವಿಲಕ್ಷಣ ಸಾಮ್ಯವಿದೆ ಎಂದೂ ಇನ್ನೊಬ್ಬ ಮನೋವಿಜ್ಞಾನಿ ಡಾ. ವಿಲಿಯಂ ಕೊಂಡೋನ್ ಹೇಳುತ್ತಾರೆ. ಹೀಗೆ ತನ್ನ ರೀತಿಯಲ್ಲಿ ಸಂಭಾಷಿಸುವ ಕಲೆಯನ್ನು ಮಗುವು ಜನ್ಮತಃ ಕಲಿತುಕೊಂಡಿರುತ್ತದೆ ಎಂಬ ಈ ಹೊಸ ವಿಚಾರವೇ ಇಂದಿನ ಮಕ್ಕಳು ಹೆಚ್ಚಿಗೆ ಜಾಣರು ಎಂಬುದಕ್ಕೆ ಆಧಾರವಾಗಿದೆ ಎಂದು ಹೇಳಬೇಕು.



ಸ್ತ್ರೀ ಸಹಜ ಸೌಂದರ್ಯವೇ ಮಹಿಳೆಯ ಹೆಗ್ಗಳಿಕೆ
anita
TOILET SOAP FOR TEENAGE COMPLEXION
anita
TOILET SOAP
ಅನಿತಾ
ಟಾಯ್ಲೆಟ್ ಸೋಪ್
ನಿಮ್ಮ ಸೌಂದರ್ಯವನ್ನು ರಕ್ಷಿಸುತ್ತದೆ
ತಯಾರಕರು ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ್ ಮಂಗಳೂರು

ಅಲ್ಲಿ ಸಾವಕಾಶವಾಗಿಯಾದರೂ ನಾಗರಿಕತೆ ಬರುತ್ತಿದೆ

ಖೈಬರ ಕಣಿವೆಯ ವೃತ್ತಾಂತ

ಪೇಶಾವರದಿಂದ ವಾಯುವ್ಯಕ್ಕೆ ಹತ್ತು ಮೈಲುಗಳಷ್ಟು ಅಂತರವನ್ನು ಕ್ರಮಿಸುವುದರಲ್ಲೇ ಇತಿಹಾಸವನ್ನೇ ನಿರ್ಮಿಸುವ ಮೋಡಗಳು ಕಾಲ ಕ್ಷಿತಿಜದ ಮೇಲೆ ರೂಪುಗೊಳ್ಳುವುದನ್ನು ನೀವು ಕಾಣಬಹುದೆಂದು ಸಾರುವ ಫಲಕವೊಂದು ಎದುರಾಗುತ್ತದೆ. ಅದಕ್ಕಿಂತ ತುಸು ಮುಂದೆ ಸಾಗಿದರೆ ಕಲ್ಲಿನಿಂದ ಕಟ್ಟಿದ ಹಳೆಗಾಲದ ಎತ್ತರವಾದ ದ್ವಾರವೂ ಅದರ ಎರಡೂ ಬದಿಗಳಲ್ಲಿ ಎರಡು ಮಹಾಕಾಯದ ತೋಪುಗಳೂ ಗೋಚರಿಸುತ್ತವೆ. ದ್ವಾರದ ಮುಂದೆಯೇ ಮತ್ತೊಂದು ಫಲಕ ಹಗಲು ಕಳೆಯುವುದರೊಳಗಾಗಿ ಕಣಿವೆಯನ್ನು ದಾಟಬೇಕೆಂದೂ ಮಾರ್ಗ ಮಧ್ಯದಲ್ಲಿ ಯಾರೂ ವಸತಿ ಹೂಡಬಾರದೆಂದೂ ಪ್ರವಾಸಿಗರನ್ನು ಪ್ರತಿಬಂಧಿಸುತ್ತದೆ.

ಪ್ರತಿಬಂಧಿಸುವುದೇನು ಬಂತು? ರಾತ್ರಿ ಕಂಡ ಬಾವಿಯಲ್ಲಿ ಹಗಲಲ್ಲಿ ಹಾರಿಕೊಳ್ಳಲು ಯಾರಾದರೂ ಬಯಸುತ್ತಾರೆಯೇ? ಶತಮಾನಗಳ ಪ್ರಯತ್ನದ ನಂತರವೂ ಖೈಬರ್ ಕಣಿವೆ ಸುರಕ್ಷಿತವಾಗಿಲ್ಲ. ದರೋಡೆಯ ಮೇಲೆಯೇ ಜೀವಿಸುವ ಕೆಲ ಮೂಲನಿವಾಸಿ ಜನಾಂಗಗಳನ್ನು ಬಗ್ಗು ಬಡಿಯಲು ಕಳೆದ ಇಪ್ಪತ್ತೇಳು ವರ್ಷಗಳಿಂದ ಪಾಕಿಸ್ತಾನದ ಸರಕಾರ ಪ್ರಯತ್ನಿಸುತ್ತಿದ್ದರೂ ಸಫಲವಾಗಿಲ್ಲ.

ಎರಡೂ ಬದಿಗೆ ಎತ್ತರೆತ್ತರವಾದ ಪರ್ವತ ಶ್ರೇಣಿ. ನಡುವೆ ಕಾಲುದಾರಿ. ದಾರಿಯು ಅಗಲ ಎಲ್ಲಿಯೂ ನಾಲ್ವತ್ತು ಅಡಿಗಳಿಗಿಂತ ಹೆಚ್ಚಾಗಿಲ್ಲ. ಪಾಕಿಸ್ತಾನದಿಂದ ಅಫಘಾನಿಸ್ತಾನಕ್ಕೆ ಸಾಗುವ ವಾಹನಗಳೆಲ್ಲವೂ ಈ ಮಾರ್ಗದ ಮೂಲಕವಾಗಿಯೇ ಸಾಗಬೇಕು. ಅದಕ್ಕಾಗಿಯೇ ಅಲ್ಲಿ ಒಂದರ ಜೊತೆಗೊಂದರಂತೆ ಎರಡು ಮಾರ್ಗಗಳನ್ನು ನಿರ್ಮಿಸಲಾಗಿದೆ. ಒಂದು ಕುದುರೆ, ಒಂಟೆ ಮುಂತಾದವುಗಳ ಮೇಲೆ ಸಾಗುವವರಿಗಾಗಿ, ಇನ್ನೊಂದು ಮೋಟಾರಿನ ಮೂಲಕವಾಗಿ ಸಾಗುವವರಿಗಾಗಿ.

ಖೈಬರ್ ಕಣಿವೆಯ ಉದ್ದ ಬಹಳವೆಂದರೆ ಮೂವತ್ತುಮೂರು ಮೈಲುಗಳಷ್ಟಿದ್ದೀತು. ಆದರೆ ಇತಿಹಾಸದ ಏರಿಳಿತಗಳನ್ನು ಈ ದಾರಿ ಕಂಡಷ್ಟು ಜಗತ್ತಿನ ಬೇರಾವ ದಾರಿಯೂ ಕಂಡಿರಲಾರದು. ಸುಮಾರು ಐದು ಸಾವಿರ ವರ್ಷಗಳಷ್ಟು ಹಿಂದೆಯೇ ಮಧ್ಯ ಏಶಿಯದಿಂದ ಆರ್ಯರು ಈ ಮಾರ್ಗದ ಮೂಲಕ ಭಾರತಕ್ಕೆ ಸಾಗಿ ಬಂದರು. ಅಲೆಕ್ಸಾಂಡರ್, ತೈಮೂರ್ ಲಂಗ್, ಚೆಂಗೀಜ್‌ಖಾನನಂಥ ರಕ್ತಪಿಪಾಸಿ ಸಮ್ರಾಟರು ಭಾರತದ ಮೇಲೆ ಆಕ್ರಮಣವೆಸಗಿದ್ದು ಈ ಮಾರ್ಗದ ಮೂಲಕವಾಗಿಯೇ.

ಮೊದಲಿನಿಂದಲೂ ಈ ಪ್ರದೇಶ ಅನಾಗರಿಕ ಜನಾಂಗಗಳಿಗೆ ಹೆಸರಾಗಿದ್ದು ಇಂದು ಅಲ್ಲಿ

ಒಂದು ಸಾವಿರಕ್ಕಿಂತಲೂ ಹೆಚ್ಚು ಬಣಗಳು ವಾಸಿಸುತ್ತವೆಯೆಂದು ಲೆಕ್ಕಹಾಕಲಾಗಿದೆ. ಇಲ್ಲಿ ದೊಣ್ಣೆಯಿದ್ದವನೇ ಬಲವಂತ. ಅವನದೇ ಮಾತು ನಡೆಯುತ್ತದೆ. ಬಾಲ್ಯದಿಂದಲೇ ಬಂದೂಕು ಇವರ ಸಂಗಾತಿ. ಬಹುತರವಾಗಿ ಇವರೆಲ್ಲರೂ ಮುಸಲ್ಮಾನರು. ಆದರೆ ಆಧುನಿಕ ಆಡಳಿತ ವ್ಯವಸ್ಥೆಯನ್ನು ಅಷ್ಟಾಗಿ ಮೆಚ್ಚಿಕೊಳ್ಳದ ಇವರು ಪಾಕಿಸ್ತಾನದ ಆಡಳಿತವನ್ನು ಮನಸ್ಸಿಲ್ಲದ ಮನಸ್ಸಿನಿಂದ ಸಹಿಸುತ್ತಿದ್ದಾರೆ. ಹೀಗಾಗಿ ಆಗಾಗ ಬಂಡೇಳುವುದೂ ಉಂಟು. ಬ್ರಿಟಿಶರು ನೂರೈವತ್ತು ವರ್ಷಗಳಷ್ಟು ಕಾಲ ಪ್ರಯತ್ನಿಸಿದರೂ ಇವರನ್ನು ತಮ್ಮ ನಿಯಂತ್ರಣಕ್ಕೆ ತರಲಾಗಲಿಲ್ಲ. ಅಂದಮೇಲೆ ಪಾಕಿಸ್ತಾನದಂತಹ ರಾಷ್ಟ್ರ ಸದ್ಯೋಭವಿಷ್ಯದಲ್ಲಿ ಆ ಗಂಡುಗಾಡು ನಿವಾಸಿಗಳನ್ನು ತಹಬಂದಿಗೆ ತಂದೀತೆನ್ನುವುದು ಕಲ್ಪನಾವಿಲಾಸವೇ ಸರಿ. ಹೀಗಾಗಿ ಆಗಾಗ ಅಲ್ಲಿನ ಜನ ಸರಕಾರದ ವಿರುದ್ಧ ಬಂಡೇಳುತ್ತಾರೆ.

ಖೈಬರ್ ಕಣಿವೆಯ ಮೇಲೆ ತಾನು ಸಂಪೂರ್ಣ ನಿಯಂತ್ರಣ ಸ್ಥಾಪಿಸಿದ್ದಾಗಿ ಪಾಕಿಸ್ತಾನ ಹೇಳುತ್ತಿದ್ದರೂ ವಸ್ತುಸ್ಥಿತಿ ಬೇರೆಯೇ ಇದೆ. ಕಣಿವೆಯ ಅಂಚಿನಲ್ಲಿ ಪಾಕಿಸ್ತಾನ ಅಲ್ಪ ಸ್ವಲ್ಪ

ಖೈಬರ್ ಕಣಿವೆಯಲ್ಲಿಯ ಲಂಡಿಕೋಟಾಲ ಹಳ್ಳಿಯ ಪೇಟೆ



ನಿಯಂತ್ರಣ ಸ್ಥಾಪಿಸಿದರೂ ಒಳಭಾಗದಲ್ಲಿನ ಮೂಲ ಜನಾಂಗದವರು ಹಳೆಗಾಲದ ತಮ್ಮ ಪದ್ಧತಿಯಂತೆ ಆಡಳಿತವನ್ನು ಸಾಗಿಸಿಕೊಂಡು ಹೋಗುತ್ತಿದ್ದಾರೆ. ಅವರಿಗೆ ತಮ್ಮದೇ ಆದ ಆಡಳಿತ ವ್ಯವಸ್ಥೆಯಿದೆ, ತಮ್ಮದೇ ಆದ ನೀತಿ ನಿಯಮಗಳಿವೆ ಎಂದು ಖೈಬರ್ ಕಣಿವೆಯಲ್ಲಿ ಸಂಚರಿಸಿ ಬಂದ ಅಮೇರಿಕದ ನ್ಯಾಶನಲ್ ಜಿಯಾಗ್ರಫಿಕ್ ಸೊಸಾಯಿಟಿಯ ಸದಸ್ಯನೊಬ್ಬ ವರದಿ ಮಾಡಿದ್ದಾನೆ.

ಖೈಬರ್ ಘಟ್ಟದ ಹಳ್ಳಿಗಳಲ್ಲಿ ಚಿಕ್ಕ ಚಿಕ್ಕ ಗುಡಿಸಲುಗಳನ್ನು ಕಟ್ಟಿಕೊಂಡು ಜನ ವಾಸಿಸುತ್ತಾರೆ. ಮುಖ್ಯವಾಗಿ ಅವರು ಕೃಷಿಕರು, ದನಗಾಹಿಗಳು. ಅಫೀಮಿಗೆ ಈಗ ಜಗತ್ತಿನಾದ್ಯಂತ ಬೇಡಿಕೆಯಿರುವುದರಿಂದ ಅಲ್ಲಿನ ಮೂಲ ನಿವಾಸಿಗಳು ಅಫೀಮನ್ನೇ ಹೆಚ್ಚಾಗಿ ಬೆಳೆಯುತ್ತಾರೆ. ಅನಂತರ ಅದನ್ನು ಸಂಸ್ಕರಿಸಿ ಕಳ್ಳಸಾಗಾಟದ ಮೂಲಕ ಪರದೇಶಗಳಿಗೆ ಸಾಗಿಸುತ್ತಾರೆ. ಅದರಿಂದ ಬೇರ್ಪಡಿಸಲ್ಪಟ್ಟ ಹೆರಾಯಿನನ್ನು ಪಾಶ್ಚಾತ್ಯ ರಾಷ್ಟ್ರಗಳ, ಅದರಲ್ಲೂ ವಿಶೇಷವಾಗಿ ಅಮೇರಿಕದ ಯುವಕರು ಸೇವಿಸುತ್ತಾರೆ.

ಕಳ್ಳ ಸಾಗಾಣಿಕೆಯೆನ್ನುವುದು ಇಲ್ಲಿ ಹೆಸರಿಗೆ ಮಾತ್ರ. ಕಣಿವೆಗಳಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಯಾರು ಬೇಕಾದರೂ ಮುನ್ನೂರು ರೂಪಾಯಿಗಳಿಗೆ ಒಂದು ಕಿಲೋದಂತೆ ಅಫೀಮನ್ನು ಕೊಳ್ಳಬಹುದು. ಹೆಚ್ಚು ಪ್ರಮಾಣದಲ್ಲಿ ಅಫೀಮನ್ನು ಕೊಂಡಾಗ ಅದನ್ನು ಒದಗಿಸಿದಾತ ಅಫೀಮನ್ನು ಪಾಕಿಸ್ತಾನದ ಗಡಿದಾಟುವವರೆಗೆ ನಿರಾತಂಕವಾಗಿ ಸಾಗಿಸಿಕೊಡುವ ಭರವಸೆಯನ್ನು ಕೊಡಬಹುದು. ಇಲ್ಲಿನ ಅಫೀಮು ಬೆಳೆಯುವವರೂ ಅದನ್ನು ಸಂಸ್ಕರಿಸಿ ಮಾರುವವರೂ ಧನಬಲದಿಂದ ಒಂದು ರೀತಿಯಲ್ಲಿ ಪಾಕಿಸ್ತಾನದ ಪೋಲೀಸು ಅಧಿಕಾರಿಗಳನ್ನು ಕೊಂಡುಬಿಟ್ಟಿದ್ದಾರೆ. ಲಂಚದ ರುಚಿ ಹತ್ತಿದ ಅಧಿಕಾರಿಗಳು ಪ್ರತಿ ಕಿಲೋಗ್ರಾಮಿಗೆ ಇಂತಿಷ್ಟೆಂಬ ದರದಲ್ಲಿ ಲಂಚವನ್ನು ಇಸಿದುಕೊಂಡು ಅಫೀಮು ಸಾಗಿಸುವ ವಾಹನವನ್ನು ಬಿಟ್ಟು ಬಿಡುತ್ತಾರೆ.

ಖೈಬರ್ ಕಣಿವೆಯ ಪ್ರದೇಶದಲ್ಲಿನ ದರ್ರಾ ಎಂಬ ಹೆಸರಿನ ಪಟ್ಟಣ ಬಂದೂಕುಗಳಿಗಾಗಿ

ಗುಡ್ಡಗಾಡು ಜನರನ್ನು ನಿಯಂತ್ರಿಸಲು ಬ್ರಿಟಿಶ್ ಶಾಹಿ ಇದ್ದ ಗುಡ್ಡ



ಪ್ರಸಿದ್ಧ. ಅಲ್ಲಿನ ಜನರು ದರ್ರಾವನ್ನು ಪಟ್ಟಣವೆಂದು ಕರೆದುಕೊಳ್ಳುವರಾದರೂ ನಮ್ಮ ಮಾನದಿಂದ ಅದು ಹಳ್ಳಿಯೇ ಸರಿ. ತಾಸೆರಡು ತಾಸಿನಲ್ಲಿ ಯಾರು ಬೇಕಾದರೂ ದರ್ರಾವನ್ನು ಸುತ್ತಿ ಬರಬಹುದು. ಇಲ್ಲಿನ ಜನ ಅಂದಚಂದವಾದ, ಹಾಗೆಯೇ ಬಹು ನಿಖರವಾದ ಬಂದೂಕುಗಳನ್ನು ತಯಾರಿಸುತ್ತಾರೆ. ಇಲ್ಲಿ ತಯಾರಾದ ಬಂದೂಕುಗಳಿಗೆ ಪಾಕಿಸ್ತಾನದಲ್ಲಿಯೂ ಅಫಘಾನಿಸ್ತಾನದಲ್ಲಿಯೂ ತುಂಬಾ ಬೇಡಿಕೆಯುಂಟು. ಕಳೆದ ಎರಡು ತಲೆಮಾರುಗಳಿಂದಲೂ ಬಂದೂಕುಗಳ ತಯಾರಿಕೆ ಒಂದು ಗೃಹೋದ್ಯಮವಾಗಿ ಬೆಳೆದು ಬಂದಿದೆ. ಜಗತ್ಪ್ರಸಿದ್ಧವಾದ ಬಂದೂಕು ಕಂಪನಿಗಳು ತಯಾರಿಸುವಂತಹ ಬಂದೂಕುಗಳನ್ನೇ ಇವರು ತಯಾರಿಸುತ್ತಿದ್ದು ಹೊರನೋಟಕ್ಕೆ ಪ್ರತಿಕೃತಿಗೂ ಮೂಲಕೃತಿಗೂ ಯಾವ ವ್ಯತ್ಯಾಸವೂ ಗೋಚರಿಸುವುದಿಲ್ಲ. ಪೆನ್‌ಪಿಸ್ತೂಲಿನಂಥ ಆಕರ್ಷಕ ಅಸ್ತ್ರಗಳೂ ಇವರಲ್ಲಿ ದೊರೆಯುತ್ತವೆ.

ಅಫೀಮನ್ನು ಬಿಟ್ಟರೆ ಹಣ್ಣುಹಂಪಲುಗಳನ್ನು ಬೆಳೆಯುವುದೇ ಇವರ ಮುಖ್ಯ ಉದ್ಯೋಗ. ಅವುಗಳಿಗೆ ಪಾಕಿಸ್ತಾನದಲ್ಲಿ ತುಂಬಾ ಬೇಡಿಕೆಯಿದೆ.

ಖೈಬರ್ ಕಣಿವೆಯ ಅನಾಗರಿಕ ಜನಾಂಗಗಳನ್ನು ನಾಗರಿಕವಾಗಿ ಪರಿವರ್ತಿಸುವುದಕ್ಕೆ ಪಾಕಿಸ್ತಾನ ಸರಕಾರ ಒಂದು ಯೋಜನೆಯನ್ನೆ ಹಮ್ಮಿಕೊಂಡಿದೆ. ಆ ಪ್ರಕಾರ ಅದು ವಿದ್ಯಾಭ್ಯಾಸ ಮಾಡುವ ಅನಾಗರಿಕ ಜನಾಂಗಕ್ಕೆ ಸೇರಿದ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನಲ್ಲದೆ ಪುಸ್ತಕಾದಿಗಳನ್ನೂ ಊಟ ವಸತಿಗಳನ್ನೂ ಒದಗಿಸುವುದು. ಪೇಶಾವರ್ ವಿಶ್ವವಿದ್ಯಾಲಯದಲ್ಲಿ ಇವರಿಗಾಗಿಯೆ ಒಂದು ಹಾಸ್ಟೆಲನ್ನು ಕಟ್ಟಲಾಗಿದ್ದು ಅವರ ಸಂಪೂರ್ಣ ವೆಚ್ಚವನ್ನು ಸರಕಾರವೇ ವಹಿಸಿಕೊಳ್ಳುತ್ತಿದೆ. ಹೀಗಾಗಿ ಇತ್ತಿತ್ತಲಾಗಿ ಈ ಅನಾಗರಿಕ ಜನಾಂಗಗಳ ಯುವಕರು ಹೊಸಗಾಲದ ಪದ್ಧತಿಯ ಪ್ರಕಾರ ಶಿಕ್ಷಣ ಪಡೆಯುತ್ತಿದ್ದಾರೆ. ಪಾಕಿಸ್ತಾನದಲ್ಲಿ ಸರಕಾರಿ ನೌಕರಿಗಳಲ್ಲಿ ಕೆಲವು ಸ್ಥಾನಗಳನ್ನು ಅವರಿಗಾಗಿ ಮೀಸಲಾಗಿಡಲಾಗಿದೆ. ಹೀಗಿದ್ದರೂ ಅವರಲ್ಲಿ ಶಿಕ್ಷಣಕ್ಕಾಗಿ ಮುಂದೆ ಬರುವ ಜನ ಕಡಿಮೆ. ಬಂದರೂ ಪದವೀಧರರಾಗುವವರ ಸಂಖ್ಯೆ ಇನ್ನೂ ಕಡಿಮೆ. ಪದವೀಧರರಾಗಿ ಸರಕಾರಿ ನೌಕರಿಗಳನ್ನು ಸ್ವೀಕರಿಸಿದವರಲ್ಲಿಯೂ ಮೊದಲಿನ ಗ್ರಾಮೀಣ ಜೀವನವೇ ಒಳ್ಳೆಯದೆನ್ನುವ ಜನ ಹೆಚ್ಚು.

ಪೇಶಾವರದ ಸಮೀಪದಲ್ಲಿ ವಾರ್ಸಾಕ್ ಅಣೆಕಟ್ಟನ್ನು ಕಟ್ಟಲಾಗಿದ್ದು ಅದು ಕೃಷಿಗೆ ನೀರನ್ನು ಪೂರೈಸುವುದಲ್ಲದೆ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ತನ್ನೂ ಒದಗಿಸುವುದು. ಕಾನಡಾ ಸರಕಾರದ ಸಹಾಯದೊಂದಿಗೆ ನಿರ್ಮಿಸಲಾದ ಈ ಅಣೆಕಟ್ಟಿಗೆ ಒಂದು ಕೋಟಿ ಅರವತ್ತು ಲಕ್ಷ ಡಾಲರುಗಳಷ್ಟು ಹಣ ವೆಚ್ಚವಾಗಿದ್ದು ಖೈಬರ್ ಕಣಿವೆಯ ಎಂಟು ಸಾವಿರ ಮೂಲನಿವಾಸಿಗಳು ಇದರ ನಿರ್ಮಾಣ ಕಾರ್ಯದಲ್ಲಿ ದುಡಿದಿದ್ದಾರೆ. ವಾರ್ಸಾಕ್ ಅಣೆಕಟ್ಟಿನಿಂದ ಈಗ ಕಣಿವೆ ಪ್ರದೇಶಕ್ಕೂ ನೀರು ದೊರೆಯತೊಡಗಿದ್ದರಿಂದ ಅಲ್ಲಿನ ಹೆಚ್ಚು ಹೆಚ್ಚು ಭೂಮಿ ಕೃಷಿಗೆ ಒಳಪಡುತ್ತಿದೆ.

ಇವೆಲ್ಲವುಗಳಿಂದಾಗಿ ಖೈಬರ್ ಕಣಿವೆಗೆ ಈಗ ಸಾವಕಾಶವಾಗಿಯಾದರೂ ನಾಗರಿಕತೆ ಬರುತ್ತಿದೆ. ಪಾಕಿಸ್ತಾನಕ್ಕೆ ಬೇಕಾದದ್ದೂ ಇದೇ. ಈ ಗಂಡುಗಾಡು ಜನರನ್ನು ಪಳಗಿಸಲು ಬ್ರಿಟಿಶರು ಸತತ ನೂರಾಐವತ್ತು ವರ್ಷಗಳಷ್ಟು ಕಾಲ ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಅವರನ್ನು ಸರಿಯಾದ ದಾರಿಗೆ ತರಬೇಕೆಂದರೆ ಮನಃಪರಿವರ್ತನೆಯೊಂದೆ ಈಗುಳಿದಿರುವ ಮಾರ್ಗ ಎಂಬುದು ಪಾಕಿಸ್ತಾನಕ್ಕೆ ಗೊತ್ತಿಲ್ಲದಿಲ್ಲ. ✡

ಯಾವುದೊಂದು ಸಮಸ್ಯೆಯನ್ನು ಪರಿಹರಿಸಲು ಇರುವ ಮಾರ್ಗಗಳ ಪೈಕಿ ಬೇರೆಯವರ ಹಣವನ್ನು ವೆಚ್ಚಮಾಡಿ ಪರಿಹರಿಸಿಕೊಳ್ಳುವ ಮಾರ್ಗವೆ ಸರ್ವೋತ್ಕೃಷ್ಟವಾದದ್ದೆಂದು ನನಗೆ ಅನಿಸುತ್ತದೆ.

— ಜೇಮ್ಸ್ ಫ್ರೀಡ್‌ಮನ್

ಜನಪದ ಹಾಡುಗಬ್ಬ
ಅರ್ಜುನ ಜೋಗಿ

ನೋ. ಗಣಪತಿ

ಯಾವ ದೇಶದಲ್ಲಿಯೋ ಆಗಲಿ, ಯಾವ ಜನಾಂಗದಲ್ಲಿಯೋ ಆಗಲಿ ಸುತ್ತಮುತ್ತಲಿನ ವಾತಾವರಣದ ಮೇಲಿಂದ ಮಾನವನ ಸಂಸ್ಕಾರಗಳು ಮಾತ್ರ ಬದಲಾಗಬಹುದಲ್ಲದೆ ಅವನ ಮನೋಭಾವನೆಗಳು ಎಲ್ಲಿದ್ದರೂ ಒಂದೇ. ಗಂಡ ಹೆಂಡಿರ ಪ್ರೇಮ, ತಾಯಿ ಮಕ್ಕಳ ವಾತ್ಸಲ್ಯ ಮೊದಲಾದ ಜೀವನ ಚಿತ್ರಗಳು ಎಲ್ಲ ಕಡೆಗೂ ಒಂದೇ, ಅವುಗಳ ಬಣ್ಣಗಳು ಬೇರೆ ಕಂಡರೂ ರೂಪಗಳು ಒಂದೇ. ಕನ್ನಾಡು ಇದಾವುದಕ್ಕೂ ಹೊರತಾಗಿಲ್ಲ. ಇಂದು ನಮಗೆ ಕರ್ನಾಟಕದ ತುಂಬೆಲ್ಲ ಕಾಡುಬರುವ ಸರಳ ಜೀವನದ ತಿರುಳು ಚಿತ್ರಗಳನ್ನೊಳಗೊಂಡ ಜನಪದ ಸಾಹಿತ್ಯವೇ ಇದಕ್ಕೆ ಸಾಕ್ಷಿ"–ಹೀಗೆಂದು ತಮ್ಮ "ಕನ್ನಡ ಜಾನಪದ ಗೀತಗಳು" ಗ್ರಂಥದ ಪ್ರಸ್ತಾವನೆಯಲ್ಲಿ ಹೇಳಿರುವ ಡಾ. ಬಿ. ಎಸ್. ಗದ್ದಗಿಮಠ ಅವರು ಇದೇ ಗ್ರಂಥದ ಅನುಬಂಧ ಭಾಗದಲ್ಲಿ ಜನಪದ ಸಾಹಿತ್ಯದಲ್ಲಿ ಅತ್ಯಪೂರ್ವವೆನಿಸಿರುವ 'ಅರ್ಜುನ ಜೋಗಿಯ ಹಾಡುಗಬ್ಬ'*ವನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ಹೆಸರೇ ಹೇಳುವಂತೆ ಇದೊಂದು ಸುದೀರ್ಘವಾದ ಕಥನಕಾವ್ಯ. ದ್ರೌಪದಿಯು ಹತ್ತಿರವೇ ಕಾಲ ಕಳೆಯುತ್ತಿದ್ದ ಅರ್ಜುನ ಉಳಿದ ಹೆಂಡಿರನ್ನು ಕಾಣದೆ ಹನ್ನೆರಡು ವರ್ಷ ಸಂದಿತ್ತು. ಅವರನ್ನೆಲ್ಲ ನೋಡಿಬರುವ ಆಸೆಯಾಗಿ ದ್ರೌಪದಿಯ ಸಲಹೆಯ ಮೇರೆಗೆ ಜೋಗಿಯ ವೇಷದಲ್ಲಿ ಹೋಗಿ ಬರುವ ನಿರ್ಧಾರ ಮಾಡುತ್ತಾನೆ. ನಾಲ್ಕು ಜನ ಗೆಳತಿಯರು ಸೇರಿ ಈ 'ಭಾರತವನ್ನು ಹೇಳುತ್ತೇವೆ' ಎಂದು ಕೊನೆಯಲ್ಲಿದೆ. ಬಹುಶಃ ರಾತ್ರಿಯಿಡೀ ಹಾಡುತ್ತಿದ್ದಿರಬೇಕು. 'ಕೋಲೆನ್ನ ಕೋಲ' ಎಂಬ ಪಲ್ಲವಿಯನ್ನು ಹೊಂದಿದ್ದು ಕೋಲಾಟದ ಪದವಿರಬೇಕೆಂಬುದನ್ನು ಸೂಚಿಸುತ್ತದೆ. ಆದರೆ ಇಡೀ ಕಾವ್ಯವನ್ನು ಕೋಲಾಟದಲ್ಲಿ ಬಳಸಲು ಸಾಧ್ಯವಿಲ್ಲ. ಭಾಗ, ಭಾಗವಾಗಿ ಬಳಸುತ್ತಿದ್ದಿರಬೇಕೆಂದು ತೋರುತ್ತದೆ. ಈ ಹಾಡುಗಬ್ಬದ ವಸ್ತು ತುಂಬ ಸ್ವಾರಸ್ಯವಾಗಿದೆ. ಚದುರಂಗಿ, ಕುಸುಮಾಲಿಯರ ವಿರಹವೇದನೆ, ಅದಕ್ಕೆ ಅವರು ಕಂಡುಕೊಳ್ಳುವ ನಿವಾರಣೋಪಾಯ, 'ಜೋಗಿ'ಯ ಬರುವಿಕೆ, ಅವರ ವರ್ಣನೆ, ಪ್ರಕೃತಿ ವರ್ಣನೆ– ಇಲ್ಲೆಲ್ಲ ಕವಿ ತನ್ನ ಕವಿತಾಶಕ್ತಿಯನ್ನು ತೋರಿಸಿಕೊಟ್ಟಿದ್ದಾನೆ. ವರ್ಣನಾತ್ಮಕ ಭಾಗ ಮೂಲತಃ ಕೋಲಾಟದ ಪದವಾಗಿದ್ದು ಬಳಿಕ ಅರ್ಜುನನ ಕಥೆ ಕಾಲಾನುಕ್ರಮದಲ್ಲಿ ಸೇರಿಕೊಂಡಿರಬೇಕು ಕಥಾವಿನ್ಯಾ-

* "ಅರ್ಜುನ ಜೋಗಿಯ ಹಾಡುಗಬ್ಬ"– 'ಕನ್ನಡ ಜಾನಪದ ಗೀತಗಳು'–ಪುಟ ೩೧೯–೩೮೮

ಸಕ್ಕೆ ತ್ರಿಪದಿಯನ್ನು ಬಳಸಲಾಗಿದೆ. ವರ್ಣನೆ ಹಾಗೂ ವಿರಹತಾಪಕ್ಕೆ ಹೆಚ್ಚಾಗಿ 'ಅರ್ಜುನ ಜೋಗಿ'ಯ ವಿಶಿಷ್ಟ ಮಟ್ಟನ್ನು ಬಳಸಲಾಗಿದೆ. ನಿಸರ್ಗಸಹಜವಾದ ಮಣ್ಣಿನ ವಾಸನೆ ಮಿಡಿಯುವ ಇಲ್ಲಿನ ವರ್ಣನೆಗಳು ಉತ್ಕೃಷ್ಟ ಕಾವ್ಯ ಸಾಮರ್ಥ್ಯವನ್ನು ಹೊಂದಿವೆ. ವಿಪ್ರಲಂಭ ಶೃಂಗಾರ ಶಿಷ್ಟಕಾವ್ಯಗಳಲ್ಲಿಷ್ಟೇ ಅಲ್ಲ, ಜನಪದ ಸಾಹಿತ್ಯದಲ್ಲೂ, ಶಿಷ್ಟ ಕಾವ್ಯಕ್ಕಿಂತ ಮನೋಜ್ಞವಾಗಿ, ಅದ್ಭುತವಾಗಿ ಮೂಡಿ ಬಂದಿದೆ ಎನ್ನಲಿಕ್ಕೆ ಈ ಹಾಡುಗಬ್ಬವೇ ಉದಾಹರಣೆ.

ಜನಪದರು ನಂಬಿಗಸ್ಥರು, ವಿನಯವಂತರು, ಜೀವನವನ್ನು ಸಂಪೂರ್ಣವಾಗಿ ಅನುಭವಿಸುತ್ತೇವೆ ಎಂಬ ತಾಳ್ಮೆಯುಳ್ಳವರು, ಹೆಣ್ಣಿಗೆ ತಾಳ್ಮೆಯೇ ತಾಳಿ ಎಂಬುದನ್ನು ನಂಬಿದವರು. ಪತಿಯೇ ಪರದೈವ ಎಂಬುದರಲ್ಲಿ ವಿಶ್ವಾಸವುಳ್ಳವರು. ಇವೆಲ್ಲವೂ ಜನಪದರು ಜೀವನವನ್ನು ಸುಗಮವಾಗಿ ಸಾಗಿಸಲು ಸಹಕಾರಿಗಳಾಗಿವೆ. ಇಂತಹ ಬದುಕಿನ ವಿವಿಧ ಮುಖಗಳ ಪರಿಚಯ ಈ ಹಾಡುಗಬ್ಬದಲ್ಲಿ ಬರುತ್ತದೆ.

ಯಾವ ಕಾರ್ಯಕ್ಕೇ ಮೊದಲು ವಿಘ್ನೇಶ್ವರನಿಗೆ ಅಗ್ರಪೂಜೆ ಸಲ್ಲಬೇಕಾದದ್ದು ಭಾರತೀಯ ಸಂಸ್ಕೃತಿ. ಇವರಿಗೆ ದೇವರು ತವರೊಟ್ಟಿಗೆ



ಸದಾ ಇರುತ್ತಾನೆ, ತಮ್ಮ ಹೊಲ ಮನೆಗಳನ್ನು ಸದಾ ರಕ್ಷಿಸುತ್ತಿರುತ್ತಾನೆ ಎಂಬ ವಿಶ್ವಾಸವಿದೆ. ದೇವರನ್ನು ಕೇಳುವುದು ಸಂಪತ್ತನ್ನು ಕೊಡು, ಭೋಗ ಭಾಗ್ಯಗಳನ್ನು ಕೊಡು ಎಂದಲ್ಲ.

ಎಳ್ಳ ಹೊಲದಾಗಿರುವ ಡೊಳ್ಳು
ಹೊಟ್ಟೆಯ ಬೆನವ
ಎಳ್ಳಸುಂಡಿಯ ಶನಿವಾರ। ಕೋ।
ತಂದೀನಿ
ಎಳ್ಳಷ್ಟು ಮತಿಯ ಕೊಡು ಗುರುವೆ।
ಕೋ।

"ಎಳ್ಳಷ್ಟು ಮತಿ"! ಎಂತಹ ಬೇಡಿಕೆ! ಅಷ್ಟೇ ಸಾಕು. ಆ 'ಎಳ್ಳಷ್ಟು ಮತಿ'ಯಿಂದ 'ಸಾಗರದಷ್ಟು ಮತಿ'ಯನ್ನು ಗಳಿಸಿಕೊಳ್ಳ ಬಲ್ಲೆ ಎಂಬ ಆತ್ಮವಿಶ್ವಾಸ ಆತನಿಗಿದೆ. ಎಷ್ಟೇ ಸಕಲೈಶ್ವರ್ಯಗಳಿದ್ದರೂ ಬುದ್ಧಿಯಿಲ್ಲದಿದ್ದರೆ ಅವೆಲ್ಲ ಹಾಳಾಗುವುದು ಎಷ್ಟು ಹೊತ್ತು? ಆದರೆ ಜ್ಞಾನವೊಂದಿದ್ದರೆ, ಆತ ಏನನ್ನಾದರೂ ಸಾಧಿಸಬಹುದು. ಇದು ಜನಪದರು ನಮಗೆ ಕೊಡುತ್ತಿರುವ ಬಳುವಳಿ.

'ಕಿಚ್ಚಿನಾಗ' ಹುಟ್ಟಿ 'ಕಿಚ್ಚಿನಾಗ' ಬೆಳೆದ ದ್ರೌಪದಿಯನ್ನೂ "ಬಲಗೊಂಡು" ಬಳಿಕ ಮಣಿಪುರದ ಅರಸನ ಮಕ್ಕಳಾದ ಚದುರಂಗಿ, ಕುಸುಮಾಲಿಯರ ಬಾಳ್ವೆಯನ್ನು ಕವಿ ಚಿತ್ರಿಸಿದ್ದಾನೆ. ಇಲ್ಲಿ ಚದುರಂಗಿ 'ಚಿತ್ರಾಂಗದೆ'ಯೇ ಇರಬೇಕು. ಹಿಂದೆ ಅರ್ಜುನ ತೀರ್ಥಯಾತ್ರೆಗೆ ಹೋದಾಗ ಇವಳನ್ನು ಮದುವೆಯಾಗಿ ಅಲ್ಲಿಯೇ ಬಿಟ್ಟು ಬಂದಿದ್ದ. ಹನ್ನೆರಡು ವರ್ಷಗಳಾದರೂ ಗಂಡನ 'ಮುಖ'ವಿಲ್ಲದೆ ಇಬ್ಬರೂ ವಿರಹತಾಪದಲ್ಲಿ ನೊಂದು ಬೆಂದಿದ್ದಾರೆ. ತಮ್ಮಿಂದಾಗಿ ತವರಿಗೆ ಕೆಟ್ಟ ಹೆಸರು. ಯಾರ ಹತ್ತಿರ ಹೇಳಿಕೊಳ್ಳುವುದು? ತಂದೆಯಲ್ಲಿ ತಮ್ಮ ಮನೋಗತವನ್ನು ಹೇಳಿಕೊಳ್ಳುತ್ತಾರೆ.

ಹೆಣ್ಣುಬಡು ತವರಿಗೆ ಹುಣ್ಣಾಗಿ
ಮಾಯದ ಗಾಯ
ಕಣ್ಣಲ್ಲಿ ಹಣ್ಣ ಮೇಲವ್ವ। ಕೋ।
ಗಂಡ ಬಿಟ್ಟ
ಹೆಣ್ಣಿನ ಬವಣೆ ಹೇಳೋದೇನ। ಕೋ।

ಹೆಣ್ಣು ಎಷ್ಟೇ ಸಿರಿವಂತಳಾಗಿದ್ದರೂ ನೆಮ್ಮದಿಯ ಬಾಳನ್ನು ಪಡೆಯಲು ಅದೃಷ್ಟ ಬೇಕು. "ಗಂಜಿಯ ಕುಡಿದರೂ ಗಂಡನ ಮನೆ ಲೇಸು" ಎಂಬ ನಾಣ್ಣುಡಿ ಈ ಅನುಭವದಿಂದಲೇ ಮೂಡಿ ಬಂದದ್ದು. ಹುಟ್ಟಿದ ಹೆಣ್ಣು 'ಕುಲಕ್ಕೆ ಹೊರಗೆ' ಇದ್ದರೇ ಚೆನ್ನ. "ಹೆಣ್ಣು ಹಡಿಯಲಿ ಬ್ಯಾಡ" ಎಂದೂ ಉದ್ಗಾರ ತೆಗೆದಿದ್ದಾರೆ ಈ ಜನ ಪದರು. ಇಂತಹ ಪರಿಸ್ಥಿತಿಯಲ್ಲಿ ಗಂಡ ಬಿಟ್ಟ ಹೆಣ್ಣಿನ ಗೋಳು ಯಾರಿಗೂ ಬೇಡ. ಹೇಳ ಲಾಗದು, ಅನುಭವಿಸಲು ತೀರದು. ಇಂತಹ ಹೆಣ್ಣುಗಳಿಗೆ ಪರಪುರುಷರ ಕಣ್ಣು ಒಂದು ಭಯಂಕರ ಸ್ವಪ್ನದಂತೆ. ಕೇಡು ಒಂದು ಕಡೆ ಯಾದರೆ ಅದರ ಮೇಲೆ ಬರೆ ಬೇರೆ. ಹೆಣ್ಣಿನ ಬಾಳನ್ನು ಕವಿ ತುಂಬ ಸಹಾನುಭೂತಿಯಿಂದ ಚಿತ್ರಿಸಿದ್ದಾನೆ, ಇಲ್ಲಿ.

ಮನ ಹರಲೆ(ನಿಂದೆ)ಯನ್ನಾದರೂ ಹೊರ ಬಹುದು, ಜನ ಹರಲೆಯನ್ನು ಹೊರಲು ಸಾಧ್ಯ ವಿಲ್ಲ. ಆದರ ತಾಪ ಸಣ್ಣಗೆ–ಒಳಗೊಳಗೇ–ಸದ್ದಿಲ್ಲದೆ ಸುಡುವುದು. ತಮಗೆ "ಸಾವಿರ ಹಾವು ಚೇಳು ಹತ್ತಿದ್ದು ಕಡಿದಂಗ" ಎನ್ನು ವಲ್ಲಿ ಅಂತರ್ಯದ ನೋವಿನ ಬಾಹ್ಯಾಭಿವ್ಯಕ್ತಿ ತುಂಬ ಸಹಜವಾಗಿ ಮೂಡಿಬಂದಿದೆ. ಈ ವಿರಹತಾಪ ಎಷ್ಟು ತೀಕ್ಷ್ಣವಾದುದೆಂದರೆ ಹನ್ನೆರಡು ಗಾವುದ ದೂರದಲ್ಲಿ 'ಗಂಡು ಜೀವಿ'ಯ ಸುಳಿವೇ ಇರದಂತಹ ಅರಮನೆ ಯನ್ನು ಕಟ್ಟಿಕೊಳ್ಳುವಲ್ಲಿಗೆ ಹೋಗುತ್ತದೆ.

ತಮ್ಮ ವಿರಹದ ಸಂಕೇತವಾಗಿ ಅವರು ಬಯಸುವ ಉಡುಗೆಯೇನು?

ಬಿಳಿಯ ಹೂವಿನ ಸೀರಿ ಬೆಳದಿಂಗಳ
ನುಂಗು ಸೀರಿ
ಎಳಿನೂರು ಹಳಿನೂರು ಸೆರಗಿಗೆ। ಕೋ।
ಸಾವಿರ
ಹಣಗಳ ಸುರುವಿ ತರಿಸೆಂದ। ಕೋ।

ಇಲ್ಲಿ ಬಿಳಿ ಶುಭ್ರತೆಯ ಸಂಕೇತ, ಶಾಂತಿಯ ಸಂಕೇತ. ಇನ್ನು ಹೂವು ಮೃದು, ಕೋಮಲ ಭಾವಗಳಿಗೆ ಸಂಕೇತವಾಗಿ ಬಂದಿದೆ. ತಾವು ಹೂವಿನಂತೆ ಸೂಕ್ಷ್ಮಜೀವಿಗಳು, ಪರಿತಾಪ

ದಿಂದ ನಲುಗಿದ್ದೇವೆ ಎಂಬುದರ ದ್ಯೋತಕ. 'ಬೆಳದಿಂಗಳ ನುಂಗು ಸೀರಿ'ಯಂತೂ ಅತ್ಯದ್ಭುತ. ವಿರಹಿಗಳಿಗೆ ಬೆಳದಿಂಗಳು ಸುಡು ಬಿಸಿಲಿಗಿಂತಲೂ ತೀಕ್ಷ್ಣವಂತೆ! ಅಂತಹ ಬೆಳದಿಂಗಳನ್ನು ನುಂಗುವಂತಹ, ಅದರಿಂದಾಗಿ ತಮ್ಮ ವಿರಹವನ್ನು ಕಡಮೆ ಮಾಡುವಂತಹ ಸೀರೆಯನ್ನು ಬಯಸುತ್ತಾರೆ. ಇವೆಲ್ಲವನ್ನೂ ಧ್ವನಿಪೂರ್ಣವಾಗಿ ಹೇಳುವಲ್ಲಿ ಕವಿ ಸಫಲನಾಗಿದ್ದಾನೆ. ಆದರೆ ಈ ಜನಪದ ಕವಿಗೆ ತಾನು 'ಧ್ವನಿಪೂರ್ಣವಾಗಿ ಹೇಳುತ್ತಿದ್ದೇನೆ' ಎಂಬುದರ ಅರಿವು ಇರುವುದಿಲ್ಲ. ಇದೇ ಇಲ್ಲಿಯ ಸ್ವಾರಸ್ಯ. ಇದೊಂದು ಕಾವ್ಯದ ರಸಘಟ್ಟ. ಜನಪದ ಭಾಷೆಯ ಸೊಗಡು, ಹೊಸತನ ತುಂಬ ಸಹಜವಾಗಿ ಮೂಡಿಬಂದಿದೆ.

ಆದರೆ ನಾವು ಯಾವುದನ್ನು ನಿವಾರಿಸಲು ಯತ್ನಿಸುತ್ತೇವೆಯೋ ಅದು ಇನ್ನೂ ಜಾಸ್ತಿಯಾಗುವಂತೆ ಚದುರಂಗಿ, ಕುಸುಮಾಲಿಯರ ವಿರಹ ಈ ನಿವಾರಣೋಪಾಯಗಳಿಂದ ಜಾಸ್ತಿಯೇ ಆಯಿತು.

ವಾಸ್ತವ ಜಗತ್ತಿನಲ್ಲಿ ಕೈಗೂಡದ ನಮ್ಮ ಆಸೆ ಆಕಾಂಕ್ಷೆಗಳು, ಆಗುಹೋಗುಗಳು ಸುಪ್ತಾವಸ್ಥೆಯಲ್ಲಿ ಕನಸಿನ ಮೂಲಕ ಕಾಣಿಸಿಕೊಳ್ಳುತ್ತವೆ ಎಂಬುದು ಮನಃಶಾಸ್ತ್ರಜ್ಞರ ಅಭಿಪ್ರಾಯ. ಇದು ಬಹು ಮಟ್ಟಿಗೆ ಸತ್ಯವೆನ್ನಲು ಅಭ್ಯಂತರವಿಲ್ಲ. ಹಾಗೆ ಈ ಚದುರಂಗಿ, ಕುಸುಮಾಲಿಯರಿಗೆ ಕನಸು ತಮ್ಮ ಬಯಕೆಗಳನ್ನು ತೀರಿಸಿಕೊಳ್ಳುವ ಸಾಧನವಾಗುತ್ತದೆ. ಕವಿ ಇದನ್ನು ತುಂಬ ಚಾತುರ್ಯದಿಂದ ಬಳಸಿದ್ದಾನೆ. ಬೆಳಗ್ಗೆ ಇನ್ನೂ ಏಳದಿರುವ ತಂಗಿಯನ್ನು ಕುಸುಮಾಲಿ ಎಬ್ಬಿಸುವ ಪರಿಯನ್ನು ನೋಡಿ:

ತಂಗೆವ್ವ ಕೇಳ ಕೇಳ
ನೀನೆನ್ನ ದುಂಡು ಮಲ್ಲೀಗೆ ಹೂವ।
ಜಳಕವ ಮಾಡಲು
ಊಟವ ಮಾಡಲು
ಕುಸುಮಾಲಿ ಚದುರಂಗಿಗೇಳೆನ್ನುತಾಳ।

ಸುಕುಮಾರ ಭಾವನೆಗಳನ್ನು ಚಿತ್ರಿಸಲು ಕವಿ ಈ ವಿಶಿಷ್ಟ ಧಾಟಿಯನ್ನು ಬಳಸಿಕೊಂಡಿದ್ದಾನೆ; ಅಕ್ಕ ತಂಗಿಯರಲ್ಲಿದ್ದ ಸೌಹಾರ್ದವನ್ನು ಈ ಪದ್ಯ ಬಿಂಬಿಸುತ್ತದೆ. ಆದರೆ ಚದುರಂಗಿಯ ಸ್ಥಿತಿ ಬೇರೆಯೇ ಆಗಿದೆ. ಜಗತ್ತನ್ನೇ ಮರೆಯಿಸುವಂಥ ಕನಸು ಕಾಣುತ್ತಿದ್ದಾಳೆ! ಅದೂ ಎಂಥ ಕನಸು!!

ಮಾಳ್ಯಾಗ ಮಾರಿ ಇಟ್ಟು
ಕೇಳಿಲೆ ತೋಳೀಗೆ ತೋಳ ಕೊಟ್ಟ।
ಮಾರಾಯನು ನನಗೂಡ
ಮಾತನಾಡುವಂತ
ಸಪ್ಪನಗಳು ಬಿದ್ದಿದ್ದುವೆನಗ।
ತೆಕ್ಕಿ ತೋಳಾಗ ತೇಲಿ
ಜಳುಬಳುಕಿ ಮೈಯಲುಂಡಿಗಿ ಜೀವ
ಹಿಗ್ಗಿ।
ಬಲೊಕ್ಕಲಿಯು ಜಲಗ್ಯಾಲಿ
ಉಗರೂರು ಸಮಯಕ
ಎಲೆ ಪಾಪಿ ಯಾತಕ ಎಬ್ಬಿಸತೀಯು।

ಲೌಕಿಕವಾಗಿ ವಿರಹ ವೇದನೆಯಿಂದ ಬಳಲಿ ಬೆಂಡಾದ ದೇಹವನ್ನೂ ಮನಸ್ಸನ್ನೂ ಕನಸಿನಲ್ಲಿ ಬಂದಂತಹ "ಮಾರಾಯರು" 'ತಂಪು'ಗೊಳಿಸುತ್ತಿರುವಾಗ, ಬಯಕೆಯನ್ನು ಪೂರೈಸುತ್ತಿರುವಾಗ, ಬಂದು ಎಬ್ಬಿಸಿದರೆ ಯಾರಿಗೆ ತಾನೇ ಸಿಟ್ಟು ಬರಲಿಕ್ಕಿಲ್ಲ? ಅದೂ ಹನ್ನೆರಡು ವರ್ಷಗಳಿಂದ 'ಮುಖ' ತೋರಿಸದ ಇನಿಯ ಕನಸಿನಲ್ಲಿ ಬಂದು ಏನೆಲ್ಲವನ್ನು ಮಾಡುವಷ್ಟರಲ್ಲಿ ಅದಕ್ಕೆ ಭಂಗ ತಂದರೆ? ವಿಪ್ರಲಂಭ ಶೃಂಗಾರದ ಅಪೂರ್ವ ಚಿತ್ರಣವಿಲ್ಲಿದೆ. ಇಲ್ಲಿಯ ಭಾಷೆಯ ಬಳಕೆಯಂತೂ ತುಂಬ ಸಹಜ, ಸರಳ. "ಮೈಯುಂಡಿಗಿ", "ಬಲೊಕ್ಕಲಿ", "ಉಗರೂರು ಸಮಯ" ಎಂಬೆಡೆಗಳಲ್ಲಿ ಜನಪದ ಭಾಷಾಸಾಮರ್ಥ್ಯ ಸಂಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. ಇಲ್ಲಿಯ ಸರಳತೆಗೇ, ಇಲ್ಲಿಯ ಗಡಸುತನಕ್ಕೇ ನಾವು ಮಾರುಹೋಗಬೇಕು. ಇಂತಹ ವಿರಹ ವೇದನೆಯ ಸೊಗಸಾದ, ಹಾಯಾದ, ಮನಸ್ಸನ್ನು ತಟ್ಟುವಂತಹ ಚಿತ್ರಣ ಜನಪದ ಸಾಹಿತ್ಯದಲ್ಲೇ ಅಪೂರ್ವವಾದುದು. ನಿಜವಾದ ಸಾಹಿತ್ಯಸೃಷ್ಟಿಗೆ

ಪ್ರತಿಭೆಯೊಂದಿದ್ದರೆ ಸಾಕು ಎಂಬುದನ್ನು ಇಂಥಲ್ಲಿ ಮನಗಾಣಬಹುದು. ಮಹಾಕಾವ್ಯ ರಚನೆಗೆ ಬೇಕಾದಂತಹ ಎಷ್ಟೋ ಅಂಶಗಳು ಇಲ್ಲಿ ಅಡಗಿವೆ ಎಂದರೆ ತಪ್ಪಾಗಲಾರದು. ಇವರಿಬ್ಬರ 'ಪರಿಸ್ಥಿತಿ'ಯ ಮೂಲಕ ಸುಭದ್ರೆ, ಉಲೂಪಿಯರ ವಿರಹವನ್ನು ಸೂಚ್ಯವಾಗಿಸಿದ್ದಾನೆ, ಕವಿ.

ಯಾವುದೇ ಕಷ್ಟ ನಷ್ಟಗಳಿರಲಿ, ಪರಮಾತ್ಮನ ಕೃಪೆಯಿಲ್ಲದಿದ್ದರೆ ಸಾಧ್ಯವಿಲ್ಲವೆಂಬುದನ್ನು ಶಿವಶಿವಾಣಿಯರು ಇವರ ಸಹಾಯಕ್ಕೆ ಬರುವುದರ ಮೂಲಕ ತೋರಿಸಿಕೊಟ್ಟಿದ್ದಾನೆ. ಶಿವನ ಆಜ್ಞೆಯಂತೆ ಎರಡು ಗಿಳಿಗಳು ರಾಯಭಾರ ಕೆಲಸವನ್ನು ನಡೆಸುತ್ತವೆ.

ಈ ವಿರಹಿಣಿಯರ ಸ್ಥಿತಿಯನ್ನು ಒಂದೇ ಪದ್ಯದಲ್ಲಿ ಬಹು ರಮ್ಯವಾಗಿ ಚಿತ್ರಿಸಲಾಗಿದೆ.

ಲೆತ್ತವನಾಡುತಾರ
ಚದುರೇರು ಪಗಡಿಯನಾಡತಾರ|
ಬೆನ್ನ ಮೇಲಿನ ಬೆವರ
ಗಾಳಿಗಾರಲೆಂದು
ಅರಮನೆಯ ಅಂಗಳಕ
ಮೈಯೊಡ್ಡತಾರ|

'ಲೆತ್ತ,' 'ಪಗಡಿ'– ಇವೆಲ್ಲ ಶೃಂಗಾರದ ಆಟಗಳು. ಸಮಯವನ್ನು ಕಳೆಯಲೆಂದು, ವಿರಹವನ್ನು ಮರೆಯಲೆಂದು ಲೆತ್ತ, ಪಗಡಿಯನ್ನು ಆಡುತ್ತಿದ್ದಾರೆ. ಆದರೆ ಅಂತರ್ಯದ ವಿರಹ ಬಾಹ್ಯ ಆಚರಣೆಯಿಂದ ಕಡಿಮೆಯಾದೀತೆ? ಬೆವರೊಡೆದು ಹೊರಹೊಮ್ಮುತ್ತದೆ. (ಕಾವಿಂದ ಕಾವು ಹುಟ್ಟುಂಬುದನ್ನು ಊಹಿಸಿಕೊಳ್ಳಿ!) ಅದನ್ನು ಗಾಳಿಗೆ ಆರಿಸಿದರೆ ಸ್ವಲ್ಪ ಹಾಯೆನಿಸುತ್ತದೆ, ನಿರಾಳವೆನಿಸುತ್ತದೆ. ಆದರೆ ಬೆವರುವುದು ತಪ್ಪುತ್ತದೆಯೇ? ಎಷ್ಟು ಸಹಜವಾಗಿ ಚಿತ್ರಿಸುತ್ತಾನೆ ಈ ಜನಪದ ಕವಿ! ಅವರ ವಿರಹಕ್ಕೆ ಕೊನೆಯೇ ಇಲ್ಲ ಎಂಬುದನ್ನು ತುಂಬ ಧ್ವನಿಪೂರ್ಣವಾಗಿ ಹೇಳಿದ್ದಾನೆ.

ಇದನ್ನೆಲ್ಲ ಕೇಳಿದ ಅರ್ಜುನನಿಗೆ "ಡ್ಯಾಂಗಾಂಗ" ಆಗಿ ಅವರನ್ನೆಲ್ಲ ನೋಡಿ ಬರುವ ಆಲೋಚನೆಯಿಂದ 'ಜೋಗಿ'ಯ ರೂಪವನ್ನು ತಾಳುತ್ತಾನೆ.

ತಾಯಿಯು ಮನೆಗೆ ಬಂದಾಗ ಮೊದಲು ಗೊತ್ತಾಗದಿದ್ದರೂ 'ಸುಭದ್ರೆ' ಜೋಗಿಗೆ ನಮಸ್ಕರಿಸಿದಾಗ ಗುಟ್ಟು ರಟ್ಟಾಗುತ್ತದೆ!

ಬಲಗಾಲ ಮ್ಯಾಗಿರುವ ಪದ್ಮವ
ನೋಡ್ಯಾಳ
ಪಮ್ಮವರೆಂದು ಅನುಮಾನ| ಕೋ|
ಗೇಣಿಸಿ
ಮನಸಿಗ ಖುಷಿಯಾಗಿ ನುಡಿದಳ|ಕೋ|

ಹನ್ನೆರಡು ವರ್ಷಗಳಿಂದ ಕಾಣದ ಗಂಡನನ್ನು ಈ ರೂಪದಲ್ಲಿ ಬಂದರೂ ಗುರುತು ಹಿಡಿಯುವಷ್ಟು ಚತುರೆ ಈ "ಸುಭದ್ರ." 'ಖುಷಿ' ಎಂಬ ಒಂದೇ ಪದ ಆಕೆಯ ಮನಸ್ಸಿನ ಭಾವನೆಯನ್ನೆಲ್ಲ ಹೊರಗೆಡಹುತ್ತದೆ. "ಮುಗುಳು ನಗೆ ಬಿಗಿ ಹಿಡಿದು" ಜೋಗಿಯ 'ಸೇವೆ' ನಡೆಸುತ್ತಾಳೆ. ಆ ರಾತ್ರಿ ಆಕೆಗೆ ಸ್ವರ್ಗಸುಖ!

ಕಾಮ ಕಾಯುವನೇರಿ ಕೆಂಪು ಗಲ್ಲಕ
ಏರಿ
ಅನುರಾಗದಾರೂತಿ ಬೆಳಗ್ಯಾಳ | ಕೋ|
ಅನುರಾಗ
ಕಂತಕ ಜ್ಯಾರಿ ಕೆಂಪೇರಿ | ಕೋ|

ಆಕೆಯ ಶೃಂಗಾರಭಾವವನ್ನು ಮೂರ್ತೀಕರಿಸಿ ನಿಲ್ಲಿಸಲಾಗಿದೆ ಇಲ್ಲಿ. ದಾಂಪತ್ಯದಲ್ಲಿಯ 'ಆರೂತಿ' ಅನುರಾಗವೇ ಸರಿ! ಈ 'ಅನುರಾಗ-ದಾರೂತಿ'ಯಿಂದ ಮನ ಬೆಳಗುತ್ತದೆ, ಮನೆ ಬೆಳಗುತ್ತದೆ. ಸುಭದ್ರೆಗೆ ಇದು ಮೈನವಿರೇಳುವ ಅನುಭವವಾದರೂ ಹನ್ನೆರಡು ವರ್ಷ ಇರಲಿಲ್ಲವಲ್ಲ! ಹುಸಿ ಕೋಪದಿಂದ ಸೆಟಗೊಂಡಿದ್ದಾಳೆ. ಈ ಸೆಟಗೊಂಡಿದ್ದನ್ನು ಕವಿ ಅರ್ಥವತ್ತಾಗಿ ಚಿತ್ರಿಸಿದ್ದಾನೆ.

ಸೆಟಕೊಂಡು ಕೂಡುವುದು ಆಟಗೊಂಡು
ಉಂಡಂಗ
ಸಿಟ್ಟು ಸೆಡುವೆಲ್ಲ ಉಪ್ಪಿನಕಾಯಿ
| ಕೋ| ಇಬ್ಬರಿಗು
ಕಾಮೂಟ ಬಿಸಿ ಬಿಗುಮಾತ | ಕೋ|

'ಊಟಕ್ಕಿಲ್ಲದ ಉಪ್ಪಿನಕಾಯಿ ತಿಪ್ಪೆಗೆ ಸಮಾನ'

ಎಂಬ ಗಾದೆ ಮಾತಿದೆ. ಅದರಂತೆ ಈ 'ಕಾಮನೂಟ'ದ ಉಪ್ಪಿನಕಾಯಿ ಸಿಡುವು. ತುಂಬ ಮನೋಜ್ಞವಾದ ಕಲ್ಪನೆ. ದೈನಂದಿನ ವಸ್ತುವನ್ನೆಲ್ಲ ರೂಪಕ ಮಾಡಿ ಹೇಳುವಲ್ಲಿ ಅತ್ಯಂತ ಸ್ವಾರಸ್ಯ ಕಂಡುಬರುತ್ತದೆ.

ಆದರೆ ಸುಭದ್ರೆಯ ಬಯಕೆ ಉದಾತ್ತವಾದದ್ದು.

ಇಂದ ಚಂದಂಥ ನೀವು
ದೊರೆಗಳ ಅಂದು ಬಂದ್ಹೋಗಿದ್ದರ|
ಬಿಂದಿಗಿ ಹೊನ್ನಿನ
ನಮಗೊಬ್ಬ ಮಗನಾಗಿ
ಕುಲಕೆಲ್ಲ ಧನಿಯಾಗುತ್ತಿದ್ದ|

ಭಾರತೀಯ ಸಂಸ್ಕೃತಿ ರೀತ್ಯಾ ಮದುವೆ ವಂಶೋದ್ಧಾರಕ್ಕಾಗಿ. ದೈಹಿಕ ತೃಪ್ತಿ ಎರಡನೆಯ ಹಂತದಲ್ಲಿ ಬರುವಂತಹುದು. ಹೆಣ್ಣಿನ ಬಾಳು ಸಾರ್ಥಕತೆಯನ್ನು ಪಡೆಯುವುದು ಆಕೆ ತಾಯಿಯಾದಾಗಲೇ. ಅಂತಹ ತಾಯ್ತನದ ಹಂಬಲವನ್ನು ಹೊರಗೆಡವಿದ ಸುಭದ್ರೆಯ ಮನಃಸ್ಥಿತಿ ಸಮಯವರಿತು ಮೂಡಿಬಂದಿದೆ. ಭಾರತೀಯ ತಾಯಿಯ ಪ್ರತೀಕವಾಗಿದ್ದಾಳೆ ಸುಭದ್ರೆ.

ಮಣಿಪುರದಲ್ಲೂ ಈ 'ಜೋಗಿ' ಅಸಾಮಾನ್ಯನೆನಿಸಿದ. ಆತನ ಸೌಂದರ್ಯಕ್ಕೆ ಗಂಡುಳ್ಳ ಗರತಿಯರೇ ಮರುಳಾದರೆಂದರೆ ಇನ್ನು ತರುಣಿಯರ ಪಾಡೇನು? ('ಮೋಹನಾಂಗ'ನಾದ ಕೃಷ್ಣನನ್ನು ಇಲ್ಲಿ ಜ್ಞಾಪಿಸಬಹುದು) ಇಷ್ಟೇ ಅಲ್ಲದೆ ಪ್ರಕೃತಿಯೂ ಅವನ ರೂಪಕ್ಕೆ ಮರುಳಾದುದನ್ನು ಕವಿ ಸಮರ್ಥವಾಗಿ ಸೆರೆ ಹಿಡಿದಿದ್ದಾನೆ.

ನವಣಿಯ ಹೊಲದಾಗ ಹವಣುಳ್ಳ
ತೆನಿಗಳು
ಜೋಗಿ ರೂಪಕ ಮೆಚ್ಯಾವ| ಹಂಬಲಿಸಿ
ರಾಗದಿ ಸಿರವ ಬಾಗಿ ನಿಂತು |ಕೋ|

ತೆನೆಗಳ ಸಹಜವಾದ ಬಾಗುವಿಕೆಗೆ ಮೆಚ್ಚುಗೆಯ ಮೆರಗನ್ನು ಕೊಟ್ಟಿರುವುದು ಕವಿಯ ಸ್ವೋಪಜ್ಞತೆಯ ದ್ಯೋತಕವಾಗಿದೆ.

ಆದರೆ ಸ್ತ್ರೀರಾಜ್ಯವನ್ನು ಈ ಪುರುಷ ಪ್ರವೇಶಿಸುವುದು ಹೇಗೆ? ಒಂದೇ ದಾರಿ! "ಗಂಡನ ಮನೆಯಿಂದ ಕುಲಗುರು ಬಂದಾನ!" ಚಮುರಂಗಿ–ಕುಸುಮಾಲಿಯರ 'ದೇಹೆಲ್ಲ ಮಣ್ಣ ಪಾಲಾ'ಗಿರುವುದನ್ನು ಜೋಗಿ ವಿಚಾರಿಸಿದಾಗ ಅವರ ಉತ್ತರ ಬೆಂದ ಜೀವದ ನೊಂದ ನುಡಿಯಾಗಿ ಹೊರ ಹೊಮ್ಮುತ್ತದೆ.

ಗಡಿಮೀರಿ ಉಕ್ಕೇರಿ ಸುತ್ತಲೂ
ಹರಿದರೇನ
ಪೂಜೆಗೆ ಬಾರದ ಸಾಗರದ| ನೀರೆಂದು
ಮನ್ನಿಸಿ ಮರೆತು ಅರಸರನ |ಕೋ|

ಅವರ ಯೌವನದ ನಿರರ್ಥಕತೆಯನ್ನು ತುಂಬ ಧ್ವನಿಪೂರ್ಣವಾಗಿ ಚಿತ್ರಿಸಲಾಗಿದೆ. ಗಂಡನೆಂಬ ದೇವರ ಪೂಜೆಗೆ ತಮ್ಮ ಯೌವನ ಮೀಸಲಾಗಲಿಲ್ಲವಲ್ಲ ಎಂಬ ಅವರ ಕೊರಗು ನಿಜವಾಗಿಯೂ ಶೋಚನೀಯ.

ಎಷ್ಟು ಗಂಟು ಮಾಡಿದರೇನು? ಮರುದಿನ ಸ್ನಾನ ಸಂದರ್ಭದಲ್ಲಿ ಜೋಗಿಯ ರೂಪ ಹೊರಬೀಳುತ್ತದೆ.

ಮೂರು ಲೋಕಕ ಗಂಡ
ಪುಂಡನೆಂದ್ಹೆಸರಾದ
ಅರ್ಜುನ ಭೂಪಗ ಮೊಲೆಯಿಲ್ಲ|
ಜೋಗಿದೇವ
ಮನೆಯ ಮಾರಾಯ ಹೌದವ್ವ|
ಕೋ|

ಇಡೀ ಜಗತ್ತಿಗೆ ನಿಜವಾದ 'ಗಂಡು' ಅರ್ಜುನನೊಬ್ಬನೇ. ಆತನಲ್ಲಿ ಸ್ತ್ರೀಯ ಯಾವ ಅಂಶವೂ ಕುರುಹೂ ಇಲ್ಲ. ಅದಕ್ಕೇ ಆತ "ಮೂರು ಲೋಕದ ಗಂಡ" (ಈಗ ನಿಜವಾದ 'ಗಂಡು ಜೀವಿ' ಕಂಡರೆ !) ಶ್ರೀಕೃಷ್ಣ ಅರ್ಜುನನನ್ನೇ ತನ್ನ 'ಧರ್ಮ ಸಂಸ್ಥಾಪನೆ'ಗಾಗಿ ಆರಿಸಿಕೊಳ್ಳುವುದೂ ಈ ಕಾರಣಕ್ಕಾಗಿಯೇ.

ಮನಃಶಾಸ್ತ್ರದ ಪ್ರಕಾರ ಮನುಷ್ಯನಿಗೆ ಪ್ರಬಲವಾದ ಎರಡು 'ತೃಷೆ'ಗಳು. ತಾನು ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಬೇಕೆಂಬುದು ಹಾಗೂ ಕಾಮತೃಷೆ. ಪ್ರಾಪ್ತ ವಯಸ್ಸಿಗೆ

ಬಂದ ಮಾನವ ತನ್ನ ಈ ತೃಷೆಗಳನ್ನು ಯಾವುದಾದರೂ ಮಾರ್ಗದಿಂದ ನೈತಿಕವಾಗಿಯೋ, ಅನೈತಿಕವಾಗಿಯೋ– ತೀರಿಸಿಕೊಂಡೇ ಕೊಳ್ಳುತ್ತಾನೆ. ಹಾಗಾಗದಿದ್ದಲ್ಲಿ ಆತನ (ಆಕೆಯು) ಮಾನಸಿಕ ಹಾಗೂ ದೈಹಿಕ ಸ್ವಾಸ್ಥ್ಯ ಹದಗೆಡುವುದರಲ್ಲಿ ಏನೂ ಸಂಶಯವಿಲ್ಲ. ಇಲ್ಲಿ ಕುಸುಮಾಲಿ– ಚದುರಂಗಿಯರಿಗೆ ಪ್ರಕೃತಿ ಸಹಜವಾದ ಕಾಮತೃಪ್ತಿ ಸಿಗದೇ ತುಂಬ ಬಳಲಬೇಕಾಗಿ ಬಂದದ್ದು ಈ ದೃಷ್ಟಿಯಿಂದ ಪ್ರಕೃತಿ ವ್ಯಾಪಾರವೆಲ್ಲವೂ ಮಾನವ ಕೋಟಿಯು– ಅಷ್ಟೇ ಏಕೆ, ಇಡೀ ಜೀವಜಗತ್ತಿನ ಬೆಳವಣಿಗೆಯಲ್ಲಿ ಸಹಕಾರಿಯಾಗಿದೆ ಎಂಬ ಅಂಶವನ್ನು ನಾವು ಮರೆಯುವಂತಿಲ್ಲ. ಇಂತಹ ಸೂಕ್ಷ್ಮ ಅಂಶಗಳನ್ನು ಈ ಜನಪದ ಕವಿ ಅರಿತಿದ್ದಾನೆ ಎಂಬುದು ನಮ್ಮನ್ನು ಚಕಿತಗೊಳಿಸುವ ಸಂಗತಿಯಾಗಿದೆ.

ಮುಂದೆಯೂ ಕೂಡ ಶೃಂಗಾರ ವರ್ಣನೆಗಳನ್ನು ಸಮಯಾವರಿತು ತಂದಿದ್ದಾನೆ. ಚದುರಂಗಿ– ಕುಸುಮಾಲಿಯರು ಆಭರಣಾದಿ ಶೃಂಗಾರ ಸಾಧನಗಳನ್ನು ಬಳಸದೇ ಬಹಳ ಸಮಯಗಳಾದುವು ಎಂಬುದನ್ನು ತುಂಬ ಸೂಕ್ಷ್ಮವಾಗಿ, ಧ್ವನಿಪೂರ್ಣವಾಗಿ ಚಿತ್ರಿಸಿದ್ದಾನೆ. !

ಉಬ್ಬಿದ ಮೈತುಂಬ ಜರದ ಮಡಿಯು ನುಟ್ಟು
ಒತ್ತಿಕ್ಕಿ ವಡ್ಯಾಣ ಬಿಗಿದಾರು ದೇವಾ। ತುಂ।

ಹಾಗೆಯೇ ಆ ದಿನದ ‘ಕಾಮದೂಟ’ದ ಸನ್ನಿವೇಶವೂ ಅಷ್ಟೇ ಅದ್ಭುತವಾಗಿ, ರಸ-ಘಟ್ಟವಾಗಿ ಮೂಡಿಬಂದಿದೆ. ಪ್ರಕೃತಿ ಸಹಜ ಕ್ರಿಯೆಯನ್ನು ತುಂಬ ನಯವಾಗಿ, ತುಂಬ ಬುದ್ಧಿವಂತಿಕೆಯಿಂದ ಚಿತ್ರಿಸುವಲ್ಲಿ ಕವಿ ತನ್ನ ಪ್ರತಿಭಾಶಕ್ತಿಯನ್ನು ತೋರಿಸಿ ಕೊಟ್ಟಿದ್ದಾನೆ.

ರಾಸಾದ ರಸದೂಟ ಮನದಾಟ ಮನದೂಟ
ಕಾಯುಕ ಕಾಮದ ಕೊನೆಯೂಟ ದೇವಾ। ತುಂ।

ಈ ಜಗತ್ತಿನಲ್ಲಿ ನಾವು ಬದುಕನ್ನು ಬಾಳಬೇಕಾದರೆ ಎಲ್ಲವನ್ನೂ ಸಮಾನ ದೃಷ್ಟಿಯಲ್ಲಿ, ಸಮಾನ ಅವಕಾಶವನ್ನು ಇತ್ತು ಪಡೆಯಬೇಕು. ಹಾಗೆಯೇ ಕಾಮವೂ ಕೂಡ. ಅದೊಂದು ‘ಆಟ’ದಂತಿರಬೇಕು, ಊಟದಂತಿರಬೇಕು. ‘ಆಟ’ದಲ್ಲಿ ಆನಂದ ಸಿಗುತ್ತದೆ, ‘ಊಟ’ದಲ್ಲಿ ತೃಪ್ತಿ ಸಿಗುತ್ತದೆ. ಇಂತಹ ಕಾಮದ ಆಟ ಹಾಗೂ ಊಟ ಮನಕ್ಕೂ ದೇಹಕ್ಕೂ ಸಿಕ್ಕಲ್ಲಿ ಆ ವ್ಯಕ್ತಿಯ ಸರ್ವಾಂಗೀಣ ಬೆಳವಣಿಗೆ ಎಲ್ಲ ಹಂತಗಳಲ್ಲಿ ಸಾಧ್ಯವಾದೀತು. ಇಲ್ಲಿ ನಾವು ಮೇಲೆ ಹೇಳಿದ ಮನಃಶಾಸ್ತ್ರದ ಪರಿಭಾಷೆಗಳನ್ನು ಗಮನಿಸಬಹುದು. ಒಂದು ಅಂಶವನ್ನು ಮಾತ್ರ ನೆನಪಿನಲ್ಲಿಡಬೇಕು; ‘ಅತಿ’ ಎಲ್ಲ ಕಡೆಯೂ ವರ್ಜ್ಯವೇ. ಅದಕ್ಕಾಗಿಯೇ ಕವಿ ಇಲ್ಲಿ ‘ಕಾಮದೂಟ’ ಎಂದಿದ್ದಾನೆ. ಊಟ ಜಾಸ್ತಿಯಾದರೆ ಅಜೀರ್ಣವಾಗುವುದು ಸಹಜ. ಇಂತಹ ‘ಊಟ’ವನ್ನು ಉಂಡ ಚದುರಂಗಿ–ಕುಸುಮಾಲಿಯರು ಅರ್ಜುನನಿಗೆ ಎಷ್ಟು ‘ಧನ್ಯ’ರಾದರೂ ಸಾಲದಲ್ಲವೆ ? ಆದರೆ ಅರ್ಜುನನಿಗೆ– ‘ಜೋಗಿಗೆ’– ಇನ್ನೂ ಮುಂದೆ ಆಗಬೇಕಾದುದು, ಹೋಗಬೇಕಾದುದು ಬಹಳ ಇದೆ. ನಾಗಕನ್ಯೆ ಉಲೂಪಿ ‘ಜೋಗಿ’ಯ ಮುಂದಿನ ಬೇಟೆ. ‘ಜೋಗಿ’ಯಾದ ಮಾರಾಯರನ್ನು ಕಂಡಾಗ ಉಲೂಪಿಗಾದ ‘ಅವಸ್ಥೆ’ಯನ್ನು ಕವಿ ತುಂಬ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಸಹಜತೆಯನ್ನೇ ಎರಕ ಹೊಯ್ದಂತೆ ಹೇಳುವುದು ಜನಪದ ಶೈಲಿ. ತಮ್ಮ ಪರಿಧಿಯನ್ನು, ಅನುಭವದ ಸೀಮೆಯನ್ನು ಇವರು ಮೀರಿ ಹೋಗುವುದು ಬಹಳ ಕಡಮೆ. ಇಲ್ಲಿ ನೋಡಿ !

ಬಹಳ ದಿನಕಂದೀಜಿ ಮಾರಾಯರ ಕಾಣಲು
ಕಾಮ ಮೈತುಂಬಿ ಹರದಾಡಿ। ಕೋ। ಹೆಣ್ಣೆದೆ
ನಿಮಿರಿ ಮೊಲೆಸುತ್ತ ಬೆವರೊಡೆದು। ಕೋ।

ಎಂತಹ ಶೃಂಗಾರ ಚಿತ್ರಣ! ಇವರ ಮುಂದೆ

ಭಾಷಾಡಂಬರದ ಶಿಷ್ಟ ಸಾಹಿತ್ಯದ ಶೃಂಗಾರ ವರ್ಣನೆಯನ್ನು ನಿವಾಳಿಸಿ ಒಗೆಯಬೇಕು! ಎಲ್ಲರ ಅನುಭವಕ್ಕೂ ಬರುವ ಭಾವಗಳನ್ನು ಚಮತ್ಕಾರವಾಗಿ ಹೇಳುವಲ್ಲಿ ಜನಪದಕವಿಗಳು ಎತ್ತಿದ ಕೈ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಇಂಥಲ್ಲಿ ವಿವರಣೆ ಅನಗತ್ಯ.

ಹೀಗೆ ಕಥಾವಲ್ಲರಿ ಅನೇಕ ರಸಮಡುಗಳಲ್ಲಿ ಮಿಂದು ಸಾಗುತ್ತದೆ, ಓದುಗರನ್ನೂ ಮುಳುಗಿಸುತ್ತದೆ.

ಇಲ್ಲಿಯ ಪ್ರಕೃತಿ ಚಿತ್ರಣಗಳೂ ಅಷ್ಟೇ ಸೊಗಸಾಗಿ ಮೂಡಿಬಂದಿವೆ. "ತುಂಬಿದ ಬೆಳದಿಂಗಳ" ಪಲ್ಲವಿಯ ಮಟ್ಟನ್ನು ಇದಕ್ಕೇ ವಿಶೇಷವಾಗಿ ಬಳಸಲಾಗಿದೆ. ಹುಣ್ಣಿಮೆಯ ಚಂದ್ರ ಮೇಲೇರಿ ಬಂದಾಗ ಆತನ ಸೊಬಗನ್ನು ನೋಡಿ!

ರಾತುರಿ ರಾಣಿಗೆ ಕುಂಕುಮ ಬೊಟ್ಟೇನ
ಚಿಕ್ಕಿ ಹೂಸೀರಿ ಮಂಗಿಲೇನೋ ದೇವಾ।
ತುಂ।
ಸಾವಿರ ಬಿಂಡ್ಯಾನ ಮಂದಿ ಬೆಳದಿಂಗಳ
ಸೊಗಸೀಗೆ
ಮುಡದಿಯರ ಸೋಂಕನ್ನು ನೆನಸ್ಯಾರೊ
ದೇವಾ। ತುಂ।

'ರಾತುರಿ ರಾಣಿ'ಯು ಶೃಂಗಾರ ಕವಿಗೆ ಶೃಂಗಾರವಾಗಿದೆ. ರಾಣಿಗೆ ತಕ್ಕಂತಹ ಕುಂಕುಮದ ಬೊಟ್ಟು. 'ಚಿಕ್ಕಿ ಹೂ ಸೀರಿ' ಈ ಬೆಳದಿಂಗಳು ಪ್ರಣಯಿಗಳಿಗೆ "ತಂಪಿನ ಮದ್ದಿಡುವು"ದಾದರೆ ವಿರಹಿಗಳಿಗೆ 'ಮಡದಿಯರ ಸೋಂಕ'ನ್ನು ನೆನಪಿಸುತ್ತದೆ. ಕಾಲ ಹಾಗೂ ಸನ್ನಿವೇಶ ಬದಲಾವಣೆಯಿಂದ ಒಂದೇ ವಸ್ತು ವಿರುದ್ಧವಾದ ಪರಿಣಾಮವನ್ನು ಬೀರುತ್ತದೆ.

ಕೊನೆಯಲ್ಲಿ ಹಾಡುಗಾರರ ವಿನಯ ನಮ್ಮನ್ನು ಇನ್ನೂ ಸನಿಹಕ್ಕೆ ಕರೆದುಕೊಳ್ಳುತ್ತದೆ.

ಸಭೆಗಟ್ಟೆ ಹಾಡಿಲ್ಲ ಜೋಡಿಯು
ಒಡ್ಡಯಿಲ್ಲ।
ಹೆಣ್ಣು ಬಳಗಕ ನಮ್ಮ ಹಾಡು। ಕೋ।
ಪಂಡಿತರು
ನೀವಿದ್ದರ ರಸಿಕ ಮನವಿರಲಿ। ಕೋ।



ಸಣ್ಣ ಕೆಲಸಗಳನ್ನು ನಿರ್ದೋಷವಾಗಿ ಮಾಡಬಲ್ಲ ತಾಳ್ಮೆ ಇದ್ದವರೇ ಬೃಹತ್ಕಾರ್ಯಗಳನ್ನು ಸುಲಭವಾಗಿ ಸಾಧಿಸಬಲ್ಲರು.

•

ಬಿಗಿಯಾದ ಪಾದರಕ್ಷೆ ಒಂದು ಶ್ರೇಷ್ಠ ವರ; ಪ್ರಪಂಚದ ಎಲ್ಲ ಚಿಂತೆಗಳನ್ನು ಅದು ಮರೆಸಿಬಿಡುತ್ತದೆ.

— ಅನಾಮಿಕ

ಬಿಲ್ಲುಗಾರನು ಬಿಟ್ಟ ಬಾಣ ಒಬ್ಬನನ್ನು ಕೊಲ್ಲಬಹುದು ಅಥವಾ ಕೊಲ್ಲಲಿಕ್ಕಿಲ್ಲ, ಆದರೆ ಬುದ್ಧಿವಂತನೊಬ್ಬ ತನ್ನ ಚಾತುರ್ಯದಿಂದ ಹೂಡಿದ ಒಳಸಂಚಿನಿಂದ ಇನ್ನೂ ಬಸಿರಿನಲ್ಲಿದ್ದ ಕೂಸುಗಳು ಸಹ ಹತವಾಗುವವು.

೬

— ಚಾಣಕ್ಯ

ವ್ಯಾಪ್ತಿ

ನೋಡುತ್ತೀಯಾ;
ಹನಿ ಹನಿ ಬಿದ್ದುದನು ಹಿಗ್ಗಿ
ಎಬ್ಬಿಸುತ್ತದೆ ಮಣ್ಣು
ಜೀವದ ತಂತು.
ಆಗ ಚಿಗುರುತ್ತವೆ,
ಗುಬುರ ಗುಬುರಾಗಿ ಬುದು ಬುದು ಎದ್ದು
ಚಲನೆ ನುಗ್ಗುತ್ತವೆ ಸುತ್ತು ಮುತ್ತ.
ಹತ್ತೂ ದಿಕ್ಕು ಹಸಿರು ಕುಸಿಬಿದ್ದು
ಕಣ್ಣು ತುಂಬಿ ಕುಣಿಯುತ್ತವೆ ದಿಕ್ಕು ದೆಸೆ.
ಸೊಕ್ಕಿನಿಂದುಕ್ಕಿದ ಈ ನೆಲದ ಕಣ್ಣು
ವಿಸ್ತರಿಸಿ ನಿಂತ ಈ ಹಸಿರು ಬಣ್ಣ
ಹೋಲಿಕೆ ಬೇಕೆನಿಸಿದರೆ ಆಚೆ ನಿಂತ ಹೆಣ್ಣು
ಎಲ್ಲ ಕಂಡು ಉದ್ಗರಿಸುತ್ತೀಯಾ,
"ಎಂಥ ಜೀವಂತ ಹುಟ್ಟು- ಚಲನ
ಬದುಕಿನ ವಿಸ್ತರಣ!"
ಆದರೆ ಹಾಗಲ್ಲ ಗೆಳೆಯ;
ನಿನ್ನ ಹುಲ್ಲು ಹುಟ್ಟಿದ ಹಾಗೆ
ಇಲ್ಲಿ ಬದುಕು ಕಟ್ಟುವದಿಲ್ಲ, ಕಟ್ಟಿ
ಕೊನರುವದಿಲ್ಲ;
ಸಂಕೇತ ಸಂಕೇತಗಳಲ್ಲೆಲ್ಲ
ನೀನು ಕೂಜನಗೈದಂತೆ,
ಎಲ್ಲೋ ಏನನ್ನೋ ಬಿತ್ತಿ ಏನೋ ಎರೆದು
ಹೇಗೋ ಹರಿಸಿಬಿಟ್ಟರೆ,
ನೆಲ ಉಬ್ಬಿ ಬಿರಿತು
ಪುದು ಪುದು ಚಿಗಿತು
ಹಬ್ಬಿ ನಿಂತು ಮುಗುಳ್ನಗುವದಿಲ್ಲವಯ್ಯ
ಪ್ರೇಮದ ಗಿಡ.
ಹೀಗೆ ನಿನ್ನುದ್ದಗಲಿ ಉದ್ಭವಿಸಿ
ಎತ್ತರೆತ್ತರ ಹಬ್ಬಿ
ಹತ್ತೂ ದಿಕ್ಕು ಬಾಚಿ ನಿಲ್ಲುವದಕ್ಕೆ
ಅಯ್ಯಾ, ಈ ಗಿಡಕ್ಕೆ ಬೇಕಾದ್ದೊಂದು
ಭದ್ರ ಬುಡ,
ಬೇಕು.
ಆದರೀ 'ಕಾನನ'ದಲ್ಲಂತೂ
ಎಲ್ಲ ತಾರು ಮಾರು.
ನೋಡಯ್ಯಾ,
ಬೇರೂರಲು ನೀರು ಬೇಕು
ನೀರುಕ್ಕಲು ತಾಣ ಬೇಕು
ಇದೆಲ್ಲಕ್ಕೂ ಮುಖ್ಯ ಪ್ರಾಣ ಬೇಕು
ಆದರೆ ಅದಂತೂ ಇಲ್ಲಿ ಎಂದೋ
[ಗತ ಪ್ರಾಣ
ಆದ್ದರಿಂದ ಗೆಳೆಯ,
ಜೀವಂತಿಕೆ ಚಿಗುರುವದಕ್ಕೆ
ಈಗಲ್ಲ ಕಾಲಮಾನ.

—ದೇಶಪಾಂಡೆ ಸುಬ್ಬರಾಯ

ನಲ್ಲೆಗೆ

ಕೆಂಪು, ಕೆಂಪು, ಕೆಂಗುಲಾಬಿ
ನನ್ನ ಪ್ರೇಯಸಿ;
ಮಧುರವಾದ ವೇಣುನಾದ
ನನ್ನ ಪ್ರೇಯಸಿ.

ನಿನ್ನ ಚೆಲುವಿನಷ್ಟೇ ಗಾಢ
ಪ್ರೀತಿ ನನ್ನದು;
ಸಾಗರಗಳು ಬತ್ತುವನಕ
ಬಾಳುವಂಥದು.

ಬಿಸಿಲ ಝಳಕೆ ಬಂಡೆಗಲ್ಲು
ಕರಗುವ ತನಕ,
ಕಾಲಪಕ್ಷಿ ರೆಕ್ಕೆ ಮುರಿದು
ಬೀಳುವ ತನಕ

ನಿಲ್ಲುವಂಥ ಪ್ರೀತಿ, ನಲ್ಲೆ,
ನನ್ನ ನಿನ್ನದು;
ಯಾವ ಅಂಕೆ, ಶಂಕೆಗಳೂ
ಇಲ್ಲಿ ಸಲ್ಲದು.

ಹೋಗಿ ಬರುವೆ, ನನ್ನ ನಲ್ಲೆ,
ಗಳಿಗೆ ಕಾದಿರು,
ಸಾವಿರಾರು ಮೈಲಿಯಿರಲಿ
ಮತ್ತೆ ಬರುವೆನು.

ಮೂಲ:- ರಾಬರ್ಟ್ ಬರ್ನ್ಸ್
ಕನ್ನಡಕ್ಕೆ:- ಬಿ. ಆರ್. ಲಕ್ಷ್ಮಣರಾವ್

ಅಂದು ನಿಮ್ಮನ್ನು ನೋಡಿದಾಗಿನಿಂದ ನನ್ನ ಮನಸ್ಸೆಲ್ಲಾ ನಿಮ್ಮನ್ನೇ ತುಂಬಿಕೊಂಡಿದೆ. ಬ್ರೀಫ್‌ಕೇಸಿನ ಮೇಲೆ ನಿಮ್ಮ ಹೆಸರಿದ್ದುದನ್ನು ನೋಡಿ ಅದು ಮರೆತು ಹೋಗದ ಹಾಗೆ ಮನಸ್ಸಿನಲ್ಲಿಳಿಸಿಕೊಂಡೆ. ಅದರೊಟ್ಟಿಗೆ ಹೃದಯದಲ್ಲೂ ಇಳಿಸಿಕೊಂಡೆ ಅನ್ನಿ ಬೇಕಾದರೆ.

ಅಂದು ಮನೆಗೆ ಬಂದವಳೆ ಟೆಲಿಫೋನ್ ಡಿರೆಕ್ಟರಿಯನ್ನು ತೆಗೆದು ತಮ್ಮ ಹೆಸರನ್ನು ಹುಡುಕಿದೆ. ಆಶೆ ನಿರಾಶೆಯಾಗಲಿಲ್ಲ. ಹೆಸರು ಸಿಕ್ಕಿತು. ಆದರೆ ಇಡಿ ಮದ್ರಾಸ್ ನಗರದಲ್ಲಿ ಇನ್ನೆಷ್ಟು ಜನ ಮಂಜುನಾಥರಿದ್ದಾರೋ ಏನೋ ಎಂಬ ಸಂಶಯ ಬಂದು ಮತ್ತೆ ಟೆಲಿಫೋನ್ ಡಿರೆಕ್ಟರಿಯನ್ನು ಮಗುಚಿ ಹಾಕಿದೆ. ನಾನಂದುಕೊಂಡದ್ದು ಸರಿಯಾಗಿಯೇ ಇತ್ತು. ಎಷ್ಟೋ ಜನ ಮಂಜುನಾಥರು

ಪತ್ರಪ್ರೇಮ ★ ರಾ. ವೀಳಿನಾಥನ್

ಮಾಂಬಲಮ್
೧೩—೩—೭೨

ಪ್ರಿಯ ಶ್ರೀ ಮಂಜುನಾಥರಾಯರೆ,

ನಮಸ್ಕಾರ. ಅಪರಿಚಿತ ಮಹಿಳೆಯೊಬ್ಬಳು ಹೀಗೆ ಪತ್ರ ಬರೆಯುವುದನ್ನು ಕಂಡು ನಿಮಗೆ ಆಶ್ಚರ್ಯವೆನಿಸೀತು. ಅದು ಸಹಜವೂ ಅನ್ನಿ; ಆದರೆ ಹೀಗೆ ಲಜ್ಜೆಗೆಟ್ಟು ಅಪರಿಚಿತ ಪುರುಷನೊಬ್ಬನಿಗೆ ಪತ್ರ ಬರೆಯಬಾರದೆಂದು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಅದಕ್ಕಾಗಿ ದಯವಿಟ್ಟು ಕ್ಷಮಿಸಿ.

ಆ ದಿನ ಕಾಂಚೀಪುರಮ್‌ಗೆ ಹೋಗುವ ಗಾಡಿಯಲ್ಲಿ ಎರಡನೆ ದರ್ಜೆಯ ಡಬ್ಬಿಯಲ್ಲಿ ಕುಳಿತಿದ್ದಿರಲ್ಲ, ಅದರಲ್ಲಿ ನಾನೂ ಇದ್ದೆ ಎಂಬುದು ಬಹುಶಃ ನಿಮಗೆ ಗೊತ್ತಿರಲಿಕ್ಕಿಲ್ಲ.

ಕ್ಯೂದಲ್ಲಿದ್ದರು. ಆದರೆ ತಮ್ಮೊಬ್ಬರನ್ನು ಹೊರತುಪಡಿಸಿ ಮತ್ತಾರೂ ಕ್ಯೂ ಮಂಜುನಾಥರಿಲ್ಲೆಂಬುದು ತಿಳಿದಾಗ ನನಗಾದ ಸಂತೋಷ ಹೇಳಲಾಸಲ್ಲ. ಫೋನ್ ನಂಬರು ಗೊತ್ತಾದ ಕೂಡಲೆ ಹಿಂದೆ ಮುಂದೆ ವಿಚಾರಿಸದೆ ತಮಗೆ ಡಯಲ್ ಮಾಡಿಯೂಬಿಟ್ಟೆ. ಆದರೆ ಈ ಸುಡುಗಾಡು ಲಜ್ಜೆಯೊಂದು ನಡುವೆ ಅಡ್ಡಬಂದಿದ್ದರಿಂದ ತಾವು ಫೋನು ಕೈಗೆತ್ತಿಕೊಳ್ಳುವ ಮೊದಲೆ ಫೋನನ್ನು ಕೆಳಗಿಟ್ಟುಬಿಟ್ಟೆ.


ಆದರೆ ನನ್ನ ಮನಸ್ಸಿನಿಂದ ನಿಮ್ಮನ್ನು ದೂರ ಮಾಡಲಾಗಲಿಲ್ಲ. ಮನದಲ್ಲೆಲ್ಲಾ ನೀವೇ ನೀವು. ಎಷ್ಟು ಸಲ ಹೇಳಿದ್ದನ್ನೆ ಹೇಳುತ್ತಾಳಲ್ಲ ಇವಳು ಎಂದು ನೀವು ಬೇಸರಿಸಬಹುದು. ಆದರೆ ಸ್ವಲ್ಪ ನನ್ನ ಹೃದಯ

ದೊಳಗೆ ಹೊಕ್ಕು ನೋಡಿದರೆ ಬೇಸರ ಉತ್ಸಾಹವಾಗಿ ಪರಿವರ್ತಿತವಾದೀತು. ತಮ್ಮನ್ನು ಭೇಟಿಯಾಗಿ ತಮ್ಮ ಮುಂದೆ ನನ್ನ ಹೃದಯವನ್ನೇ ಬಿಚ್ಚಿಡಬೇಕೆನಿಸುತ್ತದೆ. ಆದರೆ ಸಂಕೋಚವೊಂದು ಕೇಳಬೇಕಲ್ಲ? ಒಮ್ಮೊಮ್ಮೆ ನಾನು ತಮ್ಮ ಮನೆಗೇ ಬಂದುಬಿಡಬೇಕೆನಿಸುತ್ತದೆ. ಆದರೆ ನೀವು ವಿವಾಹಿತರಾಗಿದ್ದೀರೆಂಬುದು ನನಗೆ ಗೊತ್ತು. ಹೀಗೆ ತಮ್ಮ ಮನೆಗೆ ಬಂದು ತಮ್ಮ ವೈವಾಹಿಕ ಜೀವನದಲ್ಲಿ ವಿಷ ಬೆರೆಸುವುದು ನನಗೆ ಬೇಕಿಲ್ಲ. ಅದು ಆನಂದಮಯವಾಗಿಯೇ ಉಳಿಯಬೇಕು.

ಎಲಾ, ನಾನು ಮದುವೆಯಾದದ್ದು ಇವಳಿಗೆ ಹೇಗೆ ಗೊತ್ತಾಯಿತು? ಎಂದು ನೀವು ಆಶ್ಚರ್ಯಪಡಬಹುದು. ಆದರೆ ಸ್ವಲ್ಪ ವಿಚಾರಿಸಿದರೆ ಆಶ್ಚರ್ಯಪಡುವಂಥದೇನೂ ಇಲ್ಲ ಎಂಬುದು ನಿಮಗೆ ತಂತಾನೆ ತಿಳಿಯುವುದು. ಮಜನೂವಿಗೆ ಲೈಲಾಳ ನಾಯಿ ಇಷ್ಟವಾದರೆ ಲೈಲಾಳಿಗೆ ಮಜನೂನ ಗೃಹಸ್ಥಿವೇಕೆ ಇಷ್ಟವಾಗಬಾರದು? ತಮ್ಮನ್ನು ಪ್ರೇಮಿಸತೊಡಗಿದಾಗಿನಿಂದ ತಮ್ಮ ಬಗೆಗೆ ಸಾಧ್ಯವಾದಷ್ಟು ವಿಷಯಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು ಸ್ವಾಭಾವಿಕವೇ ಅಲ್ಲವೆ?

ಈಗ ತಮ್ಮ ಪತ್ನಿ ತವರಿಗೆ ಹೋಗಿದ್ದಾಳೆಂಬುದೂ ನನಗೆ ಗೊತ್ತು. ಗೊತ್ತಿದ್ದರೆ ಮನೆಗೇಕೆ ಬರಬಾರದು? ಎಂದು ನೀವನ್ನಬಹುದು. ನೀವನ್ನುವುದು ಸರಿ. ಆದರೆ ನಾನೇನು ಮಾಡಲಿ ಹೇಳಿ? ಸಂಕೋಚವೊಂದು ಕೇಳಬೇಕಲ್ಲ.

ಈ ಪತ್ರಕ್ಕೆ ಉತ್ತರಿಸಿದರೆ ತಾವು ನನ್ನನ್ನು ಪ್ರೀತಿಸುತ್ತೀರೆಂದು ಭಾವಿಸುತ್ತೇನೆ. ಆಗ ಈ ಸಂಕೋಚವನ್ನು ಹೇಗಾದರೂ ಬಿಗಿಹಿಡಿದು ತಮ್ಮನ್ನು ಭೇಟಿಯಾಗಲು ಪ್ರಯತ್ನಿಸುತ್ತೇನೆ. ಅಕಸ್ಮಾತ್ ಪತ್ರಕ್ಕೆ ಉತ್ತರ



ಕೊಡುವ ಮನಸ್ಸಿಲ್ಲದಿದ್ದರೆ ಈ ಪತ್ರವನ್ನು ಹರಿದು ಚೂರು ಚೂರು ಮಾಡಿ ಬೆಂಕಿಯಲ್ಲಿ ಎಸೆದುಬಿಡಿ. ದಯವಿಟ್ಟು ನಾನು ಹೀಗೆ ಪತ್ರ ಬರೆದದ್ದನ್ನು ಮಾತ್ರ ಯಾರ ಮುಂದೆಯೂ ಹೇಳಬೇಡಿ ಈ ಕೆಳಗಿನ ಅಡ್ರೆಸ್ಸಿಗೆ ಉತ್ತರ ಬರೆದರೆ ತುಂಬಾ ಉಪಕಾರವಾದೀತು. ಆದರೆ ನನ್ನ ಮನೆಗೆ ಬರುವ ತೊಂದರೆಯನ್ನು ಮಾತ್ರ ತೆಗೆದುಕೊಳ್ಳಬೇಡಿ.

ಪ್ರೇಮದಿಂದ ಹುಚ್ಚಳಾದ
ತಮ್ಮ
ಲೀಲಾ

೨

ಮೈಲಾಪುರ
೧೫—೩—೭೨

ನನ್ನ ಲೈಲಾ, ಅಲ್ಲ ಅಲ್ಲ, ಲೀಲಾ,

ನಿನ್ನ ಪತ್ರ ಓದಿ ನನಗಾದ ಆನಂದ ಅಷ್ಟಿಷ್ಟಲ್ಲ. ಪತ್ರವನ್ನೋದಿದ ಕೂಡಲೆ ಕಾಂಚೀಪುರಮ್ ಟ್ರೇನಿನಲ್ಲಿ ಯಾವಳೋ ಒಬ್ಬ ಸುಂದರಿಯನ್ನು ನೋಡಿದ್ದು ನೆನಪಾಯಿತು. ಅವಳು ನೀನೇ ಇರಬೇಕು ಎಂಬುದು ನಿನ್ನ ಪತ್ರದಿಂದ ಸ್ಪಷ್ಟವಾಗಿದೆ. ಮೊದಲೆ ವಿವಾಹಿತ. ಹೀಗೆ ಅಸಭ್ಯನಂತೆ ಪರಸ್ತ್ರೀಯನ್ನು ನೋಡುವುದು ಒಳ್ಳೆಯದಲ್ಲ ಎಂದು ಮನಸ್ಸು ಬಿಗಿ ಹಿಡಿದು ನೋಡಿಯೂ ನೋಡದಂತಿರಲು ಪ್ರಯತ್ನಿಸಿದೆ. ಆದರೂ ಈ ನಿರ್ಲಜ್ಜ ಕಣ್ಣುಗಳು ಮಾತ್ರ ಆಗಾಗ ನಿನ್ನ ಕಡೆ ನೋಡುವುದನ್ನು ಬಿಡಲಿಲ್ಲ. ಅಂದು ನಿನ್ನ ಕೈಲಿದ್ದ ಪ್ಲಾಸ್ಟಿಕ್ಕಿನ ಆ ವ್ಯಾನಿಟಿ ಬ್ಯಾಗು ಎಷ್ಟೊಂದು ಸುಂದರವಾಗಿತ್ತು! ಅಂದು ನೀನು ಅದನ್ನು ಇತ್ತಿಂದತ್ತ ಅತ್ತಿಂದಿತ್ತ ಮೇಲಿಂದ ಮೇಲೆ ಮುಖ ಬದಲಿಸಿ ಇಡುತ್ತಿದಿಯಲ್ಲ, ನಾನು ಅದರ ಮೇಲಿನ ವಿಳಾಸವನ್ನು ನೋಡಿಕೊಳ್ಳಬೇಕೆಂದೇ ನೀನು ಹಾಗೆ ಮಾಡುತ್ತಿದ್ದೀಯೆಂದು ಅನಿಸಿತ್ತು. ಹೌದಲ್ಲವೇ ಕಳ್ಳಿ? ಆದರೆ ಎಂಥಾ ಒಳ್ಳೇ ಸಂದರ್ಭವನ್ನು ನಾನು ಕಳೆದುಕೊಂಡುಬಿಟ್ಟೆ ನೋಡು. ಅಡ್ರೆಸ್ಸನ್ನು ನಾನು ನೋಟ್ ಮಾಡಲೇ ಇಲ್ಲ. ನಾನು ಮಾಡಬೇಕಾದ ಕೆಲಸವನ್ನು ನೀನಾದರೂ ಮಾಡಿದೆಯಲ್ಲ. ಕೊನೆಗೆ ಮುತ್ತಿನಂಥಾ ಪತ್ರವನ್ನು ಕೂಡ ಬರೆದೆ. ಅಷ್ಟೇ ಸಾಕು. ನಿನ್ನ ಈ ಪ್ರೇಮಕ್ಕಾಗಿ ನಾನು ಹೇಗೆ ಆಭಾರಿಯಾಗಿರಬೇಕಾಗಿದೆಯೋ ತಿಳಿಯದಾಗಿದೆ. ಲೈಲಾಳನ್ನು ಈ ಮಜನೂ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಭೇಟಿಯಾಗುವುದು ಒಳ್ಳೆಯದೆಂದು ನನಗೂ ಅನಿಸುತ್ತದೆ. ನನ್ನ ಪತ್ನಿ ಪರಿಮಳಾ ತವರಿಗೆ ಹೋಗಿದ್ದಾಳೆನ್ನುವುದು ಸರಿ. ನಾವು ಇಲ್ಲಿ ಭೇಟಿಯಾಗುವುದು ಅಷ್ಟು ಒಳ್ಳೆಯದಲ್ಲ ಎಂದು ನೀನು ಬರೆದಿದ್ದೀಯಲ್ಲ, ಅದೂ ಸರಿಯೆ. ನನ್ನನ್ನು, ಎಲ್ಲಿ ಭೇಟಿಯಾಗಬಯಸುತ್ತೀ ಎಂಬುದನ್ನು ನೀನೇ ನನಗೆ ತಿಳಿಸಿದರೆ ಅನುಕೂಲವಾಗುವುದು. ಉತ್ತರಕ್ಕಾಗಿ ನಾನು ಆತುರದಿಂದ ಕಾಯುತ್ತಿರುತ್ತೇನೆ.

ನಿನ್ನ ಪ್ರೇಮಯಾಚಕ,
ಮಜನೂನಾಥ

೩

ಮಾಂಬಲಮ್
೧೭—೩—೭೨

ಪ್ರಿಯಾ,

ಸಿಹಿಯಾದ ಪತ್ರ ಸಿಕ್ಕಿತು. ತಮ್ಮ ಪತ್ನಿಯ ಹೆಸರು ಪರಿಮಳಾ ಎನ್ನುವುದೂ ಗೊತ್ತಾಯಿತು. ನೋಡಿಯೂ ನೋಡದಂತಿದ್ದರೂ ನನ್ನನ್ನು ಎಷ್ಟು ಸೂಕ್ಷ್ಮವಾಗಿ ನೋಡಿದ್ದೀರಲ್ಲಾ. ನೀವು ಬರೆದದ್ದೆಲ್ಲಾ ಸತ್ಯಸ್ಯ ಸತ್ಯ. ಅಂದಹಾಗೆ ಮುಖ ಹೃದಯದ ಕನ್ನಡಿ ಎಂದು ಬರೆದಿದ್ದೀರಲ್ಲಾ. ಆದರೆ ನೀವು ಹೃದಯವನ್ನು ಮುಖದ ಮೇಲೆ ಪ್ರಕಟಗೊಳಿಸಲೇ ಇಲ್ಲ.

ಸುಮ್ಮನೇ ಪತ್ರವನ್ನು ಬೆಳೆಸುತ್ತಾ ಹೋಗುವಲ್ಲಿ ಅರ್ಥವೇನಿದೆ? ತಮ್ಮನ್ನು ಭೇಟಿಯಾಗುವ ತವಕ ಇನ್ನೂ ಹೆಚ್ಚುತ್ತಿದೆ. ನನ್ನ ಹೃದಯವನ್ನು ನಿಮ್ಮ ಮುಂದೆ ಬಿಚ್ಚಿಡಬೇಕೆಂಬ ಅಭಿಲಾಷೆ ಇನ್ನೂ ತೀವ್ರವಾಗುತ್ತಿದೆ. ಇಬ್ಬರೂ ಭೇಟಿಯಾಗಲು ಪಾರ್ಕಿನಂಥ ಸ್ಥಳ ಇನ್ನೊಂದಿಲ್ಲ ಅನಿಸುತ್ತದೆ. ಆದರೆ ನಾಳೆ ಸಂಜೆ (ಅಂದರೆ ೧೮-೩-೭೨ ರಂದು) ಆರು ಗಂಟೆಗೆ

ಪಾರ್ಕಿನಲ್ಲಿ ಭೇಟಿಯಾಗೋಣವೇ? ತಾವು ಅವಶ್ಯವಾಗಿ ಅಲ್ಲಿ ಬರುತ್ತೀರೆಂದು ನಂಬಿದ್ದೇನೆ.

ತಮ್ಮ ಪ್ರಿಯೆ,
ಲೀಲಾ

N. B.— ನಾನು ಆರು ಗಜದ ಕಪ್ಪು ಸೀರೆಯುಟ್ಟಿರುತ್ತೇನೆ. ಹಾಗೂ ಕೆಂಪು ಪಟ್ಟಿಯ ಬಿಳಿ ಬ್ಲೌಜನ್ನು ಧರಿಸಿರುತ್ತೇನೆ. ನನ್ನ ರೂಪ ನಿಮ್ಮ ಮನಸ್ಸಿನಲ್ಲಿ ಅಚ್ಚಳಿಯದಂತೆ ಕುಳಿತಿದೆಯಾದರೂ ಬೇಗನೆ ಗುರುತು ಹಿಡಿಯಲು ಸಾಧ್ಯವಾಗಲೆಂದು ಇದನ್ನು ಬರೆದಿದ್ದೇನೆ.

ತಮ್ಮ ಪ್ರಿಯೆ,
ಲೀಲಾ

೪

ಮೈಲಾಪುರ
೧೯—೩—೭೨

ಪ್ರಿಯ ಲೀಲಾ,

ನಿನ್ನ ಪತ್ರ ಮುಟ್ಟಿತು. ಆ ಪ್ರಕಾರ ನಾನು ನಿನ್ನೆ ಮೂರು ಗಂಟೆಗೇ ಆಫೀಸಿನಿಂದ ಹೊರಬಿದ್ದು ಹನ್ನೆರಡನೆಯ ನಂಬರಿನ ಬಸ್ ಹಿಡಿದು ಐದು ಗಂಟೆಗೆ ಪಾರ್ಕ್ ತಲುಪಿದೆ. ಹದಿನೈದು ಮಿನಿಟಿನ ದಾರಿಗೆ ಎರಡು ಗಂಟೆಗಳು ಹೇಗೆ ಬೇಕಾದವು ಎಂದು ನೀನನ್ನಬಹುದು. ಆದರೆ ಈ ತಮಿಳನಾಡು ಸರಕಾರದಲ್ಲಿ ಸಿಟಿ ಬಸ್ಸುಗಳು ಹೇಗೆ ನಡೆಯುತ್ತವೆಂಬುದನ್ನು ನಿನಗೆ ತಿಳಿಸಿ ಹೇಳಬೇಕಾಗಿಲ್ಲ. ನಾನು ಏರಿದ ಬಸ್ಸು ಬ್ರೇಕ್ ಡೌನ್ ಆಗಿ ಮಾರ್ಗ ಮಧ್ಯದಲ್ಲೇ ನಿಂತುಬಿಟ್ಟಿತು. ಉಳಿದ ಬಸ್ಸುಗಳಿಗೆ ಈ ಸುದ್ದಿ ಹೇಗೆ ತಿಳಿಯಿತೋ, ಹದಿನೈದು ಮಿನಿಟಿಗೆ ಬರುವ ಬಸ್ಸು ಗಂಟೆಯಾದರೂ ಬರಲಿಲ್ಲ. ಅಕಸ್ಮಾತ್ತಾಗಿ ಒಂದೆರಡು ಬಂದರೂ ಹಾರ್ನ್ ಬಾರಿಸುತ್ತಾ ಹಾಗೆಯೇ ಹೊರಟುಹೋದವು.

ಕೊನೆಗೆ ಉಪಾಯವಿಲ್ಲದೆ ನಾನು ಭಗೀರಥ ಪ್ರಯತ್ನಮಾಡಿ ನಡೆದುಕೊಂಡೇ ಪಾರ್ಕು ತಲುಪಿದೆ. ಅಲ್ಲಿ 'ಪಾರ್ಕ್ ಲ್ಯಾಂಡ್'ಗೆ ಹೋಗಿ ಕಾಫಿಗೆ ಆರ್ಡರ್ ಕೊಟ್ಟೆ. ಕಾದು ಕಾದು ಬೇಸತ್ತ ಮೇಲೆ ಅರ್ಧತಾಸಿನ ನಂತರ ಕಾಫೀ ಬಂತು. ಅದನ್ನಿಷ್ಟು ಗುಟುಕರಿಸಿ ಸಮಯಕ್ಕೆ ಸರಿಯಾಗಿ ಪಾರ್ಕು ಸೇರಿದೆ. ನಿನಗಾಗಿ ಹುಡುಕತೊಡಗಿದೆ. ಎಂಟೂವರೆಯ ವರೆಗೆ ತೋಟವೆಲ್ಲಾ ಸುತ್ತಿದರೂ ನಿನ್ನ ದರ್ಶನ ಲಾಭವಾಗಲಿಲ್ಲ. ಕೊನೆಗೆ ಪಹರೇವಾಲ ಬಂದು ಹೊರಹಾಕಿದ ನಂತರ ಕಾಲು ಎಳೆಯುತ್ತಾ ಮನೆ ಸೇರಿದೆ.

ನೀನೇಕೆ ಪಾರ್ಕಿಗೆ ಬರಲಿಲ್ಲವೋ ಗೊತ್ತಾಗಲಿಲ್ಲ. ಏನಾದರೂ ವಿಘ್ನ ಬಂದು ಮನೆ ಬಿಟ್ಟು ಹೊರಬೀಳಲಿಕ್ಕೆ ನಿನಗೆ ಸಾಧ್ಯವಾಗದಿರಲೂ ಬಹುದು. ಏಕೆ ಬರಲಾಗಲಿಲ್ಲವೆಂಬುದನ್ನು ತಿಳಿಸುತ್ತೀಯೆಂದು ನಂಬಿದ್ದೇನೆ. ನೀನು ಪಾರ್ಕಿಗೆ ಬಂದು ಅಕಸ್ಮಾತ್ತಾಗಿ ನಾವೇ ನಿನ್ನನ್ನು ನೋಡಿರದಿದ್ದರೆ ಅನ್ಯಥಾ ಭಾವಿಸಬೇಡ. ಆದರೆ ಇಷ್ಟರಿಂದಲೆ ನಿರಾಶಳಾಗಬೇಡ. ಇನ್ನಾವುದಾದರೂ ಸ್ಥಾನವನ್ನು ಸೂಚಿಸು. ಅಲ್ಲಿ ಭೇಟಿಯಾಗೋಣ. ಉತ್ತರ ಬರೆಯುತ್ತೀಯೆಂದು ನಂಬಿದ್ದೇನೆ.

ನಿನ್ನ ಪ್ರೀತಿಯ,
ಮಂಜುನಾಥ

೫

ಮಾಂಬಲಮ್
೨೦—೩—೭೨

ಪ್ರಿಯ...,

ನಿಮ್ಮ ಪತ್ರ ಮುಟ್ಟಿತು. ನಿಮ್ಮ ಬುದ್ಧಿಗೆ ಏನೆಂದು ಹೇಳಬೇಕು? ನಾನು ಪನಗಲ್ ಪಾರ್ಕ್ ಎಂದು ಬರೆದಿದ್ದೆನೆ? ಪಾರ್ಕ್ ಸ್ಟೇಶನ್ ಎಂದು ಬರೆದಿರಲಿಲ್ಲವೆ? ನೀವು ತಿಳಿಸಿದ ಪ್ರಕಾರ ಐದು ಗಂಟೆಗೇ ಪಾರ್ಕ್ ಸ್ಟೇಶನ್ನನ್ನು ಮುಟ್ಟಿ ಪ್ಲಾಟ್‌ಫಾರ್ಮಿನ ಮೇಲೆ ಇತ್ತಿಂದತ್ತ ಅತ್ತಿಂದಿತ್ತ ಅಡ್ಡಾಡುತ್ತ ಏಳು ಗಂಟೆಯವರೆಗೆ ನಿಮ್ಮನ್ನು ದಾರೀ ಕಾದೆ. ರಾತ್ರಿಯಾಯಿತು. ಮೊದಲೆ ಅಲ್ಲಿ ಕಳ್ಳಕಾಕರ ಹಾವಳಿ ಬಹಳ. ನನ್ನಂತಹಳೊಬ್ಬಳು ಏಕಾಕಿಯಾಗಿ ಎಷ್ಟು ಕಾಲ ಪ್ರತೀಕ್ಷಿಸುವುದೆಂದು ಕೈಯಲ್ಲಿ

ಜೀವ ಹಿಡಿದುಕೊಂಡು ಹೇಗೋ ಮನೆ ಸೇರಿದೆ.

ಮದ್ರಾಸಿನಲ್ಲಿರುವುದು ಒಂದೇ ಪನಗಲ್ ಪಾರ್ಕ್ ಏನು? ಯಾವುದೇ ಪಾರ್ಕಿನಲ್ಲಿ ಭೇಟಿಯಾಗುವುದಿದ್ದರೆ ಆ ಪಾರ್ಕಿನ ಹೆಸರು ಬರೆಯುತ್ತಿರಲಿಲ್ಲವೆ? ನಾನು ಮಾಂಬಲಮ್‌ನಲ್ಲಿರುತ್ತೇನೆಂಬುದು ನಿಮಗೆ ಗೊತ್ತೇ ಇದೆ. ಅಂತಹುದರಲ್ಲಿ ಮಾಂಬಲಮ್ ಪಾರ್ಕಿನಲ್ಲಿ ಭೇಟಿಯಾಗಿ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತೇನೆಂದು ನೀವು ಅದು ಹೇಗೆ ಭಾವಿಸುತ್ತೀರಿ? ಆಗ ಯಾರಾದರೂ ನಮ್ಮನ್ನು ನೋಡಿದರೆ ಆತ ನನ್ನ ಮೋರೆಗೆ ಸಗಣಿ ತಿಕ್ಕಲಿಕ್ಕಿಲ್ಲವೆ? ಗಂಡಸರ ತಲೆಯಾದರೂ ಎಷ್ಟು ದಪ್ಪ ಅನ್ನುತ್ತೇನೆ. ಹೀಗೆಲ್ಲ ಬರೆದಿದ್ದಕ್ಕೆ ದಯವಿಟ್ಟು ಕೋಪಿಸಬೇಡಿ. ಹಾಗೆಯೇ ನನ್ನನ್ನು ಮರೆಯಲೂ ಬೇಡಿ.

ತಮ್ಮ ಮೇಲಿನ ಅತಿಶಯ ಪ್ರೇಮದಿಂದಾಗಿ ಹೀಗೆ ಬರೆದೆ. ಈ ಅಪರಾಧವನ್ನು ದಯವಿಟ್ಟು ಕ್ಷಮಿಸಿ ಬಿಡಿ. ನಾವು ನಾಡಿದ್ದು ಮೂರೂವರೆ ಗಂಟೆಗೆ 'ಗೀತಾ'ದಲ್ಲಿ ಭೇಟಿಯಾಗೋಣವೇ? ತೊಂದರೆಯಾಗದಿದ್ದರೆ ಮರು ಟಪಾಲಿಗೇ ಉತ್ತರಿಸಿರಿ.

ಈ ಸಲ ನಾನು ಹಳದೀ ಬಣ್ಣದ ಸೀರೆಯನ್ನೂ ಕಪ್ಪು ಬಣ್ಣದ ಜಂಪರನ್ನೂ ಧರಿಸಿರುತ್ತೇನೆ. ದಯವಿಟ್ಟು ಉತ್ತರ ಬರೆಯಲು ಮರೆಯಬೇಡಿ.

ತಮ್ಮನ್ನು ಭೇಟಿಯಾಗಲು ತವಕಿಸುವ,

ಲೀಲಾ

೩

ಮೈಲಾಪುರ

೨೧—೩—೭೨

ಲಿಲ್ಲೀ,

ನಿನ್ನ ಪತ್ರ ಮುಟ್ಟಿತು. ಆದರೆ ಒಂದು ಸಂದೇಹ. ನೀನು 'ಗೀತಾ'ದಲ್ಲಿ ಭೆಟಿಯಾಗೋಣ ಎಂದು ಬರೆದಿದ್ದೀ. ಆದರೆ ಯಾವ 'ಗೀತಾ'ದಲ್ಲಿ? ಮದ್ರಾಸಿನಲ್ಲಿ 'ಗೀತಾ' ಗ್ರೂಪ್ಪಿನ ಹೋಟೆಲ್ಲುಗಳು ಎಷ್ಟೋ ಇವೆಯಲ್ಲ! ಬಹುಶಃ ಅವಸರದಲ್ಲಿ ಮರೆತಿರಬಹುದು. ಈ ಪತ್ರ ನಿನಗೆ ಮುಟ್ಟಿ ನಿನ್ನ ಪತ್ರ ನನ್ನ ಕೈ ಸೇರುವವರೆಗೆ ಯುಗ ಯುಗಗಳೇ ಕಳೆದು ಹೋಗಿರುತ್ತವೆ. ಬೇಗ ಭೇಟಿಯಾಗಬೇಕೆಂದಷ್ಟೂ ತಡವಾಗುತ್ತಾ ಹೋಗುತ್ತಿದೆ, ಏನು ಮಾಡಲಿ? ಪ್ರಣಯಿಗಳ ವಿರುದ್ಧ ಪರಮಾತ್ಮನೂ ಒಳಸಂಚು ನಡೆಸುತ್ತಾನೆ ಎಂದೊಬ್ಬ ಎಷ್ಟು ಯಥಾರ್ಥವಾಗಿ ಹೇಳಿದ್ದಾನಲ್ಲ, ಎನಿಸುತ್ತದೆ ನನಗೆ. ಇರಲಿ ಇನ್ನೇನು ಮಾಡುವುದು? ಮನಸ್ಸು ಸ್ವಲ್ಪ ಬಿಗಿ ಹಿಡಿ. ಯಾವ 'ಗೀತಾ'ದಲ್ಲಿ ಭೇಟಿಯಾಗಬೇಕೆನ್ನುವುದನ್ನು ತಪ್ಪದೆ ತಿಳಿಸು.

ನಿನ್ನ ಪ್ರೇಮದಿಂದ ತೃಷಿತನಾದ

ಮಂಜುನಾಥ

೪

ಮಾಂಬಲಮ್

೨೩—೩—೭೨

ಪ್ರಿಯಾ,

ನನ್ನನ್ನು ನೀವು ನಿಜವಾಗಿಯೂ ಪ್ರೀತಿಸುತ್ತೀರೋ ಇಲ್ಲವೋ ಎಂಬ ಬಗ್ಗೆಯೇ ನನಗೀಗ ಸಂಶಯ. ನಿಜವಾಗಿಯೂ ನನ್ನನ್ನು ಪ್ರೀತಿಸುತ್ತಿದ್ದರೆ ನನ್ನನ್ನು ಹೀಗೆ ತಾಳ್ಮೆಗೆಡಿಸುತ್ತಿದ್ದಿರಾ? ಗೀತಾ ಗ್ರೂಪ್ಪಿನ ಹೋಟಲುಗಳು ಈ ನಗರದಲ್ಲಿ ಅನೇಕ ಎಂಬುದನ್ನು ನಾ ಬಲ್ಲೆ. ಆದರೆ ಗೀತಾ ಡಿಲಕ್ಸ್‌ನಂತಹ ಐಷಾರಾಮಿ ಹೋಟಲನ್ನು ಬಿಟ್ಟು ಸಾಧಾರಣ ದರ್ಜೆಯ ಹೋಟಲುಗಳಿಗೆ ಪ್ರೇಮಿಗಳೆಂದಾದರೂ ಹೋಗುವರೇ? ಡಿಲಕ್ಸ್ ಹೋಟಲನ್ನು ಕಟ್ಟಿದ್ದೇ ಪ್ರೇಮ ಪತಂಗಗಳಿಗಾಗಿ. ತಮ್ಮ ದಪ್ಪ ತಲೆಯಲ್ಲಿ ಇಷ್ಟೂ ಹೋಗದಿದ್ದರೆ ಕೊನೆ ಪಕ್ಷ ಒಂದು ಸಾಲಿನ ಪತ್ರವನ್ನಾದರೂ ಬರೆಯಬೇಕಿತ್ತು. ತಮ್ಮ ಸಂದೇಹ, ವ್ಯರ್ಥ ವಿಲಂಬಗಳಿಂದಾಗಿ ನಾನು ವೃಥಾ ತೊಂದರೆಗೊಳಗಾಗಬೇಕಾಯಿತು.

ನೀವು ಬಂದೇ ಬರುವಿರೆಂದು ನಾನು ಮೂರು ಗಂಟೆಗೇ ಗೀತಾ ಡಿಲಕ್ಸ್‌ಗೆ ಹೋಗಿ ಕುಳಿತೆ. ಏನೂ ತಿನ್ನದೆ ಹಾಗೆಯೇ ಹೇಗೆ ಕುಳಿ

ತುಕೊಳ್ಳುವುದು? ಎಂದು ಮೆನ್ಯು ತರಿಸಿದೆ. ಅದರಲ್ಲಿ ಬರೆದ ಸಾಮಾನುಗಳನ್ನು ಒಂದೊಂದಾಗಿ ತರಿಸಿ ತಮ್ಮನ್ನು ಪ್ರತೀಕ್ಷಿಸುತ್ತಾ ಸಾವಕಾಶವಾಗಿ ತಿಂದೆ. ಆ ಹೋಟಲಿನಲ್ಲಿಯ ಎಲ್ಲ ತಿಂಡಿಗಳನ್ನೂ ತಿಂದಾಯಿತು. ಐದು ಗಂಟೆಯಾದರೂ ನೀವು ಬಾರದಾಗ ಮಾಣಿಯನ್ನು ಕರೆದು ಬಿಲ್ ಕೊಡುವಂತೆ ಹೇಳಿದೆ. ಎಂಟು ರೂಪಾಯಿ ಬಿಲ್ ಆಗಿತ್ತು.

ಕ್ಯಾಶಿಯರನ ಮೇಜಿನ ಮೇಲೆ ಹತ್ತರ ನೋಟಿಟ್ಟಾಗ ಆತ ನನ್ನನ್ನು ಅಪಾದಮಸ್ತಕವಾಗಿ ನೋಡಿ ಎರಡುರೂಪಾಯಿಗಳನ್ನು ನನ್ನ ಮುಂದಿಟ್ಟ. ಎಂಥಾ ಹೊಟ್ಟೆಬಾಕ ಹೆಂಗಸಪ್ಪಾ ಎಂದಾತ ಅಂದುಕೊಂಡನೋ ಏನೊ!

ಪೂರ್ವಾಪರ ವಿಚಾರವಿಲ್ಲದೆ ಒಬ್ಬ ಅಪರಿಚಿತ ಪುರುಷನ ಮೇಲೆ ಹೀಗೆ ವಿಶ್ವಾಸವಿರಿಸಿದ್ದು ಮಹಾಮೂರ್ಖತನವಾಯಿತೆಂಬುದು ನನಗೀಗ ಗೊತ್ತಾಯಿತು. ರಾಮಾ ರಾಮಾ, ಈಗ ಬಂದ ಅನುಭವವನ್ನು ಏಳು ಜನ್ಮಗಳಲ್ಲಿಯೂ ಮರೆಯುವುದಿಲ್ಲ. ಹೆಂಗಸರ ಬುದ್ಧಿ ಮೊಣಕಾಲ ಕೆಳಗೆ ಎಂದು ನಮ್ಮ ಪೂರ್ವಜರು ಹೇಳಿದ್ದು ಸುಳ್ಳಲ್ಲ. ಅಂತೂ ಈಗಲಾದರೂ ಬುದ್ಧಿ ಭೇಟಿಯಾಯಿತಲ್ಲ, ಅಷ್ಟೆ ಸಾಕು. ಇಲ್ಲಿಗೇ ನಮ್ಮ-ನಿಮ್ಮ ನಡುವಿನ ಪತ್ರವ್ಯವಹಾರದ ಮುಕ್ತಾಯ. ಇನ್ನು ಮುಂದೆ ನಾನೂ ಪತ್ರ ಬರೆಯುವುದಿಲ್ಲ, ನೀವೂ ಬರೆಯಬೇಡಿ,

ಲೀಲಾ

೮

ಮೈಲಾಪುರ
೨೩—೩—೭೨

ಪ್ರೀತಿಯ ಲೀಲಾ

ಮೊನ್ನೆ ಬರೆದ ಪತ್ರ ನಿನಗೆ ಮುಟ್ಟಿರಬಹುದು. ಆಫೀಸಿಗೆ ರಜೆ ಹಾಕಿ ಮುಂಜಾನೆ ಏಳರಿಂದಲೆ ನಿನ್ನ ಪತ್ರದ ದಾರಿ ಕಾಯುತೊಡಗಿದೆ. ಪತ್ರ ಬರಲೇಯಿಲ್ಲ. ಹೃದಯ ನಿರಾಶೆಯಿಂದ ಚೂರು ಚೂರಾಗಿ ಹೋಗಿದೆ. ಅಂಥ ಹೃದಯದಿಂದಲೇ ನಾನೀಗ ಪತ್ರಬರೆಯುತ್ತಿದ್ದೇನೆ. ನಿನ್ನನ್ನು ನೋಡಬೇಕೆಂದು ನನ್ನ ಮನಸ್ಸು ಒಂದೇಸಮನೆ ಚಡಪಡಿಸುತ್ತದೆ. ಎಂದು ಭೇಟಿಯಾಗೋಣ, ಎಲ್ಲಿ ಭೇಟಿಯಾಗೋಣ ಎಂಬುದನ್ನು ಕೂಡಲೇ ಬರೆದು ತಿಳಿಸು,

ನಿನ್ನ ಪ್ರೀತಿಯ
ಮುಜನೂ

೯

ಮೈಲಾಪುರ
೨೪—೩—೭೨

ಪ್ರಾಣ ಪ್ರಿಯ ಲೀಲಾ,

ಹೀಗೆ ನೀನು ಮುನಿದುಕೊಂಡು ಪತ್ರ ಬರೆದಿದ್ದನ್ನು ನೋಡಿ ನನಗಾದ ನೋವು ಅಷ್ಟಿಷ್ಟಲ್ಲ, ಗೀತಾ ಹೋಟೆಲಿಗೆ ಬಾ ಎಂದು ಬರೆಯುವ ಬದಲು ಗೀತಾ ಡಿಲಕ್ಸ್‌ಗೆ ಬಾ ಎಂದು ಬರೆಯಬೇಕಾಗಿತ್ತು: ಆದರೆ ನಿನ್ನ ಪ್ರೇಮದಲ್ಲೇ ಹುಚ್ಚನಾದ ನಾನು ಹಾಗೆ ಬರೆಯಲಿಲ್ಲ. ಇದು ನನ್ನ ತಪ್ಪು ಎಂದು ಪ್ರಾಂಜಲವಾಗಿ ಒಪ್ಪಿಕೊಳ್ಳುತ್ತೇನೆ. ನೀನು ಬೇಕಾದ ಹಾಗೆ ತಿಳಿದವಳಿದ್ದೀ, ಸುಶಿಕ್ಷಿತಳಿದ್ದೀ, ಅಂತಹುದರಲ್ಲಿ ಈ ಒಂದು ಸಣ್ಣ ತಪ್ಪನ್ನು ಕ್ಷಮಿಸಬಾರದೆ? ಸ್ವಲ್ಪ ಶಾಂತಚಿತ್ತಳಾಗಿ ವಿಚಾರಿಸಿದರೆ ನನ್ನ ತಪ್ಪು ಅಕ್ಷಮ್ಯವಲ್ಲವೆನ್ನುವುದು ತಾನಾಗಿಯೆ ಹೊಳೆಯುತ್ತದೆ. ಯಾವಾಗ ಭೇಟಿಯಾಗೋಣವೆಂಬ ಬಗ್ಗೆ ಕೂಡಲೆ ಬರೆ: ನನ್ನ ತಪ್ಪಿಗಾಗಿ ನೀನು ಯಾವ ದಂಡ ವಿಧಿಸಿದರೂ ಸರಿಯೆ, ತೆರಲು ಸಿದ್ಧನಾಗಿದ್ದೇನೆ. ನೀನು ಅವಶ್ಯವಾಗಿ ಈ ಪತ್ರಕ್ಕೆ ಉತ್ತರಿಸುತ್ತೀ, ನನ್ನತ್ತ ನಿನ್ನ ದಯಾದೃಷ್ಟಿಯನ್ನು ಹೊರಳಿಸುತ್ತೀ ಎಂಬ ದೃಢ ವಿಶ್ವಾಸದೊಂದಿಗೆ ಈ ಪತ್ರವನ್ನು ಬರೆದಿದ್ದೇನೆ.

ನಿನ್ನ ಪ್ರಿಯ,
ಲೀಲೆಯ ಮುಜನೂ

೧೦

ಮಾಂಬಲಮ್
೨೫—೩—೭೨

ಪ್ರಿಯಾ,

ನಿಮ್ಮ ಪತ್ರ ತಲುಪುವ ಮೊದಲೇ ನನ್ನ

ತಪ್ಪಿನ ಅರಿವಾಯಿತು. ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಟ್ಟು ಎಂಥಾ ತಪ್ಪು ಮಾಡಿದೆನಲ್ಲ ಎಂದೀಗ ಅನಿಸುತ್ತಿದೆ. ತಾವಿಷ್ಟು ಉದಾರ ಹೃದಯಿಗಳಾದ್ದರಿಂದಲೇ ನನ್ನ ತಪ್ಪನ್ನು ಮನ್ನಿಸಿ ಪ್ರೇಮಿಸುತ್ತಿದ್ದೀರಿ. ನಿಜವಾಗಿಯೂ ನನ್ನ ಪಾಲಿಗೆ ತಾವು ದೇವತಾಸ್ವರೂಪರೇ ಸೈ. ನೀವು ನನ್ನಿಂದ ವಿಮುಖರಾಗಿದ್ದರೆ ನಾನು ಸತ್ತೇ ಹೋಗುತ್ತಿದ್ದೆ. ದೇವರು ದೊಡ್ಡವ, ನಿಮಗೆ ಸದ್ಬುದ್ಧಿಯನ್ನು ಕೊಟ್ಟು ನನ್ನನ್ನು ಕ್ಷಮಿಸಿದ.

ಇಷ್ಟೆಲ್ಲಾ ವಿಘ್ನಗಳು ಬರುತ್ತಿರುವಾಗ ಮದ್ರಾಸಿನಲ್ಲಿ ಭೇಟಿಯಾಗುವುದು ಸರಿಯಲ್ಲ ಅನಿಸುತ್ತದೆ. ನಾವು ಯಾವುದಾದರೂ ದೇವಾಲಯದಲ್ಲಿ ಭೇಟಿಯಾದರೆ ಹೇಗೆ? ತಿರುವೆಟ್ರಿಯೂರಿನ ದೇವಾಲಯ ಇದಕ್ಕೆ ಯುಕ್ತವಾಗಿದೆಯೆಂದು ನನಗನಿಸುತ್ತದೆ. ತಮಗೆ ಯಾವ ದಿನ ಅನುಕೂಲವಾಗುತ್ತದೆಂಬುದನ್ನು ತಿಳಿಸಿದರೆ ಅನುಕೂಲ. ತಮ್ಮ ಉತ್ತರಕ್ಕಾಗಿ ದಾರಿ ಕಾಯುತ್ತಿರುತ್ತೇನೆ.

ಇತಿ, ತಮ್ಮ,
ಲೀಲಾ

೧೧

ಮೈಲಾಪುರ
೨೬—೩—೭೨

ಪ್ರಿಯ ಲೀಲಾ,

ಹಿಂದಿನ ಸಿಟ್ಟನ್ನು ಮರೆತು ಪತ್ರ ಬರೆದದ್ದಕ್ಕೆ ತುಂಬಾ ಥ್ಯಾಂಕ್ಸ್. ನಿಜವಾದ ಪ್ರೇಮ ಇಂಥಾ ಚಿಕ್ಕಪುಟ್ಟ ಕಲಹಗಳಿಂದ ಬೆಳೆಯುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಇರಲಿ, ಆದದ್ದು ಆಗಿಹೋಯಿತು. ನೀನು ಹೇಳಿದಲ್ಲಿ ಭೇಟಿಯಾಗುತ್ತೇನೆ. ಆದರೆ ಒಂದು ಮಾತು. ನನ್ನ ಹೆಂಡತಿಯ ತವರೂರು ತಿರುವೆಟ್ರಿಯೂರ್. ಈಗ ಅವಳಿರುವುದು ಅಲ್ಲಿಯೇ. ಹೀಗಾಗಿ ಅಲ್ಲಿ ಭೇಟಿಯಾಗುವುದು ಒಳ್ಳೆಯದೋ ಹೇಗೆ ಎಂದು ವಿಚಾರಿಸುತ್ತಿದ್ದೇನೆ. ನೀನೂ ಈ ಬಗ್ಗೆ ಸ್ವಲ್ಪ ಯೋಚಿಸಿ ಬರೆ. ನೀನು ಹೇಳಿದಲ್ಲಿ, ನೀನು ಹೇಳಿದ ದಿನ ನೀನು ಹೇಳಿದ ಸಮಯಕ್ಕೆ ಭೇಟಿಯಾಗುತ್ತೇನೆ. ಉತ್ತರದ ಪ್ರತೀಕ್ಷೆಯಲ್ಲಿರುವ.

ನಿನ್ನ,
ಮಂಜುನಾಥ

೧೨

ಮಾಂಬಲಮ್
೨೭—೩—೭೨

ಪ್ರಿಯಾ,

ನಿಮ್ಮ ಪತ್ನಿ ಅಲ್ಲಿದ್ದದ್ದು ಒಳ್ಳೆಯದೇ ಆಯಿತು. ಒಂದು ಮಾತಿನಲ್ಲಿ ಹೇಳಬೇಕೆಂದರೆ ಹತ್ತೀಗಿಡದ ಮೇಲೆ ಬಟ್ಟೆಯೇ ಬೆಳೆದಂತಾಯಿತು. ಪತ್ನಿಯನ್ನು ಭೇಟಿಯಾಗುವ ನೆಪದಿಂದ ನೀವು ಅಲ್ಲಿಗೆ ಹೋಗಿ. ನಾನು ಶುಕ್ರವಾರ ಸಂಜೆ ದೇವರ ದರ್ಶನ ಮಾಡುವ ನೆಪದಿಂದ ದೇವಾಲಯಕ್ಕೆ ಬರುತ್ತೇನೆ. ಏಳುವರೆ ಸುಮಾರಿಗೆ ಪ್ರದಕ್ಷಿಣೆ ಹಾಕುತ್ತಾ ದಕ್ಷಿಣದ ಪ್ರಾಕಾರಕ್ಕೆ ಬರುತ್ತೇನೆ. ನಾವು ಅಲ್ಲಿಯೇ ಭೇಟಿಯಾಗೋಣ.

ತಮ್ಮ,
ಲೀಲಾ

P. S.– ಒಂದು ಮಾತು. ಆ ದಿನ ನಾನು ಆಕಾಶ ಬಣ್ಣದ ಸೀರೆಯನ್ನೂ ಹಳದಿ ಬಣ್ಣದ ಚೋಲಿಯನ್ನೂ ತೊಟ್ಟು ಬರುತ್ತೇನೆ. ಬರುವಾಗ ನಿಮ್ಮ ಹೆಂಡತಿಯನ್ನು ಕರೆದುಕೊಂಡು ಬಂದೀರಿ ಮತ್ತೆ. ಎಲ್ಲ ಮಜಾ ಕೆಟ್ಟು ಹೋದೀತು. ಬೇಗನೆ ಉತ್ತರ ಬರೆಯಿರಿ.

ತಮ್ಮ,
ಲೀಲಾ

೧೩

ಮೈಲಾಪುರ
೨೮—೩—೭೨

ಪ್ರಿಯ ಲೀಲಾ,

ನಿನ್ನ ಪತ್ರ ಮುಟ್ಟಿತು. ನೀನು ಬರೆದ ಹಾಗೇ ಶುಕ್ರವಾರ ಸಂಜೆ ತಿರುವೆಟ್ರಿಯೂರಿನ ದೇವಾಲಯದ ದಕ್ಷಿಣದ ಪ್ರಾಕಾರದಲ್ಲಿ ನಿನ್ನ ದಾರಿ ಕಾಯುತ್ತಿರುತ್ತೇನೆ, ನಾನು ಹೆಂಡತಿ

ಯನ್ನು ಕರೆತರುವಂತಹ ಮೂರ್ಖನೇನೂ ಅಲ್ಲ. ಆ ಬಗ್ಗೆ ಯೋಚಿಸಲೇಬೇಡ.

ನಿನ್ನ ನೆನಪಿನಲ್ಲೇ ಹುಚ್ಚನಾದ

ಮಜನೂ

೧೪

ತಿರುವೆಟ್ರಿಯೂರ

೮—೪—೭೨

ಪರಮಪ್ರಿಯರೂ ಪೂಜನೀಯರೂ......ರಿಗೆ

ಅನೇಕ ಸಾಷ್ಟಾಂಗ ನಮಸ್ಕಾರಗಳು. ನೀವು ಇಲ್ಲಿಗೆ ಬಂದಾಗ ಒಂದು ಮಾತು ಕೇಳಿಬಿಡಬೇಕೆಂದು ಮಾಡಿದ್ದೆ, ಕೇಳಲಿಲ್ಲ. ನಾನು ಮೈಲಾಪುರದಲ್ಲಿದ್ದಾಗ ಹಬ್ಬ ಹರಿದಿನಗಳಲ್ಲಾದರೂ ದೇವಾಲಯಕ್ಕೆ ಹೋಗಿರೆಂದು ಹೇಳಿದಾಗ, ದೇವರು ದಿಂಡರಲ್ಲಿ ನನಗೆ ವಿಶ್ವಾಸವೇ ಇಲ್ಲ, ಎಂದು ಖಂಡತುಂಡವಾಗಿ ಹೇಳುತ್ತಿದ್ದಿರಿ. ಅಂತಹುದರಲ್ಲಿ ನೀವಿಲ್ಲಿಗೆ ಬಂದಾಗ ದೇವಾಲಯಕ್ಕೆ ಹೋಗುವುದಾಗಿ ಹೇಳಿದಾಗ ನನಗೆ ಕೊಂಚ ಆಶ್ಚರ್ಯವೇ ಆಯಿತು. ಈ ದಿಢೀರ್ ಮನಃಪರಿವರ್ತನೆಯನ್ನು ನೋಡಿ, ನಾನೂ ನಿಮ್ಮೊಂದಿಗೆ ದೇವಾಲಯಕ್ಕೆ ಬರುವುದಾಗಿ ಹೇಳಿದಾಗ ಬೇಡವೇ ಬೇಡ ಎಂದು ಹೇಳಿದಿರಿ. ಏಕೆ? ದಕ್ಷಿಣ ಪ್ರಾಕಾರದಲ್ಲಿ ಮೇಲಿಂದ ಮೇಲೆ ಹಿಂದೆ ತಿರುತಿರುಗಿ ನೋಡುತ್ತಿದ್ದಿರಿ, ಏಕೆ? ಆ ದಿನ ಗಾಣದೆತ್ತಿನ ಹಾಗೆ ಪ್ರದಕ್ಷಿಣೆ ಹಾಕಿದ್ದೇ ಹಾಕಿದ್ದು. ಅಂಥಾ ಭಗವದ್ಭಕ್ತಿ ಒಮ್ಮೆಲೇ ಉಕ್ಕಿದ್ದು ಹೇಗೆ?

ಆರು ಗಂಟೆಗೆ ದೇವಾಲಯಕ್ಕೆ ಹೋದವರು ರಾತ್ರಿ ಹತ್ತಾದರೂ ಅಲ್ಲಿಂದ ಕಾಲು ಕಿತ್ತುವ ಹಾಗೆ ಕಾಣಲಿಲ್ಲ. ಏಕೆ? ಆಕಾಶ ಬಣ್ಣದ ಸೀರೆಯುಟ್ಟು ಹಳದಿ ಬಣ್ಣದ ಚೋಲಿಯನ್ನು ತೊಟ್ಟ ಯುವತಿಗಾಗಿಯೇ ಅಲ್ಲವೇ ನೀವು ದೇವಾಲಯವನ್ನು ಸುತ್ತಿದ್ದು? ಆದರೆ ಆ ಉಡುಪು ಧರಿಸಿದವಳು ನಿಮ್ಮ ಬೆನ್ನ ಹಿಂದೆಯೇ ಇದ್ದರೂ ನೋಡಿಯೂ ನೋಡದಂತೆ ಇದ್ದಿರಲ್ಲಾ ಸ್ವಾಮಿ, ಏಕೆ?

ಹೆಂಗಸರನ್ನು ಕಂಡರೆ ಗಂಡಸರಿಗೆ ಏನಾಗುತ್ತದೋ ಏನೋ. ಹುಚ್ಚು ಹಿಡಿದವರಂತೆ ಅವರ ಬೆನ್ನು ಹತ್ತತೊಡಗುತ್ತಾರೆ. ನೀವಂತೂ ಲೀಲಾಳಿಗೆ ರಾಶಿಗಟ್ಟಳೆ ಪತ್ರ ಬರೆದದ್ದೇ ಬರೆದದ್ದು. ಅವಳನ್ನು ಭೇಟಿಯಾಗಲು ಎಷ್ಟೆಲ್ಲಾ ಯೋಜನೆಗಳು, ಎಷ್ಟೆಲ್ಲಾ ಉಪಾಯಗಳು! ನನಗೆ ಇದೆಲ್ಲಾ ಗೊತ್ತಿಲ್ಲ ಎಂದುಕೊಂಡಿದ್ದೀರಾ? ಹೆಂಗಸರು ಗಂಡಸರನ್ನು ಬೇಕಾದ ಹಾಗೆ ಕುಣಿಸಬಲ್ಲರೆಂಬುದಕ್ಕೆ ಲೀಲಾಳ ಪತ್ರಗಳೇ ಸಾಕ್ಷಿ.

ಏನು ಸ್ವಾಮಿ, ಆ ಲೀಲಾಳನ್ನು ಮದುವೆಯಾಗುತ್ತೀರಾ? ಸಂತೋಷವಾಗಿ ಆಗಿ, ಯಾರು ಬೇಡವೆನ್ನುತ್ತಾರೆ? ಆದರೆ ಹೆಣ್ಣಿನ ಕೈಲಿ ಮಂಗನ ಹಾಗೆ ಕುಣಿಯುವುದು ಮಾತ್ರ ನಿಮಗೆ ತಪ್ಪಿಲ್ಲವೆಂಬುದನ್ನು ಸರಿಯಾಗಿ ತಿಳಿಯಿರಿ.


ಈ ಲೈಲಾ-ಮಜನೂರ ವಿವಾಹ ನೆರವೇರಿಸಲು ಮುಂದಿನ ರವಿವಾರ ನಾನೇ ಮೈಲಾಪುರಕ್ಕೆ ಬರುತ್ತೇನೆ. ಬರುವಾಗ ನೀವು ಲೀಲಾಳಿಗೆ ಬರೆದ ಎಲ್ಲಾ ಪತ್ರಗಳನ್ನು ತರುತ್ತೇನೆ. ಅವೆಲ್ಲಾ ಹೇಗೆ ಸಿಕ್ಕಿದವು ಎನ್ನುತ್ತೀರಾ, ಸ್ವಾಮಿ? ಅವುಗಳನ್ನು ಬರೆದಾಕೆ ನಾನೇ, ನಿಮ್ಮ ಧರ್ಮಪತ್ನಿ ಲೀಲಾ, ಅಲ್ಲ, ಪರಿಮಳಾ,

ನನ್ನನ್ನು ಭೇಟಿಯಾಗಲು ನಿಮಗೆ ನಾಚಿಗೆಯೆನಿಸುತ್ತಿದ್ದರೆ ನೆರೆಮನೆಯವರ ಮನೆಯಲ್ಲಿ ಬೀಗದ ಕೈ ಕೊಟ್ಟು ಹೋಗಿ. ಆದರೆ ರಾತ್ರಿ ತಡವಾಗಿ ಬಂದೀರಿ ಮತ್ತೆ! ನಾನು ಒಳ್ಳೇ ರುಚಿಕಟ್ಟಾದ ಅಡಿಗೆ ಮಾಡಿ ನಿಮ್ಮ ದಾರಿ ಕಾಯುತ್ತಿರುತ್ತೇನೆ. ರಾತ್ರಿ ಮಿಲನದಿಂದ ಲಜ್ಜೆಯಾಗುತ್ತಿದ್ದರೂ ಅನುಮಾನವಿಲ್ಲದೆ ಬನ್ನಿ. ದೀಪ ಆರಿಸಿ ನಾನು ನಿಮ್ಮನ್ನು ಸ್ವಾಗತಿಸುತ್ತೇನೆ.

ಇತಿ,

ಮಜನೂನ ಪ್ರಿಯೆ ಲೀಲಾ

ಅರ್ಥಾತ್ ಪರಿಮಳಾ


ಕರ್ನಾಟಕ ರಾಜ್ಯ ಲಾಟರಿ
ಯುಗಾದಿ
ಬಂಪರ್ ಡ್ರಾ
13-4-1975
ರೂ.18,77,160 ಮೊತ್ತದ
ವಿಶೇಷ ಬಹುಮಾನ
ರೂ.5,00,000
2 ಸಮಾಧಾನ ಬಹುಮಾನಗಳು
6 ಮೊದಲನೆಯ ಬಹುಮಾನಗಳು
ರೂ.1,00,000
12 ಸಮಾಧಾನ ಬಹುಮಾನಗಳು
6 ಎರಡನೆಯ ಬಹುಮಾನಗಳು
12 ಸಮಾಧಾನ ಬಹುಮಾನಗಳು
ರೂ.10,000
6 ಮೂರನೆಯ ಬಹುಮಾನಗಳು
12 ಸಮಾಧಾನ ಬಹುಮಾನಗಳು
ರೂ.5,000
96 ನಾಲ್ಕನೆಯ ಬಹುಮಾನಗಳು.
192 ಸಮಾಧಾನ ಬಹುಮಾನಗಳು
ರೂ.1,000
192 ಐದನೆಯ ಬಹುಮಾನಗಳು
384 ಸಮಾಧಾನ ಬಹುಮಾನಗಳು
ರೂ.500
960 ಆರನೆಯ ಬಹುಮಾನಗಳು
1920 ಸಮಾಧಾನ ಬಹುಮಾನಗಳು
ರೂ.100
4800 ಏಳನೆಯ ಬಹುಮಾನಗಳು
ರೂ.50
ಬಂಪರ್ ಮತ್ತು ಮೊದಲ ಆರು ಬಹುಮಾನಗಳನ್ನು ಪಡೆದ ಟಿಕೇಟುಗಳ ಹಿಂದಿನ ಹಾಗೂ ಮುಂದಿನ ಸಂಖ್ಯೆಯ ಟಿಕೇಟುಗಳಿಗೆ ಸಮಾಧಾನ ಬಹುಮಾನಗಳನ್ನು ನೀಡಲಾಗುವುದು
ಏಕೈಕ ಮಾರಾಟದ ಏಜೆಂಟರು
ಮೈಸೂರು ಸೇಲ್ಸ್
ಇಂಟರ್‌ನ್ಯಾಷನಲ್ ಲಿಮಿಟೆಡ್
(ಲಾಟರಿ ವಿಭಾಗ)
'ಹರಿವಿಲಾಸ್' 36 ಕನ್ನಿಂಗ್‌ಹ್ಯಾಮ್ ರಸ್ತೆ,
ಬೆಂಗಳೂರು-560 052 ಫೋನ್: 26713

MCA-MSIL-18

విప్లవ
రసాయనాక
మూడు
లంకెగలు

స్టాలిన్

ವಾಲ್ಮೀಕಿ ರಾಮಾಯಣದ ಮೂರು ಲಂಕೆಗಳು

ರಾಮಾಯಣ, ಮಹಾಭಾರತಗಳು ಬರಿ ಕಾವ್ಯವಲ್ಲ, ಕವಿಕಲ್ಪಿತ ಕತೆಗಳು ಮಾತ್ರವಲ್ಲ; ಅವುಗಳಲ್ಲಿ ಭರತಖಂಡದ ಇತಿಹಾಸವೇ ಹುದುಗಿದೆ. ಅವುಗಳಲ್ಲಿನ ಐತಿಹಾಸಿಕ ತಥ್ಯಗಳನ್ನು ಗುರುತಿಸುವ ಕಾರ್ಯ ಆಗಬೇಕಾದಷ್ಟು ಆಗಿಲ್ಲವಾದರೂ ಆಗೀಗ ಕೆಲವರಾದರೂ ಜ್ಞಾನಪಿಪಾಸುಗಳು ತಂತಮ್ಮ ವಿಚಾರಗಳನ್ನು ಮಂಡಿಸುತ್ತಲೇ ಬಂದಿದ್ದಾರೆ.

ನಾವು ನಮ್ಮ ದೇಶದ ಆದಿಕಾವ್ಯವೆಂದು ಹೇಳುವ ರಾಮಾಯಣವನ್ನು ನಮ್ಮ ಉತ್ತರಕ್ಕಿರುವ ತಿಬೇಟ್ ಮತ್ತು ಆಗ್ನೇಯಕ್ಕಿರುವ ಹಲವಾರು ದೇಶಗಳು ತಮ್ಮ ಸ್ವತ್ತೆಂದು ಬಗೆಯುವುದುಂಟು. ಇಲ್ಲಿ ನಡೆದ ಘಟನೆಗಳು ತಂತಮ್ಮ ದೇಶಗಳಲ್ಲೇ ಸಂಭವಿಸಿದುವೆಂದು ಅಲ್ಲಲ್ಲಿಯವರು ನಂಬುವುದುಂಟು.

ಪ್ರಸ್ತುತ ಲೇಖನದಲ್ಲಿ ಲೇಖಕರ ಶೋಧನ ಕುತೂಹಲ ಕೆರಳಿಸಿದ ಸಮಸ್ಯೆ ಲಂಕಾ. ಸಾಮಾನ್ಯ ಪ್ರತೀತಿಯಂತೆ ನಮ್ಮ ದಕ್ಷಿಣಕ್ಕಿರುವ ದ್ವೀಪ ಸಿಂಹಳವೇ ಲಂಕಾ. ಆದರೆ ಅನೇಕ ವಿದ್ವಾಂಸರ ಪ್ರಕಾರ ರಾಮಾಯಣದ ಕರ್ತೃ ವಾಲ್ಮೀಕಿಗಾಗಲಿ ರಾಮಾಯಣದಲ್ಲಿ ಉಲ್ಲೇಖಿತವಾದ ಪಾತ್ರಗಳಿಗಾಗಲಿ ದಕ್ಷಿಣ ಭಾರತ ಅಪರಿಚಿತವೇ ಆಗಿತ್ತು. ಆದುದರಿಂದ ಹಿಮಾಲಯದಿಂದ ವಿಂಧ್ಯದ ವರೆಗಿನ ಬಯಲು ಮತ್ತು ವಿಂಧ್ಯದ ದಕ್ಷಿಣಕ್ಕೆ ಸ್ವಲ್ಪ ಭಾಗಕ್ಕೇ ರಾಮಾಯಣದ ಭೂಗೋಲ ಸೀಮಿತವಾದದ್ದು ಎಂದು ಹೇಳುತ್ತಾರೆ. ಕಸ್ತೂರಿಯ ೧೯೭೦ ಸಪ್ಟಂಬರ್ ಸಂಚಿಕೆಯಲ್ಲಿ 'ರಾವಣನ ಲಂಕೆ ಯಾವುದು?' ಎಂಬ ಲೇಖನವೊಂದು ಬಂದಿದೆ. ಅದರ ಪ್ರಕಾರ ಲಂಕಾ ನರ್ಮದೆಯ ಉತ್ತರದಲ್ಲೊಂದು ಕಡೆ ಪಶ್ಚಿಮ ಕರಾವಳಿಯ ಆಚೆ ಇತ್ತು. ಇದೊಂದು ಊಹೆಯಾದರೆ ಆಧುನಿಕ ವಿದ್ವಾಂಸರು ಇರಾಕ್, ಆಸ್ಟ್ರೇಲಿಯ-ನ್ಯೂಗಿನಿ, ಅಂಡಮಾನ್, ಜಾವಾ- ಸುಮಾತ್ರಾ ಮುಂತಾದ ಅನೇಕ ದೇಶಗಳು ಲಂಕಾ ಆಗಿದ್ದಿರಬಹುದೆಂದು ಊಹಿಸಿದ್ದಾರೆ. ಪ್ರಸ್ತುತ ಲೇಖಕರು ಲಂಕೆಯನ್ನು ಭಾರತದ ಇನ್ನೊಂದು ತುದಿಗೆ ಕೊಂಡೊಯ್ಯುತ್ತಾರೆ.

ರಾವಣ ಆಳಿದ ಲಂಕಾ, ವಾಲ್ಮೀಕಿ ವರ್ಣಿಸಿದ ಲಂಕಾ ಮತ್ತು ಆಧುನಿಕ ಲಂಕಾ (ಅಂದರೆ ಈಗ ಶ್ರೀಮತಿ ಬಂಡಾರನಾಯಿಕೆಯ ನೇತೃತ್ವದಲ್ಲಿರುವ "ಶ್ರೀಲಂಕಾ")- ಇವು ಮೂರೂ ಬೇರೆ ಬೇರೆ. ಇವಲ್ಲದೆ ಗೋದಾವರೀ ನದಿಯ ಮುಖಭಾಗದಲ್ಲಿಯೂ ಕೂಡ ಲಂಕಾ ಎಂಬ ಹೆಸರು ಹೊತ್ತಿರುವ ಹತ್ತಾರು ಸಣ್ಣ ಪುಟ್ಟ ದ್ವೀಪಗಳಿವೆಯಂತೆ, ಬನಾರಸ್(ವಾರಾಣಸಿ ಅಥವಾ ಕಾಶಿ)ನಲ್ಲಿಯೂ ನಗರದ ಒಂದು ಭಾಗಕ್ಕೆ ಲಂಕಾ ಎಂದು ಎನ್ನುತ್ತಾರಂತೆ.

ರಾಮೇಶ್ವರ ದ್ವೀಪದಿಂದ ಚಿಕ್ಕ ಜಹಜು ಹತ್ತಿ, ಮೂರು ಗಂಟೆಗಳ ಕಾಲ, ಮೂವತ್ತು ಮೈಲಿ ದೂರ, ದಕ್ಷಿಣ ದಿಕ್ಕಿನಲ್ಲಿ ಸಮುದ್ರಯಾನ ಮಾಡಿದರೆ ಲಂಕಾ ದ್ವೀಪದ ಉತ್ತರ

ತೀರದಿಯಲ್ಲಿರುವ ತಲೈಮನ್ನಾರ್ ಬಂದರನ್ನು ಸೇರುತ್ತೇವೆ. ಈಗೀಗ ಐದಾರು ವರ್ಷಗಳ ವರೆಗೂ ಈ ದ್ವೀಪ ಸಿಂಹಳ ಅಥವಾ ಸಿಲೋನ್ ಎಂದು ಪ್ರಸಿದ್ಧವಾಗಿತ್ತು. ಆದರೆ ಸಂಪೂರ್ಣ ಸ್ವಾತಂತ್ರ್ಯ ಗಳಿಸಿದ ಈ ದೇಶ ತನ್ನ ಹೆಸರನ್ನು ಶ್ರೀಲಂಕಾ ಎಂದು ಮಾರ್ಪಡಿಸಿಕೊಂಡಿತು. ಈ ಹೆಸರೇನೂ ಇದಕ್ಕೆ ಹೊಸದಲ್ಲ, ಹಿಂದಿನಿಂದ ಬಂದದ್ದು. ಅಲ್ಲಿಯ ತಮಿಳರು ತಮ್ಮ ದೇಶವನ್ನು ಇಳಂಗೈ ಎಂದು ಕರೆಯುತ್ತಾರೆ. (ಕನ್ನಡದಲ್ಲಿ 'ಸ್ಕೂಲ್' ಎನ್ನುವುದು 'ಇಸ್ಕೂಲು' ಆಗುವಂತೆ).

ರಾಮನು ತನ್ನ ವಾನರ ಸೈನ್ಯದೊಡನೆ ಹತ್ತಾರು ಮೈಲಿ ಅಗಲವಾದ ಜಲರಾಶಿಯನ್ನು ದಾಟಿ ಲಂಕೆಯಲ್ಲಿ ಕಾಲಿಟ್ಟನೆಂದು ರಾಮಾಯಣದಲ್ಲಿ ಓದುತ್ತೇವೆ. ಈಗಲೂ ಕೂಡ ರಾಮೇಶ್ವರ-ಧನುಷ್ಕೋಡಿ ತೀರದಿಂದ ನೋಡಿದರೆ ಅತಿ ದೂರದಲ್ಲಿ ಕೆಲವು ನಡುಗಡ್ಡೆಗಳು ಕಂಡು ಬರುತ್ತವೆ. ಭೂಪಟಗಳಲ್ಲಿಯೂ ಇವನ್ನು ಗುರುತಿಸಿರುತ್ತಾರೆ. ಇವೇ ವಾನರರು ಸಮುದ್ರದ ಮೇಲೆ ಕಟ್ಟಿದ ಸೇತುವೆಯ ಅವಶೇಷಗಳೆಂದು ರಾಮಾಯಣ ಭಕ್ತರು ನಂಬುತ್ತಾರೆ. ಇದು ಆದಮನ ಸೇತುವೆ ಎಂದು ಕ್ರಿಸ್ತಭಕ್ತರು ಹೇಳುತ್ತಾರೆ, ಇವು ವಾನರ ಕಲ್ಪಿತವೂ ಅಲ್ಲ, ಆದಮ ಕಲ್ಪಿತವೂ ಅಲ್ಲ. ಸ್ವಾಭಾವಿಕ ನಡುಗಡ್ಡೆಗಳು ಎಂದು ಭೂಗೋಳ ಶಾಸ್ತ್ರಜ್ಞರು ಹೇಳುತ್ತಾರೆ. ನಿಮ್ಮ ನಿಮ್ಮ ಇಷ್ಟದಂತೆ ಯಾರನ್ನು ಬೇಕಾದರೂ ನಂಬಿ. ಈಗಿನ ಲಂಕೆಯಲ್ಲಿ ಮಾತ್ರ ಎಲ್ಲೂ ರಾಮಾಯಣ ಕಾಲದಿಂದ ಬಂದಿದ್ದು ಎಂದು ನಂಬಲರ್ಹವಾದ ಅವಶೇಷಗಳು ಯಾವುವೂ ಉಳಿದು ಬಂದಿಲ್ಲ. ಆದರೆ ಇತ್ತ ಕಡೆ, ರಾಮೇಶ್ವರ, ಧನುಷ್ಕೋಡಿ, ರಾಮನಾಡ್, ದರ್ಭಶಯನಂ ಮುಂತಾದ ಸ್ಥಳಗಳಿಗೆ ನೀವು ಹೋದರೆ ಅಲ್ಲಿ ರಾಮನ ಕಾಲದ ಸ್ಥಳಮಾಹಾತ್ಮ್ಯಗಳನ್ನು ತೋರಿಸದೆ, ವಿವರಿಸದೆ, ನಿಮ್ಮಿಂದ ಅಲ್ಲಿ ಬೇಕಾದ ಪೂಜೆ ಪುನಸ್ಕಾರಗಳನ್ನು ಮಾಡಿಸದೆ ಅಲ್ಲಿಯ ಶಾಸ್ತ್ರಿಗಳು ನಿಮ್ಮನ್ನು ಹಿಂದಿರುಗಲು ಬಿಡುವುದಿಲ್ಲ. ಇದೇ ರಾಮ ಮೊದಲು ಕಾಲಿಟ್ಟ ಪವಿತ್ರ ಸ್ಥಳ, ಇದು ಕುಳಿತ ಜಾಗ, ಇದು ಸ್ನಾನ ಮಾಡಿದ ಪುಣ್ಯತೀರ್ಥ, ಇಲ್ಲಿ ತಾನೆ ದರ್ಭಾಸನದ ಮೇಲೆ ಮಲಗಿದ್ದು, ಇದು ಸಮುದ್ರರಾಜ ಓಡಿಬಂದು ಮರೆಹೊಕ್ಕ ಕ್ಷೇತ್ರ, ಇತ್ಯಾದಿಗಳನ್ನು ನೀವು ತೃಪ್ತಿಯಾಗುವ ವರೆಗೂ ಕೇಳಿ ನೋಡಬಹುದು.

ಆದರೆ ನಿಮಗೆ ಈ ಮಾತು ಆಶ್ಚರ್ಯವೆನಿಸಬಹುದು—ಸ್ಥಳೀಯ ಮಹನೀಯರುಗಳ ಮಾತನ್ನೂ ಸ್ಥಳ ಪುರಾಣಗಳನ್ನೂ ಬಿಟ್ಟರೆ (ವಾಲ್ಮೀಕಿಯ) ರಾಮಾಯಣಕ್ಕೂ ಈ ಸ್ಥಳಗಳಿಗೂ ಯಾವ ಬಾದರಾಯಣ ಸಂಬಂಧವೂ ಇಲ್ಲ! ಎಲ್ಲೂ ರಾಮಾಯಣ ಕಾಲದಷ್ಟು ಪ್ರಾಚೀನದಿಂದ ಬಂದ ಅವಶೇಷಗಳಿಲ್ಲ. ಇರುವ ಗುಡಿಗಳು ಚೋಳರ ಕಾಲದಿಂದೀಚೆಗೆ ಬಂದವು. ಮಿಕ್ಕ ಸ್ಥಳಗಳಲ್ಲಿ ಅದೂ ಇಲ್ಲ, ಬರೀ ಪ್ರತೀತಿ ಮಾತ್ರ. ವಾಲ್ಮೀಕಿ ರಾಮಾಯಣದ ಯುದ್ಧ ಕಾಂಡ ಸರ್ಗ ೧೨೩, ಶ್ಲೋಕ ೨೦–೨೧ ರಲ್ಲಿ "ಅತ್ರ ಪೂರ್ವಂ ಮಹಾದೇವಃ ಪ್ರಸಾದಮಕರೋದ್ವಿಭುಃ । ಏತತ್ತು ದೃಶ್ಯತೇ ತೀರ್ಥಂ ಸಾಗರಸ್ಯ ಮಹಾತ್ಮನಃ ॥ ಸೇತುಬಂಧ ಇತಿ

ಖ್ಯಾತಂ ತ್ರೈಲೋಕ್ಯೇನ ಚ ಪೂಜಿತಂ । ಏತತ್ ಪವಿತ್ರಂ ಪರಮಂ ಮಹಾಪಾತಕ ನಾಶನಂ ॥" ಎಂದು ರಾಮೇಶ್ವರದ ಮಾಹಾತ್ಮ್ಯದ ಬಗ್ಗೆ ಓದುವುದೇನೋ ಖಂಡಿತ, ಆದರೆ ಇದರ ಬಗ್ಗೆ ಸಂಶಯಕ್ಕೆ ಕಾರಣವಿದೆ.

ಇತ್ತೀಚೆಗೆ ವಾಲ್ಮೀಕಿ ರಾಮಾಯಣದ ನಾಲ್ಕು ಪ್ರಾಂತೀಯ ಪಾಠಗಳನ್ನೂ ಹತ್ತಾರು ಮೂಲ ಪ್ರತಿಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಸಂಕಲಿಸಿ ಪ್ರಚುರಪಡಿಸಿರುವ ವಿಶೋಧಿತ ಆವೃತ್ತಿ (Critical Edition)* ಯ ಪ್ರಕಾರ ಈ ಎರಡು ಶ್ಲೋಕಗಳು ದಕ್ಷಿಣ ಪ್ರಾಂತೀಯ ಪಾಠದಲ್ಲಿ ಮಾತ್ರ ಬಂದಿದ್ದು ಎಲ್ಲಾ ಪಾಠಗಳ ಆಧಾರವಿಲ್ಲದಿರುವುದರಿಂದ ಈ ಶ್ಲೋಕಗಳನ್ನು ವಿಶೋಧಿತ ಪಾಠ (Critcal Text)ದಿಂದ ಬೇರ್ಪಡಿಸಿದ್ದಾರೆ. ರಾಮೇಶ್ವರದ ಐತಿಹ್ಯಕ್ಕೆ ರಾಮಾಯಣದ ಈ ಶ್ಲೋಕಗಳೂ ಒಂದು ಆಧಾರ. ಆದರೆ ಇವು ವಾಲ್ಮೀಕಿಯ ಕಾಲದಿಂದ ಬಂದಿದ್ದಲ್ಲ, ಅನಂತರ ಸೇರಿಸಲ್ಪಟ್ಟವು ಎಂದ ಮೇಲೆ ರಾಮೇಶ್ವರ ಕ್ಷೇತ್ರಕ್ಕೂ ರಾಮಾಯಣ ಕಥೆಗೂ ಸಂಬಂಧ ಇಲ್ಲವೆಂದು ಹೇಳಿದಂತಾಯಿತು. ಇದರಿಂದ ಆಧುನಿಕ ಲಂಕೆಯ ಐತಿಹ್ಯಕ್ಕೂ ಧಕ್ಕೆ ಬಂದಿದೆ.

ಈಗಿನ ಲಂಕಾ ರಾವಣನ ಲಂಕಾ ಆಗಿರಲಾರದು ಎನ್ನಲು ಇನ್ನೂ ಎರಡು ಪ್ರಬಲವಾದ ಕಾರಣಗಳಿವೆ. ರಾಮನ ಕಾಲದ ವಾನರರು ನಿಜವಾಗಿಯೂ ಕಪಿಗಳಲ್ಲ, ವನ್ಯಜನರು, ಸ್ವಲ್ಪ ಹೆಚ್ಚು ಕಡಿಮೆ ನಮ್ಮಂತೆಯೇ ದೈಹಿಕ ಶಕ್ತಿ ಸಾಮರ್ಥ್ಯವುಳ್ಳವರಾಗಿದ್ದರು. ಆದರೆ ಅವರಲ್ಲಿ ಯಾವ ವಿಶೇಷ ಯಾಂತ್ರಿಕ ಸಾಧನಗಳಿರಲಿಲ್ಲ— ಎಂದು ಒಟ್ಟಿನಲ್ಲಿ ನಾವು ಒಪ್ಪಿದರೆ (ಈ ಮಾತುಗಳಲ್ಲಿ ನಿಮಗೆ ಒಪ್ಪಿಗೆ ಬರದಿದ್ದರೆ ಆಗ ಈ ಲೇಖನವನ್ನು ಮುಂದಕ್ಕೆ ಓದುವ ಗೋಜಿಗೆ ನೀವು ಹೋಗಲೇಬೇಕಾಗಿಲ್ಲ, ಏಕೆಂದರೆ, ನಾವು ಇನ್ನು ಮುಂದೆ ಇಲ್ಲಿ ಹೇಳುವ ಯಾವ ಮಾತೂ ನಿಮಗೆ ಹಿಡಿಸುವುದಿಲ್ಲ) ಮೂವತ್ತು ಮೈಲಿಗಳಷ್ಟು (ರಾಮಾಯಣವನ್ನೇ ನಂಬುವುದಾದರೆ ನೂರು ಯೋಜನಗಳು ಅಂದರೆ ಸುಮಾರು ಮುನ್ನೂರು ಮೈಲಿಗಳಷ್ಟು) ಅಗಲ, ಏನಿಲ್ಲ ಅಂದರೂ, ಸುಮಾರು ೩೦-೪೦ ಅಡಿಗಳಷ್ಟು ಆಳ ಇರುವ ಸಮುದ್ರವನ್ನು ಸೇತುವೆಯಿಂದ ಬಂಧಿಸುವ ಮಹಾಕಾರ್ಯ ಅಮಿತ ಊಹಾಶಕ್ತಿ ಸಾಮರ್ಥ್ಯವುಳ್ಳ ಮಹಾಕವಿಗೆ ಸಾಧ್ಯವಿತ್ತೇ ವಿನಾ ದೈಹಿಕ ಸಾಮಗ್ರಿಕ ಬಲವನ್ನೇ ನಂಬಿದ್ದ ಆಗಿನ ವಾನರ ವೀರರಿಗಾಗಲಿ ಈಗಿನ ಮಾನವ ಸಾಮಾನ್ಯರಿಗಾಗಲಿ ಸಾಧ್ಯವಲ್ಲ ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

ರಾಮಾಯಣದ ಘಟನೆಗಳೆಲ್ಲ ಸಂಬಂಧಪಟ್ಟವರೆಲ್ಲ ಸಂಸ್ಕೃತವನ್ನು ಸಂಭಾಷಣೆಯ ಮಟ್ಟಗಾದರೂ ತಿಳಿದಿರಬಹುದಾದವರು ವಾಸಿಸುತ್ತಿದ್ದ ಪ್ರಾಂತ್ಯದಲ್ಲೇ ನಡೆದಿರಬೇಕು. ರಾಮ ಸೀತಾ ಲಕ್ಷ್ಮಣ, ಸುಗ್ರೀವ ಹನುಮಂತಾದಿ ವಾನರರು, ರಾವಣ ವಿಭೀಷಣಾದಿ ರಾಕ್ಷಸರು ಇವರೆಲ್ಲ ಪರಸ್ಪರ ತಿಳಿದುಕೊಳ್ಳಬಲ್ಲ ಭಾಷೆಯಲ್ಲಿ ಮಾತಾಡಿರಬೇಕು. ಲಂಕೆಯಲ್ಲೂ ಇದೇ ಭಾಷೆ ಬಳಕೆಯಲ್ಲಿದ್ದಿರಬೇಕು, ವಾಲ್ಮೀಕಿಯ ಉತ್ಪ್ರೇಕ್ಷೆಗಳಾವವನ್ನೂ ಗಮನಕ್ಕೆ ತೆಗೆದುಕೊಳ್ಳದಿದ್ದರೂ ರಾವಣಾದಿಗಳು ವೈದಿಕ ಸಂಪ್ರದಾಯದವರು, ಸಂಸ್ಕೃತವೇ ಇವರ ಸಂಸ್ಕೃತಿಯ ಮೂಲವಾಗಿತ್ತು ಎಂಬುದನ್ನು ನಾವು ಒಪ್ಪಿಕೊಂಡರೆ ಲಂಕೆಯನ್ನು ಗುರುತಿಸುವ ಕಾರ್ಯ ಸುಲಭವಾಗುತ್ತದೆ.

ಈಗಿನ ನಮ್ಮ ಕರ್ನಾಟಕದ ಹಂಪಿ (ವಿಜಯನಗರ) ಪ್ರಾಂತ್ಯವೇ ರಾಮಾಯಣ ಕಾಲದ ಪಂಪಾ–ಕಿಷ್ಕಿಂಧಾ ಪ್ರದೇಶವೆಂದೂ ಹಿಂದಿನಿಂದ ಪ್ರತೀತಿ ಬಂದಿದೆ. ಆದರೆ ಅಲ್ಲಲ್ಲಿ ಬೆಳೆದುಬಂದಿರುವ ಸ್ಥಳಪುರಾಣಗಳನ್ನು ಬಿಟ್ಟರೆ ಇದಕ್ಕೂ ವಾಸ್ತವಿಕವಾದ ಯಾವ ಆಧಾರ ಇದುವರೆವಿಗೆ ಸಿಕ್ಕಿಲ್ಲ. ಹೀಗೆ ದಕ್ಷಿಣ ಭಾರತದಲ್ಲಿ ನಮ್ಮ ಸೀಮೆಯಲ್ಲಿ ಕಿಷ್ಕಿಂಧಾ, ಇನ್ನೂ ತೀರ ದಕ್ಷಿಣದಲ್ಲಿ, ಸಮುದ್ರದಾಚೆ, ಲಂಕಾ ಇರಲಿಲ್ಲ ಎನ್ನುವುದಕ್ಕೆ ಮತ್ತೊಂದು ಪ್ರಬಲವಾದ ಆಧಾರವಿದೆ. ಈ ಪ್ರದೇಶಗಳಲ್ಲಿ

* ಈ ವಿಶೋಧಿತ ಆವೃತ್ತಿಯನ್ನು ಬರೋಡಾ ಓರಿಯಂಟಲ್ ಇನ್‌ಸ್ಟಿಟ್ಯೂಟ್ ಸಂಸ್ಥೆಯವರು ಆರು ಭಾಗಗಳಲ್ಲಿ ೧೯೬೦-೬೧ ರಲಿ ಪ್ರಚುರಪಡಿಸಿದ್ದಾರೆ.

ಹೋದ ಯಾವತ್ತಿಗೂ ಸಂಸ್ಕೃತ ಅಥವಾ ಯಾವುದಾದರೊಂದು ಸಂಸ್ಕೃತಜನ್ಯ ಭಾಷೆ ಜನಸಾಮಾನ್ಯದ ಭಾಷೆಯಾಗಿರಲಿಲ್ಲ.* ಚಾರಿತ್ರಿಕ (ಅಂದರೆ ಸುಮಾರು ಕ್ರಿ. ಪೂ. ೫೦೦ರಿಂದ ಈಚೆ) ಕಾಲದಲ್ಲೂ ಕೂಡ ಸಿಂಹಳದಲ್ಲೂ, ದಕ್ಷಿಣ ಭಾರತದಲ್ಲೂ ಅಲ್ಲಿ ಇಲ್ಲಿ ಕೆಲವು ಪಂಡಿತೋತ್ತಮರಲ್ಲಿ, ಮಾತ್ರ ಈ ಭಾಷೆಯು ಬಳಕೆಯಲ್ಲಿತ್ತು. ಆದರೆ ರಾಮಾಯಣದ ಪ್ರಸಂಗಗಳು ನಡೆದ ಪ್ರದೇಶಗಳಲ್ಲೆಲ್ಲ ಸಂಸ್ಕೃತ ಅಥವಾ ಸಂಸ್ಕೃತಜನ್ಯ ಭಾಷೆಗಳು ಜನಸಾಮಾನ್ಯರಲ್ಲೂ ಕೂಡ ಬಳಕೆಯಲ್ಲಿದ್ದವು. ರಾಮನು ಚಿತ್ರಕೂಟದಿಂದ ಹೊರಟು ಜನಸ್ಥಾನಕ್ಕೆ ಬರುವವರೆಗೂ ದಾರಿಯಲ್ಲಿ ಸಂಧಿಸಿದ ಋಷಿಗಳಾಗಲಿ, ಮಿತ್ರರಾಗಲಿ ಅಥವಾ ವಿರಾಧನಂತಹ ವಿರೋಧಿಗಳಾಗಲಿ, ಜನಸ್ಥಾನದಲ್ಲಿ ಸಂಧಿಸಿದ ಶೂರ್ಪಣಖಾ ಮತ್ತು ಖರ ಮುಂತಾದ ರಾಕ್ಷಸರೇ ಆಗಲಿ, ಇವರೆಲ್ಲರೂ, ರಾಮನೊಂದಿಗೆ ಸಂಸ್ಕೃತ (ಅಥವಾ ಅದಕ್ಕೆ ನಿಕಟ ಸಂಬಂಧವುಳ್ಳ) ಭಾಷೆಯಲ್ಲಿ ಮಾತಾಡಿರಬೇಕು. ಹೀಗೆಯೇ ಅನಂತರ ಬ್ರಾಹ್ಮಣ ವೇಷಧಾರಿಯಾಗಿ ಸೀತೆಯಲ್ಲಿಗೆ ಬಂದ ರಾವಣನೂ ಅವಳೊಡನೆ ಕಲಿತವರು ಮಾತಾಡುವ ಸಂಸ್ಕೃತದಲ್ಲಿ ತಾನೆ ಮಾತಾಡಿರಬೇಕು (ಅಥವಾ ತಮಿಳಿನಲ್ಲೋ? ಇಲ್ಲವೆ ಸಿಂಹಳೀಯ ಭಾಷೆಯಲ್ಲೋ? ಸೀತೆಗೆ ಈ ಭಾಷೆಗಳಾವುದಾದರೂ? ಗೊತ್ತಿತ್ತೆ, ಅಥವಾ ಸಹಾಯಕ್ಕೆ ಯಾರಾದರೂ ದ್ವಿಭಾಷಿಗಳನ್ನು ರಾವಣ ಕರೆದುಕೊಂಡು ಬಂದಿದ್ದನೇನು? ನೀವೇ ಯೋಚಿಸಿ ನೋಡಿ). ಮುಂದೆ ಹನುಮಂತನೂ ಕೂಡ ರಾಮ ಲಕ್ಷ್ಮಣರೊಡನೆ ಸಂಸ್ಕೃತದಲ್ಲಿ ಮಾತಾಡಿ (ಅಥವಾ ಕೀರಾ ಹಳಿಗನ್ನಡದಲ್ಲಿ ಎಂದೇನಾದರೂ ನಂಬುತ್ತೀರೋ?) ಅವರ ಮನಸ್ಸನ್ನು ತನ್ನ ವಾಕ್ಚಾತುರ್ಯದಿಂದ ಒಲಿಸಿಕೊಂಡ. ವಾನರ ರಾಜ್ಯದ ಆಳರಸವರ್ಗವೆಲ್ಲ ಸಂಸ್ಕೃತವನ್ನು ಅರಿತವರಾಗಿದ್ದರು. ‡ವಾಲಿ – ರಾಮರ ಸಂವಾದವನ್ನು ರಾಮಾಯಣ ಓದಿದವರು ಯಾರು ತಾನೇ ಪುನಃ ಪುನಃ ಓದಿಲ್ಲ? ಓದಿದಷ್ಟು ವಾಲಿಯ ಬಗ್ಗೆ ಮತ್ತಷ್ಟು ಕನಿಕರವೂ ರಾಮನ ನ್ಯಾಯಪರತೆಯ ವಿಚಾರದಲ್ಲಿ ಸಂಶಯವೂ ಹುಟ್ಟುತ್ತದೆ. ಈ ವಿಚಾರದಲ್ಲಿ ಎಷ್ಟೋ ವ್ಯಾಖ್ಯಾನಗಳು ಬಂದಿವೆ ಆದರೆ ನಮಗೆ ಮಾತ್ರ ಪೂರ್ತಿಯಾಗಿ ಸಮಾಧಾನವಾಗುವುದಿಲ್ಲ. †ವಾಲಿಗೆ ಸಂಸ್ಕೃತದಲ್ಲಿದ್ದ ಪಾಂಡಿತ್ಯಕ್ಕೆ ಅವನ ಮಾತುಗಳೇ ನಿದರ್ಶನ. ವಾಲಿಯ ಹೆಂಡತಿ (ಅನಂತರ ಸುಗ್ರೀವನ

---

* ಸಿಲೋನಿನ ಸಿಂಹಳೀಸ್ ಭಾಷೆಯೇನೋ ಸಂಸ್ಕೃತಜನ್ಯ. ಆದರೆ ಈ ಮಾತನ್ನಾಡುವ ಜನ ಸಿಂಹಳಕ್ಕೆ ಬುದ್ಧನ ಕಾಲದಿಂದೀಚೆಗೆ (ಕ್ರಿ. ಪೂ ೫೦೦) ಒಡಿಸಾ, ಬಂಗಾಳ ತೀರ ಪ್ರದೇಶಗಳಿಂದ ಬಂದವರು. ರಾಮಾಯಣದ ಘಟನೆಗಳು ನಡೆದಿದ್ದು ಅದಕ್ಕೂ ಒಂದು ಸಾವಿರ ವರ್ಷಗಳ ಹಿಂದೆ ಎಂದು ಆಧುನಿಕ ಸಂಶೋಧನೆಗಳಿಂದ ತಿಳಿದುಬರುತ್ತದೆ.

‡ ಸಾಮಾನ್ಯ ವಾನರರ - ವನ್ಯಜನಗಳ - ಭಾಷೆ ಬೇರೆಯಾವುದಾದರೂ ಸಂಸ್ಕೃತಕ್ಕೆ ಸಂಬಂಧ ಪಡದ ಭಾಷೆಯಾಗಿದ್ದಿರಬಹುದು ಎನ್ನುವುದಕ್ಕೆ ಆಧಾರವಿದೆ. ದಮುಖನೆಂಬ ವಾನರ ಕಿಷ್ಕಿಂಧೆಯ ಮಧುವನದ ಅಧಿಕಾರಿ. ಹನುಮಂತನ ನೇತೃತ್ವದಲ್ಲಿ ಸೀತಾನ್ವೇಷಣೆಗೆ ಹೋಗಿದ್ದ ವಾನರ ತಂಡ ಹಿಂದಿರುಗುವಾಗ ರಾಜವನದೊಳಗೆ ಬಲಾತ್ಕಾರದಿಂದ ನುಗ್ಗಿ ಧಧಿಮುಖ ಮುಂತಾದವರು ತಡೆಯಲು ಬಂದಾಗ ಅವರನ್ನು ಹೊಡೆದೋಡಿಸಿ, ತೋಟದಲ್ಲಿದ್ದ ಜೇನು ಗೂಡುಗಳಿಂದ ಜೇನನ್ನು ಹಿಂಡಿ ಕುಡಿದರಂತೆ. ಏಟು ತಿಂದ ದಧಿಮುಖ ಸುಗ್ರೀವನಲ್ಲಿಗೆ ಓಡಿಬಂದು ದೂರು ಹೇಳುವಾಗ ಪಕ್ಕದಲ್ಲೇ ಲಕ್ಷ್ಮಣನೂ ಕುಳಿತಿದ್ದನಂತೆ. ಆತನಿಗೆ ದಧಿಮುಖನ ಮಾತಿನಲ್ಲಿ 'ಹನುಮಂತ', 'ಅಂಗದ', ಮುಂತಾದ ಹೆಸರುಗಳು ಮಾತ್ರ ತಿಳಿಯಿತೇ ವಿನಾ ಮತ್ತೇನೂ ಅರ್ಥವಾಗಲಿಲ್ಲ. ಸುಗ್ರೀವನನ್ನು ಲಕ್ಷ್ಮಣ ಕೇಳಿದ್ದಕ್ಕೆ ಆತ ದಧಿಮುಖನ ಮಾತುಗಳನ್ನು ಸಂಸ್ಕೃತದಲ್ಲಿ ವಿವರಿಸಿದ. ಈ ಒಂದು ಕಡೆ ಮಾತ್ರ ದ್ವಿಭಾಷಿಯ ಪಾತ್ರ ಬಂದಿದೆ. ವಾನರರಲ್ಲಿ ರಾಜವರ್ಗದವರಿಗೆ ಸಂಸ್ಕೃತ ಗೊತ್ತಿತ್ತು. ಸಾಮಾನ್ಯರ ಭಾಷೆ ಬೇರೊಂದಿತ್ತು ಎಂದು ಕವಿ ಈ ರೀತಿಯಲ್ಲಿ ನಮಗೆ ತಿಳಿಸಿರುತ್ತಾನೆ.

† ವಾಲಿಯನ್ನು ಮರದ ಮರೆಯಿಂದ ರಾಮ ಹೊಡೆದು ಕೊಂದನೆಂಬ ಆಪಾದನೆಯೇ ಈ ಸಂವಾದಕ್ಕೆ ಮೂಲ. ಧರ್ಮನಿರತನೂ ಸತ್ಯವ್ರತನೂ ದಯಾಶೀಲನೂ ಆದ ರಾಮ ಹಾಗೆ ಮಾಡಿರಲಾರ. ಪ್ರಾಯಶಃ ವಾಲ್ಮೀಕಿಯ ಕಾಲದ ನಂತರ ಯಾವನಾದರೂ ಬೇರೊಬ್ಬ ಕವಿ ವಾಲಿ-ರಾಮರ ಯುದ್ಧದ ವಿವರಗಳನ್ನು ಯಾವುದೋ ಒಂದು ಉದ್ದೇಶದಿಂದ ಮಾರ್ಪಡಿ

ಹೆಂಡತಿಯಾದ) ತಾರೆ ಕೂಡ ಈ ಭಾಷೆಯಲ್ಲಿ ಒಳ್ಳೇ ಮಾತುಗಾತಿಯಾಗಿದ್ದಳು.

ಲಂಕೆಯನ್ನು ಸೇರಿದ ಹನುಮಂತ ಅಶೋಕ ವನದಲ್ಲಿ ಸೀತೆಯನ್ನು ನೋಡಿದ ಮೇಲೆ ಅವಳೊಡನೆ ಮಾತಾಡಬೇಕೆನ್ನುವ ಮೊದಲೇ ಯಾವ ಭಾಷೆಯಲ್ಲಿ ಅವಳೊಡನೆ ಮಾತಾಡುವುದು ಉಚಿತ ಎಂದು ಸ್ವಲ್ಪ ಕಾಲ ತನ್ನಲ್ಲಿ ತಾನೇ ತರ್ಕಿಸಿದನಂತೆ.* ಕಡೆಗೆ ಕಲಿತವರಾಡುವ ಸಂಸ್ಕೃತದ ಬದಲು ಸಾಮಾನ್ಯ ಜನರಾಡುವ ಸಂಸ್ಕೃತಜನ್ಯ ಭಾಷೆಯಲ್ಲಿ ಮಾತಾಡಿದನಂತೆ. ಅಂತೂ ಈ ಎರಡೂ ಬಗೆಯ ಭಾಷೆಗಳಲ್ಲಿ ಹನುಮಂತನಿಗೆ ಪಾಂಡಿತ್ಯವಿತ್ತು ಎನ್ನಬಹುದು. ತನ್ನ ಮಾತೃಭಾಷೆ ಸಂಸ್ಕೃತಕ್ಕೆ ಸಂಬಂಧಪಡದ ಯಾವುದೋ ವನ್ಯಭಾಷೆಯಾಗಿದ್ದರೂ ಕೂಡ ಹನುಮಂತ ಸುತ್ತಮುತ್ತಲಿದ್ದ ಆರ್ಯ ಜನಗಳ ನೆರೆಗಳಲ್ಲೆಲ್ಲಾ ಓಡಾಡಿ ಇದ್ದು ಬಂದವನು, ಸುಶಿಕ್ಷಿತನಾದ ಪಂಡಿತ, ಅಳರಸರ ಗುಂಪಿಗೆ ಸೇರಿದವನು, ಸುಗ್ರೀವನ ಮುಖ್ಯ ಮಂತ್ರಿಯಾಗಿದ್ದವನು. ಮುಂದೆ ರಾಮನ ಶರಣು ಹೋಗಲು ಬಂದ ವಿಭೀಷಣನೂ ಕೂಡ ರಾಮನ ಮನಸ್ಸನ್ನು ಒಲಿಸಿದ್ದು ಸಂಸ್ಕೃತದಲ್ಲಾಡಿದ ಮಾತುಗಳಿಂದ, ರಾವಣ ಮತ್ತು ರಾಕ್ಷಸ ದಳಪತಿಗಳು ರಣರಂಗಕ್ಕೆ ಬಂದು ರಾಮ ಲಕ್ಷ್ಮಣ ಮತ್ತು ವಾನರ ದಳಪತಿಗಳೊಡನೆ ಸಿಂಹಳದ ಭಾಷೆಯಲ್ಲಾಗಲಿ, ತಮಿಳಿನಲ್ಲಾಗಲಿ, ಕನ್ನಡದಲ್ಲಾಗಲಿ ಮಾತಾಡಲಿಲ್ಲ, ಯಾವ ದ್ವಿಭಾಷಿಯನ್ನೂ ಜೊತೆಯಲ್ಲಿ ಕರೆತಂದಿರಲಿಲ್ಲ. ಸಂಸ್ಕೃತದಲ್ಲಿಯೇ ತಮ್ಮ ಮನದಣಿವಾರುವವರೆಗೂ ಶತ್ರುವಿನ ಬಗ್ಗೆ ತಿರಸ್ಕಾರದ ಮಾತುಗಳನ್ನಾಡಿ ನಂತರ ಶಸ್ತ್ರಾಸ್ತ್ರಗಳಿಂದ ಹೊಡೆದಾಡಿದರು.

ಇದನ್ನೆಲ್ಲ ನೋಡಿದರೆ ರಾಮಾಯಣದ ಪ್ರಸಂಗಗಳೆಲ್ಲ ಸಂಸ್ಕೃತ ಅಥವಾ ಸಂಸ್ಕೃತಜನ್ಯ ಭಾಷೆಗಳನ್ನಾಡುವ ಪ್ರಾಂತ್ಯಗಳಲ್ಲಿ ತಾನೇ ನಡೆದವು ಎಂದು ಸಿದ್ಧವಾಗುತ್ತದೆ. ರಾಮಾಯಣ ಕಾಲದಲ್ಲಿ ಈ ಭಾಷೆಗಳು ಹೆಚ್ಚೆಂದರೆ ದಕ್ಷಿಣದಲ್ಲಿ ಈಗಿನಂತೆಯೇ ಮಧ್ಯ ಪ್ರದೇಶ-ಒಡಿಸಾ ವರೆಗೆ ಮಾತ್ರ ಹರಡಿದ್ದುವು ಎಂದು ಭಾವಿಸಿದರೆ ರಾಮಾಯಣದಲ್ಲಿ ಅರಣ್ಯ ಕಾಂಡದಿಂದ ಹಿಡಿದು ಯುದ್ಧ ಕಾಂಡದವರೆಗೂ ವಿವರಿಸಲ್ಪಟ್ಟ ಪ್ರಸಂಗಗಳೆಲ್ಲ ಭಾರತದ ಈ ಪ್ರದೇಶಗಳಲ್ಲಿ ತಾನೇ ಎಲ್ಲೋ ನಡೆದಿರಬೇಕು ಎಂದು ಹೇಳಬೇಕಾಗುತ್ತದೆ.

ಈ ಹಿನ್ನೆಲೆಯ ದೃಷ್ಟಿಯಿಂದ ರಾವಣನ ಲಂಕಾ ಎಲ್ಲಿದ್ದಿರಬಹುದು, ನಮಗೇನಾದರೂ ರಾಮಾಯಣದಲ್ಲೇ ಕುರುಹುಗಳು ಕಂಡು ಬರುತ್ತವೆಯೋ ಎಂದು ಈಗ ನೋಡೋಣ. ಕಿಷ್ಕಿಂಧೆಯಿಂದ ದಕ್ಷಿಣಕ್ಕೆ ಹೊರಟ ಹನುಮಂತಾದಿಗಳು ಸ್ವಲ್ಪ ದಿನಗಳಲ್ಲೇ ದಾರಿ ತಪ್ಪಿಸಿಕೊಂಡರಂತೆ. ಹಸಿವಿನಿಂದ ತೊರಾಡುತ್ತಾ, ಅದೃಷ್ಟವಶಾತ್ ಸ್ವಯಂಪ್ರಭಾ ಎಂಬ ಅರಸಿಯ ಆಡಳಿತದಲ್ಲಿದ್ದ "ಗುಹೆ"ಯೊಂದನ್ನು ಸೇರಿದರು ಈಕೆಯ ಆತಿಥ್ಯವನ್ನು ಸ್ವೀಕರಿಸಿ ಇಲ್ಲಿ ಕೆಲವು ದಿನಗಳು ತಂಗಿದ್ದು ಅನಂತರ ಅವಳ ಸಹಾಯದಿಂದಲೇ ಮಹೇಂದ್ರಗಿರಿಯ ಬುಡಕ್ಕೆ ಬಂದು ಸೇರಿದರು. ಪಕ್ಕದಲ್ಲೇ ಸಮುದ್ರ. ಮುಂದೆ ಏನಿದೆ ಎಂದು ಗೊತ್ತಾ

ಸಿರಬಹುದೆನ್ನಲು ಕಾರಣಗಳಿವೆ. ರಾಮನ ಬಿಲ್ಲುಗಾರಿಕೆಯನ್ನು ಎತ್ತಿ ತೋರಿಸಲು ಕಾವ್ಯದಲ್ಲಿ ಈ ಕೆಲವು ಮಾರ್ಪಾಡುಗಳನ್ನು ಮಾಡಿರಬೇಕು ಎಂದು ತೋರುತ್ತಿದೆ ರಾಮ ಮಹಾವೀರನಾದ ವಾಲಿಯನ್ನು ಒಂದೇ ಬಾಣದಿಂದ -'ಏಕೇನ ಶರೇನ'- ಕೊಂದನೆಂದು ಒತ್ತಿ ಒತ್ತಿ ಹೇಳಿದೆ. ಕವಿಯ ದೃಷ್ಟಿಯಲ್ಲಿ ಈ ಏಕ ಶರದ ಮಹತ್ವ ಹೆಚ್ಚಾಯಿತೇ ವಿನಾ ಕಾಡಿನ "ಕಪಿಯನ್ನು ರಾಮ ಮರೆಯಿಂದ ನಿಷ್ಕಾರಣವಾಗಿ ಹೊಡೆದು ಕೊಂದದ್ದು ತಪ್ಪಾಗಲಿಲ್ಲ. ಈ ಅಪಾದನೆಯನ್ನು ನಿವಾರಿಸಲು ಯಾರೂ ಒಪ್ಪದ ಜಾಣತನದ ಕೆಲವು ಮಾತುಗಳನ್ನು ಕವಿ ರಾಮನ ಬಾಯಿಂದ ಹೇಳಿಸಿದ್ದಾನೆ. ನಿಜವಾಗಿ ನಡೆದದ್ದು ಹೀಗಲ್ಲ, ಇವೆಲ್ಲ ಕೃತಕವಾಗಿ ಏರ್ಪಡಿಸಿದ ಸಂದರ್ಭಗಳು ಎನ್ನಲು ಈ ಕಾವ್ಯದಲ್ಲೇ ಸಾಕಷ್ಟು ಆಧಾರವಿದೆ.

* ವಾಚಂಚೋದಾಹರಿಷ್ಯಾಮಿ ಮಾನುಷೀಮಿಹ ಸಂಸ್ಕೃತಾಂ॥ ಯದಿ ವಾಚಂಪ್ರದಾಶ್ಯಾಮಿ ದ್ವಿಜಾತಿರಿವ ಸಂಸ್ಕೃತಾಂ ರಾವಣಂ ಮನ್ಯಮಾನಾ ಮಾಂ ಸೀತಾ ಭೀತಾ ಭವಿಷ್ಯತಿ॥ ಅವಶ್ಯಮೇವ ವಕ್ತವ್ಯಂ ಮಾನುಷಂ ವಾಕ್ಯಮರ್ಥವತ್॥ ಮಯಾ ಸಾಂತ್ವಯಿತುಂ ಶಕ್ಯಾ ನಾನ್ಯ "ಥೇಯಮನಿಂದಿತಾ॥ (ಸುಂದರ ಕಾಂಡ, ೩೦, ೧೭–೧೯).

ಗದೆ ಶ್ರಮ ಪಡುತ್ತಿದ್ದ ಇವರಿಗೆ ಸಂಪಾತಿ ಎಂಬ ಹೆಸರಿನ ಗೃಧ್ರ ಬಾಡಕಟ್ಟಿನ ವೃದ್ಧನ ಸಹಾಯ ಸಿಕ್ಕಿತು. ಈ ಸಮುದ್ರ ದಾಟಿದರೆ ರಾವಣನ ಲಂಕಾ ಸಿಗುತ್ತದೆ ಎಂಬ ಮಾತು ಇವನಿಂದ ತಿಳಿಯುತ್ತಲೇ ಇವರಿಗೆ ಹೋದ ಪ್ರಾಣ ಬಂದ ಹಾಗಾಯಿತು. ಅಲ್ಲಿಂದ ಒಂದೇ ಏಟಿಗೆ ಹನುಮಂತ ದಾಟಿದ ಶತ ಯೋಜನ ವಿಸ್ತೀರ್ಣ ಹರಡಿದ ಸಮುದ್ರವನ್ನು. ದಾರಿಯಲ್ಲಿ ಅವನು ಎಷ್ಟೋ ನದೀ ಮುಖಗಳನ್ನೂ ಕಂಡನಂತೆ * ಕಡೆಗೆ ಮಲಯ ಪರ್ವತದ ಶಿಖರದಲ್ಲಿ ಬಂದಿಳಿದು ಸಮೀಪದಲ್ಲೇ ಇದ್ದ ಲಂಕಾ-ನಗರಿಯನ್ನು ಕಂಡ. ಇದು ವಾಲ್ಮೀಕಿ ತಿಳಿಸುವ ಕಥೆಯ ಸಂಕ್ಷೇಪ.

ಈಗ ಭಾರತದ ನಕ್ಷೆಯನ್ನು ತೆಗೆದು ಪರೀಕ್ಷಿಸೋಣ. ಚಿತ್ರಕೂಟದಿಂದ ಹೊರಟ ರಾಮ ಲಕ್ಷ್ಮಣ ಸೀತೆಯರು ದಂಡಕಾರಣ್ಯದೊಳಗೆ ಪ್ರವಾಸಿಸುತ್ತಾ, ಆಶ್ರಮದಿಂದ ಆಶ್ರಮಕ್ಕೆ ಹೋಗುತ್ತಾ, ಅಲ್ಲಲ್ಲಿ ಅನೇಕ ವಾರಗಳು, ಅಥವಾ ಅನೇಕ ತಿಂಗಳುಗಳು, ಹೀಗೆ ತಂಗುತ್ತಾ, ಕಡೆಗೆ ಅಗಸ್ತ್ಯನ ಮಾತಿನಂತೆ ಪಂಚವಟಿ ಪ್ರದೇಶಕ್ಕೆ ಬಂದರು. ಇದು ಈಗಿನ ಮಧ್ಯ ಪ್ರದೇಶದಲ್ಲಿ ಪ್ರಾಯಶಃ ಪೂರ್ವ ಅಥವಾ ಆಗ್ನೇಯ ದಿಕ್ಕಿನಲ್ಲಿದ್ದಿರಬೇಕೆಂದು ಅನೇಕ ವಿದ್ವಾಂಸರ ಅಭಿಪ್ರಾಯ. ಹಿಂದೆ ನಮ್ಮ ಹಳೇ ಮೈಸೂರಿನ ಮುಖ್ಯ ನ್ಯಾಯಾಧೀಶರಾಗಿದ್ದ ಟಿ. ಪರಮಶಿವಯ್ಯನವರು (ವಿಖ್ಯಾತ ಕನ್ನಡ ಗ್ರಂಥಕರ್ತ ಟಿ. ಪಿ. ಕೈಲಾಸಂರವರ ತಂದೆ) ೧೯೪೦ ರಲ್ಲಿ ರಾಮಾಯಣದ ಲಂಕಾ ವಿಚಾರವಾಗಿ ಒಂದು ಪುಸ್ತಕವನ್ನೇ ಬರೆದಿದ್ದಾರೆ. ಬೆಂಗಳೂರು ಪ್ರೆಸ್‌ನಿಂದ ಪ್ರಚುರವಾಗಿ ಸರ್ವೆ ಆಫ್ ಇಂಡಿಯಾ ಮ್ಯಾಪ್ ಒಳಗೊಂಡಿದ್ದ ಈ ಪುಸ್ತಕದಲ್ಲಿ ರಾಮನು ವನವಾಸದಲ್ಲಿ ದಂಡ-ಕಾರಣ್ಯದ ಮೂಲಕ ಪ್ರಯಾಣ ಮಾಡಿದ ವಿವರವನ್ನು ಪರೀಕ್ಷಿಸಿದ್ದಾರೆ.‡ ಇನ್ನೂ ಅನೇಕ ವಿದ್ವಾಂಸರೂ ಕೂಡ ರಾಮಾಯಣದ ಜನಸ್ಥಾನ ಈಗಿನ ಮಧ್ಯ ಪ್ರದೇಶದಲ್ಲಿ ಇತ್ತು ಎಂದು ಅಭಿಪ್ರಾಯ ಪಟ್ಟಿದ್ದಾರೆ. ನಾವೂ ಇದನ್ನು ಅನುಮೋದಿಸಬಹುದು. ಅಲ್ಲಿಂದ ಸ್ವಲ್ಪ ದಕ್ಷಿಣಕ್ಕೆ ಎಂದರೆ ಹೆಚ್ಚು ಕಡಿಮೆ ಈಗಿನ ರಾಯಪುರ ಅಥವಾ ಬಸ್ತಾರ್ ಜಿಲ್ಲಾ ಪ್ರದೇಶದಲ್ಲಿ ಕಿಷ್ಕಿಂಧಾ ಇದ್ದಿರಬಹುದೆಂದು ಊಹಿಸಬಹುದು (ಚಿತ್ರ ೧). ಈಗಲೂ ಈ ಪದೇಶಗಳೆಲ್ಲ ವನ್ಯಜನರ ದೇಶ. ಇವರ ಪೂರ್ವಜರೇ ರಾಮಾ-ಯಣದ ವಾನರರಾಗಿದ್ದಿರಬಹುದು.


ಬಸ್ತಾರ್ ಜಿಲ್ಲೆಗೆ ಪೂರ್ವದಲ್ಲಿ ಅಂದರೆ ಈಗಿನ ಆಂಧ್ರ ಪ್ರದೇಶದ ಈಶಾನ್ಯದಲ್ಲಿ ವಿಶಾಖಪಟ್ಟಣ ಜಿಲ್ಲೆ ಇದೆ. ಈ ಜಿಲ್ಲೆಯ ಪೂರ್ವ ಭಾಗವೆಲ್ಲ ಪೂರ್ವ ಘಟ್ಟಗಳ ಬೆಟ್ಟದ ಸೀಮೆ. ಬೆಟ್ಟಗಳ ನಡುವೆ ಅಡಗಿದ್ದು ಈಗ ಸುಮಾರು ೨೦-೨೫ ವರ್ಷಗಳವರೆಗೂ ಸಾಮಾನ್ಯವಾಗಿ ಜನಗಳ ಗಮನಕ್ಕೂ ಸರಕ್ಕಾರದ ಗಮನಕ್ಕೂ ಕೂಡ ಬೀಳದ ಒಂದು ಕಣಿವೆ ಇದೆ. ಅರಾಕು ಕಣಿವೆ ಎಂಬ ಈ ತಗ್ಗು ಪ್ರದೇಶ ಸುಮಾರು ೧೦ ಮೈಲಿ ಉದ್ದ, ೧-೨ ಮೈಲಿ ಅಗಲ, ಸಮುದ್ರ ಮಟ್ಟದಿಂದ ೩೦೦೦–೫೦೦೦ ಅಡಿ ಎತ್ತರದಲ್ಲಿದೆ. ಕಣಿವೆ ಮಧ್ಯದಲ್ಲಿ ಚಿಕ್ಕ ನದಿ ಹರಿಯುತ್ತದೆ. ವರ್ಷ ಪೂರಾ ನಮ್ಮ ಬೆಂಗಳೂರು-ಹಾಸನ ಪ್ರಾಂತ್ಯದಲ್ಲಿರು-ವಂತೆ ಉತ್ತಮವಾದ ತಂಪಾದ ಹವಾಮಾನ, ಸಾಕಷ್ಟು ಮಳೆ, ಇದರಿಂದ ಫಲಪುಷ್ಪ ಸಮೃದ್ಧಿ ಹೀಗೆ ನಂದನವನದಂತಿದೆ. ಅರಾಕುವಿನಿಂದ ಈಶಾನ್ಯಕ್ಕೆ ನೂರು ಮೈಲಿಗಳಲ್ಲಿ ಓಡಿಸಾ ಗಡಿಯೊಳಗೆ ಸುಮಾರು ೫೦೦೦ ಅಡಿ ಎತ್ತರ ಇರುವ ಮಹೇಂದ್ರಗಿರಿ ಬೆಟ್ಟ (೮೪.೫° ಪೂ - ೧೯° ಉ.) ಇದೆ. ಇಲ್ಲಿಂದ ಸಮುದ್ರ–

---

* ದದರ್ಶ ಚ ಪತನ್ನೇವ ವಿವಿಧ ದ್ರುಮ ಭೂಷಿತಂ। ದ್ವೀಪಂ ಶಾಖಾ ಮೃಗಶ್ರೇಷ್ಠೋ ಮಲಯೋಪವನಾನಿ ಚ॥ ಸಾಗರಂ ಸಾಗರಾನೂಪಾನ್ ಸಾಗರಾನೂಪಜಾನ್। ದ್ರುಮಾನ್ ಸಾಗರಸ್ಯ ಚ ಪತ್ನೀನಾಂ ಮುಖಾನ್ಯಪಿ ವಿಲೋಕಯನ್॥ (ಸುಂದರ ಕಾಂಡ ಸರ್ಗ ೧ ಶ್ಲೋಕ ೨೦೪-೨೦೫).

‡ ರಾಮನು ತನ್ನ ವನವಾಸದಲ್ಲಿ ಮಧ್ಯ ಪ್ರದೇಶದ ಅನೇಕ ಭಾಗಗಳ ಮೂಲಕ ಹಾದು ಹೋದದ್ದಕ್ಕೆ ಮಾತ್ರ ಇಲ್ಲಿ ಪರಮಶಿವಯ್ಯರ್ ಮತ್ತಿತರರ ಗ್ರಂಥಗಳ ವಿಚಾರ ಎತ್ತಿದ್ದೇವೆ. ಆದರೆ ಇವರುಗಳು ರಾಮಾಯಣದ ಲಂಕಾ ವಿಚಾರದಲ್ಲಿ ಬರೆದಿರುವುದನ್ನು ನಾವು ಒಪ್ಪುವುದಿಲ್ಲ.

ಬಂಗಾಳಾ ಕೊಲ್ಲಿ—ಸುಮಾರು ೨೦–೨೫ ಮೈಲಿ ದೂರ ಮಾತ್ರ. ಮಹೇಂದ್ರಗಿರಿಯಿಂದ ಉತ್ತರಕ್ಕೆ (೮೫.೫° ಪೂ. X ೨೧.೫° ಉ.) ಸುಮಾರು ಇನ್ನೂರು ಮೈಲುಗಳ ದೂರದಲ್ಲಿ ಮಲಯಗಿರಿ ಎಂಬ ಪರ್ವತವಿದೆ. ಈ ಎರಡು ಪರ್ವತಗಳ ನಡುವೆ ಇರುವ ಈ ಸೀಮೆಯೆಲ್ಲಾ ಒಂದು ವಿಸ್ತಾರವಾದ ಸಮುದ್ರ ಮಟ್ಟದಲ್ಲಿರುವ ಬಯಲು. ಮಹಾನದಿ, ಇದರ ಉಪನದಿಗಳು, ಮತ್ತು ಇದು ಸಮುದ್ರಕ್ಕೆ ಸೇರುವ ಮೊದಲು ಹತ್ತಾರು ಸಲ ಕವಲೊಡೆದ ನದೀಮುಖಗಳು—ಇವೆಲ್ಲಾ ಸೇರಿ ಈ ಸೀಮೆಯಲ್ಲಿ ನೆಲಕ್ಕಿಂತ ಜಲವೇ ಹೆಚ್ಚು ಎನ್ನಬಹುದು. ಈಗಲೂ ಭಾರಿ ಮಳೆ ಬಂದರೆ ಈ ಹತ್ತಾರು ನದಿಗಳ ಪ್ರವಾಹ ಮೀರಿ ಮೀರಿ ಹೊರಳಿ ಒಡಿಸಾ ಬಯಲನ್ನೆಲ್ಲಾ ಹೆಚ್ಚು ಕಡಿಮೆ ಒಂದು ಮಹಾಸಾಗರವನ್ನಾಗಿ ಮಾಡುತ್ತದೆ. ಒಡಿಸಾ



ಚಿತ್ರ ೧: ರಾಮಾಯಣದಲ್ಲಿ ಸೂಚಿತವಾದ ಕೆಲವು ಸ್ಥಳಗಳು.

ಪ್ರವಾಹಗಳನ್ನು ಈ ಕಾಲದಲ್ಲಿ ಕೇಳದವರಾರು? ಈ ದೃಶ್ಯ ನಮಗೇನೂ ಹೊಸದಲ್ಲ. ಪ್ರವಾಹ ಬಂದಾಗ ಮುಳುಗದೆ ತಲೆ ಮೇಲಕ್ಕೆ ಎತ್ತಿ ನಿಂತ ನೆಲವೆಲ್ಲ ಸಾಗರದ ಮಧ್ಯದಲ್ಲಿ ನಿಂತಿರುವ ನಡುಗಡ್ಡೆಗಳಂತೆ ಭಾಸವಾಗುತ್ತದೆ.

ಕಿಷ್ಕಿಂಧೆಯಿಂದ ಹೊರಟು ಸ್ವಲ್ಪ ದಿನಗಳು ಪ್ರಯಾಣ ಮಾಡಿ ಅನಂತರ ದಾರಿ ತಪ್ಪಿದ ರಾಮಾಯಣದ ನಮ್ಮ ವಾನರರು ಬೀಳುತ್ತಾ ಏಳುತ್ತಾ ಹೇಗೋ ಅರಾಕು ಕಣಿವೆಯನ್ನು ಸೇರಿದರು. ಇದೇ ವಾಲ್ಮೀಕಿ ವರ್ಣಿಸಿರುವ ಫಲಪುಷ್ಪ ಸಮೃದ್ಧಿಯಿಂದ್ದ ಸ್ವರ್ಗೀಯವಾದ ನೀರು ಮತ್ತು ಹವಾಮಾನವಿದ್ದ ಸ್ವಯಂಪ್ರಭೆಯ ಗುಹೆ. ಜನಗಳಿಗೆ ತೀರ ಅಪರಿಚಿತವಾದ ಪ್ರದೇಶವಲ್ಲವೆ ಗುಹೆ ಎನ್ನುವುದು? ಸ್ಥಳ ಸಂಕೋಚವನ್ನು ತೋರಿಸುವುದಲ್ಲವೆ ಗುಹೆ ಎಂಬ ಶಬ್ದ? ಈ ಎರಡು ಗುಣಗಳೂ ಒಪ್ಪುತ್ತವೆ ಅರಾಕು ಕಣಿವೆಗೆ. ಸ್ವಯಂಪ್ರಭಾ ಈ ಭಾಗದ ಒಡತಿಯ ನಿಜವಾದ ಹೆಸರಿರಬಹುದು, ಅನ್ವರ್ಥ ನಾಮವಾಗಿರಬಹುದು, ಅಥವಾ ಕವಿಯ ಕಲ್ಪನೆಯಿರಬಹುದು. ಪರವಾಗಿಲ್ಲ. ಅವಳ ಆತಿಥ್ಯದಿಂದ ವಾನರರು ತಮ್ಮ ದಣಿವಾರಿಸಿಕೊಳ್ಳುತ್ತಾ ಅಲ್ಲಿ ಕೆಲವು ದಿನ ಕಳೆದರು. ಆಕೆಯ ಸಹಾಯದಿಂದ ಪುನಃ ಕಣಿವೆಯ ಹೊರಗೆ ಬಂದು ಮಹೇಂದ್ರಗಿರಿಯ ತಪ್ಪಲನ್ನು ಸೇರಿದರು. ಇಲ್ಲಿ ಸಂಪಾತಿ ಎಂಬ ಗೃಧ್ರ ಬುಡಕಟ್ಟಿನ ವೃದ್ಧನ ಪರಿಚಯವಾಯಿತು. ಅವನಿಂದಲೇ ಇವರಿಗೆ ತಾವು ಬಂದು ಸೇರಿರುವ ಜಾಗ ಲಂಕಾ ರಾಜ್ಯದ ಒಂದು ಗಡಿ ಎಂದು ತಿಳಿಯಿತು. ಇನ್ನು ಮುಂದಕ್ಕೆ ಶತ್ರುರಾಜ್ಯದಲ್ಲಿ ತಾವೆಲ್ಲ

ಒಟ್ಟಿಗೆ ಗುಂಪಾಗಿ ಹೋದರೆ ಶತ್ರುವಿನ ಕಣ್ಣಿಗೆ ಸುಲಭವಾಗಿ ಬಿದ್ದು ಸಾಯಬೇಕಾಗುತ್ತದೆ, ಕಾರ್ಯ ಕೆಟ್ಟುಹೋಗುತ್ತದೆ ಎಂದು ತೀರ್ಮಾನಕ್ಕೆ ಬಂದು ತಮ್ಮಲ್ಲಿ ಎಲ್ಲರಿಗಿಂತಲೂ ಬುದ್ಧಿ ಶಕ್ತಿ ಸಾಹಸಗಳಲ್ಲಿ ಉತ್ತಮನೆನಿಸಿದ ಹನುಮಂತನನ್ನು ಈ ಕಾರ್ಯ ಸಾಧಿಸಲು ನಿಯಮಿಸಿದರು. ವಾನರವೀರ ಹನುಮಂತ ಮಹೇಂದ್ರ ಗಿರಿಯ ತಪ್ಪಲಿನಿಂದ ಹೊರಟು ಲಂಕಾ ರಾಜ್ಯವನ್ನು ಹೊಕ್ಕು, ಗುಪ್ತ ಮಾರ್ಗಗಳನ್ನು ಹಿಡಿದು ನಡೆದ. ಅವನು ದಾರಿಯಲ್ಲಿ ಸಿಕ್ಕಿದ ಹತ್ತಾರು ನದಿಗಳನ್ನು ಈಜಿ ದಾಟಿದ. ರಾತ್ರಿ ವೇಳೆಯಲ್ಲಿ ಮಾತ್ರ ಪ್ರಯಾಣ ಮಾಡುತ್ತಾ, ಹಗಲೆಲ್ಲ ಎಲ್ಲಾದರೂ ಮರಗಳ ಮರೆಯಲ್ಲಿ ಕಳೆಯುತ್ತಾ, ಕಡೆಗೆ ಕೆಲವು ದಿನಗಳ ನಂತರ ಸಂಪಾತಿ ಗುರುತು ತಿಳಿಸಿದ್ದಂತೆ ದೂರದಲ್ಲಿ ಒಂದು ಬೆಟ್ಟ–ಮಲಯಗಿರಿ–ವನ್ನು ಕಂಡ. ಅದಕ್ಕೆ ಅನತಿದೂರದಲ್ಲೇ ಇತ್ತು ಲಂಕಾನಗರ. ಸಂಜೆಯವರೆಗೂ ಊರ ಹೊರಗಡೆ ಯಾರ ಕಣ್ಣಿಗೂ ಬೀಳದಂತೆ ಗಿಡಗಳ ಪೊದೆಗಳ ನಡುವೆ ಮರೆಯಾಗಿದ್ದುಕೊಂಡು ಕೋಟೆಯೊಳಗೆ ಹೋಗಿಬರುವವರನ್ನು ನೋಡುತ್ತಾ, ಅದರಿಂದ ಒಳಗಿನ ವಿದ್ಯಮಾನಗಳನ್ನು ಊಹಿಸಿ ಕತ್ತಲು ಕವಿದ ಮೇಲೆ ಊರೊಳಗೆ ಹೊಕ್ಕ.

ಅರಾಕು ಕಣಿವೆಗೆ ಅನತಿದೂರದಲ್ಲಿ ನಿಜವಾಗಿಯೂ ಅನೇಕ ದೊಡ್ಡ ಗುಹೆಗಳು ಇವೆ ಎಂದೂ ಅವು ನೋಡತಕ್ಕ ಸ್ಥಳಗಳೆಂದೂ ನಮಗೆ ಇತ್ತೀಚೆಗೆ ಕೆಲ ವೃತ್ತಪತ್ರಿಕೆಗಳಲ್ಲಿ ಆಂಧ್ರ ಪ್ರದೇಶದ ಪ್ರವಾಸೋದ್ಯಮ ಶಾಖೆಯ ಮಂತ್ರಿಗಳು ಬರೆದ ಒಂದು ಲೇಖನದಿಂದ

ತಿಳಿದುಬಂದಿದೆ.

ಇದರಿಂದ ಕುತೂಹಲಗೊಂಡ ನಾವು ಅವರನ್ನು ವಿಚಾರಿಸಿದಾಗ ಅವರು ಅರಾಕು ಕಣಿವೆಯ ಕುರಿತು ಬರೆಯುತ್ತ, ಅಲ್ಲಿಂದ ಅನತಿ ದೂರದಲ್ಲಿರುವ 'ಬೊರ್ರ' ಗುಹೆಗಳ ವಿಚಾರವನ್ನೂ ತಿಳಿಸಿದ್ದಾರೆ. ದಣಿದ ವಾನರರು ಈ ಗುಹೆಗಳಲ್ಲಿ ವಿಶ್ರಾಂತಿ ಪಡೆದು ಮುನ್ನಡೆದಿರಬೇಕು. ಇಲ್ಲಿಂದ ಸುಮಾರು ೨೦ ಮೈಲುಗಳ ಅಂತರದಲ್ಲಿ ಅರಾಕು ಕಣಿವೆಯಿದೆ. ಇವೆರಡೂ ವಿಚಾರಗಳನ್ನು ಸೇರಿಸಿ ಕವಿ ಸ್ವಯಂಪ್ರಭಾ ವೃತ್ತಾಂತವನ್ನು ಹೆಣೆದಿರಬೇಕು. 'ಬೊರ್ರ' ಎಂಬ ಆದಿವಾಸಿಗಳಿರುವ ಹಳ್ಳಿಯ ಹತ್ತಿರ, ಸಮುದ್ರ ಮಟ್ಟದಿಂದ ಸುಮಾರು ೩,೦೦೦ ಅಡಿ ಎತ್ತರದಲ್ಲಿ ಈ ಗುಹೆಗಳಿವೆ. ಮುಖ್ಯ ಗುಹೆಯ ಮಹಾದ್ವಾರದ ಎತ್ತರ ೪೦ ಅಡಿ, ಗುಹೆಯ ಅಗಲ ೭೦ ಅಡಿ; ಒಳಗಡೆ ಕಣ್ಣಿಗೆ ನಿಲುಕುವಷ್ಟು ಉದ್ದ ಸುಮಾರು ೨೦೦ ಅಡಿ. ಒಳಕ್ಕೆ ಛಾವಣಿಯಿಂದ ನೀರು ತೊಟ್ಟಿಕ್ಕುವುದರಿಂದ ನೈಸರ್ಗಿಕವಾಗಿಯೇ ಉಂಟಾಗುವ ಸುಣ್ಣಕಲ್ಲು ತೊಂಗಲಿನ (Stalatite) ಹಾಗು ಸುಣ್ಣಕಲು ಹೆಪ್ಪಿನಿಂದುಂಟಾದ (Stalagmite) ಸ್ತಂಭಗಳನೇಕ ಇಲ್ಲಿವೆ. ಇವುಗಳ ಎತ್ತರ ೨ರಿಂದ ೨೦ ಅಡಿ. ಗುಹೆಯ ಮಧ್ಯದಲ್ಲಿ ಒಂದು ಸಣ್ಣ ಝರಿ ಹರಿಯುತ್ತಿದ್ದು ಅದು ಎಲ್ಲೋ ಒಳಗೇ ಅಂತರ್ವಾಹಿನಿಯಾಗಿ ಗುಹೆಯ ಕೆಳಗಡೆ ಸುಮಾರು ೩೦೦ ಅಡಿ ಆಳದ ಒಂದು ಕಡಿದಾದ ಕಮರಿಯಲ್ಲಿ ಬೀಳುತ್ತದಂತೆ. (ಕಿಷ್ಕಿಂಧಾ ಕಾಂಡ ಸರ್ಗ ೫೦ರಲ್ಲಿ ಋಕ್ಷಬಿಲ ಗುಹೆಯ ವರ್ಣನೆ ನೋಡಿ.)

ಹೀಗೆ ಮೇಲೆ ಹೇಳಿದಂತೆ ನಡೆದ ವಿದ್ಯಮಾನಗಳನ್ನೆಲ್ಲಾ ಇದ್ದಿದ್ದನ್ನು ಇದ್ದ ಹಾಗೆ ಹೇಳಿದರೆ ಅದರಲ್ಲಿ ಯಾವ ಮೇಲ್ಮೆಯೂ ಇರುವುದಿಲ್ಲ, ಕಲೆಯ ವೈಖರಿಯೂ ತೋರುವುದಿಲ್ಲ; ಅದು ಕಾವ್ಯವಾಗುವುದಿಲ್ಲ. ಆದರೆ ಇದನ್ನು ಸೂಕ್ತವಾದಂತೆ ಉತ್ಪ್ರೇಕ್ಷಿಸಿ, ಬಣ್ಣ ಕಟ್ಟಿ, ಕಿವಿಗಿಂಪಾದ ಮಧುರ ಮಾತುಗಳಲ್ಲಿ ಹಾಡಿದರೆ ಆಗ ಕಾವ್ಯವಾಗುತ್ತದೆ. ಇದನ್ನು ತಾನೇ ವಾಲ್ಮೀಕಿ ಮಾಡಿರುವುದು. ತಾನು ಹಾಡಿದ್ದುದರ ಹಿಂದೆ ಇರುವ ಸತ್ಯವನ್ನು ಜನರ ಕಣ್ಣಿನಿಂದ ಮರೆಮಾಚಿಸಿ ತಾನು ಹೇಳಿದ್ದೇ ಸತ್ಯವೆಂದು ಸಾಧಿಸುವುದಕ್ಕಲ್ಲ ಕವಿ ಹಾಡಿದ್ದು. ಆದರೆ ನಮ್ಮಲ್ಲಿ ಅನೇಕ ಜನ ಮಾತ್ರ ಕವಿ ಹಾಡಿದ್ದೆಲ್ಲ ಸತ್ಯ ಎಂದು ವಾದಿಸುತ್ತಾರೆ.

ರಾವಣನ ಲಂಕಾ ನಿಜ ಸ್ಥಿತಿಯಲ್ಲಿ ಪ್ರಾಯಶಃ ಆಗಿನ ಕಾಲದ ಒಂದು ಸಣ್ಣ ಪಟ್ಟಣವಾಗಿತ್ತು. ಆದರೆ ರಾಮನ ದರ್ಜೆಗೆ ಸರಿಯಾಗುವಂತೆ ರಾವಣನ ದರ್ಜೆಯನ್ನೂ ಏರಿಸಿದ ಕವಿ ಅವನ ರಾಜಧಾನಿಯನ್ನೂ ಕೂಡ ನೂರ್ಮಡಿಯಾಗಿ ಉತ್ಪ್ರೇಕ್ಷಿಸಿ ತನ್ನ ಕಾಲದಲ್ಲಿದ್ದ, ಅಥವಾ ತನಗೆ ಪ್ರತೀತಿಯಿಂದ ತಿಳಿದುಬಂದ, ಈ ನಾಡಿನ ಅಥವಾ ಹೊರನಾಡಿನ, ಯಾವುದೋ ವಿಶ್ವಪ್ರಸಿದ್ಧವಾಗಿದ್ದ

ಬೇರೊಂದು ನಗರದ ಮಾದರಿಯಲ್ಲಿ ಚಿತ್ರಿಸಿದ್ದಾನೆ. ವಾಲ್ಮೀಕಿ ತನ್ನ ಕಾವ್ಯದಲ್ಲಿ ವರ್ಣಿಸಿರುವ ಲಂಕಾ ಕೂಡ ರಾವಣನ ಲಂಕಾ ಅಲ್ಲ, ಅದರ ಮೂಲ ಯಾವುದೋ ಬೇರೆ ಇರಬಹುದು.

ವಾಲ್ಮೀಕಿ ರಾಮಾಯಣದಲ್ಲಿ ಲಂಕಾ ನಗರಿಯ ವರ್ಣನೆ ನಮಗೆ ಏಳೆಂಟು ಕಡೆ ಸಿಗುತ್ತದೆ (ಅರಣ್ಯ ಕಾಂಡ, ೫೮, ೨೦; ಸುಂದರ ಕಾಂಡ, ೧. ೨೧೨; ೨. ೧೪-೨೧; ೨. ೫೦-೫೩; ೫೩. ೧೯-೨೧; ಯುದ್ಧ ಕಾಂಡ, ೩೮, ೧೫; ೩೯. ೧೭-೨೩; ೧೨೩, ೩*). ಕವಿ ಹೇಳಿರುವ ಮಾತುಗಳಲ್ಲಿ ಕವಿಗೆ ಸ್ವಾಭಾವಿಕವಾದ ಉತ್ಪ್ರೇಕ್ಷೆಯು ಅಥವಾ ಚಮತ್ಕಾರದ ಮಾತುಗಳು ಸಾಕಷ್ಟು ಇವೆಯಾದರೂ ಅವನ್ನು ವಾಸ್ತವ ಮಟ್ಟಕ್ಕೆ ತಂದು ಹೇಳಿ ಜಾಗರೂಕವಾಗಿ ಪರೀಕ್ಷಿಸಿದರೆ ನಮಗೆ ಕೆಲವು ವಿಷಯಗಳು ಮನದಟ್ಟಾಗುತ್ತವೆ. ಕವಿ ಅನೇಕ ಕಡೆ ಲಂಕೆಯನ್ನು ವರ್ಣಿಸಿದ್ದಾನೆ, ಆದರೆ ಯಾವ ಒಂದು ಕಡೆ ಹೇಳಿರುವುದೂ ಇನ್ನೊಂದು ಕಡೆ ಹೇಳಿರುವುದನ್ನು ವಿರೋಧಿಸುವುದಿಲ್ಲ. ಎಲ್ಲಾ ಒಂದಕ್ಕೊಂದು ಸಮಂಜಸವಾಗಿ ಹೊಂದಿಕೊಳ್ಳುತ್ತವೆ. ಎಲ್ಲಾ ಸೇರಿಸಿ ಓದಿದರೆ ರಾಮಾಯಣದ ಲಂಕಾ ಇಂದ್ರಲೋಕದಲ್ಲಿ ಇಂದ್ರನ ರಾಜಧಾನಿ ಅಮರಾವತಿಯಂತೆ ಒಂದು ಪುರಾಣದ ಕಗ್ಗವಲ್ಲ, ನಿಜವಾಗಿ ಭೂಲೋಕದಲ್ಲೇ ಇದ್ದು ಪ್ರವೃದ್ಧಮಾನವಾಗಿದ್ದ ಯಾವುದೋ ಒಂದು ಮಹಾ ನಗರಿ. ರಾಮಾಯಣದ ಲಂಕೆಯನ್ನು ನಮ್ಮ ಈಗಿನ ಮಾತುಗಳಲ್ಲಿ ಹೀಗೆ ವರ್ಣಿಸಬಹುದು:

ಎರಡು ಅಥವಾ ಮೂರು ಕಡೆ ನದಿಗಳಿಂದ ಆವೃತವಾದ ("ದ್ವೀಪ") ಒಂದು ಎತ್ತರವಾದ ಪ್ರಸ್ಥಭೂಮಿಯ ಮೇಲೆ ("ಮೇಘಗಳನ್ನು ಮುಟ್ಟುವ ಪರ್ವತ ಶಿಖರ, ತ್ರಿಕೂಟ") ನಿರ್ಮಿತವಾಗಿತ್ತು ಈ ನಗರಿ. ಸುತ್ತ ಅಭೇದ್ಯವಾದ ಕೋಟೆ; ಒಳಗೆ ಕ್ರಮಬದ್ಧವಾಗಿ ಒಂದಕ್ಕೊಂದು ಸಂಧಿಸುತ್ತಿದ್ದ ಬೀದಿಗಳು; ಏಳು-ಎಂಟು ಅಂತಸ್ತಿನ ಉನ್ನತ ಸೌಧಗಳು; ಕಮಾನುಗಳು- ಕಂಭಗಳು- ಕಿಟಕಿಗಳು- ಕೆತ್ತನೆ ಕೆಲಸ-ಚಿತ್ರ ವಿಚಿತ್ರ ವರ್ಣರಂಜಿತ ಹಾಸುಗಳನ್ನು ಹಾಸಿದ ನೆಲ. ಇವೇ ಮುಂತಾದವುಗಳಿಂದ ಶೋಭಿತವಾದ ಅರಮನೆಗಳು; ಎರಡು ಕಡೆಯೂ ಛಾಯಾ ವೃಕ್ಷಗಳಿಂದಲೂ, ಪತಾಕೆಗಳಿಂದಲೂ ಅಲಂಕೃತವಾಗಿ ಬೆಟ್ಟದ ಮಗ್ಗುಲನ್ನೇ ಹಿಡಿದು ಮೇಲು ಮೇಲಕ್ಕೆ ಏರುತ್ತಿದ್ದ ಬೀದಿಗಳು; ನಗರಿಯ ಮಧ್ಯದಲ್ಲಿ ಅಲ್ಲಲ್ಲೇ ವಿಸ್ತಾರವಾದ ಮೈದಾನಗಳು, ಉದ್ಯಾನಗಳು— ಈ ರೀತಿ ರಚಿತವಾಗಿತ್ತು ರಾಮಾಯಣದಲ್ಲಿ ಕವಿ ವರ್ಣಿಸಿರುವ ಲಂಕಾ ನಗರಿ.

ರಾವಣನು ಆಳಿದ ಲಂಕೆ ಮಹಾನದಿಯ† ಮುಖಭೂಮಿಯಲ್ಲಿ (ಅಂದರೆ ಈಗಿನ ಒಡಿಸಾ ಪ್ರಾಂತ್ಯದ ಬಯಲು ಸೀಮೆಯಲ್ಲಿ) ಎಲ್ಲೋ ಇತ್ತು ಎನ್ನಲು ಸಾಕಷ್ಟು ಆಧಾರಗಳನ್ನು ಆಗಲೇ ಕೊಟ್ಟಿದ್ದೇವೆ. ಕವಿ ರಾವಣನ ಲಂಕೆ ಎಂಬ ಒಂದು ಮಹಾನಗರಿಯನ್ನು ನಾವು ನಂಬಲರ್ಹವಾದ ರೀತಿಯಲ್ಲಿ ವರ್ಣಿಸಿದ್ದಾನೆ. ಆದರೆ ಅಲ್ಲೆಲ್ಲೂ ಈಗ ಅಂತಹ ಯಾವ ನಗರಿಯ ಅವಶೇಷದ ಸುಳಿವು ಕೂಡ ಇಲ್ಲ. ಇಂತಹ ಅಭೇದ್ಯವಾದ ಕೋಟೆ, ಏಳು ಎಂಟು ಅಂತಸ್ತಿನ ಮಹಲುಗಳು, ಅರಮನೆಗಳು ಮುಂತಾದವೆಲ್ಲ ಇದ್ದ ನಗರ ಹೀಗೆಯೇ ಮಂಗಮಾಯವಾಗಲಾರದು.

---


* ಸರ್ಗ ಮತ್ತು ಶ್ಲೋಕಗಳ ಕ್ರಮ ಸಂಖ್ಯೆ ಗೀತಾ ಪ್ರಚಾರಿಣಿ ಪ್ರೆಸ್, ಗೋರಖ್‌ಪುರ್, ಇವರಿಂದ ಪ್ರಚುರವಾದ ವಾಲ್ಮೀಕಿ ರಾಮಾಯಣವನ್ನು ಅನುಸರಿಸಿದೆ.

† ವಾಲ್ಮೀಕಿ ರಾಮಾಯಣದಲ್ಲಿ ರಾಮನ ಪಂಚವಟ ಆಶ್ರಮ ಗೋದಾವರೀ ತೀರದಲ್ಲಿತ್ತು ಎಂದು ಹೇಳಲಾಗಿದೆ. ಆದರೆ ಈಗ ವಿಂಧ್ಯದ ದಕ್ಷಿಣದಲ್ಲಿ ಹರಿಯುವ ಗೋದಾವರೀ ನದಿಯೇ ವಾಲ್ಮೀಕಿ ಹೇಳುವ ಗೋದಾವರಿಯೆಂದು ಗ್ರಹಿಸಿದರೆ ಇತರ ಅಂಶಗಳಿಗೆ ಅದು ಸರಿಹೊಂದುವುದಿಲ್ಲ. ಆದರೆ, ಹೇಗೆ ಚಿತ್ರಕೂಟದ ಬಳಿ ಹರಿಯುತ್ತಿದ್ದ ಮಂದಾಕಿನಿಯನ್ನು ಗಂಗಾ ಮೂಲದ ಒಂದು ಕವಲಾದ ಮಂದಾಕಿನಿ (ಬದರಿಕಾಶ್ರಮದ ಬಳಿ ಹರಿಯುವ) ನದಿಗೆ ಸಮನ್ವಯ ಮಾಡಲಾಗುವುದಿಲ್ಲವೋ ಹಾಗೆಯೇ ರಾಮಾಯಣದ ಗೋದಾವರಿಯನ್ನು ಇಂದು ಆ ಹೆಸರು ಹೊತ್ತಿರುವ ಗೋದಾವರಿಗೆ ಸಮನ್ವಯ ಮಾಡಲು ಬರುವಂತಿಲ್ಲ.

ಮೊಹೆಂಜದಾರೋ, ಹರಪ್ಪ ನಗರಗಳ ಅವಶೇಷಗಳು ಈಗಿನವರೆಗೂ ಮಣ್ಣಿನ ಗುಪ್ಪೆಗಳ ರೂಪದಲ್ಲಿ ಉಳಿದುಬಂದಂತೆಯಾದರೂ ಲಂಕೆಯ ಅವಶೇಷಗಳು ಉಳಿದಿರಬೇಕು, ಆದರೆ ಉಳಿದಿಲ್ಲ. ಅಂತೂ ಇದೊಂದು ತೊಡಕಾದ ಸಮಸ್ಯೆ. ಇದಕ್ಕೆ ಒಂದೇ ಸಮಾಧಾನ ಹೇಳಬಹುದು. ಏನೆಂದರೆ, ರಾವಣನ ಲಂಕೆ ನಿಜವಾಗಿಯೂ ಆ ಕಾಲದಲ್ಲಿದ್ದ ಒಂದು ಸಾಮಾನ್ಯ ನಗರ. ಆದರೆ ಕವಿ ತನ್ನ ಕಾವ್ಯದ ಮಟ್ಟಿಗೆ ಮತ್ತಾವುದೋ ಒಂದು ಮಹಾನಗರಿಯನ್ನು ತನ್ನ ಮನಸ್ಸಿನಲ್ಲಿ ಲಂಕೆಗೆ ಮಾದರಿಯನ್ನಾಗಿಟ್ಟುಕೊಂಡು ಹಾಡಿದ್ದಾನೆ. ರಾಮನ ಸಮಕಾಲೀನನಾಗಿದ್ದು ಜನಪದ ಗೀತೆಯ ರೂಪದಲ್ಲಿ ರಾಮನ ಕಥೆಯನ್ನು ಮೊದಲು ಹಾಡಿದ ಈ ಜಾಣ ಕವಿ (ಇವನ ಹೆಸರು 'ನಾರದ' ಎನ್ನೋಣ) ತಾನು ಮಾದರಿಯಾಗಿಟ್ಟುಕೊಂಡ ಮಹಾ ನಗರಿಯನ್ನು ತಾನೇ ನೋಡಿದ್ದಿರಬಹುದು. ಇಲ್ಲವೇ ಸ್ವಯಂ ನೋಡಿದವರ ಬಾಯಿಂದ ಆ ನಗರಿಯ ವೃತ್ತಾಂತವನ್ನು ಕೂಲಂಕಷವಾಗಿ ತಿಳಿದುಕೊಂಡಿರಬಹುದು. ಆದ್ದರಿಂದ ತಾನೆ ಅವನು ವಿವರಿಸಿದ ನಗರಿ ಪುರಾಣದ ಸ್ವರ್ಗದ ಅಮರಾವತಿಯಂತಿರದೆ ಜನಗಳು ವಾಸವಾಗಿದ್ದ ಭೂಲೋಕದ ನಗರಿಯಾಗಿದೆ. ಇದಾದ ಒಂದು ಸಾವಿರ ವರ್ಷಗಳ ನಂತರ (ಸುಮಾರು ೭೦೦-೬೦೦ ಕ್ರಿ. ಪೂ.) ಜೀವಿಸಿದ್ದ ವಾಲ್ಮೀಕಿ ತನಗೆ ದೊರಕಿದ ನಾರದ ರಚಿತ ಜಾನಪದ ಗೀತೆಗಳನ್ನು ಪುರಾತನ ಸಂಸ್ಕೃತ ರೂಪದಿಂದ ತನ್ನ ಕಾಲದ ಸಂಸ್ಕೃತ ಭಾಷೆಗೆ ಪರಿವರ್ತಿಸಿದಾಗ ಲಂಕೆಯ ವಿಚಾರವಾಗಿ ನಾರದ ಏನೇನು ಹಾಡಿದ್ದನೋ ಅದನ್ನೆಲ್ಲಾ ಸ್ವಲ್ಪವೂ ವ್ಯತ್ಯಾಸ ಮಾಡದೆ ಹಾಗೇ ತನ್ನ ಕಾವ್ಯದಲ್ಲಿ ಸೇರಿಸಿದ. ಅಂತಹ ಮಹಾ ನಗರಿಗಳು ಯಾವವು ಆ ಕಾಲದಲ್ಲಿದ್ದವು ಎಂದು ಈಗ ನೋಡೋಣ.

ರಾಮಾಯಣದ ಘಟನೆಗಳು ನಡೆದದ್ದು ಕ್ರಿ. ಪೂ. ೧೮೦೦-೧೫೦೦ರ ಸುಮಾರಿನಲ್ಲಿ ಎಂದು ಆಧುನಿಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಸಿಂಧೂ ನದಿಯ ಬಯಲಿನಲ್ಲಿದ್ದ ಮೊಹೆಂಜದಾರೋ, ಹರಪ್ಪ ಎಂಬ ಎರಡು ಮಹಾ ನಗರಗಳು ಸುಮಾರು ಕ್ರಿ. ಪೂ. ೧೮೦೦ರವರೆಗೂ ಪ್ರವೃದ್ಧ ಸ್ಥಿತಿಯಲ್ಲಿದ್ದು ಅನಂತರ ನಿಧಾನವಾಗಿ ಕಾಲ ಗತಿಯಿಂದ ನಶಿಸಿ ಹೋಗುತ್ತಾ ಬಂದವು. (ಚಿತ್ರ ೧. ಇದ್ದಕ್ಕಿದ್ದ ಹಾಗೆ ಜನಗಳು ನಗರವನ್ನು ವರ್ಜಿಸಿ ಹೊರಟುಹೋದರೆಂದೂ ಕೆಲವು ವಿದ್ವಾಂಸರ ಅಭಿಪ್ರಾಯ.) ಆದ್ದರಿಂದ ರಾಮಾಯಣದ ಘಟನೆಗಳು ನಡೆದ ಕಾಲದಲ್ಲಿ ಸಿಂಧೂ ನದಿಯ ಈ ನಗರಿಗಳು ಪ್ರವೃದ್ಧಮಾನವಾಗಿದ್ದವು. ಇಲ್ಲವೇ ನಶಿಸಿ ಹೋಗಲಾರಂಭಿಸಿದ್ದರೂ ಅವುಗಳ ವೃತ್ತಾಂತವೂ ಅವಶೇಷಗಳೂ ಆ ಕಾಲದಲ್ಲಿ ಪಕ್ಕದಲ್ಲೇ ಗಂಗಾ ನದಿಯ ಬಯಲಿನಲ್ಲಿ ವಾಸವಾಗಿದ್ದ ಜನಗಳಲ್ಲಿ ಬಾಯಿಮಾತಾಗಿದ್ದಿರಬಹುದು. ರಾಮಾಯಣದ ಕಥೆಯನ್ನು ಮೊದಲು ಹಾಡಿದ್ದ ನಾರದ ಈ ಪ್ರಾಂತದಲ್ಲೆಲ್ಲಾ ಪ್ರಯಾಣ ಮಾಡಿದ್ದು ನೋಡಿಕೊಂಡು ಬಂದಿದ್ದನೆಂದರೆ ಅತಿಶಯೋಕ್ತಿಯೇನೂ ಅಲ್ಲ. ಪುರಾಣದ ನಾರದ ತ್ರಿಲೋಕಸಂಚಾರಿಯಲ್ಲವೇ ? ಮಾರ್ಕೋ ಪೋಲೋ ಮುಂತಾದ ಈಚಿನ ಪ್ರಯಾಣಿಕರಂತೆ ನಾರದನು ಕೂಡ ಬಹಳ ಪ್ರಾಚೀನ ಕಾಲದಲ್ಲಿ ದೇಶ ವಿದೇಶಗಳನ್ನೆಲ್ಲಾ ಸಂದರ್ಶಿಸಿದ ಸಾಹಸಿ ಇದ್ದಿರಬಹುದು. ಪುರಾಣದ ಕಥೆಯ ಹಿಂದುಗಡೆ ಅಂತಹ ವಿಶ್ವಸಂಚಾರಿಯಾದ ವ್ಯಕ್ತಿ ಇದ್ದಿರಬೇಕು.


ಚಿತ್ರ ೨: ಕ್ರಿ. ಪೂ. ೨೦೦೦-೧೫೦೦ ರ ಕಾಲದಲ್ಲಿ ಪ್ರವೃದ್ಧವಾಗಿದ್ದ ಕೆಲವು ನದೀ ಬಯಲಿನ ನಾಗರಿಕತೆಗಳಿವು. ೧. ಗಂಗಾ-ಯಮುನಾ ಬಯಲಿನಲ್ಲಿದ್ದ ಅಯೋಧ್ಯಾ ಮುಂತಾದ ರಾಜ್ಯಗಳು; ೨, ೩. ಸಿಂಧೂ ನದಿ ಬಯಲಿನ ಹರಪ್ಪ-ಮೊಹೆಂಜದಾರೋ ಮಹಾನಗರಗಳು; ೪. ಯೂಫ್ರಟಿಸ್-ಟೈಗ್ರಿಸ್ ನದಿಯ ಬಯಲಿನಲ್ಲಿದ್ದ ಅಸ್ಸೀರಿಯಾ, ಬೆಬಿಲೋನಿಯಾ ಮುಂತಾದ ರಾಜ್ಯಗಳು; ೫ ರಾವಣನ ಲಂಕಾ ರಾಜ್ಯ.




ಸಂದು ಸೆಡೆತವೇ?
ಅಯೊಡೆಕ್ಸ್ ಗುಣಪಡಿಸುವ ಮುಲಾಮು ತಿಕ್ಕಿರಿ
ಬೇರೆ ಮುಲಾಮುಗಳು ನೋವನ್ನು ಉಪಶಮನ ಗೊಳಿಸಬಹುದು. ಆದರೆ ಅಯೊಡೆಕ್ಸ್ ಉಪಶಮನ ಗೊಳಿಸುತ್ತಲೇ ನೋವನ್ನು ಗುಣಪಡಿಸುತ್ತದೆ. ಏಕೆಂದರೆ ಅದರಲ್ಲಿ ಅಯೋಡಿನ್ ಇದೆ. ಸ್ನಾಯು ಮತ್ತು ಸಂದು ನೋವುಗಳಿಗೆ ಏಕಮಾತ್ರ ಮುಲಾಮು—ಅಯೊಡೆಕ್ಸ್.
IODEX
cum Methyl Salicylate
ಅಯೊಡೆಕ್ಸ್ ಹಚ್ಚಿರಿ, ಮತ್ತೆ ಓಡಾಡಿರಿ.
ಲಿಂಟಾಸ್-IODEX 4-75 KN

ಮೇಲಿನ ಎರಡು ನಗರಗಳನ್ನು ಬಿಟ್ಟರೆ ಅದೇ ಕಾಲದಲ್ಲಿ ಭಾರತದ ಹೊರಗಡೆ, ಪಶ್ಚಿಮದಲ್ಲಿ ಸುಮಾರು ೧,೦೦೦ ಮೈಲಿಗಳ ದೂರದಲ್ಲಿ ಬ್ಯಾಬಿಲೋನಿಯಾ ಎಂಬ (ಈಗ ಇರಾಕ್ ಎಂಬ ಹೆಸರಿನ ಸೀಮೆ) ರಾಜ್ಯವಿತ್ತು. ಮತ್ತು ಅಲ್ಲಿ ಬ್ಯಾಬಿಲೋನ್, ಅಸ್ಸುರ್, ಮುಂತಾದ ಪ್ರಸಿದ್ಧ ನಗರಿಗಳಿದ್ದವು ಮೊದಲು ಅಸ್ಸುರ್ ನಗರವೇ ಆ ಪ್ರಾಂತ್ಯಕ್ಕೆ ರಾಜಧಾನಿ: ದೇಶದ ಹೆಸರೂ ಅಸ್ಸುರ್, ಜನಗಳ ಹೆಸರೂ ಅಸ್ಸುರ್. (ರಾಜನ ಹೆಸರಿನಲ್ಲೂ 'ಅಸ್ಸುರ್' ಸೇರಿತ್ತು; ಉದಾ: ಅಸ್ಸುರ್ ನಸಿರ್-ಪಾಲ್, ಅಸ್ಸುರ್ ಬನ್ನಿ-ಪಾಲ್, ಇತ್ಯಾದಿ), ನಮ್ಮ ಪುರಾಣಗಳಲ್ಲಿನ ಅಸುರರೂ (ಮಯಾಸುರ, ಬಾಣಾಸುರ, ಇತ್ಯಾದಿ) ಈ ಅಸ್ಸುರ್ ಜನಗಳೂ ಒಂದೇ ಬುಡಕಟ್ಟಿನವರು ಎಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದು ಬಂದಿದೆ. ಆ ಪಟ್ಟಣಗಳ ಅವಶೇಷಗಳನ್ನು ಈ ಎಪ್ಪತ್ತು ವರ್ಷಗಳಿಂದ ಅನೇಕ ವಿದ್ವಾಂಸರು ವಿಶದವಾಗಿ ಪರೀಕ್ಷಿಸಿದ್ದಾರೆ. ಆ ಪಟ್ಟಣಗಳಲ್ಲಿ ಸಿಕ್ಕಿದ ಬರೆಹಗಳನ್ನು ಶ್ರಮಪಟ್ಟು ಅರ್ಥಮಾಡಿಕೊಂಡಿದ್ದಾರೆ. ಬ್ಯಾಬಿಲೋನಿಯಾಗೂ ಮತ್ತು ಸಿಂಧೂ ನದಿಯ ಬಯಲಿನ ಪಟ್ಟಣಗಳಿಗೂ ಮತ್ತು ಇನ್ನೂ ಪೂರ್ವದಲ್ಲಿ ಗಂಗಾ ನದಿಯ ಬಯಲಿನ ಜನಗಳಿಗೂ ವ್ಯಾಪಾರ ಸಂಬಂಧವಿತ್ತು. ಅಂದರೆ ಜನಗಳು ಧಾರಾಳವಾಗಿ ಯಾವ ನಿರ್ಬಂಧವೂ ಇಲ್ಲದೆ ಹೋಗಿಬರುತ್ತಿದ್ದರು ಎಂದೂ ತಿಳಿದು ಬಂದಿದೆ. ಆದ್ದರಿಂದ 'ನಾರದ' ರಾವಣನ ಲಂಕೆಯನ್ನು ವರ್ಣಿಸುವಾಗ ತನ್ನ ಮನಸ್ಸಿನಲ್ಲಿ ಅದೇ ಕಾಲದಲ್ಲಿ ಹೆಸರಾಂತ ಈ ನಗರಗಳಲ್ಲಿ ಯಾವುದೋ ಒಂದನ್ನೋ ಎರಡನ್ನೋ ಮಾದರಿಯನ್ನಾಗಿಟ್ಟುಕೊಂಡು ವರ್ಣಿಸಿರಬಹುದು ಎಂದರೆ ತಪ್ಪಾಗುವುದಿಲ್ಲ. ರಾಮಾಯಣದಲ್ಲಿ ಕವಿ ವರ್ಣಿಸಿರುವ ಲಂಕೆಯ ವಿಚಾರವಾಗಿ ಸಂಕ್ಷಿಪ್ತ





ಚಿತ್ರ ೭: ಅಸ್ಸುರ್ ನಗರದ ಕೋಟೆಯ ಒಂದು ದೃಶ್ಯ (ಚಿತ್ರ ೩ ಮತ್ತು ೩ (ಅ) ಪುರಾತನ ಆಧಾರಗಳನ್ನು ಅವಲಂಬಿಸಿ ವೂಲ್ಲಿಯವರು ಪುನರ್ರಚಿಸಿದ ಅಸ್ಸುರ್ ನಗರದ ಚಿತ್ರಗಳನ್ನು ಆಧರಿಸಿ.)

ವಾಗಿ ಆಗಲೇ ಕೇಳಿದ್ದೇವೆ. ಈಗ ಪ್ರಾಚ್ಯ ಸಂಶೋಧಕರು ಈ ನಗರಗಳ ವಿಚಾರವಾಗಿ ಏನು ಹೇಳುತ್ತಾರೆ ಎನ್ನುವುದನ್ನು ಕೆಳಗೆ ಸಂಕ್ಷೇಪವಾಗಿ ಉದ್ಧರಿಸುತ್ತೇವೆ. ಅಸ್ಸುರ್ ನಗರದ ಪುನರ್ನಿರ್ಮಾಣದ ಎರಡು ದೃಶ್ಯಗಳನ್ನೂ ಇಲ್ಲಿ ಕೊಟ್ಟಿದ್ದೇವೆ.

ಮೊಹೆಂಜದಾರೋ–ಹರಪ್ಪಾ* ಈ ನಗರಗಳನ್ನು ವಿಶದವಾಗಿ ಸಂಶೋಧಿಸಿದ ವ್ಹೀಲರ್, ಪಿಗ್ಗಟ್, ಮುಂತಾದವರ ಪ್ರಕಾರ ಈಗ ಈ ನಗರಗಳ ಅವಶೇಷಗಳು ನದೀತೀರದಿಂದ ಅನೇಕ ಮೈಲಿಗಳಷ್ಟು ದೂರದಲ್ಲಿದ್ದರೂ ಕೂಡ ಹಿಂದೆ ಅವುಗಳು ಜೀವಂತ ಸ್ಥಿತಿಯಲ್ಲಿ ನದೀತೀರದಲ್ಲೇ ಇದ್ದವು. ಅಲ್ಲಿಂದೀಚೆಗೆ ನದಿ ತನ್ನ ಪಾತ್ರ ಬಿಟ್ಟು ಹೊರಳಿ ಬಂದಿದೆ. ನಗರದ ಸುತ್ತಲೂ ಪ್ರಾಯಶಃ ಕೋಟೆ ಕೊತ್ತಲಗಳು ಇರಲಿಲ್ಲ. ನಗರದ ಒಂದು ಮೂಲೆಯಲ್ಲಿ ಪ್ರತ್ಯೇಕವಾಗಿ ಸುಮಾರು ೩೦–೪೦ ಅಡಿ ಎತ್ತರ ಮತ್ತು ೪೦೦ × ೩೦೦ ಅಡಿ ಉದ್ದಗಲತೆಯ ಜಗುಲಿಯ ಮೇಲೆ ಬಲವಾದ ಗೋಡೆಯಿಂದ ರಕ್ಷಿಸಲ್ಪಟ್ಟ ಕೆಲವು ಕಟ್ಟಡಗಳಿದ್ದವು (Citadel). ಪ್ರಾಯಶಃ ಇಲ್ಲಿ ತಾನೇ ನಗರದ ಮುಖ್ಯಾಧಿಕಾರಿ ತನ್ನ ಸಿಬ್ಬಂದಿಯ ಸಮೇತ ವಾಸವಾಗಿದ್ದು ಕೆಳಗೆ ನಗರದ ಜನಗಳ ಕಾರ್ಯ ಚಟುವಟಿಕೆಯನ್ನು ಹೀಗೆ ಮೇಲಿಂದ ನೋಡಿಕೊಳ್ಳುತ್ತಿದ್ದನೋ ಏನೋ!

ಈ ನಗರಗಳಲ್ಲಿ ಕಟ್ಟಡಗಳು ಹಸಿ ಅಥವಾ ಸುಟ್ಟ ಇಟ್ಟಿಗೆಗಳಿಂದ ಕಟ್ಟಲ್ಪಟ್ಟಿದ್ದವು ಗೋಡೆಗಳ ಮಂದ ೨–೭ ಅಡಿಗಳಷ್ಟು. ಕೆಲವು ಕಟ್ಟಡಗಳಿಗೆ ಪ್ರಾಯಶಃ ೬–೭ ಉಪ್ಪರಿಗೆಗಳಿದ್ದಿರಬಹುದು. ಮನೆಗಳಿಗೆ ರಸ್ತೆ ಕಡೆ ಕಿಟಕಿಗಳಿರಲಿಲ್ಲ. ರಸ್ತೆಯಲ್ಲಿ ಹಾದುಹೋಗುವವರ ಕಣ್ಣಿಗೆ ಮನೆಗಳು ಸಾಲು ಸಾಲಾಗಿ ಬೋಡುಬೋಡಾಗಿ ನಿರಾಲಂಕಾರವಾಗಿ ಕಾಣುತ್ತಿದ್ದವೇ ವಿನಾ ಮನೆಯೊಳಗಿನ ಜೀವಾಳ ತಿಳಿಯುತ್ತಿರಲಿಲ್ಲ. ನಗರ ನಕ್ಷೆಯನ್ನು ನೋಡಿದರೆ ಈ ಜನಗಳಿಗೆ ನಗರ ನಿರ್ಮಾಣದ ಬಗ್ಗೆ ಉತ್ತಮ ಜ್ಞಾನವಿದ್ದಂತೆ ತೋರುತ್ತದೆ. ಕೆಲವು ಅಗಲವಾದ ಬೀದಿಗಳು ನಗರದ ಒಂದು ಅಂಚಿನಿಂದ ಎದುರು ಅಂಚಿನವರೆಗೂ ಹೋಗುತ್ತಿದ್ದವು. ಇವುಗಳನ್ನು ಲಂಬವಾಗಿ ಸಂಧಿಸು

* Mortiner Wheeler: The Indus Civilization. 1968.



ಚಿತ್ರ ೩ (ಅ) : ಇದು ವಾಲ್ಮೀಕಿ ವರ್ಣಿಸಿದ ಲಂಕೆಯಿರಬಹುದೆ !

ಮಂತೆ ಇತರ ಬೀದಿಗಳಿದ್ದವು. ಇವಲ್ಲದೆ ಮನೆ ಮನೆಗೂ ಗಾಳಿ ಬೆಳಕು ಮತ್ತು ಜನಸಂಚಾರದ ಅನುಕೂಲಕ್ಕಾಗಿ ಚಿಕ್ಕ ಗಲ್ಲಿಗಳೂ ಇದ್ದವು, ಈ ನಗರಗಳಲ್ಲಿದ್ದ ಒಳಚರಂಡಿ ವ್ಯವಸ್ಥೆ ನಿಜವಾಗಿಯೂ ಆಧುನಿಕ ಮಟ್ಟದಲ್ಲಿತ್ತು; ಆಗಿನ ಕಾಲದಲ್ಲಾಗಲಿ. ಅನಂತರದ ಸಾವಿರಾರು ವರ್ಷಗಳಲ್ಲಾಗಲಿ ಅಂತಹ ವ್ಯವಸ್ಥೆ ಇನ್ನೆಲ್ಲೂ ಬರಲಿಲ್ಲ.

ಆದರೆ ಒಟ್ಟಿನಲ್ಲಿ ಈ ನಗರಗಳ ಜನಜೀವನದ ಒಂದು ವಿಷಯದಲ್ಲಿ ಒಂದು ವಿಚಾರ ಹೇಳುವುದಕ್ಕೆ ಆಧಾರವಿದೆ ಕಟ್ಟಡಗಳ ನಿರ್ಮಾಣ ತತ್ವದಲ್ಲಿ ನಗರವಾಸಿಗಳ ಅನುಕೂಲ, ಸುಖ ಮತ್ತು ಆಸ್ತಿಪಾಸ್ತಿ ಪ್ರಾಣ ರಕ್ಷಣೆಗಳ ಕಡೆ ಹೆಚ್ಚು ಗಮನ ಕೊಟ್ಟಿದ್ದರೇ ವಿನಾ ಸೌಂದರ್ಯ, ಕಲೆ, ವೈಭವ ಮುಂತಾದವುಗಳ ಕಡೆ ಇವರು ಗಮನ ಹೋಗಲಿಲ್ಲ ಜನಗಳು ಜೇನುಗೂಡಿನ ಜೇನು ಹುಳಗಳಂತೆ ಶಿಸ್ತಿನಿಂದ ತಮ್ಮ ತಮ್ಮ ಜೀವನೋಪಾಯದ ಕಸುಬು-ವ್ಯಾಪಾರಗಳಲ್ಲಿ ನಿರತರಾಗಿರುತ್ತಿದ್ದರೇ ವಿನಾ ಮಹತ್ವದ ನಿರುಪಯೋಗಿ ಚಟುವಟಿಕೆಗಳಲ್ಲಿಯೂ ಭಾಗವಹಿಸುತ್ತಿರಲಿಲ್ಲ

ಪ್ರಾಚೀನ ಬ್ಯಾಬಿಲೋನಿಯಾ; ಅಸ್ಸುರ್ ಮತ್ತು ಬ್ಯಾಬಿಲೋನ್ ನಗರಗಳು;* ಅಸ್ಸೀರಿಯಾ ರಾಜ್ಯದ ಮೊಟ್ಟ ಮೊದಲು ರಾಜಧಾನಿ ಅಸ್ಸುರ್ ಕುರಿತು ಲಿಯೊನಾರ್ಡ್ ವೂಲ್ಲಿಯವರು ವಿಶೇಷ ಸಂಶೋಧನೆ ನಡೆಸಿದ್ದಾರೆ, ಟೈಗ್ರಿಸ್ ನದಿಯ ದಡದಲ್ಲಿ ಒಂದು ಎತ್ತರವಾದ ಪ್ರಸ್ಥಭೂಮಿಯ ಮೇಲಿತ್ತು ಈ ನಗರ. ಒಂದು ಕಡೆ ನದಿಯ ಎರಡು ಕವಲುಗಳೂ ಪ್ರಸ್ಥಭೂಮಿಯ ಕಡಿದಾದ ಮುಖವೂ ನಗರವನ್ನು ರಕ್ಷಿಸುತ್ತಿದ್ದವು. ನಗರದ ಮತ್ತೊಂದು ಕಡೆ ಆಳವಾದ ಕಂದಕ ಮತ್ತು ಎತ್ತರವಾದ ಕೋಟೆಗೋಡೆ ಇತ್ತು. ಹೀಗೆ ಹಿಂದೆ, ಮುಂದೆ, ಎರಡೂ ಕಡೆಗಳಲ್ಲಿ ಸಂರಕ್ಷಿತವಾಗಿದ್ದ ನಗರ ಇದು ನಗರದ ಉತ್ತರ ಭಾಗವೆಲ್ಲ ಅನೇಕ

---

* Leonard Woolley: Pre-history and Beginnings of Civilaztion. History of Mankind,` Cultural and Scientific Developments, Vol. I. 1963.

Hillyer V. M. & Huey E. G.: The Story of the Ancient World. The Story of our Heritage Series Vol. I 1967.

ಅಂತಸ್ತಿನ ಪ್ರಾಸಾದಗಳಿಗೂ ಅರಮನೆಗಳಿಗೂ ಮೀಸಲಾಗಿತ್ತು (ಚಿತ್ರ ೩ (ಅ)). ನಗರದ ರಚನೆ ಕ್ರಮಬದ್ಧವಾಗಿತ್ತು. ರಸ್ತೆಗಳು ಅಗಲವಾಗಿದ್ದು ನಗರದಲ್ಲೆಲ್ಲಾ ಸಮದೂರದಲ್ಲಿ ಹರಡಿದ್ದವು. ಉತ್ತಮವಾದ ಚರಂಡಿ ವ್ಯವಸ್ಥೆ ಇತ್ತು.

ಬ್ಯಾಬಿಲೋನ್ ನಗರವನ್ನು ವರ್ಣಿಸುತ್ತಾ ಹಿಲ್ಲರ್ ಮತ್ತು ಪ್ವೆ ಅವರು ಹೀಗೆ ಬರೆದಿದ್ದಾರೆ: ಇದು ನಿಜವಾಗಿಯೂ ಈಗಿನ ಕಾಲದ ಮಹಾನಗರಗಳನ್ನು ಹೋಲುವ ಸುಮಾರು ನಾಲ್ಕು ಚದರ ಮೈಲುಗಳಷ್ಟು ವಿಸ್ತಾರದ ಮಹಾನಗರವಾಗಿತ್ತು. ಸುತ್ತಲೂ ಎತ್ತರವಾದ ಅಭೇದ್ಯವಾದ ಗೋಡೆಗಳೂ ಅವುಗಳಲ್ಲಿ ಎಂಟು ಮಹಾದ್ವಾರಗಳೂ ಇದ್ದವು. 'ಇಷ್ಟರ್' ಮಹಾದ್ವಾರದಿಂದ ಹೊರಟು ರಾಜವೀಥಿ ನೇರವಾಗಿ ನಗರದ ಎರಡು ಮೈಲಿಗಳಾಚೆ ಎದುರಂಚಿನಲ್ಲಿದ್ದ 'ಮರ್ಡುಕ್' ದೇವನ ಗೋಪುರದ ವರೆಗೂ ಹೋಗಿತ್ತು. ಈ ನಗರದ ಅರಮನೆಗಳ ಮತ್ತು ಸೌಧಗಳ ಕೆತ್ತನೆ ಕೆಲಸ, ನೆಲಕ್ಕೆ ಹಾಸಿದ ಬಣ್ಣಬಣ್ಣದ ಹೆಂಚುಗಳು, ಹೊರಗೆ ಒಳಗೆ ಕಂಡುಬರುತ್ತಿದ್ದ ವೈಭವ ಮುಂತಾದ್ದನ್ನು ಕುರಿತು ಆಗಿನ ಕಾಲದವರು ಸಾಕಷ್ಟು ಬರೆದಿದ್ದಾರೆ. ಈ ನಗರದಲ್ಲಿದ್ದ ತೂಗುವ ತೋಟ ಈಗೂ ಜನಗಳ ಬಾಯಿಮಾತಾಗಿದೆ. ನೆಲ ಮಟ್ಟದಿಂದ ಹಿಡಿದು ಮೆಟ್ಟಿಲು ಮೆಟ್ಟಿಲಾಗಿ ಕಟ್ಟಿದ ವಿಶಾಲವಾದ ಜಗುಲಿಗಳ ಮೇಲೆ ಈ ಉದ್ಯಾನ ಬೆಳೆಸಿದ್ದರು. ಕಡೆಯ ಜಗುಲಿ ರಾಜನ ಅರಮನೆಯ ಮಟ್ಟದಲ್ಲಿತ್ತು. ಎಲ್ಲೆಲ್ಲಿ ನೋಡಿದರೂ ಫಲಪುಷ್ಪ ಭರಿತವಾದ ಮರಗಳಿಂದಲೂ ಬಳ್ಳಿಗಳಿಂದಲೂ ಶೋಭಿತವಾದ ಈ ಉದ್ಯಾನಕ್ಕೆ ನೀರನ್ನು ಸರಪಣಿ ಬಾನೆಗಳ ಒಂದು ಚತುರ ವ್ಯವಸ್ಥೆಯ ಮೂಲಕ ಕೆಳಗೆ ಹರಿಯುತ್ತಿದ್ದ ಕಾಲುವೆಯಿಂದ ಮೇಲಕ್ಕೆತ್ತುತ್ತಿದ್ದರು.

ಬ್ಯಾಬಿಲೋನಿಯಾ ದೇಶದಲ್ಲಿ ಅನೇಕ ಕಡೆ ಜಿಗುರಾತ್ ("ಶಿಖರ" ?) ಎಂಬ ಹೆಸರಿದ್ದ ಅನೇಕ ಆಶ್ಚರ್ಯಕರವಾದ ಪರ್ವತಾಕೃತಿಯ ಗೋಪುರಗಳನ್ನು ಆ ಕಾಲದಲ್ಲಿ ಜನಗಳು ಕಟ್ಟಿದ್ದರು. ಇಂತಹ ಸುಮಾರು ೨೫ ಗೋಪುರಗಳ ಅವಶೇಷಗಳು ಸಿಕ್ಕಿವೆ. ಕೆಲವು ಶಿಥಿಲವಾಗಿದ್ದರೂ ಮೊದಲಿನ ವೈಭವವಿಲ್ಲದಿದ್ದರೂ ಮೊದಲಿನ ಗಾತ್ರದಲ್ಲಿ ಅರ್ಧದಷ್ಟು ಇನ್ನೂ ನಿಂತಿರುವುದರಿಂದ ಹಿಂದೆ ಕಟ್ಟಿದಾಗ ಹೇಗಿತ್ತು ಎಂದು ಊಹಿಸಬಹುದಾಗಿದೆ. ಕೆಲವು ನೆಲ ಮಟ್ಟದಲ್ಲಿ ಸುಮಾರು ೪೦೦ × ೪೦೦ ಚದರ ಅಡಿಗಳಷ್ಟಿದ್ದು ಸುಮಾರು ೨೦೦ ಅಡಿಯಷ್ಟು ಎತ್ತರವಾಗಿದ್ದವಂತೆ. ಈ ಜಿಗುರಾತ್‌ಗಳಲ್ಲಿ ಕೆಲವು ೫ ಅಂತಸ್ತಿನ ಗೋಪುರಗಳು, ಕೆಲವು ೭ ಅಂತಸ್ತಿನವು. ಕೆಳಗಿನಿಂದ ಮೇಲಕ್ಕೆ ಅಂತಸ್ತುಗಳು ಚಿಕ್ಕದಾಗುತ್ತಾ ಹೋಗಿ ಕಡೆಯ ಅಂತಸ್ತಿನ ಮೇಲೆ ಒಂದು ಮಂದಿರವಿರುತ್ತಿತ್ತು. ಕೆಲವು ಜಿಗುರಾತ್‌ಗಳಲ್ಲಿ ಪ್ರತಿಯೊಂದು ಅಂತಸ್ತಿನ ಜಗುಲಿಯ ಮೇಲೆಯೂ ಫಲಪುಷ್ಪಗಳಿದ್ದ ಉದ್ಯಾನವಿತ್ತು. ವಾಲ್ಮೀಕಿಯ ಲಂಕಾ ವರ್ಣನೆಯಲ್ಲಿ ವರ್ಣಿಸಿರುವ 'ಮುಗಿಲನ್ನು ಮುಟ್ಟುವ' ಕೆಲವು ಪ್ರಾಸಾದಗಳು ಜ್ಞಾಪಕ ಬರುತ್ತದೆ. ಈ ಬ್ಯಾಬಿಲೋನಿಯ ಪರ್ವತಾಕಾರದ ಗೋಪುರಗಳ ವಿಚಾರ ಓದುವಾಗ, ಇಂತಹ ಒಂದು ಗೋಪುರದ ವಿಚಾರವಾಗಿ ಹಳೆಯ ಒಡಂಬಡಿಕೆಯಲ್ಲಿ 'ಟವರ್ ಆಫ್ ಬೈಬಲ್' ಎಂಬ ಹೆಸರಿಲ್ಲಿ ಮುಗಿಲನ್ನು ಮುಟ್ಟುವ ಗೋಪುರವೆಂದು ಮುಂತಾಗಿ ಉತ್ಪ್ರೇಕ್ಷಿಸಲ್ಪಟ್ಟಿದೆ.

ಕವಿ ವರ್ಣಿಸಿರುವ ಲಂಕೆ ನಿಜವಾಗಿಯೂ ವೈಭವಕ್ಕೂ ಶಿಲ್ಪಕಲೆಗೂ ತೌರುಮನೆಯಾಗಿದ್ದಂತೆ ತೋರುತ್ತದೆ. ಸಿಂಧೂ ಬಯಲಿನ ಪಟ್ಟಣಗಳಿಗಿಂತ ಬೆಬಿಲೋನ್ ಮತ್ತು ಅಸ್ಸುರ್ ಪಟ್ಟಣಗಳಿಗೆ ಈ ಮಾತು ಅನ್ವಯವಾಗುವಂತೆ ತೋರುತ್ತದೆ. ಮುಂದೆ ಮಹಾಭಾರತದಲ್ಲಿ ಕೂಡ ಅನೇಕ ಕಡೆ ಮಯ ಎಂಬ ಶಿಲ್ಪಿಯ ಹೆಸರನ್ನು ಅವನು ಕಟ್ಟಿದ ಪಟ್ಟಣಗಳ ವಿಚಾರವನ್ನೂ ಕೇಳುತ್ತೇವೆ. ಇದುವರೆವಿಗೂ ನಮ್ಮ ಭಾರತದಲ್ಲಿ ಸಿಂಧೂ ನದಿಯ ಬಯಲಿನ ಪಟ್ಟಣಗಳನ್ನು ಬಿಟ್ಟರೆ ಇನ್ನೆಲ್ಲಾ ಅಷ್ಟು ಪುರಾತನವಾದ ಯಾವ ಪಟ್ಟಣಗಳೂ ಸಿಕ್ಕಿಲ್ಲ. ಬ್ಯಾಬಿಲೋನ್ ನಗರದ ವೈಭವ ಆಗಿನ


SISTA'S DIL 404 K
ಪ್ರತಿಯೊಂದು ಸುಂದರ
ಮುಖದ ಹಿಂದೆ ಒಂದು
ಸುಂದರ ರಹಸ್ಯ
ಯಾವಾಗಲು ಇರುತ್ತದೆ
ಕ್ರೂಕ್ಸ್
ಲ್ಯಾಕ್ಟೋ-ಕ್ಯಾಲಮೈನ್
CROOKES
Lacto-Calamine
SOOTHING
REFRESHING
NON-GREASY
SHAKE THOROUGHLY
ಅಂದವಾಗಿ ಕಾಣಬೇಕೆನ್ನು
ವುದು ನಿಮ್ಮ ಉದ್ದೇಶ.
ನಿಮ್ಮ ಚರ್ಮವನ್ನು
ಆ ರೀತಿ ಇಡುವುದು
ಕ್ರೂಕ್ಸ್ ಲ್ಯಾಕ್ಟೋ-
ಕ್ಯಾಲಮೈನ್‌ನ ಕೆಲಸ.
ಅದು ರೂಪದ ಆರೈಕೆಯ ರಹಸ್ಯ
6582, ಬೊಂಬಾಯಿ- 400 018.

ಪ್ರಪಂಚದಲ್ಲೆಲ್ಲಾ ಹರಡಿ ವಿದ್ಯಾವಂತರಿಗೆಲ್ಲ ಅದರ ವಿಚಾರ ಸಾಕಷ್ಟು ತಿಳಿದಿತ್ತು. ರಾಮಾಯಣದ ಪ್ರಥಮ ಕವಿ ನಾರದನೂ ಈ ಪಟ್ಟಣಗಳನ್ನು ನೋಡಿದ್ದಿರಬಹುದು ಅಥವಾ ಅವುಗಳ ಬಗ್ಗೆ ಸ್ವತಃ ನೋಡಿದ ಜನಗಳಿಂದ ಕೇಳಿದ್ದಿರಬಹುದು. ಅದನ್ನೇ ಮಾದರಿಯಾಗಿಟ್ಟುಕೊಂಡು ತನ್ನ ಲಂಕಾ ವರ್ಣನೆಯಲ್ಲಿ ಪ್ರಸ್ತಭೂಮಿ ("ತ್ರಿಕೂಟ ಪರ್ವತ")ಯ ಮೇಲೆ ಕಟ್ಟಿದ ನಗರ ಆ ನಗರಗಳ ಅಭೇಧ್ಯವಾದ ಕೋಟೆ, ಅಮಿತ ಸಂಪತ್ತು, ಅವರ್ಣನೀಯವಾದ ವೈಭವ, ಉನ್ನತೋದ್ಯಾನಗಳು, ಏಳು ಎಂಟು ತೂಗು ತೋಟಗಳು, ಮುಗಿಲನ್ನು ಮುಟ್ಟುವ ಕೈಲಾಸದಂತಿದ್ದ ಅರಮನೆ (ಜಿಗುರಾತ್) ಮುಂತಾದವುಗಳನ್ನು ಅಡಕ ಮಾಡಿರುವಂತಿದೆ.

ಲಂಕಾ ನಗರಿಯ ಮಾದರಿಗೆ ಕವಿ ಭಾರತವನ್ನು ಬಿಟ್ಟು ಹೊರಗೆ ಹೋಗಬೇಕಾಗಿತ್ತೇ? ಎಂಬ ಪ್ರಶ್ನೆ ಹುಟ್ಟುವುದು ಸ್ವಾಭಾವಿಕ. ಅದಕ್ಕೆ ನಮ್ಮ ಸಮಾಧಾನ ಇಷ್ಟೇ: ಈಗಿನ ಕಾಲದಲ್ಲಿ 'ಮಾನವತೆ'ಯ ಸ್ಥಾನದಲ್ಲಿ 'ರಾಷ್ಟ್ರೀಯತೆ' ಮತ್ತು 'ಪ್ರಾಂತೀಯತೆ' ಎಂಬ ಹೊಸ ತತ್ವಗಳು ಹರಡಿ ರಾಜಕೀಯ ಮತ್ತು ಪ್ರಾಂತೀಯ ಗಡಿಗಳಿಗೆ ಬಹಳ ಮಹತ್ವ ಒಂದಿದೆ. ಕಲೆ, ವಿದ್ಯೆ, ಭಾಷೆ, ವ್ಯಾಪಾರ ಮುಂತಾದ್ದು ಈಗ ರಾಜಕೀಯ ಅಥವಾ ಪ್ರಾಂತೀಯ ಗಡಿ ದಾಟಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದು ಕಷ್ಟ. (ಮುಂಬಯಿಯ ಕೆಲವು ಬೀದಿಗಳಲ್ಲಿ ಕನ್ನಡದಲ್ಲಿ ಪರಸ್ಪರ ಮಾತಾಡುವುದೂ ಕ್ಷೇಮವಲ್ಲ) ಆದರೆ ಇದು ಕ್ರಿ.ಶ. ೧೯–೨೦ ನೆಯ ಶತಮಾನದಿಂದ ಈಚೆಗೆ ಹುಟ್ಟಿ ಹರಡಿದ ವಿದ್ಯಮಾನ (ಈ ಊರಿನಲ್ಲಿ ಅರ್ಧಕ್ಕಿಂತ ಹೆಚ್ಚು– ಶೇ. ೫೦.೧– ಮಂದಿ ಮರಾಠಿ ಮಾತನ್ನಾಡುತ್ತಾರೆ. ಆದ್ದರಿಂದ ಕನ್ನಡಿಗರ ಜೊತೆಯಲ್ಲಿ ಕಲೆತು ಜೀವಿಸಲು ಸಾಧ್ಯವಿಲ್ಲ; ಈ ಪ್ರಾಂತ್ಯದಲ್ಲಿ ನಾವು ಹೆಚ್ಚು ಮಂದಿ ಮಸೀದಿಯಲ್ಲಿ ಮೊಣಕಾಲೂರಿ ದೇವರನ್ನು ಪ್ರಾರ್ಥಿಸುತ್ತೇವೆ. ಆದ್ದರಿಂದ ಗುಡಿಗಳಲ್ಲಿ ನಿಂತು ಪ್ರಾರ್ಥಿಸುವವರಿಂದ ಬೇರೆಯಾಗಿ ನಮ್ಮದೇ ಆದ ಪ್ರತ್ಯೇಕ ಸ್ಥಾನವನ್ನು ಮಾಡಿಕೊಳ್ಳುತ್ತೇವೆ ಎಂದು ಮುಂತಾದ ತತ್ವಗಳು ನಮ್ಮಲ್ಲಿ ಹರಡಿ ಜನಗಳ ಮನಸ್ಸು ಕಲ್ಮಶವಾಗಿದ್ದು ಈ ಶತಮಾನದ ನಾಲ್ಕನೆಯ ದಶಕದಿಂದೀಚೆಗೆ) ಅದಕ್ಕೆ ಹಿಂದೆ ಸಹಸ್ರಾವಧಿ ವರ್ಷಗಳಿಂದ ಗಡಿಗಳು ರಾಜಕೀಯ ವಿಷಯಗಳಿಗೆ ಮಾತ್ರ ಅನ್ವಯಿಸುತ್ತಿದ್ದವು. ಬ್ಯಾಬಿಲೋನ್, ಐಗುಪ್ತ (ಈಜಿಪ್ಟ್) ಮುಂತಾದ ದೇಶಗಳ ರಾಜರೂ ಜನಗಳೂ ಹೇಗೆ ಸಿಂಧೂ ಗಂಗಾ ಪ್ರಾಂತ್ಯಗಳ ಸಾಮಾನು ಸರಂಜಾಮು ಕಲೆ ವಿದ್ಯೆ ಮುಂತಾದವುಗಳಿಗೆ ಸ್ವಾಗತವೀಯುತ್ತಿದ್ದರೋ ಹಾಗೇ ಗಂಗಾ ಪ್ರಾಂತ್ಯದ ರಾಜರೂ ಕವಿಗಳೂ ಹೊರಗಿನಿಂದ ಬಂದ ಕಲೆ, ವಿದ್ಯೆ ಮುಂತಾದ್ದಕ್ಕೆ ಅಷ್ಟೇ ಮನ್ನಣೆ ಕೊಡುತ್ತಿದ್ದರು. ಮೊದಲು ರಾಮನ ಕಥೆ ಹಾಡಿದ ಕವಿ ರಾವಣನ ಲಂಕೆಯನ್ನು ಆಗಿನ ಕಾಲದ ಅಪ್ರತಿಮ ಬ್ಯಾಬಿಲೋನನ್ನು ವರ್ಣಿಸುವಂತೆ ವರ್ಣಿಸಿದರೂ ಅವನ ಹಾಡನ್ನು ಕೇಳಿದ ಜನಗಳಿಗೆ ಅದು ತಕ್ಷಣ ವೇದ್ಯವಾಗುತ್ತಿತ್ತು. ಕವಿಯ ಚಮತ್ಕಾರದ ಮಾತುಗಳನ್ನು ಕೇಳಿ ಆನಂದಪಡುತ್ತಿದ್ದರೇ ವಿನಾ "ನೀವು ನಮ್ಮ ಭಾರತದ ನಗರವನ್ನು ಬಿಟ್ಟು ಯಾವುದೋ ಹೊರಗಿನ ನಗರವನ್ನೇತಕ್ಕೆ ಲಂಕಾ ಎಂದು ವರ್ಣಿಸುತ್ತಿದ್ದೀರಿ?" ಎಂದು ಕೇಳುವ ಯೋಚನೆ ಕೂಡ ಅವರಿಗೆ ಉಂಟಾಗುತ್ತಿರಲಿಲ್ಲ. ✡

This magazine owned by the Karnataka Patrika Private Ltd. is printed & published by Bhomeshwar Das Kohli at the Samyukta Karnatak Press, Koppikar Road, Hubli. Representatives: Bombay: V. S. Mani, Phone: 472794; Calcutta: H. Muzamdar: Phone: 46-4238; Madras: P. N. Srinivasan, Phone: 83748; New Delhi: P. R. Chopra, Phone: 224130


ಅವಳ
ಸೌಂದರ್ಯ ರಹಸ್ಯ
ಐಟೆಕ್ಸ್
ಸೌಂದರ್ಯ ಸಾಧನಗಳು
ಐಟೆಕ್ — ಮೂರು ದಶಕಗಳಿಂದಲೂ
ಪ್ರಖ್ಯಾತವಾಗಿದೆ. ಇದು ಉನ್ನತ
ಗುಣಮಟ್ಟ, ನಂಬಿಕೆ ಹಾಗೂ
ವಿಶ್ವಾಸನೀಯತೆಯ ಭರವಸೆ
ನೀಡುತ್ತದೆ.
EYETEX
REGD.
EYETEX
BINDI
ARAVIND LABORATORIES MADRAS-33

Registered with the Registrar of Newspapers for India under No. 3633/57

